ಓಂ ಶ್ರೀಗುರುಬಸವಲಿಂಗಾಯ ನಮಃ

ಕರಣ ಹಸಿಗೆ



ಸಂಪಾದಕರು

ಪೂಜ್ಯ ಚನ್ನಬಸವ ಶಿವಯೋಗಿಗಳು

ಪಾಂಡೋಮಟ್ಟಿ, ಚನ್ನಗಿರಿ ತಾ।।

ಮೊದಲ ಮಾತು

ಮಾನವನು ಜಗತ್ತಿನಲ್ಲಿ ತನ್ನನ್ನು ವಿಚಾರಿಸದೆ ಬೇರೆ ಎಲ್ಲಾ ಸಾಧಿಸಲಿಕ್ಕೆ ಹೋಗುವನು. ಇದನ್ನು ನೋಡಿ ಭಗವಾನ್ ಬಸವಣ್ಣನವರು ತನ್ನ ವಿಚಾರಿಸಲೊಲ್ಲದು ಇದಿರ ವಿಚಾರಿಸಹೋಹುದೀ ಮನವು ಎಂಬುದಾಗಿ ಉದ್ಗಾರ ತೆಗೆದಿದ್ದಾರೆ.

ಶೂನ್ಯ ವಸ್ತುವಿನ ಲೀಲೆಯಿಂದ ಪ್ರಕೃತಿಯಾಗಿ, ಪ್ರಕೃತಿಯ ವಶವಾಗಿ ವಿಶ್ವವಾಗಿ, ವಿಶ್ವದಲ್ಲಿ ಅನಂತ ಬ್ರಹ್ಮಾಂಡಕೋಟಿಗಳಾಗಿ, ಬ್ರಹ್ಮಾಂಡಕೋಟಿಗಳಲ್ಲಿ ಜಡವಸ್ತುಗಳಾದ ಭೂಮಿ, ನೀರು, ಬೆಂಕಿ, ಗಾಳಿ, ಬಯಲು, ಸೂರ್ಯಚಂದ್ರರುಗಳಾಗಿ ಉದಯಿಸುವವು. ಜಡಚೇತನಗಳಾದ ಸಸ್ಯಾದಿವರ್ಗಗಳಾಗಿ ಉದಯಿಸುವವು. ಅನಂತರ ಜೀವಚೇತನಗಳಾದ ಕ್ರಿಮಿ, ಕೀಟ, ಪಶು-ಪಕ್ಷಿ, ಮೃಗಗಳಾಗಿ ಉದಯಿಸುವವು. ಆ ಜೀವ ಚೇತನಗಳೇ ಸಂಸಾರ ಮಾಡುತ್ತವೆ. ಮಕ್ಕಳನ್ನು ಹೆರುತ್ತವೆ. ಮಕ್ಕಳನ್ನು ಪೋಷಣೆ ಮಾಡುತ್ತವೆ. ಶರೀರ ಪೋಷಣೆಗೆ ಆಹಾರಕ್ಕಾಗಿ ಜೀವನದಲ್ಲಿ ಹೋರಾಟ ಮಾಡುತ್ತವೆ. ಆಹಾರವನ್ನು ಸೇವಿಸುತ್ತಾ ಶರೀರ ಪೋಷಣೆ ಮಾಡಿಕೊಳ್ಳುತ್ತಾ ಕೊನೆಗೆ ಒಂದು ದಿನ ಸಾಯುತ್ತವೆ. ಕ್ರಿಮಿ ಕೀಟ ಪಶುಮೃಗಗಳಿಂದ ತಿರುಗಿ ಪುಣ್ಯದಿಂದ ಮನುಷ್ಯಜನ್ಮಕ್ಕೆ ಬರುವನು. ಮನುಷ್ಯ ಜನ್ಮ ಬಂದಾಗ ತಾನಾರು, ತಾನು ಎಲ್ಲಿಂದ ಬಂದೆ. ಒಂದು ದಿನ ಕಣ್ಮರೆಯಾಗುವೆನಲ್ಲಾ ಎಂಬ ವಿಚಾರವನ್ನೆಲ್ಲಾ ಮರೆದು ಮನುಷ್ಯ ಜನ್ಮದಲ್ಲಿ ಮಾಡಿದ ಒಳ್ಳೆಯ ಕೆಟ್ಟ ಕ್ರಿಯೆಗಳೇ ಚಾಮರಸನು ತಿಳಿಸುವಂತೆ.

ಲಕ್ಷಿಸುವಡೆಯಂಬತ್ತು ನಾಲ್ಕು ।
ಲಕ್ಷಜೀವಿಗಳೊಳಗೆ ಮಾನವ ।
ಪಕ್ಷದೇಹಿಯ ಸಕಲಕರ್ಮಕೆ ಕರ್ತನಾಗಿಹನೂ ॥ ಎಂಬಂತೆ, ಶೂನ್ಯವಸ್ತುವಿನ ವಿಕಾಸದ ಪೂರ್ಣತೆ ಮನುಷ್ಯರಲ್ಲಿ ಮಾತ್ರ ಆಗುವುದು. ಮಾನವ ಜನ್ಮದಲ್ಲಿ ಅಹಂಕಾರವಶನಾಗಿ ಶರೀರವೇ ನಾನೆಂದು ಕ್ರಿಯೆಗಳನ್ನು ಮಾಡುವನು. ಶರೀರವೇ ನಾನೆಂದು ಮಾಡಿದ ಒಳ್ಳೆಯ ಕೆಲಸಗಳಿಂದ ಪುಣ್ಯ ಬರುವುದು. ಪುಣ್ಯದಿಂದ ಸುಖವು. ಶರೀರ ಗುಣದಿಂದ ಕೆಟ್ಟ ಕ್ರೂರ ಕೆಲಸಗಳಿಂದ ಪಾಪವು. ಪಾಪದ ಫಲದಿಂದ ದುಃಖವನ್ನು ಅನುಭವಿಸುತ್ತಾ, ಕ್ರಿಮಿಕೀಟ ಪಶು ಮೃಗ ಖಗ ಜನ್ಮಗಳನ್ನು ಎತ್ತುತ್ತಾ ಹೋಗುವನು. ನಿವೃತ್ತಿ ಪರನಾಗಿ ಸ್ವಸ್ವರೂಪ ಜ್ಞಾನದ ಅರಿವು ದೃಢವಾಗಿ ಪರಮಾತ್ಮನ ಕ್ರಿಯೆಗಳನ್ನು ಮಾಡಿ ಜನನ ಮರಣ ರೂಪವಾದ ಭವವನ್ನು ಕಳೆದುಕೊಳ್ಳುವನು. ಮನುಷ್ಯ ಜನ್ಮಕ್ಕೆ ಮಾತ್ರ ಆತ್ಮವಿಕಾಸತೆಯ ಪೂರ್ಣತೆಯ ಅರಿವು ಮೂಡುತ್ತದೆ. ಜೀವಚೇತನಗಳಾದ ಕ್ರಿಮಿ, ಕೀಟ, ಪಶು, ಪಕ್ಷಿ ಮನುಷ್ಯರಿಗೆ ಜೀವ ಚೇತನ ವಾಯುವಿನಿಂದ ಬಂಧಿಸಲ್ಪಟ್ಟಿದೆ. ಮನುಷ್ಯರಿಗೆ ಮಾತ್ರ ಆತ್ಮವಿಕಾಸದಿಂದ ಆ ತಿಳುವಳಿಕೆ ಅರಿವಿನಿಂದ ಮೂಡುತ್ತದೆ. ನಾವು ಹುಟ್ಟಿದಾಗಿನಿಂದ ಯಾವುದಾದರೂ ಕ್ರಿಯೆಗಳನ್ನು ಮಾಡುತ್ತಾ ಹೋಗುತ್ತೇವೆ. ಸ್ಥೂಲ ಶರೀರ ಕ್ರಿಯೆಗಳನ್ನು ಮಾಡುತ್ತದೆ. ಸೂಕ್ಷ್ಮ ಶರೀರದ ಮನಸ್ಸು ಆ ವಿಷಯವನ್ನು ಗ್ರಹಿಸುತ್ತದೆ. ಕಾರಣ ಶರೀರ ಭಾವದಲ್ಲಿ ಅವುಗಳನ್ನು ಅಡಗಿಸಿಕೊಂಡಿರುತ್ತದೆ. ಕೊನೆಗಾಲದವರೆವಿಗೂ ಸೂಕ್ಷ್ಮ ಕಾರಣ ಶರೀರಗಳು ನಡೆದಂತಹ ಅನುಭವಿಸಿದಂತಹ ವಿಷಯಗಳನ್ನು ತನ್ನಲ್ಲಿಟ್ಟುಕೊಂಡೇ ಇರುತ್ತವೆ. ಈ ಸೂಕ್ಷ್ಮ ಕಾರಣ ಶರೀರಗಳಲ್ಲಿ ಆತ್ಮನು ವಾಯುವಿನಿಂದ ಬಂಧಿಸಲ್ಪಟ್ಟಿರುವನು. ಸೂಕ್ಷ್ಮ ಕಾರಣ ಶರೀರಗಳು ವಾಯುವಿನಿಂದೊಡಗೂಡಿದ ಆತ್ಮಚೈತನ್ಯವನ್ನು ಮೇಲಕ್ಕೆ ಜಗ್ಗುತ್ತದೆ.

ವಾಯುವಿನಿಂದೊಡಗೂಡಿದ ಆತ್ಮಚೈತನ್ಯವನ್ನು ಸ್ಥೂಲಶರೀರ ಕೆಳಕ್ಕೆ ಜಗ್ಗುತ್ತವೆ. ಊರ್ಧ್ವದೋರ್ವರ್ತತೆ ಜೀವೋ ಎಂಬ ವಾಕ್ಯದಂತೆ ಜೀವನಿಗೆ ವಾಯುವಿನಿಂದ ಶ್ವಾಸೋಚ್ಛ್ವಾಸ ಗತಿಯಲ್ಲಿ ಆಡುವುದರಿಂದ ನಮ್ಮ ಆಯುಷ್ಯ ಗತಿಸುತ್ತದೆ. ಕೊನೆಗಾಲದಲ್ಲಿ ಸ್ಥೂಲಶರೀರ ವಾಯುವನ್ನು ಹಿಡಿಯದೆ ಬಿಡುತ್ತದೆ. ಶಿವಚೇತನದ ವಾಯು ಹೋದ ಮೇಲೆ ಆ ಶರೀರಕ್ಕೆ ಶವ ಎನ್ನುತ್ತಾರೆ. ಈ ರೀತಿ ಶರೀರವನ್ನು ಬಿಟ್ಟು ಹೋದ (ಜೀವ) ಆತ್ಮಚೇತನದ ವಾಯುವಿನಲ್ಲಿ ತನ್ನ ಹಿಂದಿನ ಶರೀರದಲ್ಲಿ ಆಗಿರುವಂತಹ ವಿಷಯಗಳನ್ನೆಲ್ಲಾ ಆ ಚೇತನ ಗರ್ಭೀಕರಿಸಿಕೊಂಡಿರುತ್ತದೆ. ಆ ಚೇತನವು ಶರೀರವನ್ನು ಬಿಟ್ಟ ಕೂಡಲೆ ಮಾತಿನಿಂದ ವಾಕ್ಯದಿಂದ ನಡೆದಿರುವಂತಹ ವಿಷಯಗಳು, ಅನೇಕ ಜೀವಕೋಟಿಗಳಿಂದ ಬರುವಂತಹ ವಾಸನೆಗಳು, ಆ ಜೀವಚೇತನಕ್ಕೆ ಸಂಬಂಧಿಸುವವು. ಮುಂದೆ ಗಾಳಿಯಲ್ಲಿ ಸೇರಿ ಆ ಪ್ರಚೇತನವೇ ಸುಪ್ತಶಕ್ತಿಯಲ್ಲಿದ್ದು ಗಾಳಿಯಿಂದ ಮಳೆರೂಪದಲ್ಲಿ ಭೂಮಿಯಲ್ಲಿ ಬಿದ್ದು ಸಸ್ಯಾದಿ ವರ್ಗಗಳಾಗಿ ಹುಟ್ಟಿ ಆ ಸಸ್ಯಾದಿಗಳ ದವಸ ಧಾನ್ಯಗಳ ಫಲಗಳನ್ನು ಕರ್ಮವಶದಿಂದ ಕ್ರಿಮಿ ಕೀಟ ಜನ್ಮದಲ್ಲಿ ಬರುವುದಾದರೆ ಕ್ರಿಮಿಕೀಟಗಳು ತಿನ್ನುತ್ತವೆ. ಪಶುಮೃಗಗಳು ತಿಂದರೆ ಪಶುಮೃಗ ಜನ್ಮಗತಿಗಳಲ್ಲಿ ಬರುವನು. ವಿಕಾಸಸ್ಥಿತಿಯಲ್ಲಿದ್ದ ಆತ್ಮವು ಸಂಕುಚಿತ ಸ್ಥಿತಿಯಲ್ಲಿ ಈ ರೀತಿ ವರ್ತಿಸುವುದು. ಅನೇಕ ಜನ್ಮಗಳಲ್ಲಿಯೂ ಮನುಷ್ಯ ಜನ್ಮದಲ್ಲಿಯೂ ಆಯಾ ಗತಿಗಳಲ್ಲಿ ಬರುವಾಗ ತಂದೆಯಾರು ತಾಯಿಯಾರು ಅವನ ಶರೀರ ಹೇಗಿರಬೇಕು, ಅವಯವ ವಾಕ್ (ಧ್ವನಿ) ನಡೆ ನುಡಿ ಇವೆಲ್ಲಾ ಹೇಗಿರಬೇಕೆಂಬ ತಾನು ಮಾಡಿದ ಕರ್ಮವಾಸನೆ ಮಾಯಾವಾಸನೆ ಆಧರಿಸಿ ಹುಟ್ಟುವುದು. ಮೊಗ್ಗೆಯ ಮಾಯಿದೇವರು ಹೇಳುವಂತೆ ಭವಭಯ ಆತ್ಮವಿದ್ಯೆಗೆ ತನುತ್ರಯ ವಾಸನೆ ಅಡ್ಡಬೀಳೆ ಸ್ಥೂಲ ಶರೀರ ಸೂಕ್ಷ್ಮ ಕಾರಣ ಶರೀರಗಳಲ್ಲಿ ವಿಷಯ ವಾಸನೆ ಮುಸುಕಲು ಭವದ ಭಯವಿದ್ದೇ ಇದೆ ಎಂದು ತಿಳಿಸುವರು.

ಸ್ಥೂಲಶರೀರ, ಸೂಕ್ಷ್ಮಶರೀರ, ಕಾರಣ ಶರೀರಗಳು ಎಚ್ಚರ, ಸ್ವಪ್ನ ನಿದ್ದೆಯಲ್ಲಿ ಶರೀರವೇ ನಾನೆಂದು ಅಹಂಕಾರದಿಂದ ಕರ್ಮಗಳನ್ನು ಮಾಡುತ್ತದೆ. ಪರಮಾತ್ಮನು (ಲಿಂಗ) ನಾನೆಂದು ಎಚ್ಚರದಲ್ಲಿಯೂ ಸ್ವಪ್ನದಲ್ಲಿ ನಿದ್ದೆಯಲ್ಲಿಯೂ ಅರಿವು ಇರಲೆಂದೇ ಲಿಂಗವನ್ನು ಸಂಬಂಧಿಸುವರು. ಶರೀರಾವಸಾನ ಕಾಲದಲ್ಲಿ ತಾನು ಮಾಡಿದ ಒಳ್ಳೆಯ ಕೆಟ್ಟಕ್ರಿಯೆಗಳು ಕೂಡಿ ಕೊನೆಗಾಲದಲ್ಲಿ ಸ್ಮರಣೆಗೆ ಬರುವುದು. ಅದಕ್ಕನುಸಾರವಾದಂತಹ ಜನ್ಮ ಬರುವುದು. ಬಹುಪುಣ್ಯ ವಶದಿಂದ ಮರುಹು ಬರದೆ ಇದ್ದರೆ ಮನುಷ್ಯ ಜನ್ಮದಲ್ಲಿ ಯಾವ ಸ್ಥಿತಿಯಲ್ಲಿ ದುಡಿದಿರುವನೋ ಅದರಿಂದ ಮುಂದಕ್ಕೆ ಸಂಪಾದಿಸುವನು. ಮರೆವಿನಿಂದ ಕೆಲವು ದಿನ ನಡೆಯಬಹುದು ಕೆಲವು ದಿನ ಅಲಕ್ಷದಿಂದ ಕಡಿಮೆಯಾದ ಕೂಡಲೆ ಮಾಯಾವಶವಾದ ಪ್ರಕೃತಿಗೆ ವಶನಾಗಿ ಕೋಟ್ಯಾಂತರ ಜನ್ಮಗಳನ್ನು ಎತ್ತುತ್ತಾ ಹೋಗುವನು. ಈ ಕೃತಿಯಲ್ಲಿ ಶ್ರೀ ಬಸವೇಶ್ವರರು ನನ್ನಲ್ಲಿ ಹೊಕ್ಕು ಏನು ಪ್ರೇರೇಪಿಸಿರುವರೋ ಆ ವಿಷಯವ ಬರೆದಿರುವೆನು. ಶರಣರ ವಚನಗಳ ಆಧಾರದ ಮೇಲೆ ಲಿಂಗದೇವನು ಪ್ರೇರಿಸಿದ ಹಾಗೆ ಸೃಷ್ಟಿಯ ರಚನೆ ಜಗತ್ತುಗಳ ನಿರ್ಮಾಣ ಶರೀರದ ರಚನೆ ಶರೀರದ ವಿಷಯುವನ್ನು ಅರಿಯುವುದು ಮುಖ್ಯ. ಮಹಾನುಭಾವಿ ಸಮ್ಯಕ್‌ಜ್ಞಾನಿ ಚೆನ್ನಬಸವಣ್ಣನವರು ನಿರೂಪಿಸಿದ ಕರಣ ಹಸಿಗೆಯನ್ನೇ ಆಧಾರವಾಗಿಟ್ಟುಕೊಂಡು ವಿಷಯವನ್ನು ನಿರೂಪಿಸಲಾಗಿದೆ. ಈ ಶರೀರದ ನಿರ್ಮಾಣ ಹೇಗಾಯಿತು. ಶರೀರದ ಜ್ಞಾನವಿಲ್ಲದಿದ್ದರೆ ಮನುಷ್ಯನು ನಡೆದು ಮಾನವ ಜನ್ಮದ ಗುರಿಯನ್ನು ಹೇಗೆ ಸಾಧಿಸಬೇಕೆಂಬುದನ್ನು ಅರಿಯಲಾರನು. ಅಷ್ಟಾವರಣ, ಷಡಾಚಾರ, ಷಟ್‌ಸ್ಥಲ ತತ್ತ್ವಗಳನ್ನು ಆಚರಣೆಯಲ್ಲಿ ತರುವುದಕ್ಕೆ ಕರಣ ಹಸಿಗೆಯ ತತ್ವಗಳೇ ಮುಖ್ಯವಾದವುಗಳು. ಶರೀರದಲ್ಲಿ ಯಾವ ಯಾವ ಶಕ್ತಿಗಳು ಹೇಗೆ ವ್ಯವಹರಿಸುತ್ತವೆ,

ಶಕ್ತಿಗಳ ದುರುಪಯೋಗದಿಂದ ಮಾನವನು ಅಧೋಗತಿಗಿಳಿವನು. ಶಕ್ತಿಗಳ ಸದುಪಯೋಗದಿಂದ ಆಚರಿಸುವುದಕ್ಕೆ ಅಷ್ಟಾವರಣ, ಷಡಾಚಾರ, ಷಟ್‌ಸ್ಥಲದ ತತ್ವಗಳೇ ಆಧಾರ.

ಪ್ರಭುದೇವರ ಪದಮಂತ್ರ ಗೋಪ್ಯದಲ್ಲಿ
ಖೇಚರತ್ವದ ನೆಲೆಯ ಭೂಚರರು ಬಲ್ಲರೇ ।
ವಾಚಾಲಕರ ಮಾತಿಗಿದು ಸಲ್ಲದು ।
ಆಚಾರದನುಭಾವ ಭಕ್ತಿ ನೆಲೆಗೊಂಡವಗೆ ।
ಸೂಚಿಸುವುದಾ ಮಹಾ ಪರಮ ಪದವು

ಚಿನ್ಮಯ ಬಯಲು ಸ್ವಸ್ವರೂಪದ ಅಖಂಡ ಲಿಂಗಜ್ಞಾನ ಮುಖದಲ್ಲಿ ಆಚರಿಸುತ್ತಾ ಲಿಂಗಜ್ಞಾನವೇ ಸದಾಚಾರದ ಇರವಿನಲ್ಲಿ ತನ್ಮಯರಾಗಿರುವ ಮಹಾನುಭಾವಿಗಳ ಸ್ವರೂಪವನ್ನು ಪ್ರಕೃತಿವಶರಾಗಿ ತನುಗುಣದಿಂದ ಅಷ್ಟಮದಗಳು, ಸಪ್ತವ್ಯಸನಗಳು, ಅರಿಷಡ್‌ವರ್ಗಗಳಿಂದ ಕೂಡಿದ ದೇಹಭಾವದಿಂದ ಅಷ್ಟಾಂಗಯೋಗ ಮೊದಲಾದ ತನುಗುಣಗಳಿಂದ ಕೂಡಿದವರಿಗೆ ಮಹಾಲಿಂಗಾನುಭವಿಗಳ ನಿಜಸ್ವರೂಪವು ಅರಿಯಲಿಕ್ಕೆಬಾರದು. ಮತ್ತು ಕೀರ್ತಿವಾರ್ತೆಯ ಆಡಂಬರದ ವೈಭವಕ್ಕಾಗಲಿ, ಪಾಂಡಿತ್ಯಕ್ಕಾಗಲಿ, ಶಾಸ್ತ್ರಜ್ಞಾನದ ವಾಚಾಲಕರು, ವಾಗ್ಬ್ರಹ್ಮಿಗಳು, ವಾಗದ್ವೈತಿಗಳ ಬರಿಯ ಮಾತಿಗಾಗಲಿ, ಅನುಭಾವಿಗಳ ಇರವಿನ ನಿಲವುಗೋಚರವಾಗದು. ಪ್ರಾಣಲಿಂಗದ ಸಂಪೂರ್ಣ ಜ್ಞಾನದ ಅರಿವಾಗಿ ಪ್ರಾಣಲಿಂಗದ ಆಚಾರವು ನಿಜವಾದ ಸಹಜಭಕ್ತಿಯು ಆಚಾರದಲ್ಲಿ ಸ್ಥಿರವಾಗಿ ತನುವಿನ ಸಹಜ ಕ್ರಿಯೆಗಳಲ್ಲಿ ನೆಲೆಗೊಂಡ ಪರಮ ಲಿಂಗಾಂಗಯೋಗಿಗಳಿಗೆ ಲಿಂಗಾಂಗದ ಸಾಮರಸ್ಯದ ಸಂತೃಪ್ತಿ ಸಹಜ ಪದವು ಸ್ಥಿರವಾಗಿ ನೆಲೆಗೊಳ್ಳುವುದು.

ಇಲ್ಲಿಯವರೆವಿಗೂ ಕರಣಹಸಿಗೆಯ ವಿಷಯವನ್ನು ಅನೇಕ ಸಾಹಿತಿಗಳು ಬೇರೆ ಬೇರೆ ರೀತಿಯಲ್ಲಿ ಬರೆದಿರುವರು. ಈ ಸಾಹಿತ್ಯದಲ್ಲಿ ಮುಖ್ಯವಾಗಿ ಕರಣಹಸಿಗೆಯ ನಿವೃತ್ತಿ. ಅವುಗಳ ಪರಿಹಾರವನ್ನು ನಿರೂಪಿಸಲಾಗಿದೆ. ಅಭ್ಯಾಸಿಗಳಿಗೆ ಈ ತತ್ವಗಳು ತಿಳಿದಿರಲಿ ಸರ್ವರು ತತ್ವಜ್ಞಾನಿಗಳಾಗಲಿ ಎನ್ನುವ ಉದ್ದೇಶದಿಂದ ನಿರೂಪಿಸಿದೆ.

ಈ ಪುಸ್ತಕ ಸಿದ್ಧವಾಗಲು ಶ್ರಮಪಟ್ಟವರು ದಾವಣಗೆರೆಯ ಬಸವಬಳಗದ ಉಪಾಧ್ಯಕ್ಷರಾದ ಶರಣ ಪ್ರೊ॥ ಸಿ.ಎನ್. ಹಿರೇಮಠ ಇವರು ಪ್ರತಿಹಂತದಲ್ಲಿ ಪರಿಶೀಲಿಸಿ ತಿದ್ದಿ ಸೂಕ್ತವಾದ ಸಲಹೆಗಳನ್ನು ಕೊಟ್ಟು ಶ್ರಮ ವಹಿಸಿದ್ದಾರೆ. ಅಜ್ಜಂಪುರಶೆಟ್ರು ಸಿದ್ಧಮಲ್ಲಪ್ಪನವರು ತುಂಬಾ ಆಸಕ್ತಿ ವಹಿಸಿ ಇದರ ಪ್ರಕಟಣೆಗೆ ಸಹಕಾರ ಮಾಡಿದ್ದಾರೆ. ಅಂದವಾಗಿ ಮುದ್ರಣ ಮಾಡಿರುವ ಬಸವೇಶ್ವರ ಮುದ್ರಣದ ಮಾಲೀಕರಾದ ಎ.ಎಂ. ಪ್ರಕಾಶರಿಗೂ ಮೇಲಾಗಿ ತತ್ವಜ್ಞಾನದ ಜಿಜ್ಞಾಸೆ ಇರುವ ಎಲ್ಲಾ ಲಿಂಗಚೇತನಗಳಿಗೆ ಬಸವಾದಿ ಪ್ರಮಥರು ಒಳ್ಳೆಯ ಜ್ಞಾನ ಆಚಾರ, ವಿಚಾರ, ಆರೋಗ್ಯ ಸಿಗಲೆಂದು ಹೃದಯಾರೆ ಹಾರೈಸುತ್ತೇವೆ.

ಶ್ರೀ ಗುರುಬಸವ ಸ್ವಾಮಿಗಳು
ವಿರಕ್ತಮಠ, ಪಾಂಡೋಮಟ್ಟಿ, ಚನ್ನಗಿರಿ ತಾ॥

ಅನುಕ್ರಮಣಿಕೆ

	ಪುಟ
ಗುರುಸ್ತುತಿ	೧
ಪರಮಾತ್ಮನ ಸ್ವರೂಪು	೨
ಪ್ರಣವದ ವಿಕಾಸ	೪
ಸಾದಾಖ್ಯ ಮೂರ್ತಿಲಿಂಗ ಸ್ಥಲ	೭
ಪಂಚಕರಣಗಳಿಂದ ಪಂಚತನ್ಮಾತ್ರೆಗಳುತ್ಪತ್ತಿ	೭
ಪಿಂಡಸ್ಥಲ	೧೧
ಪಿಂಡಜ್ಞಾನ ಸ್ಥಲ	೧೪
ಇಪ್ಪತ್ತೈದು ತತ್ವಗಳು	೧೭
ಮಾಯಾವಿಲಾಸ ವಿಡಂಬನ ಸ್ಥಲ	೧೯
ಶರೀರ ನಿರಸನ ಸ್ಥಲ	೨೨
ಪರಮಾತ್ಮನ ಕಾರುಣ್ಯ ಸ್ಥಲ	೨೪
ಕರಣಹಸಿಗೆಯ ವಿಷಯ	೨೬
ಕರ್ಮೇಂದ್ರಿಯಗಳು	೨೭
ಜ್ಞಾನೇಂದ್ರಿಯಗಳು	೨೮
ದಶವಿಧ ವಾಯುಗಳು	೨೯
ದಶವಿಧವಾಯುವಿನ ವಿವರ	೨೯
ಕರಣಗಳು	೩೧
ಪಂಚಕರಣಗಳು ಅವುಗಳ ಸಂಬಂಧಪಟ್ಟ ಗುಣಗಳು	೩೨
ಪ್ರಕೃತಿಗೆ ವಶವಾದ ನಡೆಗಳು	೩೨
ಪಂಚವಾಯುಗಳು	೩೩
ಷಟ್‌ಕರಣಗಳು	೩೪
ಶಕ್ತಿಗಳು	೩೫
ಸೂತಕಗಳು	೪೨
ಅರಿಷಡ್‌ವರ್ಗಗಳು ಉತ್ಪತ್ತಿ ಅವುಗಳ ಪರಿಹಾರ	೪೪
ಸಪ್ತವ್ಯಸನಗಳು ಅವುಗಳ ನಿವಾರಣೆ	೪೫
ಅಷ್ಟಮೂರ್ತಿ ಮದಂಗಳು ಅವುಗಳ ನಿವೃತ್ತಿಯ ವಿವರ	೪೬
ಅಂತರಂಗದಷ್ಟಮದಗಳು	೪೭
ಅಷ್ಟಾತ್ಮಗಳು	೪೮
ಅಷ್ಟತನುಗಳ ವಿವರ ಅಷ್ಟಾವರಣಗಳ ಸಂಬಂಧದ ಆಚರಣೆ	೫೦
ಅಂತರಂಗದಷ್ಟಮದಗಳು ಅವುಗಳ ನಿವಾರಣೆ	೫೧
ಬಹಿರಂಗದಷ್ಟಮದಂಗಳು ಅವುಗಳ ನಿವಾರಣೆ	೫೩
ದಶನಾಡಿಗಳು ಅವುಗಳ ಕ್ರಿಯೆಗಳು	೫೫
ನಾಡಿಗಳ ಸ್ಥಾನಗಳು	೫೫

ನಾಡಿಗಳು, ಚಕ್ರಗಳು ಅವುಗಳಲ್ಲಿ ಲಿಂಗಸಂಬಂಧ ೫೬
ಚಕ್ರಗಳು ಅವುಗಳ ವಿವರಣೆಗಳು ೫೭
ಸಪ್ತಧಾತುಗಳ ಉತ್ಪತ್ತಿ ಅವುಗಳ ವ್ಯವಹಾರವು ಲಿಂಗಸಂಬಂಧವು ೬೦
ಷಡೂರ್ಮಿಗಳ ಸ್ಥಿತಿ ಸ್ವಭಾವ ಲಿಂಗಸಂಬಂಧ ೬೧
ಷಡ್ಭಾವವಿಕಾರಗಳು ಅವುಗಳಿಗೆ ಪರಿಹಾರ ೬೩
ಪಂಚಕೋಶಗಳು ಅವುಗಳ ವಿವರ ಹಾಗೂ ಅವುಗಳಿಗೆ ಪರಿಹಾರ ೬೪
ಷಡ್ಭ್ರಮೆಗಳು ಅವುಗಳ ನಿವಾರಣೆ ೬೫
ಪಂಚಕ್ಲೇಶಗಳು ಅವುಗಳ ಪರಿಹಾರ ೬೬
ಪಂಚಾಗ್ನಿಗಳು ೬೭
ಅಂಗಚತುಷ್ಟಯಗಳು ೬೮
ಕರ್ಮತ್ರಯಗಳು ೬೯
ತಯತ್ರಯಗಳ ಕರ್ಮತ್ರಯಗಳ ನಿವಾರಣೆ ೭೧
ಗುಣತ್ರಯಂಗಳು ೭೧
ರಜೋಗುಣಗಳು ೭೩
ತಾಮಸಗುಣಗಳು ೭೩
ಸತ್ವಗುಣಗಳು ಅವುಗಳ ನಿವೃತ್ತಿ ಉಪಾಯ ೭೪
ರಜೋಗುಣಗಳ ನಿವೃತ್ತಿ ೭೬
ತಮೋಗುಣಗಳ ಪರಿಹಾರ ೭೮
ಆತ್ಮತ್ರಯಗಳು ೮೦
ಜೀವತ್ರಯಗಳು ೮೧
ಅವಸ್ಥಾತ್ರಯಗಳು ೮೨
ಪರಮಾತ್ಮನ ಸ್ವರೂಪು ೮೨
ಮನತ್ರಯಂಗಳು ೮೪
ತ್ರಿಕರಣಗಳು ೮೪
ಅಹಂಕಾರತ್ರಯಗಳು ೮೬
ದುರ್ಭಾವತ್ರಯಗಳು ೮೭
ಸದ್ಭಾವತ್ರಯಗಳು ೮೭
ಇಹಲೋಕದ ತಾಪತ್ರಯಗಳು ೮೮
ವಾಸನಾತ್ರಯ ೮೯
ದ್ವಾದಶಮಲಗಳು ೮೯
ಸ್ವರ್ಗಲೋಕದ ತಾಪತ್ರಯಗಳು ೯೨
ತ್ರಿದೋಷಗಳು ೯೩
ಪಾದೋದಕ ವಿಷಯ ೧೦೧

✡ ✡ ✡ ✡ ✡

ಓಂ ಶ್ರೀ ಗುರು ಬಸವಲಿಂಗಾಯ ನಮಃ
ಓಂ ಶ್ರೀ ಗುರು ಸಂಗಮನಾಥಾಯ ನಮಃ

ಶ್ರೀ ಸಂಗಮನಾಥನ ವಚನ

ವಚನ : ಗುರುಸ್ತುತಿ

ಶ್ರೀ ಗುರುವೇ ಪರತತ್ವವು ನೋಡಾ. ಶ್ರೀ ಗುರುವೇ ಸಚ್ಚಿದಾನಂದ ನಿತ್ಯ ಪರಿಪೂರ್ಣ ಅಖಂಡ ಪರವಸ್ತುವು ನೋಡಾ. ಶ್ರೀ ಗುರುವೇ ಸಾಕ್ಷಾತ್ ಪರಶಿವನು ನೋಡಾ, ಶ್ರೀ ಗುರುವೇ ಪ್ರತ್ಯಕ್ಷ ಪರಬ್ರಹ್ಮನು ನೋಡಾ.

ಶ್ಲೋಕ : ನಗುರೋರಧಿಕಂ; ನಗುರೋರಧಿಕಂ; ನಗುರೋರಧಿಕಂ; ವಿದಿತಂ, ವಿದಿತಂ, ವಿದಿತಂ, ಎಂದುದಾಗಿ ಶ್ರೀ ಗುರುವಿಗಿಂತಧಿಕರು ಇಲ್ಲವೆಂದು ನಿಮ್ಮ ಶರಣರು ಸಾರುವರು. ಇಂತಪ್ಪ ಗುರುವೇ ಶ್ರೀ ಮತ್ತ್ಯೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥನಲ್ಲದೆ ದೈವವಿಲ್ಲವೆಂದು ಅರುಹಿದಿರಿ.

ಶ್ರೀ ಗುರುವೇ ಎಂಭತ್ನಾಲ್ಕು ಲಕ್ಷ ಜೀವರಾಶಿಗಳಲ್ಲಿ ಭವರೋಗ ಕೋಟಲೆಗಳೊಳಗಾಗಿ ಜಡತ್ವದಿಂ ಕಂಗೆಟ್ಟು ನರನಾಗಿ ಬಾಳುವ ನನ್ನನ್ನು ಹರನಾಗಿ ಬಾಳೆಂದು ಬೋಧಿಸಿದ ಗುರುವೇ; ತನುಗುಣದಿಂ ವ್ಯವಹರಿಸಿ ಜೀವನಾಗಿ ತಿರುಗುವ ಅಜ್ಞಾನಿಯನ್ನು ಲಿಂಗ ಗುಣದಿಂ ವ್ಯವಹರಿಸೆಂದು ಜಂಗಮತ್ವವಂ ಕೊಟ್ಟು ಸುಜ್ಞಾನಿಯನ್ನಾಗಿ ಮಾಡಿದ ಗುರುವೇ; ಪ್ರಕೃತಿ ಗುಣದಿಂ ನಿಮ್ಮ ಬಿಟ್ಟು ಅಜ್ಞಾನದಿಂದಿಪ್ಪೆನೆಂದು ಕರುಣದಿಂ ದೀಕ್ಷಾ, ಶಿಕ್ಷಾ ಗುರುವಾಗಿ ಬಂದು ದೀಕ್ಷೆಯ ಮಾಡಿ ಶಿಕ್ಷಿಸಿ ಮೋಕ್ಷಮಂ ಕೊಟ್ಟು ರಕ್ಷಿಸಿದ ಶ್ರೀ ಮತ್ತ್ಯೂನ್ಯ ಸಿಂಹಸನಾಧೀಶ್ವರ ನಿರಂಜನ ಸಂಗಮನಾಥ ಶರಣು ಶರಣಾರ್ಥಿ.

ಪರಮಾತ್ಮನು ವಿಶ್ವಾತೀತನಾಗಿ ಬ್ರಹ್ಮಾಂಡದೊಳ್ ತುಂಬಿ ಸಕಲಜಗತ್ತಿಗೆ ಆಧಾರವಾಗಿರ್ದೊಡಾ ಪರಮಾತ್ಮನು ಜಗತ್ತಿನ ಜೀವಿಗಳ ಜನನ ಮರಣಮಂ ಕಳೆಯಲರಿಯನು. ಆ ಪರಮಾತ್ಮನೇ ಮನುಷ್ಯ ಶರೀರವಂ ಧರಿಸಿ ಗುರುವಾಗಿ ಬಂದು ಅಜ್ಞಾನಮಂ ಕಳೆದು, ಸುಜ್ಞಾನಮಂ ಬೋಧಿಸಿ, ಭವಿತ್ವಮಂ ಕಳೆದು, ಭಕ್ತನಂ ಮಾಡಬೇಕೆಂಬ ಚಿಂತೆ ನಿಮಗಲ್ಲದೆ ನಾನೇನ ಬಲ್ಲೆನಯ್ಯಾ ಗುರುವೇ ಶ್ರೀ ಮತ್ತ್ಯೂನ್ಯ ಸಿಂಹಸನಾಧೀಶ್ವರ ನಿರಂಜನ ಸಂಗಮನಾಥಾ.

ಕೆಟ್ಟೆ ಕೆಟ್ಟೆನಯ್ಯಾ! ಸರ್ವಮಂತ್ರಗಳಿಗೆ ಮೂಲವು ಗುರುವಾಕ್ಯವೆಂದರಿಯದೆ, ಕೆಟ್ಟೆ ಕೆಟ್ಟೆನಯ್ಯಾ. ಸರ್ವ ಪೂಜೆಗಳಿಗೆ ಮೂಲ, ಗುರುಪಾದಪೂಜೆಯೆಂದರಿಯದೆ, ಕೆಟ್ಟೆ ಕೆಟ್ಟೆನಯ್ಯಾ. ಸರ್ವಧ್ಯಾನಗಳಿಗೆ ಮೂಲವು ಗುರುಮೂರ್ತಿ ಧ್ಯಾನವೆಂದರಿಯದೆ, ಕೆಟ್ಟೆ ಕೆಟ್ಟೆನಯ್ಯಾ. ಸರ್ವಸಿದ್ಧಿಗಳಿಗೆ ಮೂಲವು ಗುರು ಕೃಪೆಯೆಂದರಿಯದೆ, ಕೆಟ್ಟೆ ಕೆಟ್ಟೆನಯ್ಯಾ, ಸದ್ಗುರುವೇ ಶ್ರೀ ಮತ್ತ್ಯೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ!

ಮಲತ್ರಯಮಂ ಕಳೆದು, ಅಂಗತ್ರಯಮಂ ಶುದ್ಧವ ಮಾಡಿ, ಲಿಂಗತ್ರಯಮಂ ದಯಪಾಲಿಸಿದ ಗುರುವೇ, ಜೀವನಾಗಿ ತಿರುಗುವನಂ ಕೈವಿಡಿದು ಜಂಗಮನನ್ನಾಗಿ ವ್ಯವಹರಿಸುವಂತೆ ಮಾಡಿದ ಗುರುವೇ, ನರನಾಗಿ ಕಂಗೆಟ್ಟು ಅಲೆದಾಡುವನಂ ಹರನಾಗಿ ಬಾಳೆಂದು ಬೋಧಿಸಿದ

ಗುರುವೇ, ಅಷ್ಟಾಂಗ ಯೋಗಾಂಗಗಳೊಳ್ ಭ್ರಮಿಸಿರುವನಂ ಕರೆತಂದು ಲಿಂಗಾಂಗ ಯೋಗಿಯಾಗಿ ಮಾಡಿದಂಥ ಗುರುವೇ, ಮಂತ್ರ, ಲಯ, ಹಠ, ರಾಜಯೋಗಂಗಳಂ ನಂಬಿಪ್ಪವನಂ ತಪ್ಪಿಸಿ ಲಿಂಗಾಂಗ ಯೋಗಿಯಾಗಿ ಬಾಳೆಂದು ಕೃಪೆಗೈದು ಆಶೀರ್ವದಿಸಿ ಭಕ್ತ ಜಂಗಮನಾಗಿ ಜಗದಲ್ಲಿ ವ್ಯವಹರಿಸೆಂದು ತಿಳುಹಿದ ಗುರುವೇ ಶ್ರೀಮತ್ತ್ಯೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ಆದಿಗುರು ಬಸವಣ್ಣನೇ ಸಂಗಮನಾಥನಾಗಿ ಬಂದು ಸ್ಥೂಲ ಶರೀರದಲ್ಲಿ ಇಷ್ಟಲಿಂಗ ಶುದ್ಧ ಪ್ರಸಾದವಾಗಿ ನೆಲೆಗೊಂಡನಯ್ಯ. ಅನಾದಿಲಿಂಗ ಚೆನ್ನ ಬಸವಣ್ಣನೇ ಸಂಗಮನಾಥನಾಗಿ ಬಂದು ಸೂಕ್ಷ್ಮ ಶರೀರದಲ್ಲಿ ಪ್ರಾಣಲಿಂಗ ಸಿದ್ಧ ಪ್ರಸಾದವಾಗಿ ನೆಲೆಗೊಂಡನಯ್ಯಾ. ಅನಾದಿ ಜಂಗಮ ಪ್ರಭುದೇವರೇ ಸಂಗಮನಾಥನಾಗಿ ಬಂದು ಕಾರಣ ಶರೀರದಲ್ಲಿ ಭಾವಲಿಂಗ ಪ್ರಸಿದ್ಧ ಪ್ರಸಾದವಾಗಿ ಒಳಹೊರಗೆ ತೆರಪಿಲ್ಲದೆ ನೆಲೆಗೊಂಡು ಮಾತೆಂಬ ಜ್ಯೋತಿರ್ಲಿಂಗ ವಚನಗಳನ್ನು ರಚಿಸಿದನಯ್ಯಾ, ನಾನೇನ ಬಲ್ಲೆನಯ್ಯಾ ನಿಮ್ಮ ಶರಣರ ಅನುಭಾವದ ವಚನಗಳನ್ನು ಗುರುವೇ ಶ್ರೀಮತ್ತ್ಯೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ಪರಮಾತ್ಮನ ಸ್ವರೂಪು

ಸಹಜಸ್ಥಲ : ಆದಿ ಅನಾದಿಗಳಿಲ್ಲದೆ ಪ್ರಕೃತಿ ವಿಕೃತಿಗಳಿಲ್ಲದೆ, ಆವಾವ ನಾಮರೂಪು ಕ್ರಿಯೆಗಳೆಂಬ ಭ್ರಾಂತಿ ಸೂತಕಗಳೇನೂಯಿಲ್ಲದೆ; ಸರ್ವವೂ ತಾನಾಗಿ ತಾನಲ್ಲದನ್ಯವೇನೂ ಇಲ್ಲದೇ ಇದ್ದು-ಇಲ್ಲದೆ ಇರುವ ತತ್ವವೇ (ಅಣುತತ್ವ) ಸಹಜಸ್ಥಲ ತತ್ವವೆಂಬರಯ್ಯಾ ಶ್ರೀಮತ್ತ್ಯೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ಪರಾಪರವೆಂಬ ತತ್ವಗಳಿಗೆ ಪರಬ್ರಹ್ಮವೆಂಬ ನಾಮರೂಪು ಕ್ರಿಯೆಗಳಿಗೆ ತಾನೇ ಮೂಲಿಗನಾಗಿ, ಶೂನ್ಯ, ನಿಶ್ಶೂನ್ಯ, ಸುರಾಳ, ನಿರಾಳವೆಂಬ ತತ್ವಗಳಿಗೂ, ಸಾಧ್ಯ, ಅಸಾಧ್ಯ, ರೂಪು, ನಿರೂಪು, ತತ್ವಗಳಿಗೂ, ಸೂಕ್ಷ್ಮಾತ್ ಸೂಕ್ಷ್ಮಗಳಿಗೆ ಮೂಲವಾಗಿರುವ ತತ್ವವೇ (ಅಣುತತ್ವ) ಸಹಜ ಸ್ಥೂಲ ತತ್ವವೆಂಬರಯ್ಯಾ ಶ್ರೀ ಮತ್ತ್ಯೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ಸರ್ವ ಶೂನ್ಯ ನಿರಾಲಂಬ ಸ್ಥಲ : ಶೂನ್ಯ, ನಿಃಶೂನ್ಯ ತತ್ವಗಳಿಗೆ ಮೂಲವಾಗಿ ಸ್ವಯಂಭುವಾಗಿ ವಿಶ್ವ ಪ್ರಪಂಚಗಳಿಗೆ ಆಧಾರವಾಗಿ, ಜಗತ್ತುಗಳ ಚರಾಚರವಸ್ತುಗಳಿಗೂ ನಿಃಕಲ ನಿಶ್ಶೂನ್ಯ ತತ್ವಗಳಿಗೂ ಪರಾತ್ ಪರವಾಗಿ ನಿರ್ಮಾಯ ನಿರಂಜನನೆನಿಸಿ, ವಾಕ್‌ಮನೋತೀತವಾಗಿ, (ಏಕೈಕವಾಗಿ) ನಿರ್ಮಲವಾಗಿ, ಅಖಂಡವಾಗಿ, ಸರ್ವಜ್ಯೋತಿಗಳಿಗೆ ಆಶ್ರಯವಾಗಿ, ಮೂಲವಾದ ಸಕಲ ತತ್ವಗಳಿಗೆ ತಾನೇ ಅವಲಂಬನವಾಗಿರುವ ಲಿಂಗವೇ ಸರ್ವಶೂನ್ಯ ನಿರಾಲಂಬವೆಂಬರಯ್ಯಾ ಶ್ರೀ ಮತ್ತ್ಯೂನ್ಯ ಸಿಂಹಸನಾಧೀಶ್ವರ ನಿರಂಜನ ಸಂಗಮನಾಥಾ.

ನಿರಂಜನ ಸ್ಥಲ : ವರ್ಣಾಧ್ವ, ಪದಾಧ್ವ, ಮಂತ್ರಾಧ್ವ, ಭುವನಾಧ್ವ, ತತ್ವಾಧ್ವ, ಕಲಾಧ್ವಗಳಿಗೆ ಮೂಲಿಗನಾಗಿ, ಸರ್ವಮಂತ್ರಗಳಿಗೆ ಚಿರಸ್ಥಾಯಿಯಾಗಿ, ವಾಚ್ಯ ಅವಾಚ್ಯ ಪ್ರಣವಕ್ಕೆ ಆಧಾರವಾಗಿ ಪರಬ್ರಹ್ಮ ಮೊದಲಾದ ದೇವತ್ವವೆಂಬ ನಾಮರೂಪುಗಳಿಗೆ ನಿಲುಕದ ಪರಬ್ರಹ್ಮವೆಂಬ ನಾಮಕ್ಕತೀತವಾಗಿರುವ ಲಿಂಗವೇ ನಿರಂಜನ ಲಿಂಗವೆಂಬರಯ್ಯಾ ಶ್ರೀಮತ್ತ್ಯೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ನಿಶ್ಶೂನ್ಯ ಸ್ಥಲ : ಸಾವಯವ ನಿರವಯಕ್ಕೆ ಮೂಲವಾಗಿ, ಸೂಕ್ಷ್ಮಕ್ಕೆ ಸೂಕ್ಷ್ಮವಾಗಿ, ನಿತ್ಯವಾಗಿ, ಜಗದ್ವ್ಯಾಪಕವಾಗಿ, ಸರ್ವತತ್ವಗಳಿಗೆ ಮೂಲವಾಗಿ, ಸರ್ವಭರಿತವಾಗಿ ಇದ್ದೂ ಇರದ ಹಾಗೆ ಕಾಣಿಸುತ್ತಂ, ಎಲ್ಲೆಲ್ಲೂಯಿಲ್ಲದ ಹಾಗೆ ಕಾಣಿಸಿ, ಸರ್ವವೂ ತಾನೆಯಾಗಿ ಮೂಲವಾಗಿರುವ ತತ್ವವೇ ನಿಶ್ಶೂನ್ಯ ಲಿಂಗವೆಂಬರಯ್ಯಾ ಶ್ರೀಮತ್ಶೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ನಿಃಕಲವೆಂಬ ಕಲಾ ತತ್ವಗಳಿಗೆ ಮೂಲವಾಗಿ, ನಿರಂಜೋಂಕಾರ ಶಕ್ತಿಗೆ ಸ್ಥೂಲವಾಗಿ, ಚಿನ್ಮಯವಾಗಿ, ನಾಶವಿಲ್ಲದ-ಅಳಿವಿಲ್ಲದ ಪರಕ್ಕೆ ಪರವಾಗಿ, ಪ್ರಕೃತಿ ವಿಕೃತಿಗಳೇನೂಯಿಲ್ಲದ ನಿರವಯವಾಗಿ, ಸ್ವತಂತ್ರವಾಗಿ, ನಿತ್ಯವಾಗಿ ಶಾಶ್ವತವಾಗಿ, ಸ್ವಯಂಭುವಾಗಿ, ನಿರಾಳವಾಗಿ, ಪ್ರಕಾಶಭರಿತವಾಗಿ, ಸಹಜವಾಗಿ, ಪರಿಪೂರ್ಣವಾಗಿ ಶೂನ್ಯವಾಗಿರುವ ತತ್ವವೇ ನಿಶ್ಶೂನ್ಯಲಿಂಗವೆಂಬರಯ್ಯಾ ಶ್ರೀಮತ್ಶೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ನಿಃಕಲಲಿಂಗ ಸ್ಥಲ : ಆದಿ ಅನಾದಿಗಳಿಲ್ಲದೆ, ಶಿವ-ಶಕ್ತ್ಯಾತ್ಮಕವಾಗಿ, ಸಗುಣ, ನಿರ್ಗುಣಗಳ ತೋರುವ ತೋರಿಕೆಗಳಿಗೆ ನಿಲುಕದೆ, ಕಾಲ ಕಲ್ಪಿತಗಳಿಗೆ ನಿಲುಕದೆ, ಸ್ವತಂತ್ರವಾಗಿ ಸರ್ವಜ್ಞನೆಂದೆನಿಸಿ, ಪರಕ್ಕೆ ಪರವಾಗಿ, (ಪರಬ್ರಹ್ಮಕ್ಕೆ ಮೂಲವಾಗಿರುವ) ಸೂಕ್ಷ್ಮಕ್ಕೆ ಸೂಕ್ಷ್ಮವಾಗಿ, ನಿತ್ಯವಾಗಿ, ಸರ್ವಕಲೆಗಳಿಗೂ ಮೂಲವಾಗಿ, ಕಲಾರಹಿತವಾಗಿ ಪ್ರಕೃತಿ ವಿಕೃತಿಗಳೇನೂ ತೋರದೇ ಅನೇಕ ಕೋಟಿ ಬ್ರಹ್ಮಾಂಡಗಳಿಗೆ ಸೂತ್ರವಾಗಿ ಶಾಶ್ವತವಾಗಿರುವ ತತ್ವವೇ ನಿಃಕಲಲಿಂಗತತ್ವವೆಂಬರಯ್ಯಾ ಶ್ರೀ ಮತ್ಶೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ಅಂಗವಾರು, ಲಿಂಗವಾರು, ಮುಖವಾರು, ಹಸ್ತವಾರು, ಶಕ್ತಿಯಾರು, ಭಕ್ತಿಯಾರು, ಪ್ರಣವವಾರು, ಕಲೆಯಾರು, ಪದಾರ್ಥವಾರು, ಎಂಬ ತೋರಿಕೆಗೆ ನಿಲುಕದೆ ಸ್ವಯಂಭುವೆನಿಸಿ, ನಿತ್ಯವೆನಿಸಿ, ಸಾಕ್ಷಿಯೆನಿಸಿ, ಚಿಜ್ಯೋತಿಯೆನಿಸಿ ಪ್ರಕಾಶಿಸುವ ಕಲಾತೀತವಾದ ತತ್ವವೇ ನಿಃಕಲ ಲಿಂಗವೆಂಬರಯ್ಯಾ ಶ್ರೀ ಮತ್ಶೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ಶಿಕ್ಷೆ, ವ್ಯಾಕರಣ, ಛಂದಸ್ಸು, ಮೀಮಾಂಸ, ಜ್ಯೋತಿಷ್ಯ, ತರ್ಕವೆಂಬ ಷಟ್ ಶಾಸ್ತ್ರಗಳಿಗೆ ನಿಲುಕದ, ವೇದ ಶಾಸ್ತ್ರಾಗಮ ಶೃತಿ ತತಿಗಳಿಗೆ ನಿಲುಕದ, ದ್ವೈತ ಅದ್ವೈತ, ವಿಶಿಷ್ಟಾದ್ವೈತ, ಶಕ್ತಿ ವಿಶಿಷ್ಟಾದ್ವೈತವೆಂಬ ತತ್ವಗಳ ತೋರುವ ತೋರಿಕೆಯೇನೂ ತೋರದ ನಿರ್ಲಿಪ್ತವಾದ ತತ್ವವೇ ನಿಃಕಲಲಿಂಗವೆಂಬರಯ್ಯಾ ಶ್ರೀ ಮತ್ಶೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ಪೃಥ್ವಿ, ಅಪ್ಪು, ಅಗ್ನಿ, ವಾಯು, ಆಕಾಶ ಆತ್ಮವೆಂಬ ಷಟ್ ತತ್ವಂಗಳನೊಳಕೊಂಡಿಪ್ಪ ಮಹಾಲಿಂಗಕ್ಕೆ ಆಧಾರವಾಗಿ, ನಾದ, ಬಿಂದು, ಕಳೆ ಮತ್ತು ಮೂಲಚಿತ್ ಶಕ್ತಿಗೆ ಮೂಲವಾಗಿ (ಷಟ್ ತತ್ವ, ಷಡ್ ಭೂತಂಗಳಿಗೆ ಮೂಲವಾಗಿ) ಪರಬ್ರಹ್ಮವೆಂಬ ನಾಮಕ್ಕೆ ಮೂಲವಾಗಿ, (ಅನೇಕ ಕೋಟಿ ಬ್ರಹ್ಮಾಂಡಗಳನ್ನೊಳಗೊಂಡು ತೋರುವ ಮಹಾಲಿಂಗಕ್ಕೆ ಮೂಲವಾಗಿ) ನಿರಾಶ್ರಯವಾಗಿ, ನಿರ್ಮಲವಾಗಿ, ಸರ್ವಜ್ಞವಾಗಿ, ನಿರಾಧಾರವಾಗಿ ತನಗೊಂದಾಧಾರವಿಲ್ಲದೆ ಸ್ವತಂತ್ರವಾಗಿ ಬ್ರಹ್ಮಾಂಡ ಪಿಂಡಾಂಡಗಳಿಗೆ ಮೂಲವಾಗಿ ಸರ್ವಚೈತನ್ಯಕ್ಕೆ ಮೂಲವಾದ ಸರ್ವಜ್ಯೋತಿಗಳಿಗೆ ಮೂಲ ಕಳೆಯಾಗಿ ತೋರುವ ಕಲಾರಹಿತ ತತ್ವವೇ ನಿಃಕಲ ಲಿಂಗವೆಂಬರಯ್ಯಾ ಶ್ರೀ ಮತ್ಶೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ಏನೂ ಏನೂ ಎನಲಿಲ್ಲದ ಆದಿ ಅನಾದಿ ಮೂಲ ಶೂನ್ಯವಾದ ಸಹಜ ಬ್ರಹ್ಮವೇ

ಚಿನ್ನಾದ, ಚಿದ್ಬಿಂದು, ಚಿತ್ಕಲೆಗಳಾಗಿ, ಚಿನ್ನಾದವೇ ನಿರಂಜನಲಿಂಗವೆಂದೂ, ಚಿದ್ಬಿಂದುವೇ ನಿಶ್ಶೂನ್ಯಲಿಂಗವೆಂದೂ, ಚಿತ್ಕಲೆಯೆ ನಿಃಕಲಲಿಂಗವೆಂದೂ ಅನಂತಕೋಟಿ ಬ್ರಹ್ಮಾಂಡಗಳೋಳ್ ಪಸರಿಸಿರುವುದೆಂದೆಯಯ್ಯಾ ಶ್ರೀ ಮತ್ಶೂನ್ಯ ಸಿಂಹಸನಾಧೀಶ್ವರ ನಿರಂಜನ ಸಂಗಮನಾಥಾ.

ಮಹಾಲಿಂಗ ಸ್ಥಲ : ಇಂತಪ್ಪ ಏನೂ ಏನೂ ಎನಲಿಲ್ಲದ ಶೂನ್ಯ ಲಿಂಗದಲ್ಲಿ ಮೂಲ ಜ್ಞಾನ ಚಿತ್ ಪಸರಿಸಿಹುದು. ಮೂಲಚಿತ್ತುವಿನಿಂದಾ ಸರ್ವಬ್ರಹ್ಮಾಂಡಗಳೋಳ್ ತುಂಬಿದ ಉಲುಹು ರೂಪದಿಂದಿರುವ ನಾದವಿರುತಿಹುದು. ಇಂತಪ್ಪ ಉಲುಹು ರೂಪದಿಂದಿರುವ ಹೊಯಿಲೇ ಘನೀಭವಿಸಿ ಬಿಂದು ಪ್ರಕಾಶ ರೂಪಮಾಗಿಹುದು, ಇಂತಪ್ಪ ನಾದ ಬಿಂದುಗಳಿಂ ನಾಮ, ರೂಪು, ಕ್ರಿಯೆಗಳಿಗೆ ಆಧಾರವಾದ ಕಲೆಯಿಹುದು. ನಾದ, ಬಿಂದು, ಕಲೆ, ಮೂಲ ಚಿತ್ ಸೇರಿ ಅಖಂಡಗೋಳಕಾಕಾರ ತೇಜೋಮೂರ್ತಿಯಪ್ಪ ಮಹಾಲಿಂಗವೆಂದೆಯಯ್ಯಾ ಶ್ರೀ ಮತ್ಶೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ಆದಿಯಿಲ್ಲದ, ಮಧ್ಯಯಿಲ್ಲದ, ಅಂತ್ಯವಿಲ್ಲದ ತಾನಲ್ಲದೇ ಬೇರೊಂದಾಶ್ರಯವಿಲ್ಲದಾ ಲಿಂಗವೂ

ಶ್ಲೋಕ : ಆದಿಮಧ್ಯಾಂತ ಶೂನ್ಯಂ ವ್ಯೋಮವ್ಯೋಮ ವಿವರ್ಜಿತಂ ।
ಜ್ಞಾನ ಧ್ಯಾನ ದ್ವಯೈರ್ಹೀನಂ ಶೂನ್ಯ ಲಿಂಗಮನಾಶ್ರಯಮ್ ।

ಎಂದೆನಿಸುವ ಶೂನ್ಯಲಿಂಗದ ಜ್ಞಾನ ಪ್ರಕಾಶವೇ ಚಿತ್ತೆನಿಸಿತ್ತು. ಆ ಚಿತ್ತಿನಿಂದಾ ಉಲುಹು ರೂಪಮಾದ ನಾದವೆಂದು; ಆ ಉಲುಹೇ ಘನೀ ಭವಿಸಿ ಬಿಂದುವೆಂದು ಬಿಂದುವಿನ ಸ್ಥೂಲವೇ ಸಮಸ್ತ ನಾಮ ರೂಪ ಕ್ರಿಯೆಗಳಿಗೆ ಮೂಲವಾದ ಕಳೆಯೆಂದೂ; ಆ ನಾದ ಬಿಂದು ಕಲೆ ಮೂಲ ಚಿತ್ ಸೇರಿ ಸಮಸ್ತ ಬ್ರಹ್ಮಾಂಡಕೋಟಿಗಳಿಗೆ ಆಧಾರಮಾದ ಅಖಂಡಗೋಳಕಾಕಾರ ತೇಜೋ ಮೂರ್ತಿಯಪ್ಪ ಮಹಾಲಿಂಗವು ಎಂದರುಹಿದಿರಯ್ಯಾ ಶ್ರೀ ಮತ್ಶೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ಪ್ರಣವದ ವಿಕಾಸ

ವಚನ : ಏನೂ ಏನೂ ಇಲ್ಲದ ಹಾಗೆ ಇದ್ದು ಸರ್ವದರಲ್ಲಿಯೂ ವ್ಯಾಪ್ತವಾಗಿ ಇಲ್ಲದ ಹಾಗೆ ಇರುವ ಸ್ಥಿತಿಯೇ ಸಹಜ ಸ್ಥಿತಿ (ಸಹಜಸ್ಥಲ) ಎನಿಸುವುದು. ಸಹಜ ವಸ್ತುವಿನ ಜ್ಞಾನ ಪ್ರಕಾಶದ ಸ್ಫೂರ್ತಿಯೇ ಸರ್ವಶೂನ್ಯ ನಿರಾಲಂಬ ಬ್ರಹ್ಮವೆನಿಸುವುದು. ನಿರಾಲಂಬ ಬ್ರಹದ ನೆನಹೇ ನಿರಂಜನಲಿಂಗವಾಯಿತ್ತು. ನಿರಂಜನ ಲಿಂಗದ ಮೂಲ ಪ್ರಕಾಶದ ಸ್ಫೂರ್ತಿಯೇ ನಿರಂಜೋಂಕಾರವೆನಿಸಿತ್ತು. ವ್ಯಂಜನವಿಲ್ಲದ 'ಂ' ಕಾರ ಪ್ರಣಮವಾಯಿತ್ತು. ನಿರಂಜನ ಲಿಂಗದ ಪ್ರಕಾಶವೇ ಅವಾಚ್ಯ ಪ್ರಣಮವಾಯಿತ್ತು. ವಾಚ್ಯಕ್ಕೆ ಬಾರದ ನಾದ, ವಾಚ್ಯಕ್ಕೆ ಬಾರದ ಬಿಂದು, ವಾಚ್ಯಕ್ಕೆ ಬಾರದ ಕಲೆ ಇವು ಮೂರು ಸೇರಿ (ಅವಾಗ್ಗ) ಅವಾಚ್ಯ ಪ್ರಣಮವೆನಿಸಿತ್ತು - ಅವಾಗ್ಗದಿಂದ ನಿಃಶೂನ್ಯಲಿಂಗವೆನಿಸಿತ್ತು, ನಿಃಶೂನ್ಯಲಿಂಗದಿಂದ ಚಿನ್ನಾದ, ಚಿದ್ಬಿಂದು, ಚಿತ್ಕಲೆಗಳುದಯಿಸಿದವು. ಚಿನ್ನಾದವೇ 'ಬ' ಕಾರ ಪ್ರಣಮವೆನಿಸಿತ್ತು. ಚಿದ್ಬಿಂದುವೇ 'ಸ' ಕಾರ ಪ್ರಣಮವೆನಿಸಿತ್ತು. ಚಿತ್ಕಲೆಯೇ 'ವ' ಕಾರ ಪ್ರಣಮವೆನಿಸಿತ್ತು. ನಿಶ್ಶೂನ್ಯಲಿಂಗವೇ "ಕ್ಷ" ಕಾರ ಪ್ರಣಮವೆನಿಸಿತ್ತು. ನಿಶೂನ್ಯಲಿಂಗದ ಪ್ರಕಾಶವೇ ನಿಃಕಲ (ತತ್ವ) ಲಿಂಗವೆನಿಸಿತ್ತು. ನಿಃಕಲಲಿಂಗದಿಂದ ನಾದ, ಬಿಂದು, ಕಲೆಗಳುದಯಿಸಿತು.

ನಾದವೇ 'ಅ'ಕಾರ ಪ್ರಣಮವೆನಿಸಿತ್ತು. ಬಿಂದುವೇ 'ಉ' ಕಾರ ಪ್ರಣಮವೆನಿಸಿತ್ತು. ಕಲೆಯೇ 'ಮ' ಕಾರ ಪ್ರಣಮವೆನಿಸಿತ್ತು. ನಿಃಕಲಲಿಂಗವೇ 'ಬ' ಕಾರ ಪ್ರಣಮವೆನಿಸಿತ್ತು. ಆ ಮೂಲ ನಿಃಕಲಾ ಪ್ರಣಮದ ಪ್ರಕಾಶದಿಂದ ಜ್ಯೋತಿರಾಕೃತಿ, ದರ್ಪಣಾಕೃತಿ, (ಬಿಂದ್ವಾಕೃತಿ) ಅರ್ಧಚಂದ್ರಾಕೃತಿ, ಕುಂಡಲಾಕೃತಿ, ದಂಡಕಾಕೃತಿ, ತಾರಕಾಕೃತಿಗಳುದಯಿಸಿದವು. ಮೂಲ ಪ್ರಣಮದ ಆಕೃತಿಗಳು ಜ್ಯೋತಿರಾಕೃತಿ, ದರ್ಪಣಾಕೃತಿ, ಉಭಯ ಆಕೃತಿಗಳು ಕೂಡಿದ್ದೇ 'ಮ್' ಕಾರ ಪ್ರಣವವೆಂತಲೂ, ಅರ್ಧಚಂದ್ರಾಕೃತಿ ಕುಂಡಲಾಕೃತಿ ಉಭಯಾಕೃತಿಗಳು ಕೂಡಿದ್ದೇ 'ಉ' ಕಾರ ಪ್ರಣಮವೆಂತಲೂ, ದಂಡಕಾಕೃತಿ, ತಾರಕಾಕೃತಿ, ಉಭಯ ಆಕೃತಿಗಳು ಕೂಡಿದ್ದೇ "ಅ" ಕಾರ ಪ್ರಣಮವೆಂತಲೂ, ಮೂಲಚಿತ್ತು ಸೇರಿ ಆ ಮೂಲ ನಿಃಕಲ ಪ್ರಣಮ ಪ್ರಕಾಶದ ಜ್ಯೋತಿರಾಕೃತಿಯಿಂದ "ಓಂ" ಕಾರ ಪ್ರಣಮವಾಯಿತ್ತು. ಆ ಮೂಲ ಪ್ರಣಮ ಪ್ರಕಾಶದ ದರ್ಪಣಾಕೃತಿಯಿಂದ "ಯ" ಕಾರ ಪ್ರಣಮವೆನಿಸಿತ್ತು. ಆ ಮೂಲ ಪ್ರಣಮ ಪ್ರಕಾಶದ ಅರ್ಧಚಂದ್ರಾಕೃತಿಯಿಂದ 'ವ' ಕಾರ ಪ್ರಣಮವೆನಿಸಿತ್ತು. ಆ ಮೂಲ ಪ್ರಣಮ ಪ್ರಕಾಶದ ಕುಂಡಲಾಕೃತಿಯಿಂದಾ "ಶಿ" ಕಾರ ಪ್ರಣವವೆನಿಸಿತ್ತು. ಆ ಮೂಲ ಪ್ರಣಮ ಪ್ರಕಾಶದ ದಂಡಕಾಕೃತಿಯಿಂದ "ಮ" ಕಾರ ಪ್ರಣಮವೆನಿಸಿತ್ತು. ಆ ಮೂಲ ಪ್ರಣಮ ಪ್ರಕಾಶದ ತಾರಕಾಕೃತಿಯಂದ "ನ" ಕಾರ ಪ್ರಣಮವೆನಿಸಿತ್ತು. ಆ ಮೂಲ ಪ್ರಣಮದ ನಾದ, ಬಿಂದು, ಕಲೆ, ಮೂಲಚಿತ್ ಸೇರಿ ಅನಂತಕೋಟಿ ಬ್ರಹ್ಮಾಂಡಗಳ ಉದಯಾಧಾರ ವಿಶ್ರಾಂತಿಗೆ ಕಾರಣವಾಗಿ ಅನಂತ ಕೋಟಿ ಬ್ರಹ್ಮಾಂಡಗಳ ಚಲನವಲನಕ್ಕೆ ಆಧಾರಭೂತವಾದ ಮಹಾಲಿಂಗವೆನಿಸಿತ್ತು. ಮೂಲ ಪ್ರಣವ ಪ್ರಕಾಶದ ಜ್ಯೋತಿರಾಕೃತಿಯಿಂದ ಶಾಂತ್ಯಾತೀತೋತ್ತರ ಕಲೆಯಾಯಿತ್ತು. ಮೂಲ ಪ್ರಣವ ಪ್ರಕಾಶದ ದರ್ಪಣಾಕೃತಿಯಿಂದ (ಬಿಂದ್ವಾಕೃತಿ) ಶಾಂತ್ಯಾತೀತ ಕಲೆಯಾಯಿತ್ತು. ಮೂಲ ಪ್ರಣವ ಪ್ರಕಾಶದ ಅರ್ಧಚಂದ್ರಾಕೃತಿಯಿಂದ ಶಾಂತಿಕಲೆಯಾಯಿತ್ತು. ಮೂಲ ಪ್ರಣ ಪ್ರಕಾಶದ ಕುಂಡಲಾಕೃತಿಯಿಂದ ವಿದ್ಯಾಕಲೆಯಾಯಿತ್ತು. ಮೂಲ ಪ್ರಣಮ ಪ್ರಕಾಶದ ದಂಡಕಾಕೃತಿಯಿಂದ ಪ್ರತಿಷ್ಠಾಕಲೆಯಾಯಿತ್ತು. ಮೂಲ ಪ್ರಣವ ಪ್ರಕಾಶದ ತಾರಕಾಕೃತಿಯಿಂದ ನಿವೃತ್ತಿ ಕಲೆಯಾಯಿತ್ತು. ಕಲೆಗಳಿಂದ ಶಕ್ತಿಗಳುದಯ. ಶಾಂತ್ಯಾತೀತ್ತೋತ್ತರ ಕಲೆಯಿಂದಾ ಚಿತ್‌ಶಕ್ತಿಯುದಯವಾಯಿತ್ತು. ಶಾಂತ್ಯಾತೀತ ಕಲೆಯಿಂದ ಪರಾಶಕ್ತಿಯುದಯಿಸಿತು. ಶಾಂತಿ ಕಲೆಯಿಂದ ಆದಿಶಕ್ತಿ ಉದಯವಾಯಿತು. ವಿದ್ಯಾಕಲೆಯಿಂದ ಇಚ್ಛಾಶಕ್ತಿ ಉದಯವಾಯಿತ್ತು. ಪ್ರತಿಷ್ಠಾ ಕಲೆಯಿಂದ ಜ್ಞಾನ ಶಕ್ತಿ ಉದಯವಾಯಿತ್ತು. ನಿವೃತ್ತಿ ಕಲೆಯಿಂದ ಕ್ರಿಯಾಶಕ್ತಿ ಉದಯವಾಯಿತ್ತು. ಶಕ್ತಿಯಿಂದ ಕರಣಂಗಳುತ್ಪತ್ತಿ; ಚಿಚ್ಛಕ್ತಿಯಿಂದ ಭಾವವೆಂಬ ಕರಣ ಉತ್ಪತ್ತಿಯಾಯಿತ್ತು. ಪರಾಶಕ್ತಿಯಿಂದ ಜ್ಞಾನವೆಂಬ ಕರಣ ಉತ್ಪತ್ತಿಯಾಯಿತ್ತು. ಆದಿ ಶಕ್ತಿಯಿಂದ ಮನವೆಂಬ ಕರಣ ಉತ್ಪತ್ತಿಯಾಯಿತ್ತು. ಇಚ್ಛಾಶಕ್ತಿಯಿಂದ ಅಹಂಕಾರವೆಂಬ ಕರಣ ಉತ್ಪತ್ತಿಯಾಯಿತ್ತು. ಜ್ಞಾನ ಶಕ್ತಿಯಿಂದ ಬುದ್ಧಿಯೆಂಬ ಕರಣ ಉತ್ಪತ್ತಿಯಾಯಿತ್ತು. ಕ್ರಿಯಾಶಕ್ತಿಯಿಂದ ಚಿತ್ತವೆಂಬ ಕರಣ ಉತ್ಪತ್ತಿಯಾಯಿತ್ತು. ಕರಣಗಳಿಂದ ವಿಷಯಗಳುತ್ಪತ್ತಿಯಾದವು. ಭಾವವೆಂಬ ಕರಣದಿಂದ ತೃಪ್ತಿಯೆಂಬ ವಿಷಯ ಉತ್ಪತ್ತಿಯಾಯಿತ್ತು. ಜ್ಞಾನವೆಂಬ ಕರಣದಿಂದ ಶಬ್ದವೆಂಬ ವಿಷಯ ಉತ್ಪತ್ತಿಯಾಯಿತ್ತು. ಮನವೆಂಬ ಕರಣದಿಂದ ಸ್ಪರ್ಶನವೆಂಬ ವಿಷಯ ಉತ್ಪತ್ತಿಯಾಯಿತ್ತು. ಅಹಂಕಾರವೆಂಬ ಕರಣದಿಂದ ರೂಪು ವಿಷಯ ಉದಯಿಸಿತ್ತು. ಬುದ್ಧಿಯೆಂಬ ಕರಣದಿಂದ ರಸವೆಂಬ ವಿಷಯ ಉದಯಿಸಿತ್ತು. ಚಿತ್ತವೆಂಬ ಕರಣದಿಂದ ಗಂಧವೆಂಬ ವಿಷಯ ಉದಯಿಸಿತ್ತು. ವಿಷಯಗಳಿಂದ ಭೂತಗಳು (ತತ್ವಗಳು) ಉದಯಿಸಿದವು. ತೃಪ್ತಿಯೆಂಬ ವಿಷಯದಿಂದ ಆತ್ಮತತ್ವವಾಯಿತ್ತು. ಶಬ್ದವೆಂಬ ವಿಷಯದಿಂದ

ಆಕಾಶ (ಬಯಲು) ತತ್ವ ಉದಯಿಸಿತು. ಸ್ಪರ್ಶನವೆಂಬ ವಿಷಯದಿಂದ ಸಮೀರ (ಗಾಳಿ) ತತ್ವ ಉದಯವಾಯಿತ್ತು. ರೂಪೆಂಬ ವಿಷಯದಿಂದ ಅಗ್ನಿಯೆಂಬ ತತ್ವ ಉದಯವಾಯಿತ್ತು. ರಸವೆಂಬ ವಿಷಯದಿಂದ ಜಲತತ್ವ ಉದಯವಾಯಿತ್ತು. ಗಂಧವೆಂಬ ವಿಷಯದಿಂದ ಪೃಥ್ವಿ ತತ್ವ ಉದಯವಾಯಿತ್ತು. ಪಂಚ ಮಹಾಭೂತಗಳು ಒಂದಕ್ಕೊಂದು ವಿಭಾಗಿಸಿ ಸೇರಿ ಪಂಚವಿಂಶತಿ ತತ್ವಾತ್ಮಕವಾದ ಶರೀರವಾಯಿತ್ತು. ಹೀಗೆ ಲೀಲೆಯಿಂದರುಹಿದಿರಯ್ಯಾ ಶ್ರೀಮತ್ಶೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ವಚನ : ಏನೂ ಏನೂ ಇಲ್ಲದ ಹಾಗೆ ಇದ್ದು ಸರ್ವದರಲ್ಲಿಯೂ ವ್ಯಾಪ್ತವಾಗಿ ಸರ್ವವೂ ತಾನಾಗಿ ನಾಮ ರೂಪಾತ್ಮಕ ಜಗತ್ತುಗಳ ತೋರಿಕೆಗೆ ಮೂಲಸೂತ್ರವಾಗಿರ್ಪುದೇ ಸಹಜ ಸ್ಥಿತಿಯು (ಸಹಜ ಸ್ಥಲವೆನಿಸುವುದು). ಸಹಜ ವಸ್ತುವಿನ ಜ್ಞಾನ ಪ್ರಕಾಶದ ಸ್ಫೂರ್ತಿಯೇ ಸರ್ವಶೂನ್ಯ ನಿರಾಲಂಬವೆನಿಸುವುದು. ಸರ್ವ ಶೂನ್ಯ ನಿರಾಲಂಬದ ನೆನಹೇ ನಿರಂಜನ ಲಿಂಗವಾಯಿತ್ತು. ನಿರಂಜನ ಲಿಂಗದ ಮೂಲ ಪ್ರಕಾಶದ ಸ್ಫೂರ್ತಿಯೇ ನಿರಂಜೋಂಕಾರವೆನಿಸುವುದು. ಸ್ವರ ವ್ಯಂಜನವಿಲ್ಲದ 'ಙ' ಕಾರ ಪ್ರಣವವಾಯಿತ್ತು. ನಿರಂಜನ ಲಿಂಗದ ಪ್ರಕಾಶವೇ ಅವಾಚ್ಯ ಪ್ರಣಮವಾಯಿತ್ತು. ವಾಚ್ಯಕ್ಕೆ ಬಾರದ ನಾದ, ವಾಚ್ಯಕ್ಕೆ ಬಾರದ ಬಿಂದು, ವಾಚ್ಯಕ್ಕೆ ಬಾರದ ಕಲೆ ಇವು ಮೂರು ಸೇರಿ (ಅವಾಗ್ನ) ಅವಾಚ್ಯ ಪ್ರಣಮವೆನಿಸಿತ್ತು. ಅವಾಗ್ಗ ಪ್ರಣಮವೇ 'ಹ' ಕಾರ ಪ್ರಣಮವು. ಅವಾಗ್ಜ ಪ್ರಣವ ಪ್ರಕಾಶವೇ ನಿಶ್ಶೂನ್ಯ ಲಿಂಗವೆನಿಸಿತ್ತು. ನಿಶೂನ್ಯ ಲಿಂಗವೇ "ಕ್ಷ" ಕಾರ ಪ್ರಣವವೆನಿಸಿತ್ತು. ನಿಶೂನ್ಯ ಲಿಂಗದಿಂದ ಚಿನ್ನಾದ, ಬಿದ್ಬಿಂದು, ಚಿತ್ಕಲೆಗಳುದಯಿಸಿದವು. ಚಿನ್ನಾದವೇ "ಬ" ಕಾರ ಪ್ರಣಮವೆನಿಸಿತು. ಚಿದ್ಬಿಂದುವೇ "ಸ" ಕಾರ ಪ್ರಣವವೆನಿಸಿತು. ಚಿತ್ಕಲೆಯೆ "ವ" ಕಾರ ಪ್ರಣವವೆನಿಸಿತು. ನಿಶೂನ್ಯಲಿಂಗದ ಸ್ಫೂರ್ತಿಯ ಪ್ರಕಾಶವೇ ನಿಃಕಲಲಿಂಗವೆನಿಸಿತು. ನಿಃಕಲಲಿಂಗದಿಂದ ನಾದ, ಬಿಂದು, ಕಲೆಗಳುದಯಿಸಿದವು. ನಾದವೇ 'ಅ' ಕಾರ ಪ್ರಣವವೆನಿಸಿತು. ಬಿಂದುವೆ 'ಉ' ಕಾರ ಪ್ರಣವವೆನಿಸಿತು. ಕಲೆಯೆ 'ಮ್' ಕಾರ ಪ್ರಣಮವೆನಿಸಿತು. ನಿಃಕಲ ಲಿಂಗವೇ 'ಬ' ಕಾರ ಪ್ರಣಮವೆನಿಸಿತು. ಮೂಲ ನಿಃಕಲದಿಂದ ಆಕೃತಿಗಳುದಯಿಸಿದವು. ನಿಃಕಲಲಿಂಗದ 'ಮ' ಕಾರ ಪ್ರಣಮದಿಂದ ಜ್ಯೋತಿರಾಕೃತಿ ದರ್ಪಣಾಕೃತಿಗಳುದಯಿಸಿದವು. ನಿಃಕಲ ಲಿಂಗದ 'ಉ' ಕಾರ ಪ್ರಣಮದಿಂದ ಅರ್ಧಚಂದ್ರಾಕೃತಿ ಕುಂಡಲಾಕೃತಿಗಳುದಯಿಸಿದವು. ಮೂಲ ನಿಃಕಲಲಿಂಗದ "ಅ" ಕಾರ ಪ್ರಣಮದಿಂದ ದಂಡಕಾಕೃತಿ ತಾರಕಾಕೃತಿಗಳುದಯಿಸಿದವು. ಮೂಲಪ್ರಣವ ಪ್ರಕಾಶದ ಜ್ಯೋತಿರಾಕೃತಿಯೇ "ಓಂ" ಕಾರಪ್ರಣಮವೆನಿಸಿತು. ಮೂಲ ಪ್ರಣಮ ಪ್ರಕಾಶದ ದರ್ಪಣಾಕೃತಿ (ಬಿಂದ್ವಾಕೃತಿ) ಯೇ "ಯ" ಕಾರ ಪ್ರಣಮವೆನಿಸಿತು. ಮೂಲ ಪ್ರಣಮ ಪ್ರಕಾಶದ ಅರ್ಧಚಂದ್ರಾಕೃತಿಯೇ "ವ" ಕಾರ ಪ್ರಣಮವೆನಿಸಿತು. ಮೂಲ ಪ್ರಣಮ ಪ್ರಕಾಶದ ಕುಂಡಲಾಕೃತಿಯೇ "ಶಿ" ಕಾರ ಪ್ರಣಮವೆನಿಸಿತು. ಮೂಲ ಪ್ರಣವ ಪ್ರಕಾಶದ ದಂಡಕಾಕೃತಿಯೇ "ಮ" ಕಾರ ಪ್ರಣಮವೆನಿಸಿತು. ಮೂಲ ಪ್ರಣಮ ಪ್ರಕಾಶದ ತಾರಕಾಕೃತಿಯೇ "ನ" ಕಾರ ಪ್ರಣಮವೆನಿಸಿತು. ಮತ್ತಂ ಓಂ ಕಾರ ಪ್ರಣಮದಲ್ಲಿ ಹಂ, ಕ್ಷಂ, ಹಂ, ಳಂ, ಅಕ್ಷರಗಳುತ್ಪತ್ತಿ. "ಯ" ಕಾರ ಪ್ರಣಮದಲ್ಲಿ ಸ್ವರಾಕ್ಷರ ಹದಿನಾರು ಉತ್ಪತ್ತಿ. "ವ" ಕಾರ ಪ್ರಣಮದಲ್ಲಿ "ಕ" ಕಾರದಿಂದ ಠ ಕಾರದವರೆಗೆ ಹನ್ನೆರಡಕ್ಷರಗಳುತ್ಪತ್ತಿ. "ಶಿ" ಕಾರ ಪ್ರಣಮದಲ್ಲಿ "ಡ" ಕಾರದಿಂದ "ಫ" ಕಾರದವರೆಗೆ ದಶಾಕ್ಷರಗಳುತ್ಪತ್ತಿ. "ಮ" ಕಾರ ಪ್ರಣಮದಲ್ಲಿ "ಬ" ಕಾರದಿಂದ "ಲ" ಕಾರದವರೆಗೆ ಷಡಕ್ಷರಗಳುತ್ಪತ್ತಿ. "ನ" ಕಾರ ಪ್ರಣಮದಲ್ಲಿ 'ವಶಷಸ' ಚತುರಾಕ್ಷರಗಳುತ್ಪತ್ತಿ. ಇಂತೀ ಐವತ್ತೆರಡಕ್ಷರಗಳಿಂದಾದ ಸಕಲ ವೇದ, ಶಾಸ್ತ್ರ, ಆಗಮ, ಪುರಾಣಗಳು, ಸಪ್ತಸ್ವರಗಳು

ಸಾಕಾರ ವಿಶ್ವವೂ ಅನಂತಬ್ರಹ್ಮಾಂಡ ಕೋಟಿಗಳೂ ಪ್ರಪಂಚವೂ ಸೃಷ್ಟಿಯಾಯಿತು. ಹೀಗೆ ಲೀಲೆಯಿಂದರುಹಿದರಯ್ಯಾ ಶ್ರೀ ಮತ್ತೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ಸಾದಾಖ್ಯ ಮೂರ್ತಿಲಿಂಗಸ್ಥಲ

ಆದಿ ಅನಾದಿಗಳಿಲ್ಲದ ಶ್ರೀಮದ್ ನಿರ್ವಾಚ್ಯ ಸ್ವರೂಪಮಪ್ಪ ನಿರಂಜನ ಲಿಂಗದಿಂ ನಿಶೂನ್ಯ ಲಿಂಗವೂ, ನಿಶೂನ್ಯಲಿಂಗದಿಂ ನಿಃಕಲಲಿಂಗವೂ, ನಿಃಕಲಲಿಂಗದಿಂದ ಪರಮ ಪ್ರಕಾಶವನುಳ್ಳ ಜ್ಞಾನ ಚಿತ್ತು. ಆ ಜ್ಞಾನ ಚಿತ್ತುವಿನಿಂದ ನಾದ ಬಿಂದು ಕಲೆಗಳುದಯಿಸಿ, ನಾದ ಬಿಂದು ಕಲೆ ಮೂಲ ಜ್ಞಾನ ಚಿತ್ ಸೇರಿ ಅನಂತ ಬ್ರಹ್ಮಾಂಡ ಕೋಟಿಗಳಿಗೆ ಸ್ಥಂಬಾಯಮಾನವಾದ ಅಖಂಡಗೋಳಕಾಕಾರ ತೇಜೋಮೂರ್ತಿಯಪ್ಪ ಮಹಾಲಿಂಗವೆನಿಸಿತ್ತು. ಆ ಮಹಾಲಿಂಗ ಪ್ರಕಾಶವೇ ಮಹಾಸಾದಾಖ್ಯವೆನಿಸಿತ್ತು. ಮಹಾಸಾದಾಖ್ಯದಿಂ ಶಿವಸಾದಾಖ್ಯವೆಂದು ಅಮೂರ್ತಿ ಸಾದಾಖ್ಯ ಮೂರ್ತಿ ಸಾದಾಖ್ಯ, ಕರ್ತೃ ಸಾದಾಖ್ಯವೆಂದು, ಕರ್ಮಸಾದಾಖ್ಯವೆಂದು ಪೆಸರ್ವಡೆದು, ಆ ಪಂಚ ಸಾದಾಖ್ಯಗಳೇ ಪ್ರಸಾದಲಿಂಗ ಪ್ರಕಾಶ, ಜಂಗಮಲಿಂಗ ಪ್ರಕಾಶ, ಶಿವಲಿಂಗ ಪ್ರಕಾಶ, ಗುರುಲಿಂಗ ಪ್ರಕಾಶ, ಆಚಾರಲಿಂಗ ಪ್ರಕಾಶವೆಂದೂ ಪಂಚ ನಾಮವಂ ತಳೆದು, ಆ ಲಿಂಗ ಪ್ರಕಾಶಗಳೇ ಆಕೃತಿಗಳಾಗಿ ಮಹಾಲಿಂಗ ಪ್ರಕಾಶದಿಂ ಜ್ಯೋತಿರಾಕೃತಿಯಾಗಿ, ಪ್ರಸಾದಲಿಂಗ ಪ್ರಕಾಶದಿಂ ಬಿಂದ್ವಾಕೃತಿಯಾಗಿ, ಜಂಗಮಲಿಂಗ ಪ್ರಕಾಶದಿಂ ಅರ್ಧಚಂದ್ರಾಕೃತಿಯಾಗಿ, ಶಿವಲಿಂಗ ಪ್ರಕಾಶದಿಂ ಕುಂಡಲಾಕೃತಿಯಾಗಿ, ಗುರುಲಿಂಗ ಪ್ರಕಾಶದಿಂ ದಂಡಕಾಕೃತಿಯಾಗಿ, ಆಚಾರಲಿಂಗ ಪ್ರಕಾಶದಿಂ ತಾರಕಾಕೃತಿಯಂ ತಳೆದು, ಆ ಪಂಚ ಆಕೃತಿಗಳಿಂ ಪಂಚಾಕ್ಷರಗಳುತ್ಪತ್ತಿ, ಮಹಾಲಿಂಗದ ಗೋಪ್ಯಮುಖದಿಂ "ಓಂ" ಕಾರ ಪ್ರಣವ ಉತ್ಪತ್ತಿ. ಬಿಂದ್ವಾಕೃತಿಯಿಂ (ದರ್ಪಣಾಕೃತಿಯಿಂ) "ಯ" ಕಾರ ಪ್ರಣವ ಉತ್ಪತ್ತಿ. ಅರ್ಧ ಚಂದ್ರಾಕೃತಿಯಿಂ "ವ" ಕಾರ ಪ್ರಣವ ಉತ್ಪತ್ತಿ, ಕುಂಡಲಾಕೃತಿಯಿಂ "ಶಿ" ಕಾರ ಪ್ರಣವ ಉತ್ಪತ್ತಿ ದಂಡಕಾಕೃತಿಯಿಂ "ಮ" ಕಾರ ಪ್ರಣವ ಉತ್ಪತ್ತಿ ತಾರಕಾಕೃತಿಯಿಂ "ನ" ಕಾರ ಪ್ರಣವ ಉತ್ಪತ್ತಿಯಾಗಿ ಜಗತ್ ಕಾರಣವಾದ ಪಂಚಾಕೃತಿಗಳಿಂ ಪಂಚಾಕ್ಷರಗಳೂ, ಪಂಚಾಕ್ಷರಗಳಿಂ ಪಂಚಕಲೆಗಳುತ್ಪತ್ತಿ. "ಯ" ಕಾರ ಪ್ರಣಮದಿಂ ಶಾಂತ್ಯಾತೀತಯೆಂಬಕಲೆ ಉತ್ಪತ್ತಿ. "ವ" ಕಾರಪ್ರಣಮದಿಂ ಶಾಂತಿಯೆಂಬ ಕಲೆ ಉತ್ಪತ್ತಿ, "ಶಿ" ಕಾರ ಪ್ರಣಮದಿಂ ವಿದ್ಯಾಕಲೆಯೆಂಬ ಕಲೆ ಉತ್ಪತ್ತಿ. "ಮ" ಕಾರ ಪ್ರಣಮದಿಂ - ಪ್ರತಿಷ್ಠಾ ಕಲೆಯೆಂಬ ಕಲೆ ಉತ್ಪತ್ತಿ. "ನ" ಕಾರ ಪ್ರಣಮದಿಂ ನಿವೃತ್ತಿಯೆಂಬ ಕಲೆ ಉತ್ಪತ್ತಿಯಾಯಿತು. ಪಂಚ ಕಲೆಗಳಿಂದ ಪಂಚಶಕ್ತಿಗಳುದಯ. ಶಾಂತ್ಯಾತೀತ ಕಲೆಯಿಂ ಪರಾಶಕ್ತಿ ಉದಯ, ಶಾಂತಿಕಲೆಯಿಂ ಆದಿಶಕ್ತಿ ಉದಯ, ವಿದ್ಯಾಕಲೆಯಿಂ ಇಚ್ಛಾಶಕ್ತಿ ಉದಯ, ಪ್ರತಿಷ್ಠಾ ಕಲೆಯಿಂ ಜ್ಞಾನ ಶಕ್ತಿ ಉದಯ, ನಿವೃತ್ತಿ ಕಲೆಯಿಂ ಕ್ರಿಯಾಶಕ್ತಿ ಉದಯವಾಯಿತು. ಶಕ್ತಿಯಿಂದ ಕರಣಗಳುತ್ಪತ್ತಿಯಾದವು. ಪರಾಶಕ್ತಿಯಿಂ ಜ್ಞಾನವೆಂಬ ಕರಣ ಉತ್ಪತ್ತಿ, ಆದಿ ಶಕ್ತಿಯಿಂ ಮನವೆಂಬ ಕರಣ ಉತ್ಪತ್ತಿ, ಇಚ್ಛಾಶಕ್ತಿಯಿಂ ಅಹಂಕಾರವೆಂಬ ಕರಣ ಉತ್ಪತ್ತಿ. ಜ್ಞಾನ ಶಕ್ತಿಯಿಂ ಬುದ್ಧಿಯೆಂಬ ಕರಣ ಉತ್ಪತ್ತಿ ಕ್ರಿಯಾ ಶಕ್ತಿಯಿಂ ಚಿತ್ತವೆಂಬ ಕರಣ ಉತ್ಪತ್ತಿಯಾಯಿತು.

ಪಂಚಕರಣಗಳಿಂದ ಪಂಚತನ್ಮಾತ್ರೆಗಳುತ್ಪತ್ತಿ

ಜ್ಞಾನವೆಂಬ ಕರಣದಿಂ ಶಬ್ದವೆಂಬ ತನ್ಮಾತ್ರೆಯಾಯಿತ್ತು. ಮನವೆಂಬ ಕರಣದಿಂ

ಸ್ಪರ್ಶನವೆಂಬ ತನ್ಮಾತ್ರೆಯಾಯಿತ್ತು. ಅಹಂಕಾರವೆಂಬ ಕರಣದಿಂ ರೂಪು ತನ್ಮಾತ್ರೆಯಾಯಿತ್ತು. ಬುದ್ಧಿಯೆಂಬ ಕರಣದಿಂ ರಸವೆಂಬ ತನ್ಮಾತ್ರೆಯಾಯಿತ್ತು. ಚಿತ್ತವೆಂಬ ಕರಣದಿಂ ಗಂಧವೆಂಬ ತನ್ಮಾತ್ರೆಯಾಯಿತ್ತು. ಪಂಚ ತನ್ಮಾತ್ರೆಗಳಿಂ ಪಂಚ ಮಹಾಭೂತಗಳುತ್ಪತ್ತಿಯಾದವು. ಶಬ್ದ ತನ್ಮಾತ್ರೆಯಿಂ ನಭವೆಂಬ ಮಹಾಭೂತ ಉತ್ಪತ್ತಿಯಾಯಿತು. ಸ್ಪರ್ಶ ತನ್ಮಾತ್ರೆಯಿಂ ವಾಯುಯೆಂಬ ಮಹಾಭೂತ ಉತ್ಪತ್ತಿಯಾಯಿತು. ರೂಪು ತನ್ಮಾತ್ರೆಯಿಂ ಅಗ್ನಿತತ್ವ ಮಹಾಭೂತ ಉತ್ಪತ್ತಿಯಾಯಿತು. ರಸ ತನ್ಮಾತ್ರೆಯಿಂ ಜಲತತ್ವವೆಂಬ ಮಹಾಭೂತ ಉತ್ಪತ್ತಿಯಾಯಿತು. ಗಂಧವೆಂಬ ತನ್ಮಾತ್ರೆಯಿಂ ಭೂಮಿ ತತ್ವ ಮಹಾಭೂತ ಉತ್ಪತ್ತಿಯಾಯಿತು. ಈ ಪಂಚ ತತ್ವಗಳು ಒಂದಕ್ಕೊಂದು ಪಂಚ ವಿಭಾಗವನ್ನೈದಿ ಪಂಚವಿಂಶತಿ ತತ್ವಾತ್ಮಕವಾದ ಶರೀರವಾಯಿತು. ಶ್ರೀಮತ್ ಶೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ ನೀ ಮಾಡಿದ ಲೀಲೆಯು ಆರಿಗೆಯೂ ತಿಳಿಯಬಾರದು.

ಆದಿ ನಿರಂಜನ ಲಿಂಗದಿಂ ನಿಶ್ಶೂನ್ಯ ಲಿಂಗವೂ ನಿಶ್ಶೂನ್ಯ ಲಿಂಗದಿಂ ನಿಃಕಲಲಿಂಗವೂ ನಿಃಕಲ ಲಿಂಗದಿಂ ಜ್ಞಾನ ಚಿತ್ತು. ಆ ಚಿತ್ತಿನಿಂದ ನಾದ, ಬಿಂದು, ಕಲೆ. ಆ ನಾದ, ಬಿಂದು, ಕಲೆ ಮೂಲ ಚಿತ್ ಸೇರಿ ಅಖಂಡ ಗೋಳಕಾಕಾರ ಸ್ವರೂಪಮಪ್ಪ ಮಹಾಲಿಂಗವಾಯಿತ್ತು. ಅಂತಪ್ಪ ಮಹಾಲಿಂಗವೇ ಪಂಚಪ್ರಣಮ, ಪಂಚಕಲೆ, ಪಂಚಶಕ್ತಿ, ಪಂಚಕರಣ, ಪಂಚತನ್ಮಾತ್ರೆ ಪಂಚ ಭೂತಗಳಿಗೆ ಆಧಾರ ಭೂತವಾಗಿಹುದು. ಅಂತಪ್ಪ ಮಹಾಲಿಂಗದೋಳ್ ಚಿತ್‌ಶಕ್ತಿ ಹೊಂದಿಕೊಂಡಿರುತಿಹುದು ನೋಡಾ. ಆ ಚಿತ್ ಶಕ್ತಿಯ ಸಹಸ್ರಾಂಶದೋಳ್ ಪರಾಶಕ್ತಿ ಉದಯವಹುದು. ಆ ಪರಾಶಕ್ತಿ ಶಕ್ತಿಯಿಂದಾ ಅನಂತ ಬ್ರಹ್ಮಾಂಡ ಕೋಟಿಗಳುದಯಿಸಿ, ವ್ಯವಹರಿಸಿ ಅಡಗುವುದು. ಇಂತಿವೆಲ್ಲವೂ ನಮ್ಮ ಶ್ರೀಮತ್ ಶೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥ ಆಗೆಂದೆಡೆ ಆದವು ಬೇಡೆಂದಡೆ ಮಾದವು (ಇಲ್ಲವಾದವು).

ಅನಂತ ಬ್ರಹ್ಮಾಂಡಕೋಟಿಗಳಿಗೆ ಉದಯ, ಆಧಾರ, ವಿಶ್ರಾಂತಿಗಳಿಗೆ ಮಹಾಲಿಂಗವೇ ಮೂಲ ಸ್ಥಂಭವಾಗಿಹುದು. ಆ ಮಹಾಲಿಂಗದೋಳ್ ಚಿತ್ ಶಕ್ತಿಯೂ ಹೊಂದಿಕೊಂಡಿಹುದು. ಆ ಚಿತ್ ಶಕ್ತಿಯ ಸಹಸ್ರಾಂಶದೋಳ್ ಪರಾಶಕ್ತಿ ಉದಯಿಸಿ ಪರಾಶಕ್ತಿಯೊಳ್ ಮೂಲ ಪ್ರಕೃತಿ ಹೊಂದಿಕೊಂಡಿರುತಿಹುದು. ಆ ಪರಾಶಕ್ತಿಯ ಮೂಲ ಪ್ರಕೃತಿಯ ಸಹಸ್ರಾಂಶದೋಳ್ ಸರ್ವ ಪ್ರಕಾಶವಾದ ಅಂಬರ ತತ್ವವಿಹುದು. ಆ ಅಂಬರ ತತ್ವದ ಸಹಸ್ರಾಂಶದೋಳ್ ಸರ್ವಚಾಂಚಲ್ಯ ಪ್ರದಮಾದ ಸಮೀರ (ವಾಯು) ತತ್ವವಿಹುದು. ಆ ಸಮೀರ ತತ್ವದ ಸಹಸ್ರಾಂಶದೋಳ್ ಸರ್ವದಾಹಕ ಸ್ವರೂಪಮಾದ ಅಗ್ನಿ ತತ್ವವಿಹುವುದು. ಆ ಅಗ್ನಿ ತತ್ವದ ಸಹಸ್ರಾಂಶದೋಳ್ ಸರ್ವದ್ರಾವಕ ಸ್ವರೂಪವಾದ ಜಲ ತತ್ವವಿಹುದು. ಆ ಜಲ ತತ್ವದ ಸಹಸ್ರಾಂಶದೋಳ್ ಸರ್ವಧಾರಣ ಸ್ವರೂಪಮಾದ ಭೂತತ್ವವಿರುವುದು ಎಂದರುಹಿದಿರಯ್ಯಾ ಶ್ರೀ ಮತ್ಶೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ಸ್ಥಾವರ ಜಂಗಮಾತ್ಮಕಂಗಳ ಉದಯಾಧಾರ ವಿಶ್ರಾಂತಿಗಳಿಗೆ ನಿಲುಕದಿರ್ಪುದೀ ನಿಃಕಲಲಿಂಗವು. ನಿಃಕಲಲಿಂಗವೇ ಶೂನ್ಯಲಿಂಗದ ಸ್ಥೂಲಸ್ವರೂಪು, ನಿಶ್ಶೂನ್ಯಲಿಂಗವೇ ಸೂಕ್ಷ್ಮ ಸ್ವರೂಪವು. ನಿರಂಜನ ಲಿಂಗವೇ ಸೂಕ್ಷ್ಮಾತ್ ಸೂಕ್ಷ್ಮ ಸ್ವರೂಪು. ಈ ಮೂರು ಲಿಂಗಗಳಿಗೆ ಶೂನ್ಯಲಿಂಗಗಳೆಂಬ ನಾಮವುಂಟಾಗಿರ್ಪುದು. ಶೂನ್ಯ ಲಿಂಗದಿಂ ಜ್ಞಾನ ಪ್ರಕಾಶವನುಳ್ಳ ಮೂಲ ಚಿತ್, ಆ ಚಿತ್ತಿನಿಂದ ನಾದ, ಬಿಂದು, ಕಳೆ, ಆ ನಾದವೇ ಜಗತ್ತಿನಲ್ಲಿ ಉಲುಹು ರೂಪಮಾಗಿರ್ಪುದು. ಉಲುಹೇ ಘನೀಭವಿಸಿ ಬಿಂದುವೆನಿಸುವುದು. ಬಿಂದುವಿನಿಂ ಸಮಸ್ತ ಕಲೆಗಳಿಗೆ

ಸಮಸ್ತ ರೂಪುಗಳಿಗೆ ಆಧಾರಭೂತವಾದ ಕಲೆಯಿಹುದು. ಆ ನಾದ, ಬಿಂದು, ಕಲೆ, ಮೂಲ ಚಿತ್ತು ಸೇರಿ.

ಶ್ಲೋಕ : "ಮೂಲ ಮಂತ್ರ ಸ್ವರೂಪಾಯ, ಮೂಲ ಮಂತ್ರಾತ್ಮರೂಪಿಣೆ ಮೂಲ
ಪ್ರಕೃತಿ ಸಂಜ್ಞಾಯ ಮೂಲ ಸ್ತಂಭಾಯ ಶಂಭವೇ"

ಎಂದೆನಿಸುವ ಮೂಲ ಸ್ವರೂಪವಾದ ಮೂಲ ಪ್ರಕೃತಿಯೆಂಬ ಸಂಜ್ಞೆಯುಳ್ಳ ಮೂಲ ಸ್ಥಂಭಾಯಮಾನವಾದ ಅಖಂಡ ಗೋಳಕಾಕಾರ ತೇಜೋಮೂರ್ತಿಯಪ್ಪ ಮಹಾಲಿಂಗವೆಂದು ಪೇಳಲ್‌ಪಡುವುದು. ಆ ಮಹಾಲಿಂಗದೊಳ್ ಚಿತ್ ಶಕ್ತಿ ಹೊಂದಿಕೊಂಡಿಹುದು. ಆ ಚಿತ್ ಶಕ್ತಿಯ ಸಹಸ್ರಾಂಶದೊಳ್ ಪರಾಶಕ್ತಿಯುದಯಿಸಿ, ಪರಾಶಕ್ತಿಯೊಳ್ ಪ್ರಕೃತಿಯದಯಿಸಿ, ಪ್ರಕೃತಿಯಿಂ ದೇಹಿದೇಹಕಂಗಳುದಯವಾಗಿ ದೇಹವೇ ಪಂಚವಿಂಶತಿತತ್ವಾತ್ಮಕವೆನಿಸಿಹುದು. ದೇಹಿಯೇ ಜೀವನೆಂದು, ಆತ್ಮನೆಂದು, ಚೇತನಾತ್ಮಕನೆನಿಸಿಹುದು ಎಂದರುಹಿದಿರಯ್ಯಾ ಶ್ರೀ ಮತ್ಶೂನ್ಯ ಸಿಂಹಸನಾಧೀಶ್ವರ ನಿರಂಜನ ಸಂಗಮನಾಥಾ.

ಜಗತ್ತಿನ ನಾಮ ರೂಪು ಕ್ರಿಯೆಗಳಿಗೆ ಆಧಾರಮಾಗಿರ್ಪುದೀ ಮಹಾಲಿಂಗವು. ಮಹಾಲಿಂಗವೇ ಮಹಾ ಸಾದಾಖ್ಯವೆನಿಸುವುದು. ಮಹಾಲಿಂಗದಿಂ ಶಿವಸಾದಾಖ್ಯವು, ಆಕಾಶ ತತ್ವಕ್ಕೆ ಕರ್ತೃವಾಗಿಹುದು. ಶಿವ ಸಾದಾಖ್ಯದಿಂ ಅಮೂರ್ತಿ ಸಾದಾಖ್ಯವು ವಾಯುತತ್ವಕ್ಕೆ ಕರ್ತೃವಾಗಿಹುದು. ಅಮೂರ್ತಿ ಸಾದಾಖ್ಯದಿಂ ಮೂರ್ತಿಸಾದಾಖ್ಯವು ಅಗ್ನಿ ತತ್ವಕ್ಕೆ ಕರ್ತೃವಾಗಿಹುದು. ಮೂರ್ತಿ ಸಾದಾಖ್ಯದಿಂ ಕತೃ ಸಾದಾಖ್ಯವು ಜಲತತ್ವಕ್ಕೆ ಕರ್ತೃವಾಗಿಹುದು. ಕರ್ತೃಸಾದಾಖ್ಯದಿಂ ಕರ್ಮಸಾದಾಖ್ಯವು ಭೂತತ್ವಕ್ಕೆ ಕರ್ತೃವಾಗಿಹುದು. ಕರ್ಮಸಾದಾಖ್ಯದಿಂ ಸಕಲಲೋಕಾದಿ ಲೋಕಂಗಳೂ ಸೂರ್ಯ, ಚಂದ್ರ, ನಕ್ಷತ್ರಾದಿ, ಗ್ರಹಾದಿಗಳೂ, ನರ, ಸುರ, ತಿರ್ಯಗ್ಜಾತಿಗಳುದಯವಾಗಿಹುದು. ಇಂತಿವೆಲ್ಲವೂ ನಮ್ಮ ಶ್ರೀಮತ್ಶೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥನು ಆಗೆಂದಡೆ ಆದವು ಬೇಡವೆಂದಡೆ ಮಾದವು.

ಅಂತಪ್ಪ ಮಹಾಲಿಂಗದಿಂ ಶುದ್ಧ, ಅಶುದ್ಧ, ತತ್ವಂಗಳ ಉತ್ಪತ್ತಿಗೆ ಆಧಾರವಾದ ಪ್ರಕೃತಿ ಹೊಂದಿಕೊಂಡಿಹುದು. ಪ್ರಕೃತಿಯ ಸಂಬಂಧದಿಂದಾ ಜೀವಮಂ ಆತ್ಮನೆಂದು ಹೇಳಲಾಯಿತು. ಆತ್ಮನಿಂ ಆಕಾಶ, ಆ ಆಕಾಶದಿಂದ ವಾಯು, ವಾಯುವಿನಿಂದ ಅಗ್ನಿ, ಅಗ್ನಿಯಿಂದ ಜಲ, ಜಲದಿಂದಾ ಭೂಮಿ ಸೃಷ್ಟಿ. ಪಂಚತತ್ವಂಗಳೇ ವಿಭಾಗಿಸಿ ಕಲೆತು ಪಂಚವಿಂಶತಿ ತತ್ವಾತ್ಮಕವಾದ ಶರೀರಮಹುದು ಎಂದರುಹಿದೆಯಯ್ಯಾ ಶ್ರೀಮತ್‌ಶೂನ್ಯ ಸಿಂಹಸನಾಧೀಶ್ವರ ನಿರಂಜನ ಸಂಗಮನಾಥಾ.

ಮತ್ತಂ ತತ್ವಂಗಳಲ್ಲಿ ಚತುರ್ವಿಭಾಗವಹುದು. ಅದು ಹೇಗೆಂದಡೆ:-

(1) ಶೂನ್ಯ ತತ್ವಂಗಳು, (2) ನಿರಾಕಾರ ತತ್ವಂಗಳು, (3) ನಿರಾಕಾರ ಸಾಕಾರ ತತ್ವಂಗಳು, (4) ಸಾಕಾರ ತತ್ವಂಗಳು ಎಂದು ಪೇಳಲ್ ಪಡುವವು. ಸಾಕಾರ ತತ್ವವೇ ಪೃಥ್ವಿಗತ ಜಲಗತ ಪರಮಾತ್ಮನೆಂದು, ಸಾಕಾರ ನಿರಾಕಾರ ತತ್ವವೇ ಅಗ್ನಿಗತ ವಾಯುಗತ ಪರಮಾತ್ಮನೆಂದು, ನಿರಾಕಾರ ತತ್ವವೇ ಆಕಾಶಗತ, ಆತ್ಮಗತ ಪರಮಾತ್ಮನೆಂದೂ ಶೂನ್ಯತತ್ವವೇ ನಿಃಕಲ ನಿಃಶೂನ್ಯ ನಿರಂಜನ ಲಿಂಗವೆಂದೂ ನವವಿಭಾಗವಹುದು ಎಂದರುಹಿದೆಯಯ್ಯಾ ಶ್ರೀ ಮತ್ಶೂನ್ಯ ಸಿಂಹಸನಾಧೀಶ್ವರ ನಿರಂಜನ ಸಂಗಮನಾಥಾ.

ಸಮಸ್ತ ಬ್ರಹ್ಮಾಂಡಗಳ ಉದಯಾಧಾರ ವಿಶ್ರಾಂತಿಗೆ ನಿಲುಕದಿಪ್ಪುದೀ ಶೂನ್ಯತತ್ವವು, ಉದಯಾಧಾರ ವಿಶ್ರಾಂತಿಗಳಿಗೆ ಆಧಾರಮಾಗಿರ್ಪುದೇ ಮಹಾಲಿಂಗವು, ಮಹಾಲಿಂಗವೆಂದಡುಂ ಪರಬ್ರಹ್ಮವೆಂದಂಡುಂ, ಪರಶಿವನೆಂದಡುಂ, ಪರಮಾತ್ಮನೆಂದದಡುಂ, ವಸ್ತುವೆಂದಡುಂ, ಶಿವತತ್ವವೆಂದಂಡುಂ, ಏಕ ಪರಿಯಾಯಾರ್ಥಂ. ಪರಮಾತ್ಮನೊಳ್ ಮೂಲ ಪ್ರಕೃತಿಯು ಹೊಂದಿಕೊಂಡಿರ್ಪುದು. ಪರಮಾತ್ಮನಂಶವೇ ಪ್ರಕೃತಿಯೊಳ್ ಬೆರೆತು, ಜೀವಾತ್ಮನೆಂದು, ಆತ್ಮನೆಂದು ಪೇಳಿಸಿಕೊಂಬದು. ಮತ್ತಂ ಆತ್ಮನಿಂ ಆಕಾಶ, ಆಕಾಶದಿಂ ವಾಯು, ವಾಯುವಿನಿಂ ಅಗ್ನಿ, ಅಗ್ನಿಯಿಂ ಜಲ, ಜಲದಿಂ ಪೃಥ್ವಿ, ಪೃಥ್ವಿಯಿಂ ಸಕಲ ಚರಾಚರ ಉತ್ಪತ್ತಿಯಾಯಿತ್ತು.

ಮತ್ತಂ ಆ ಆತ್ಮ ತತ್ವವೇ ಅಜಡ ತತ್ವವೆಂದುಂ, ಆಕಾಶ, ವಾಯು, ಅಗ್ನಿ, ಜಲ, ಭೂಮಿ, ತತ್ವಗಳು, ಜಡತತ್ವವೆಂದುಂ ಪೇಳಿಸಿಕೊಂಬವು. ಈ ಪಂಚ ಜಡ ತತ್ವಂಗಳೇ ವಿಭಜಿಸಿ ಸೇರಿ ಪಂಚವಿಂಶತಿ ತತ್ವಾತ್ಮಕವಾದ ಶರೀರವಾಯಿತು. ಈ ಜಡತತ್ವಂಗಳು ಅಜಡ ತತ್ವವಾದ ಆತ್ಮನ ಚೇತನದಿಂ ವ್ಯವಹರಿಸುವುದೆಂದು ತಿಳಿದುಕೊಂಬುದು ತತ್ವಜ್ಞಾನಿಗಳು.

ಪರಬ್ರಹ್ಮವೇ ಸಕಲ ಜೀವಕೋಟಿಗಳ ಸೂತ್ರ ಸ್ವರೂಪವಾದ ಸೂಕ್ಷ್ಮಾತ್ ಸೂಕ್ಷ್ಮ ಸ್ವರೂಪವಾದ ಮೋಡಿ, (ಬೀಜಗಳನ್ನಿಡುವ ಹುಲ್ಲಿನಿಂದ ತಯಾರಾದ ಕಣಜ) ಬೀಜವು, ಮಣ್ಣು ನೀರುಗಳ ಸಂಪರ್ಕದಿಂ, ಸೂಕ್ಷ್ಮ ಮೊಳಕೆಯಾಗಿ ಸಸಿಯಾಗಿ ಸ್ಥೂಲವೆಂಬ ಪೈರಾಗಿ ಕೊನೆಗೆ ಬೀಜವೆಂಬ ಫಲದಿಂ ಸಾಕಾರಮೆಲ್ಲಮುಂ ಲಯಮಪ್ಪಂತೆ ಪರಬ್ರಹ್ಮವೆಂಬ ಸರ್ವವ್ಯಾಪಿ ಸರ್ವಸೂತ್ರಿಕ ಸೂಕ್ಷ್ಮಾತ್ ಸೂಕ್ಷ್ಮಸ್ವರೂಪವಾದ ಪ್ರಕೃತಿಯ ಸಂಗದಿಂದ ಆತ್ಮವೆಂಬ ಬೀಜವಂಕುರಿಸಿ ಅಪರಾ ಪ್ರಕೃತಿಯ ಸಂಗದೊಳ್ ವ್ಯವಹರಿಸಿ, ಸ್ಥೂಲವಾದ ಜಗತ್ತು ಶರೀರಗಳಾಗಿ ತೋರಿ, ಆತ್ಮನು ಸೂತ್ರ ಸ್ವರೂಪವಾದ ಪರಬ್ರಹ್ಮದೊಳ್ ಅಡಗುವುದು (ಲಯಮಪ್ಪುದು). ಮತ್ತಂ ನಿರಾಕಾರವಾದ ಬೀಜವು ಮಣ್ಣು ನೀರುಗಳ ಸಂಗದಿಂ ನಿರಾಕಾರ ಸಾಕಾರವಾದ ಮೊಳೆ ಸಸಿಯಾಗಿ ಸಾಕಾರವಾದ ಪೈರಾಗಿ ಅಂತ್ಯದೊಳ್ ಬೀಜದಿಂ ಲಯಮಪ್ಪಂತೆ ಪರಬ್ರಹ್ಮದೊಳ್ ಆತ್ಮನೆಂಬ ನಿರಾಕಾರ ಬೀಜವು ಪ್ರಕೃತಿಯ ಸಂಗದಿಂ ಸೂಕ್ಷ್ಮ ಸ್ಥೂಲ ಜೀವಿಗಳಾಗಿ ಸಾಕಾರವಾಗಿ ತೋರಿ ತೋರಿ ನಿರಾಕಾರವಾದಾತ್ಮರು ಪರಬ್ರಹ್ಮನೊಳ್ ಲಯಮಪ್ಪರು. ಸಾಕಾರದಿಂ, ನಿರಾಕಾರಕ್ಕೆ ನಿರಾಕಾರದಿಂ, ಸಾಕಾರಕ್ಕೆ ತಿರುಗುತಿರ್ಪರು ನೋಡಾ ಶ್ರೀ ಮತ್ಶೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ಜಗತ್ತಿನ ಉದಯಾಧಾರ ವಿಶ್ರಾಂತಿಗೆ ಆಧಾರವಾಗಿರ್ಪುದೀ ಪರಬ್ರಹ್ಮವು. ಪರಬ್ರಹ್ಮದಿಂ ಚಿತ್ ಶಕ್ತಿಯುದಯಿಸಿ ಚಿಚ್ಛಕ್ತಿಯ ಸಹಸ್ರಾಂಶದಿಂದ ಪರಾಶಕ್ತಿ ಉದಯವಾಯಿತ್ತು. ಪರಾಶಕ್ತಿಯೊಳ್ ಪ್ರಕೃತಿಯೂ ತೋರಿ, ಪರಾಶಕ್ತಿ ಪ್ರಕೃತಿಯಿಂ ಆಕಾಶ, ವಾಯು, ಅಗ್ನಿ, ಜಲ, ಪೃಥ್ವಿಯಿಂ ಚರಾಚರ ಸೃಷ್ಟಿಯಹುದು. ಮತ್ತಮಾ ಚರಾಚರ ಸೃಷ್ಟಿಯೊಳ್ ಏಕದಿಂ ಅನೇಕಗಳೂ ಅಣುವಿನಿಂ ಮಹತ್ ಉದಯವಹುದು. ಅದೆಂತೆಂದೊಡೆ ಬೀಜದಿಂ ಸಸ್ಯಾದಿ ಪೈರುಗಳಾಗಿ, ಕೊನೆಗೆ ಅನೇಕ ಬೀಜಗಳು ತೋರುವವು. ಆ ಬೀಜದಿಂ ಸಸ್ಯಾದಿ ಪೈರುಗಳಾಗಿ ಕೊನೆಗೆ ಅನೇಕ ಸಹಸ್ರಾರು ಲಕ್ಷಾಂತರ ಬೀಜಗಳು ತೋರ್ಪಂದದಿಂ, ಆತ್ಮಪ್ರಕೃತಿಯ ಸಂಗದಿಂದ ಅನಂತ ಚರ ಅಚರ ಸೃಷ್ಟಿಯುದಯಿಸಿ, ಸಹಸ್ರ ಲಕ್ಷಾನು, ಕೋಟ್ಯಾನು ಕೋಟಿ ಜೀವಿಗಳಾಗಿ ತೋರಿ ವ್ಯವಹರಿಸಿ ಪರಬ್ರಹ್ಮನೊಳ್ ಪ್ರಳಯಮಪ್ಪವು, ಎಂದರುಹಿದಿರಯ್ಯಾ ಶ್ರೀಮತ್ ಶೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ಏನೇನು ತೋರದ ಅಪ್ರತನು ಮೊದಲಾದ ನಾಮರೂಪಾತ್ಮಕ ಜಗತ್ತಿಗೆ, ತೋರುವ ತೋರಿಕೆಗೆ ನಿಲುಕದಿರ್ಪುದೀ ನಿರಾಲಂಬ ಪರಬ್ರಹ್ಮವು. ನಿರಾಲಂಬವೇ ನಿರಂಜನವಾಯಿತ್ತು. ನಿರಂಜನ ಲಿಂಗವೇ ನಿರಂಜೋಂಕಾರ ಪ್ರಣಮವೆನಿಸಿತ್ತು. ಆ ನಿರಂಜೋಂಕಾರ ಶಕ್ತಿಯಿಂ ಅವಾಚ್ಯ ಪ್ರಣಮವಾಯಿತ್ತು. ಅಂದರೆ ವಾಚ್ಯಕ್ಕೆ ಬಾರದ ಅವಾಚ್ಯನಾದ, ಅವಾಚ್ಯಬಿಂದು, ಅವಾಚ್ಯ ಕಲೆ, ತ್ರಿವಿಧವೂ ಸೇರಿ, ಅವಾಗ್ವವಾಯಿತ್ತು. ಅವಾಗ್ವ ವೆಂದರೆ ನಿರಂಜನ 'ಂ' ಕಾರ ಪ್ರಣಮವು. ಅವಾಗ್ವ ಪ್ರಣಮವೇ ಬಿಂದುಯುಕ್ತವಾಗಿ ನಿಶೂನ್ಯಲಿಂಗ ಸ್ವರೂಪಮಾದ ಅವಾಚ್ಯ ಪ್ರಣಮವೆನಿಸಿತ್ತು. ಅವಾಚ್ಯ ಪ್ರಣಮದಿಂ ಸಮಸ್ತ ಕಲೆಗಳಿಗೆ ಆಧಾರಮಾದ ನಿಃಶೂನ್ಯ ಲಿಂಗ ಸ್ವರೂಪವಾದ ನಿಃಶೂನ್ಯ ಪ್ರಣಮವೆನಿಸಿತ್ತು. ನಿಃಶೂನ್ಯಲಿಂಗದಿಂ ಮೂಲ ಚಿನ್ನಾದ, ಚಿದ್ಬಿಂದು ಚಿತ್ಕಲೆಗಳುದಯಿಸಿಹುದು. ಚಿನ್ನಾದವೇ "ಬ" ಕಾರವೆನಿಸಿತ್ತು. ಚಿದ್ಬಿಂದುವೇ "ಸ" ಕಾರವೆನಿಸಿತ್ತು. ಚಿತ್ಕಲೆಯೇ "ವ" ಕಾರವೆನಿಸಿತ್ತು ನೋಡಾ.

ಚಿನ್ನಾದ, ಚಿದ್ಬಿಂದು, ಚಿತ್ಕಲೆಯಿಂದಾ ನಿಃಕಲಲಿಂಗ. ಆ ನಿಃಕಲಲಿಂಗದಿಂದ ನಾದ, ಬಿಂದು, ಕಲೆಗಳುದಯಿಸಿತ್ತು ಮತ್ತು ನಾದವೇ "ಅ" ಕಾರ ಪ್ರಣಮವೆನಿಸಿತ್ತು. ಬಿಂದುವೇ "ಉ" ಕಾರ ಪ್ರಣಮವೆನಿಸಿತ್ತು. ಕಲೆಯೇ "ಮ್" ಕಾರ ಪ್ರಣಮವೆನಿಸಿತ್ತು. ನಾದ, ಬಿಂದು, ಕಲೆ ಮೂಲ ಚಿತ್ ಸೇರಿ ಚತುರ್ವಿಧವೂ ಗಟ್ಟಿಗೊಂಡು ಅನಂತಕೋಟಿ ಸೂರ್ಯ ಚಂದ್ರಾಗ್ನಿ ಪ್ರಕಾಶಕ್ಕೆ ಮಿಗಿಲೆನಿಸಿಪ್ಪ, ಅನಂತಕೋಟಿ ಪ್ರಕಾಶಗಳಿಗೆ ಉದಯಾಧಾರ ವಿಶ್ರಾಂತಿಗೆ ಕಾರಣವಾಗಿಪ್ಪ, ಪರಮ ತೇಜೋಮೂರ್ತಿಯಪ್ಪ ಮಹಾಲಿಂಗವು. ಮಹಾಲಿಂಗವೇ ಓಂಕಾರ ಪ್ರಣಮವೆನಿಸಿತ್ತು. ಮತ್ತಂ ಮಹಾಲಿಂಗದೋಳ್ ಚಿತ್ತ ಶಕ್ತಿ ಹೊಂದಿಕೊಂಡಿರ್ಪುದು. ಚಿತ್ ಶಕ್ತಿಯಿಂ ಪರಾಶಕ್ತಿಯುದಯವಾಗಿ ಪರಾಶಕ್ತಿ ಪ್ರಕೃತಿಯ ಸಂಗದಿಂದಾ ಆತ್ಮಾ, ಆತ್ಮನಿಂ ಆಕಾಶ, ಆಕಾಶದಿಂ ವಾಯು, ವಾಯುವಿನಿಂದ ಅಗ್ನಿ, ಅಗ್ನಿಯಿಂ ಜಲ, ಜಲದಿಂ ಪೃಥ್ವಿ ಉದಯವಹುದು. ಮತ್ತಮಾ ಅಗ್ನಿತತ್ವದಿಂ ಸೂರ್ಯನೂ, ನಕ್ಷತ್ರಾದಿಗಳೂ, ಭೂತತ್ವದಿಂದ ಗ್ರಹಗಳೂ ಚಂದ್ರಾದಿಗಳೂ ಉದಯವಹುದು.

ಮತ್ತಂ ಮಹಾಲಿಂಗದ ಚಿತ್ ಶಕ್ತಿಯ ಸಹಸ್ರಾಂಶದಿಂ ಅಪರಾ ಪ್ರಕೃತಿಯ ಸಂಗದಿಂ ಪಂಚತತ್ವಂಗಳು ತೋರಿ ಪಂಚತತ್ವಂಗಳ ಸಂಬಂಧದಿಂದ ಜೀವಾತ್ಮನೆಂದು ಪೇಳಿಸಿಕೊಂಬನು.

ಮತ್ತಂ ಪಂಚ ತತ್ವಂಗಳು, ಪಂಚ ವಿಭಾಗಮನ್ಯೆದಿ ಪಂಚವಿಂಶತಿ ತತ್ವಾತ್ಮಕವಾದ ಶರೀರವಾಯಿತ್ತು. ಶರೀರವು ಜಡ, ಆತ್ಮನ ಸಂಗದಿಂ ಚೈತನ್ಯವಾಗಿ ವ್ಯವಹರಿಸುವುದು ಎಂದರುಹಿದಿರಯ್ಯಾ ಶ್ರೀ ಮತ್ಶೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ಪಿಂಡಸ್ಥಲ

ದೇಹ, ದೇಹಿಕಂಗಳ ಉತ್ಪತ್ತಿ : ಪರಬ್ರಹ್ಮವೇ ವಸ್ತು. ವಸ್ತುವೆಂದುಡು, ಮಹಾಲಿಂಗವೆಂದುಡು ಪರಶಿವನೆಂದುಡು, ಪರಮಾತ್ಮನೆಂದುಡು, ಶಿವತತ್ವವೆಂದುಡು ಪರಮಾತ್ಮ ತತ್ವವೆಂದುಡು, ಅದು ಎಂದುಡು ಏಕ ಪರಿಯಾಯಾರ್ಥ. ವಸ್ತುವಿನೋಳ್ ಮೂಲ ಪ್ರಕೃತಿಯಿಂ ಆತ್ಮನಾಯಿತು. ಆತ್ಮನೇ ಚೈತನ್ಯಾತ್ಮಕನಾಗಿ ದೇಹಿ ಎನಿಸಿಕೊಂಬನು, ಆತ್ಮನಿಂ ಪ್ರಕೃತಿ, ಪ್ರಕೃತಿಯಿಂ ಆಕಾಶ, ಆಕಾಶದಿಂ ವಾಯು, ವಾಯುವಿನಿಂ ಅಗ್ನಿ, ಅಗ್ನಿಯಿಂ ಜಲ, ಜಲದಿಂ ಪೃಥ್ವಿ ತತ್ವ

ಉದಯವಹುದು. ಪಂಚತತ್ವಗಳು ಒಂದಕ್ಕೊಂದು ವಿಭಜಿಸಿ ಸೇರಿ ಪಂಚವಿಂಶತೀ ತತ್ವಾತ್ಮಕವಾದ ದೇಹವಾಯಿತ್ತು.

ಪೃಥ್ವಿಯಲ್ಲಿ ಕಠಿಣ ಗುಣ, ಅಪ್ಪುವಿನಲ್ಲಿ ದ್ರವ ಗುಣ, ಅಗ್ನಿಯಲ್ಲಿ ಉಷ್ಣ ಗುಣ, ವಾಯುವಿನಲ್ಲಿ ಸಂಚಲ ಗುಣ, ಆಕಾಶದಲ್ಲಿ ತೆರಹು ಗುಣ.

ಮತ್ತಂ ಪೃಥ್ವಿಗೆ ಮೈಯೆಲ್ಲಾ ಯೋನಿ, ಜಲಕ್ಕೆ ಮೈಯೆಲ್ಲಾ ಕಾಲು, ಅಗ್ನಿಗೆ ಮೈಯೆಲ್ಲಾ ನಾಲಿಗೆ, ವಾಯುವಿಗೆ ಮೈಯೆಲ್ಲಾ ನಾಶಿಕ, ಆಕಾಶಕ್ಕೆ ಮೈಯೆಲ್ಲಾ ಹೊಟ್ಟೆ ಇವು ಅವುಗಳ ಸ್ವಭಾವಗಳು.

ಮತ್ತಂ ಆಕಾಶ ತತ್ವದೋಳ್ ಪಂಚ ತತ್ವಂಗಳ ವಿಭಾಗ ಸೇರಿ ಕರಣೇಂದ್ರಿಯವೆನಿಸಿದವು. ವಾಯು ತತ್ವದೋಳ್ ಪಂಚ ತತ್ವಗಳ ವಿಭಾಗ ಸೇರಿ ಪಂಚ ಪ್ರಾಣಗಳೆಂದೆನಿಸಿದವು. ಅಗ್ನಿ ತತ್ವದೋಳ್ ಪಂಚ ತತ್ವದ ವಿಭಾಗ ಸೇರಿ ಬುದ್ಧಿ ವಿಷಯೇಂದ್ರಿಯವೆನಿಸಿದವು. ಜಲತತ್ವದೋಳ್ ಪಂಚ ತತ್ವದ ವಿಭಾಗ ಸೇರಿ ಬುದ್ಧೀಂದ್ರಿಯಗಳು (ಜ್ಞಾನೇಂದ್ರಿಯಗಳು) ಎನಿಸಿದವು. ಭೂತತ್ವದೋಳ್ ಪಂಚ ತತ್ವ ವಿಭಾಗ ಸೇರಿ ಕರ್ಮೇಂದ್ರಿಯವೆನಿಸಿದವು. ಇಂತೀ ಪ್ರಕಾರದಿಂ ಪಂಚವಿಂಶತಿ ತತ್ವಾತ್ಮಕವಾದ ಜಡ ಶರೀರವಾಯಿತು. ಆತ್ಮನೇ ಚೈತನ್ಯಾತ್ಮಕನು, ಆತ್ಮನ ಚೇತನದಿಂ ಶರೀರ ವ್ಯವಹರಿಸುವುದೆಂದೆಯಯ್ಯಾ ಶ್ರೀ ಮತ್ಶೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ಪಂಚ ತತ್ವಗಳೆಂದೊಡೆ ಸ್ಥೂಲವಾದ ಭೂಮಿ ನೀರು, ಬೆಂಕಿ, ಗಾಳಿ, ಆಕಾಶಗಳಿಗೆ ಮೂಲವಾದ ಶಕ್ತಿಯು. ಅದೆಂತೆಂದೊಡೆ ಧಾರಣರೂಪಮಾದ ಶಕ್ತಿಯೇ ಭೂತತ್ವವೆಂದು, ದ್ರವಿಸುವ ತತ್ವವೇ ಜಲತತ್ವವೆಂದು, ದಹನರೂಪವಾದ ಶಕ್ತಿಯೇ ಅಗ್ನಿ ತತ್ವವೆಂದು, ಸಂಚಲ ರೂಪವಾದ ಶಕ್ತಿಯೇ ವಾಯು ತತ್ವವೆಂದು ತೆರಹುಗುಡುವ ಶಕ್ತಿಯೇ ಆಕಾಶ ತತ್ವವೆಂದು ಪೇಳಿಸಿಕೊಂಬುದು. ಮತ್ತಮಾ ಪಂಚವಿಂಶತಿ ತತ್ವಾತ್ಮಕವಾದ ಶರೀರವಾದವುದು. ಅದರ ವಿಭಾಗವೂ ಅದೆಂತೆಂದೊಡೆ ಮತ್ತಂ ಮೂಲ ಆಕಾಶ ತತ್ವದಲ್ಲಿ 60ನೆಯ ಪೈಸಿನ ಭಾಗವೇ ಜ್ಞಾನವಾಯಿತ್ತು. ಮೂಲ ಆಕಾಶ ತತ್ವದ ಅರ್ಧಭಾಗದಲ್ಲಿ 10 ನೆಯ ಪೈಸಿನ ಭಾಗ ವಾಯುತತ್ವ ಸೇರಲು ಮನಸ್ಸಾಯಿತ್ತು. ಮೂಲ ಆಕಾಶ ತತ್ವದ ಅರ್ಧ ಭಾಗದಲ್ಲಿ 10 ನೆಯ ಪೈಸಿನ ಭಾಗ ಅಗ್ನಿ ತತ್ವ ಸೇರಲು ಅಹಂಕಾರವಾಯಿತ್ತು. ಮೂಲಾಕಾಶ ತತ್ವದ ½ ಭಾಗದಲ್ಲಿ 10 ನೆಯ ಪೈಸಿನ ಭಾಗ ಜಲ ತತ್ವ ಸೇರಲು ಬುದ್ಧಿಯಾಯಿತ್ತು. ಮೂಲಾಕಾಶ ತತ್ವದ ½ ಭಾಗ 10ನೆಯ ಪೈಸಿನ ಭಾಗ ಭೂತತ್ವ ಸೇರಲು ಚಿತ್ತವಾಯಿತ್ತು. (ಕರಣೇಂದ್ರಿಯವೆನಿಸಿತ್ತು.) ವಾಯು ತತ್ವದ 60 ನೆಯ ಪೈಸಿನ ಭಾಗವೇ ಉದಾನ ವಾಯುವೆನಿಸಿತ್ತು. ವಾಯು ತತ್ವದ ½ ಭಾಗದಲ್ಲಿ 10ನೆಯ ಪೈಸಿನ ಆಕಾಶದ ಭಾಗ ಸೇರಿದ್ದೆ ಸಮಾನ ವಾಯು, ವಾಯು ತತ್ವದ ½ ಭಾಗದಲ್ಲಿ ಅಗ್ನಿ ತತ್ವದ 10 ನೆಯ ಪೈಸಿನ ಭಾಗ ಸೇರಿದ್ದೇ ವ್ಯಾನ ವಾಯು, ವಾಯು ತತ್ವದ ½ ಭಾಗದಲ್ಲಿ ಜಲತತ್ವದ 10 ನೆಯ ಪೈಸಿನ ಭಾಗ ಸೇರಿದ್ದೇ ಅಪಾನವಾಯು. ವಾಯು ತತ್ವದ ½ ಭಾಗದಲ್ಲಿ ಪೃಥ್ವಿ ತತ್ವದ 10ನೆಯ ಪೈಸಿನ ಭಾಗ ಸೇರಿದ್ದೇ ಪ್ರಾಣವಾಯುವೆನಿಸಿದವು. ಇವೇ ಪಂಚಪ್ರಾಣಗಳೆನಿಸಿದವು.

ಮತ್ತಂ ಅಗ್ನಿ ತತ್ವದ ಅರವತ್ತು ನಯಾ ಪೈಸಿನ ಭಾಗವೇ ರೂಪು ವಿಷಯವೆನಿಸಿತ್ತು.

ಅಗ್ನಿ ತತ್ವದ ಅರ್ಧಾಂಶದಲ್ಲಿ ಆಕಾಶ ತತ್ವದ 10ನೆಯ ಪೈಸಿನ ಭಾಗ ಸೇರಿದ್ದೇ ಶಬ್ದ ವಿಷಯವೆನಿಸುವುದು. ಅಗ್ನಿತತ್ವದ ಅರ್ಧಾಂಶದಲ್ಲಿ ವಾಯು ತತ್ವದ 10ನೆಯ ಪೈಸಿನ ಭಾಗ ಸೇರಿದ್ದೇ ಸ್ಪರ್ಶನ ವಿಷಯವೆನಿಸುವುದು. ಅಗ್ನಿ ತತ್ವದ ಅರ್ಧಾಂಶದಲ್ಲಿ ಜಲ ತತ್ವದ 10ನೆಯ ಪೈಸಿನ ಭಾಗ ಸೇರಿದ್ದೇ ರಸ ವಿಷಯವೆನಿಸುವುದು. ಅಗ್ನಿ ತತ್ವದ ½ ಅಂಶದಲ್ಲಿ ಪೃಥ್ವಿ ತತ್ವದ 10ನೆಯ ಪೈಸಿನ ಭಾಗ ಸೇರಲು ಗಂಧ ವಿಷಯವೆನಿಸುವುದು. ಇವೇ ವಿಷಯೇಂದ್ರಿಯವೆನಿಸಿದವು.

ಮತ್ತಂ ಜಲತತ್ವದ ಅರವತ್ತನೆಯ ಪೈಸಿನ ಭಾಗವೇ ಜಿಹ್ವೇಂದ್ರಿಯವೆನಿಸಿತ್ತು. ಜಲತತ್ವದ ಅರ್ಧಾಂಶದಲ್ಲಿ 10ನೆಯ ಪೈಸಿನ ಆಕಾಶ ಭಾಗ ಕೂಡಲು ಶ್ರೋತ್ರ (ಕಿವಿ) ವೆನಿಸಿತ್ತು. ಜಲತತ್ವದ ಅರ್ಧಾಂಶದಲ್ಲಿ 10ನೆಯ ಪೈಸಿನ ವಾಯು ತತ್ವದ ಭಾಗ ಕೂಡಿದ್ದೇ ಚರ್ಮವಾಯಿತ್ತು. ಜಲತತ್ವದ ಅರ್ಧಾಂಶದಲ್ಲಿ 10ನೆಯ ಪೈಸಿನ ಅಗ್ನಿ ತತ್ವದ ಭಾಗ ಕೂಡಿದ್ದೇ ನೇತ್ರೇಂದ್ರಿಯವಾಯಿತ್ತು. ಜಲತತ್ವದ ಅರ್ಧಾಂಶದಲ್ಲಿ 10ನೆಯು ಪೈಸಿನ ಪೃಥ್ಥಿ ತತ್ವದ ಭಾಗ ಸೇರಿದ್ದಲ್ಲಿ ನಾಶಿಕೇಂದ್ರಿಯವಾಯಿತ್ತು. ಇವೇ ಜ್ಞಾನೇಂದ್ರಿಯವೆನಿಸಿದವು.

ಮತ್ತಂ ಪೃಥ್ವಿ ತತ್ವದ 60ನೆಯ ಪೈಸಿನ ಭಾಗ ಸೇರಿದ್ದ ಗುದೇಂದ್ರಿಯವೆನಿಸಿತ್ತು. ಪೃಥ್ವಿ ತತ್ವದ ಅರ್ಧಾಂಶದಲ್ಲಿ 10ನೆಯ ಪೈಸಿನ ಜಲತತ್ವದ ಭಾಗವು ಸೇರಿದಲ್ಲಿ ಗುಹ್ಯೇಂದ್ರಿಯವೆನಿಸಿತ್ತು. ಪೃಥ್ವಿ ತತ್ವದ ಅರ್ಧ ಭಾಗದಲ್ಲಿ ಅಗ್ನಿ ತತ್ವದ 10ನೆಯು ಪೈಸಿನ ಭಾಗ ಸೇರಿದ್ದೇ ಪಾದೇಂದ್ರಿಯವೆನಿಸಿತ್ತು. ಪೃಥ್ವಿ ತತ್ವದ ಅರ್ಧಾಂಶದಲ್ಲಿ 10ನೆಯ ಪೈಸಿನ ಭಾಗ ವಾಯು ತತ್ವ ಸೇರಿದ್ದೇ ಹಸ್ತೇಂದ್ರಿಯವೆನಿಸಿತ್ತು. ಪೃಥ್ವಿ ತತ್ವದ ಅರ್ಧ ಭಾಗದಲ್ಲಿ ಆಕಾಶ ತತ್ವದ 10ನೆಯ ಪೈಸಿನ ಭಾಗ ಸೇರಿದ್ದ ವಾಗೇಂದ್ರಿಯವೆನಿಸಿತ್ತು. ಇವೇ ಕರ್ಮೇಂದ್ರಿಯವೆನಿಸಿದವು. ಇಂತೀ ಪಂಚವಿಂಶತೀ ತತ್ವಾತ್ಮಕವಾದ ಶರೀರವಾಯಿತ್ತು. ಶರೀರವು ಜಡ, ಆತ್ಮನೇ ಅಜಡ. ಆತ್ಮನ ಚೈತನ್ಯದಿಂ ವ್ಯವಹರಿಸುವುದೆಂದರುಹಿದಿರಯ್ಯಾ ಶ್ರೀ ಮತ್ಸೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ಆತ್ಮನ ಅಪರಾ ಪ್ರಕೃತಿಯ ಪಂಚತತ್ವಗಳು ವಿಭಜಿಸಿ ಸೇರಿ ಪಂಚವಿಧವಾದ ಪಂಚೇಂದ್ರಿಯಗಳಾಗಿರ್ಪವು. ಅದೆಂತೆಂದೊಡೆ ಆಕಾಶದೊಳಗಿನ ಆಕಾಶ ಜ್ಞಾನ. ಆಕಾಶದೊಳಗಣ ವಾಯು ಮನಸ್ಸು. ಆಕಾಶದೊಳಗಿನ ಅಗ್ನಿ ಅಹಂಕಾರ. ಆಕಾಶದೊಳಗಿನ ಜಲ ಬುದ್ಧಿ. ಆಕಾಶದೊಳಗಿನ ಭೂಮಿ ಚಿತ್ತ ಎಂಬುದಾಗಿ ಆಕಾಶದ ಪಂಚೀಕೃತಿಯಾಯಿತ್ತು. ಇವೇ ಕರಣೇಂದ್ರಿಯವೆನಿಸಿದವು. ಮತ್ತಂ ವಾಯುವಿನೊಳಗಣ ಆಕಾಶ ಸಮಾನವಾಯು, ವಾಯುವಿನೊಳಗಣ ವಾಯು, ಉದಾನವಾಯು, ವಾಯುವಿನೊಳಗಣ ಅಗ್ನಿ ವ್ಯಾನವಾಯು, ವಾಯುವಿನೊಳಗಣ ಅಪ್ಪು ಅಪಾನವಾಯು, ವಾಯುವಿನೊಳಗಣ ಪೃಥ್ವಿ ಪ್ರಾಣವಾಯು ಎಂಬುದಾಗಿ ವಾಯುವಿನ ಪಂಚೀಕೃತಿಯಾಯಿತ್ತು. ಇವೇ ಪವನೇಂದ್ರಿಯವೆನಿಸಿದವು.

ಮತ್ತಂ ಅಗ್ನಿಯೊಳಗಣ ಆಕಾಶ ಶಬ್ದೇಂದ್ರಿಯ, ಅಗ್ನಿಯೊಳಗಣವಾಯು ಸ್ಪರ್ಶೇಂದ್ರಿಯ, ಅಗ್ನಿಯೊಳಗಣ ಅಗ್ನಿ ರೂಪೇಂದ್ರಿಯ, ಅಗ್ನಿಯೊಳಗಿನ ಜಲ ರಸನೇಂದ್ರೀಯ, ಅಗ್ನಿಯೊಳಗಣ ಪೃಥ್ವಿ ಗಂಧೇಂದ್ರಿಯ ಎಂಬುದಾಗಿ ಅಗ್ನಿಯ ಪಂಚೀಕೃತಿಯಾಯಿತ್ತು. ಇವೇ ವಿಷಯೇಂದ್ರಿಯವೆನಿಸಿದವು.

ಮತ್ತಂ ಜಲದೊಳಗಣ ಆಕಾಶ ಶ್ರೋತ್ರೇಂದ್ರಿಯವಾಯಿತ್ತು. ಜಲದೊಳಗಣ ವಾಯು ತ್ವಗೇಂದ್ರಿಯವಾಯಿತ್ತು. ಜಲದೊಳಗಣ ಅಗ್ನಿ ನೇತ್ರೇಂದ್ರಿಯವಾಯಿತ್ತು. ಜಲದೊಳಗಿನ ಜಲ ಜಿಹ್ವೇಂದ್ರಿಯವಾಯಿತ್ತು. ಜಲದೊಳಗಣ ಪೃಥ್ವಿ ನಾಶಿಕೇಂದ್ರಿಯವಾಯಿತ್ತು. ಎಂಬುದಾಗಿ ಜಲದ ಪಂಚೀ ಕೃತಿಯಾಯಿತ್ತು. ಇವೇ ಪಂಚ ಜ್ಞಾನೇಂದ್ರಿಯಗಳೆನಿಸಿದವು.

ಮತ್ತಂ ಪೃಥ್ವಿಯೊಳಗಣ ಆಕಾಶ ವಾಗೇಂದ್ರಿಯವೆನಿಸಿತ್ತು. ಪೃಥ್ವಿಯೊಳಗಣ ವಾಯು ಪಾಣೇಂದ್ರೀಯವೆನಿಸಿತ್ತು. ಪೃಥ್ವಿಯೊಳಗಣ ಅಗ್ನಿ ಪಾದೇಂದ್ರಿಯವೆನಿಸಿತ್ತು. ಪೃಥ್ವಿಯೊಳಗಣ ಜಲ ಗುಹ್ಯೇಂದ್ರಿಯವೆನಿಸಿತ್ತು. ಪೃಥ್ವಿಯೊಳಗಣ ಪೃಥ್ವಿ ಗುದೇಂದ್ರಿಯವೆನಿಸಿತ್ತು. ಎಂದು ಪೃಥ್ವಿಯ ಪಂಚೀಕೃತಿಯಾಯಿತ್ತು. ಇವೇ ಕರ್ಮೇಂದ್ರಿಯವೆನಿಸಿದವು ಎಂಬುದಾಗಿ ತಿಳಿದುಕೊಂಬುದು ತತ್ವಜ್ಞಾನಿಗಳು.

ಮತ್ತಂ ಕರಣೇಂದ್ರಿಯ ಪವನೇಂದ್ರಿಯ ವಿಷಯೇಂದ್ರಿಯ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳು ಪಂಚಮಹಾಭೂತಗಳಿಂದ ಆದವೆಂದೂ ಪಂಚವಿಂಶತೀ ತತ್ವಾತ್ಮಕ ಶರೀರವು ಜಡವೆಂದೂ ಆತ್ಮನು ಅಜಡನೆಂದೂ ಆತ್ಮನೇ ಚೇತನಾತ್ಮಕನಾಗಿ ಸೂತ್ರಧಾರಿಯಾಗಿ ಶರೀರವು ವ್ಯವಹರಿಸುವುದು. ಎಂದರುಹಿದಿರಯ್ಯಾ ಶ್ರೀಮತ್ ಶೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ಸಮಸ್ತ ಜಗತ್ತುಗಳುದಯಾಧಾರ ವಿಶ್ರಾಂತಿಗೆ ಕಾರಣವಾಗಿರ್ಪುದೀ ಮಹಾಲಿಂಗವು. ಮಹಾಲಿಂಗದಲ್ಲಿ ಚಿತ್ ಶಕ್ತಿ ಹೊಂದಿಕೊಂಡಿರ್ಪುದು. ಮಹಾಲಿಂಗದ ಚಿತ್ ಶಕ್ತಿಯಿಂ ಮೂಲ ಪ್ರಕೃತಿಯುದಯಿಸಿ, ಪ್ರಕೃತಿಯಿಂ, ನಭವಾಯ್ತು, ಅಗ್ನಿ, ಜಲ, ಪೃಥ್ವಿಯೆಂಬ ಪಂಚ ತತ್ವವನ್ನೊಳಗೊಂಡಿರ್ಪುದೇ ಬ್ರಹ್ಮಾಂಡವು. ಬ್ರಹ್ಮಾಂಡದ ಭಾಗವೇ ಸಕಲ ಜೀವಿಗಳ ಶರೀರವೆಂಬ ಪಿಂಡಾಂಡವೆಂಬ ತನುವಿನಲ್ಲಿ ತೋರ್ಪುದು ಅದೆಂತೆಂದೊಡೆ :

ಮತ್ತಂ ರಾಗ, ದ್ವೇಷ, ಭಯ, ಲಜ್ಜಾ, ಮೋಹ ಇವು ಆಕಾಶ ತತ್ವದ ಭಾಗವೆಂದೂ, ಪರಿವ, ಪಾರುವ, ಸುಳಿವ, ಕೂಡುವ, ಅಗಲುವ, ಇವು ವಾಯು ತತ್ವದ ಭಾಗವೆಂದೂ ಕ್ಷುಧೆ (ಹಸಿವು) ತೃಷೆ, ನಿದ್ರೆ, ಆಲಸ್ಯ, ಸಂಗ ಇವು ಅಗ್ನಿ ತತ್ವದ ಭಾಗವೆಂದು, ಶ್ಲೇಷ್ಮ, ಮೂತ್ರ, ಪಿತ್ತ, ಶುಕ್ಲ, ರಕ್ತ ಇವು ಜಲತತ್ವದ ಭಾಗವೆಂದು, ಅಸ್ತಿ, ಮಾಂಸ, ನರ, ಚರ್ಮ, ಕೂದಲು ಇವು ಭೂತತ್ವದ ಭಾಗವೆಂದು ಅರುಹಿದೆಯಯ್ಯಾ ಶ್ರೀ ಮತ್ಶೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ಪಂಚವಿಂಶತೀ ತತ್ವಾತ್ಮಕವಾದುದೀ ದೇಹವು, ದೇಹವೇ ಪಿಂಡವೆನಿಸುವುದು. ದೇಹದಲ್ಲಿ ಚೇತನಾತ್ಮಕನಾಗಿರ್ಪ ಆತ್ಮನೇ ದೇಹಿ. ಆತ್ಮನು ಪ್ರಕೃತಿಯ ಸಂಗದಿಂ ಪಂಚತತ್ವಮಯವಾದ ಶರೀರದಿಂ ಬಂಧಿತನಾಗಿ ತನ್ನ ಸ್ವಯ ಜ್ಞಾನ ಪ್ರಕಾಶವನ್ನು ಮರೆತು ಕಾಣೆಸಿಕೊಂಡನು. ಅದೆಂತೆಂದೊಡೆ, ಕಾಷ್ಠದೊಳಗಣ ಅಗ್ನಿಯಂತೆ, ಬೀಜದೊಳಗಣ, ವೃಕ್ಷದಂತೆ ಸಸಿಯೊಳಗಣ ಫಲದ ಮಧುರದಂತೆ, ಕ್ಷೀರದೊಳಗಣ ತುಪ್ಪದಂತೆ, ಮರೀಚಿಯೊಳಗಣ, ಬಿಸಿಲಿನಂತೆ, ಶಿಲೆಯೊಳಗಣ ಹೇಮದಂತೆ, ನನೆಯೊಳಗಣ ಪರಿಮಳದಂತೆ, ಕಣ್ಣಾಲಿಯೊಳಗಣ (ಕಣ್ಣು) ತೇಜದಂತೆ ಶ್ರೀ ಮತ್ಶೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥನ ನಿಲವು ಅಜ್ಞಾನಿಗಳಿಗೆ ಕಾಣಬಾರದು.

ಪಿಂಡಜ್ಞಾನಸ್ಥಲ

ಈ ಪ್ರಕಾರದಿಂ ಪಿಂಡಸ್ಥಲವನರಿದು, ನಿಶ್ಚಯವಾಗಿ, ಮೋಡದಮರೆಯಲ್ಲಿ ಉದಯವಾದ ಸೂರ್ಯನಂತೆ ಅನೇಕ ಜನ್ಮದ ಪುಣ್ಯವಿಶೇಷದಿಂದಾ ಶಿವತತ್ವ ಉದಯವಾಗಿ ತೋರಲು ಆತ್ಮ ತತ್ವದಿ, ಶಿವತತ್ವದ ಜ್ಞಾನ ತಲೆದೋರೆ ಶಿವ ತತ್ವದ ಆದಿ ಮಧ್ಯಾವಸಾನವನರಿವನಾಗಿ ಪಿಂಡ ಜ್ಞಾನಸ್ಥಲವೆನಿಸುವುದು.

ಆದಿಯೋಳ್ ನಿಃಕಲಲಿಂಗವು, ನಿಃಕಲಲಿಂಗದಿಂ ನಾದ, ಬಿಂದು, ಕಲೆ, ಮೂಲ ಚಿತ್ ಸೇರಿ ಅಖಂಡಗೋಳಕಾಕಾರ ತೇಜೋಮೂರ್ತಿಯಪ್ಪ, ಮಹಾಲಿಂಗವೆನಿಸುವುದು. ಮಹಾಲಿಂಗವೇ ಸಮಸ್ತ ಜಗತ್ತುಗಳ ನರ, ಸುರ ತಿರ್ಯಗ್ಜಾತಿಗಳ ಸಮಸ್ತ ಜೀವ ಕೋಟಿಗಳ ಉದಯಾಧಾರ ವಿಶ್ರಾಂತಿಗೆ ಕಾರಣವಾಗಿರ್ಪುದು. ಪ್ರಕೃತಿ ಸಂಗದಿಂದಾ ಸೂಕ್ಷ್ಮ ಪಂಚತತ್ವಗಳ ಮೂಲ ಸಂಬಂಧದಿಂದಾ ಕಿಂಚಿಜ್ಞತ್ವ ಭಾವನೆಯೆ ಆತ್ಮನೆನಿಸಿಕೊಂಬನು. ಆತ್ಮನಿಗೆ ಪ್ರಕೃತಿಯಿಂ ಸೂಕ್ಷ್ಮ ಪಂಚತತ್ವಗಳ ಸಂಬಂಧದಿಂದಾ ಸ್ಥೂಲ ಶರೀರವಾದ ಕ್ರಮವೆಂತೆಂದೊಡೆ; ಆಕಾಶದೊಳಗಣ ಆಕಾಶ ಜ್ಞಾನ, ವಾಯುವಿನೊಳಗಣ ಆಕಾಶ ಸಮಾನವಾಯು, ಅಗ್ನಿಯೊಳಗಣ ಆಕಾಶ ಶಬ್ದೇಂದ್ರಿಯ, ಜಲದೊಳಗಣ ಆಕಾಶ ಶ್ರೋತ್ರೇಂದ್ರಿಯ, ಪೃಥ್ವಿಯೊಳಗಣ ಆಕಾಶ ವಾಕ್ಕೇಂದ್ರಿಯ ಇವು ಆಕಾಶದ ಭಾಗವೆಂದರಿವುದು ತತ್ವಜ್ಞಾನಿಗಳು.

ಮತ್ತಂ ಆಕಾಶದೊಳಗಣ ವಾಯು ಮನಸ್ಸು, ವಾಯುವಿನೊಳಗಣ ವಾಯು ಉದಾನವಾಯು, ಅಗ್ನಿಯೊಳಗಣ ವಾಯು ಸ್ಪರ್ಶ, ಜಲದೊಳಗಣ ವಾಯು ಚರ್ಮ, ಪೃಥ್ವಿಯೊಳಗಣ ವಾಯು ಪಾಣೇಂದ್ರಿಯ ಇವು ವಾಯುವಿನ ಭಾಗವೆಂದರಿವುದು ತತ್ವ ಜ್ಞಾನಿಗಳು.

ಮತ್ತಂ ಆಕಾಶದೊಳಗಣ ಅಗ್ನಿ ಅಹಂಕಾರ, ವಾಯುವಿನೊಳಗಣ ಅಗ್ನಿ ವ್ಯಾನ ವಾಯು, ಅಗ್ನಿಯೊಳಗಣ ಅಗ್ನಿ ರೂಪು, ಜಲದೊಳಗಣ ಅಗ್ನಿ ನೇತ್ರೇಂದ್ರಿಯ ಭೂಮಿಯೊಳಗಣ ಅಗ್ನಿ ಪಾದೇಂದ್ರಿಯ ಇವು ಅಗ್ನಿಯ ಭಾಗವೆಂದರಿವುದು ತತ್ವಜ್ಞಾನಿಗಳು.

ಮತ್ತಂ ಆಕಾಶದೊಳಗಣ ಜಲ ಬುದ್ಧಿ, ವಾಯುವಿನೊಳಗಣ ಜಲ ಅಪಾನ ವಾಯು, ಅಗ್ನಿಯೊಳಗಣ ಜಲ ರಸ, ಜಲದೊಳಗಣ ಜಲ ಜಿಹ್ವೇಂದ್ರಿಯ, ಭೂಮಿಯೊಳಗಣ ಜಲ ಗುಹ್ಯೇಂದ್ರಿಯ. ಇವು ಜಲದ ಭಾಗವೆಂದರಿವುದು ತತ್ವ ಜ್ಞಾನಿಗಳು.

ಮತ್ತಂ ಆಕಾಶದೊಳಗಣ ಪೃಥ್ವಿ ಚಿತ್ತ, ವಾಯುವಿನೊಳಗಣ ಪೃಥ್ವಿ ಪ್ರಾಣವಾಯು, ಅಗ್ನಿಯೊಳಗಣ ಪೃಥ್ವಿ ಗಂಧ. ಜಲದೊಳಗಣ ಪೃಥ್ವಿ ನಾಶಿಕೇಂದ್ರಿಯ. ಪೃಥ್ವಿಯೊಳಗಣ ಪೃಥ್ವಿ ಗುದೇಂದ್ರಿಯ. ಇವು ಪೃಥ್ವಿಯ ಭಾಗವೆಂದರಿವುದು ತತ್ವಜ್ಞಾನಿಗಳು. ಇಂತೀ ಪಂಚವಿಂಶತಿ ತತ್ವಗಳಿಂದುಕ್ತವಾದ ಶರೀರವು ಜಡ, ಆತ್ಮನು ಅಜಡ ಆತ್ಮನಚೈತನ್ಯದಿಂ ವ್ಯವಹರಿಸುವುದು ಎಂದರುಹಿದಿರಯ್ಯಾ ಶ್ರೀ ಮತ್ತೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ಪರಮಾತ್ಮನು ತನ್ನಂಶವಾದ ತ್ಮನಿಗೆ ತನ್ನಂಶವಾದ ಆತ್ಮನಿಗೆ ಪ್ರಕೃತಿಯಿಂ ಪಂಚಮಹಾಭೂತಂಗಳಂ ಸಂಬಂಧಿಸಿ ಶರೀರದಿಂ ಬಂಧಿಸಿರ್ಪನು. ಸಾಕಾರ ಶರೀರವು ಯಾತನೆಯಂ ಬಿಟ್ಟು ಪೋಪುದು, ಆತ್ಮನಿಗೆ ನಿರಾಕಾರ ಶರೀರವು ಕರ್ಮದಿಂ ಬಂಧಿಸಿರ್ಪುದು.

ಕರ್ಮದಿಂದೊಡಗೂಡಿದ ಸೂಕ್ಷ್ಮ ಕರಣಂಗಳೇ, ಸ್ಥೂಲ ಶರೀರವಂ ಭೂತಂಗಳ

ಮಿಶ್ರದಿಂದ ಕ್ರಿಯೆಗಳ ಮಾಳ್ಪುದು. ಪಂಚಭೂತಂಗಳ ಗುಣಕ್ರೀಯೆಗಳೆಂದು ತಿಳಿವ ಜ್ಞಾನವೆಂತೆಂದೊಡೆ, ಆತ್ಮನಿಗೆ ಪಂಚಭೂತಂಗಳಾದ, ಆಕಾಶ, ವಾಯು, ಅಗ್ನಿ ಜಲ, ಪೃಥ್ವಿ ಇವು ಕ್ರಮವಾಗಿ ಸಂಬಂಧಿಸಿರ್ಪವೆಂದೂ, ಆಕಾಶ ತತ್ವವು ಶಬ್ದ ಗುಣ ಒಂದು ಕ್ರಿಯೆಯುಳ್ಳದ್ದೆಂದೂ, ವಾಯು ತತ್ವವು ಶಬ್ದ ಸ್ಪರ್ಶ ಎರಡು ಕ್ರಿಯೆಗಳುಳ್ಳದ್ದೆಂದೂ, ಅಗ್ನಿ ತತ್ವವು ಶಬ್ದ, ಸ್ಪರ್ಶ, ರೂಪು, ಮೂರು ಕ್ರಿಯೆ ಉಳ್ಳದೆಂದೂ, ಜಲ ತತ್ವ ಶಬ್ಧ, ಸ್ಪರ್ಶ, ರೂಪ, ರಸ ನಾಲ್ಕು ಕ್ರಿಯೆಗಳುಳ್ಳದ್ದೆಂದೂ, ಪೃಥ್ವಿ ತತ್ವವು ಶಬ್ದ, ಸ್ಪರ್ಶ, ರೂಪು, ರಸ, ಗಂಧವೆಂಬ ಪಂಚಗುಣ ಕ್ರಿಯೆಯುಳ್ಳದ್ದೆಂದೂ, ಒಂದೊಂದು ಕ್ರಿಯೆಗಳಲ್ಲಿ ಪಂಚಗುಣಗಳು ಸಂಬಂಧಿಸಿರ್ಪುದರಿಂದಾ ಪಂಚಭೂತಂಗಳ ಗುಣಗಳೂ ಸೇರಿ ಎಪ್ಪತ್ತೆ ೈದು ಗುಣಗಳೆಂದರಿವುದು. ಇಂತು ಪಂಚಭೂತಂಗಳ ಶರೀರದಿಂ ತೋರ್ಪ ಇಪ್ಪತ್ತೈದು ತತ್ವ, ಎಪ್ಪತ್ತೈದು ಗುಣ ಕ್ರಿಯೆಗಳು ತಾನಲ್ಲ. ಕರ್ಮೇಂದ್ರಿಯ ಜ್ಞಾನೇಂದ್ರಿಯ, ವಿಷಯೇಂದ್ರಿಯ, ಪವನೇಂದ್ರಿಯ, ಕರಣೇಂದ್ರಿಯಗಳು ತಾನಲ್ಲ. ದಶನಾಡಿಗಳು, ದಶವಾಯುಗಳು, ತಾನಲ್ಲ. ಅಷ್ಟಾತ್ಮಕಂಗಳು, ಅಷ್ಟ ತನುಗಳು, ಅಷ್ಟ ಮದಂಗಳು, ಅಂತರಂಗದಷ್ಟಮದಂಗಳು, ಅಷ್ಟಮೂರ್ತಿಮದಂಗಳು, ತಾನಲ್ಲ; ಸಪ್ತ ವ್ಯಸನ ಸಪ್ತ ಧಾತುಗಳು ತಾನಲ್ಲ; ಷಡೂರ್ಮಿ, ಷಡ್ಭಾವ ವಿಕಾರಗಳು, ಅರಿಷಡ್ ವರ್ಗಂಗಳು, ಷಡ್ ಭ್ರಮೆಗಳೂ ತಾನಲ್ಲ. ಪಂಚಾಗ್ನಿ, ಪಂಚಕೋಶ ಪಂಚಕ್ಲೇಶಗಳೂ ತಾನಲ್ಲ. ಚತುಃಕರಣ, ಅಂಗಚತುಷ್ಟಯಂಗಳು ತಾನಲ್ಲ, ಗುಣತ್ರಯ, ಜೀವತ್ರಯ, ಮಲತ್ರಯ, ಕರ್ಮತ್ರಯ, ಅವಸ್ಥಾತ್ರಯ ಇಹಲೋಕದ ತಾಪತ್ರಯ, ಸ್ವರ್ಗ ಲೋಕದ ತಾಪತ್ರಯ, ಆತ್ಮತ್ರಯ, ದೋಷತ್ರಯ, ದುರ್ಭಾವ ತ್ರಯ, ಸದ್ಭಾವತ್ರಯ, ಈಷಣತ್ರಯ, ಮನತ್ರಯ, ಕರಣತ್ರಯ, ಇನ್ನು ಮುಂತಾದುವುಗಳ್ಯಾವವು ತಾನಲ್ಲ. ಪ್ರಕೃತಿಯಿಂ ಪಂಚಭೂತಂಗಳೂ ಸಂಬಂಧಿಸಿರ್ಪವೆಂದರಿದು ತಾನು ಪ್ರಕೃತಿಗೆ ಅತೀತವಪ್ಪ, ಸ್ವಯ ಜ್ಞಾನ ಸ್ವರೂಪನಾದ ಪರಮ ತೇಜೋ ಮೂರ್ತಿಯಪ್ಪ ಸತ್ಯ ಶುದ್ಧ ನಿಷ್ಕಳಾತೀತ ಮಹಾಲಿಂಗವೆಂದರಿವುದೇ ಪಿಂಡಜ್ಞಾನವೆಂದರು ಹಿದಿರಯ್ಯಾ ಶ್ರೀ ಮತ್ತ್ಯಾನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ-

ಆಕಾಶಕ್ಕೆ : ಶಬ್ದ ಒಂದೇ ಗುಣ ಶಬ್ದ ಗುಣ ಸಂಬಂಧವಾದ ರಾಗ, ದ್ವೇಷ, ಭಯ, ಲಜ್ಜೆ, ಮೋಹ ಈ ಐದು ಗುಣಗಳು.

ವಾಯುವಿಗೆ : ಶಬ್ದ, ಸ್ಪರ್ಶ, ಎರಡು ಗುಣ. ಆಕಾಶದ ಸಂಬಂಧವಾದ ರಾಗಾದಿ ಐದು ಗುಣಗಳು ಸ್ಪರ್ಶ ಗುಣವಿದ್ದಲ್ಲಿ ಸ್ಪರ್ಶಗುಣ ಸಂಬಂಧವಾದ ಪರಿವ, ಪಾರುವ, ಕೂಡುವ, ಅಗಲುವ ವಿಯೋಗಿಸುವ ಈ ಹತ್ತು ಗುಣಗಳು.

ಅಗ್ನಿಗೆ : ರೂಪು ಗುಣ, ಶಬ್ದ ಸ್ಪರ್ಶ ರೂಪು ಮೂರು ಗುಣಗಳು. ಶಬ್ದ ಗುಣವಿದ್ದಲ್ಲಿ ಶಬ್ದ ಗುಣ ಸಂಬಂಧವಾದ ರಾಗಾದಿ ಐದು ಗುಣಗಳು, ಸ್ಪರ್ಶ ಗುಣ ಸಂಬಂಧವಾದ ಪರಿವಾದಿ ಐದು ಗುಣಗಳು. ರೂಪು ಗುಣವಿದ್ದಲ್ಲಿ ಹಸಿವು, ತೃಷೆ, ನಿದ್ರೆ, ಆಲಸ್ಯ, ಸಂಗ ಎಂಬ ಐದು ಗುಣಗಳುಂಟು ಅಂತು ಹದಿನೈದು ಗುಣಂಗಳು.

ಜಲಕ್ಕೆ : ರಸಗುಣ. ರಸಗುಣಕ್ಕೆ ಶಬ್ದ, ಸ್ಪರ್ಶ, ರೂಪು, ರಸಗುಣಂಗಳುಂಟು. ಶಬ್ದ ಗುಣ ಸಂಬಂಧವಾದ ರಾಗಾದೈದು ಗುಣಗಳು, ಸ್ಪರ್ಶ ಗುಣ ಸಂಬಂಧವಾದ ಪರಿವಾದಿ ಐದು ಗುಣಗಳು, ರೂಪು ಗುಣ ಸಂಬಂದವಾದ ಹಸಿವು, ತೃಷೆ ಮೊದಲಾದೈದು ಗುಣಗಳು, ಅಂತು

ಹದಿನೈದು ಗುಣಂಗಳು. ರೂಪು ಗುಣ ಸಂಬಂಧವಾದ ಹಸಿವು, ತೃಷೆ, ಸಂಗ, ನಿದ್ರೆ ಆಲಸ್ಯ ಮೊದಲಾದ ಐದು ಗುಣಂಗಳು. ರಸ ಗುಣ ಸಂಬಂಧವಾದ ರಕ್ತ, ಮೂತ್ರ, ಕಫ, ಪಿತ್ತ, ಶ್ಲೇಷ್ಮ, ಪುರುಷರಲ್ಲಿ ವೀರ್ಯ, ಹೆಣ್ಣು ಮಕ್ಕಳಲ್ಲಿ ರಜಸ್ಸು ಈ ಐದು ಗುಣ ಭೇದಗಳು. ಅಂತು ಇಪ್ಪತ್ತು ಗುಣಗಳು.

ಪೃಥ್ವಿಗೆ : ಶಬ್ದ, ಸ್ಪರ್ಶ, ರೂಪು, ರಸ, ಗಂಧ, ಎಂದು ಐದು ಗುಣಗಳು. ಶಬ್ದ ಗುಣ ಸಂಬಂಧವಾದ ರಾಗಾದಿ ಐದು ಗುಣಗಳು. ಸ್ಪರ್ಶ ಗುಣ ಸಂಬಂಧವಾದ ಪರಿವಾದಿ ಐದು ಗುಣಗಳು. ರೂಪು ಗುಣ ಸಂಬಂಧವಾದ ಕ್ಷುಧಾದಿ ಐದು ಗುಣಗಳು. ರಸಗುಣ ಸಂಬಂಧವಾದ ರಕ್ತಾದಿ ಐದು ಗುಣಗಳು. ಗಂಧಗುಣ ಸಂಬಂಧವಾದ ಅಸ್ತಿ, ಮಾಂಸ, ನರ, ಚರ್ಮ, ರೋಮ ಅಂತು ಇಪ್ಪತ್ತೈದು ಗುಣಗಳು ಎಲ್ಲವು ಸೇರಿ ಎಪ್ಪತ್ತೈದು ಗುಣಗಳು.

ಇಪ್ಪತ್ತೈದು ತತ್ವಗಳು

ಕರ್ಮೇಂದ್ರಿಯಗಳು : ವಾಕ್ಕು, ಪಾಣಿ, ಪಾದ, ಗುಹ್ಯ, ಗುದ.

ಜ್ಞಾನೇಂದ್ರಿಯಗಳು : ಶ್ರೋತ್ರ, ತ್ವಕ್ಕು, ನೇತ್ರ, ಜಿಹ್ವೆ ಘ್ರಾಣ.

ವಿಷಯೇಂದ್ರಿಯಗಳು : ಶಬ್ದ, ಸ್ಪರ್ಶ, ರೂಪು, ರಸ, ಗಂಧ, **ಪವನೇಂದ್ರಿಯ :** ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ.

ಕರಣಚತುಷ್ಟಯಗಳು : ಮನಸ್ಸು, ಅಹಂಕಾರ, ಬುದ್ದಿ, ಚಿತ್ತ ಹಾಗೂ ಜೀವನು ಒಂದು, ಅಂತು ಇಪ್ಪತ್ತೈದು ತತ್ವಗಳು.

ದಶನಾಡಿಗಳು : ಶ್ಲೋಕ : ಈಡಾಪಿಂಗಳೈಶ್ಚೈವ। ಸುಷುಮ್ನಾಚ ತೃತೀಯ ಕಂ। ಗಾಂಧಾರಿ, ಹಸ್ತಿಜಿಹ್ವಾಚ, ಪೂಷಶ್ಚೈವ ಪಯಶ್ವಿನಿ, ಅಲಂಬು, ಲಕುಹಶ್ಚೈವ ಶಂಕಿನಿ ದಶನಾಡಿಕಾ। ಎಂದೂ

ಈಡನಾಡಿಗಳು : ಎಡಗಡೆ ನಾಸಾರಂಧ್ರ, ಪಿಂಗಳನಾಡಿ= ಬಲಗಡೆ ನಾಸಾರಂಧ್ರ

ಸುಷುಮ್ನನಾಡಿಗಳು : ಈಡಾ ಪಿಂಗಳೆಗೆ ಮಧ್ಯದ ಊರ್ಧ್ವಗಾಮಿಯಾದ ಪಶ್ಚಿಮನಾಸಾರಂಧ್ರ

ಗಾಂಧಾರಿನಾಡಿ : ಬಲದ ನೇತ್ರ, ಹಸ್ತಿ ಜಿಹ್ವೆ ನಾಡಿ=ಎಡದ ನೇತ್ರ.

ಪೂಷನಾಡಿ : ಬಲದ ಕರ್ಣ.

ಪಯಶ್ವಿನಿನಾಡಿ : ಎಡದ ಕರ್ಣ.

ಲಕುಹನಾಡಿ : ಗುದನಾಳ.

ಅಲಂಬುನಾಡಿ : ಮೂತ್ರನಾಳ.

ಶಂಕಿನಿನಾಡಿ : ನಾಭಿನಾಳ, ಹೀಗೆ ಹತ್ತು ನಾಡಿಗಳು.

ಪಂಚಭೂತಗಳ ತನುವಿನ ಗುಣಕ್ರಿಯೆಗಳ ಮರವೆಯ ಕಳೆಯಯ್ಯಾ, ಸ್ವಯಂ ಪ್ರಕಾಶದ ನಿಜದರಿವಿನ ಜ್ಞಾನದಿಂ ನಡೆಸಯ್ಯಾ ನಿನ್ನ ನಿಜದ ನಿರಾಕಾರ ಸಾಕಾರದ ಮಹಾಲಿಂಗವೇ ತಾನೆಂಬ ಜ್ಞಾನವ ಕರುಣಿಸಯ್ಯಾ ಶ್ರೀ ಮತ್ಸೂನ್ಯ ಸಿಂಹಸನಾಧೀಶ್ವರ ನಿರಂಜನ ಸಂಗಮನಾಥಾ.

ಪಂಚ ಭೂತಂಗಳ ಪಂಚ ವಿಂಶತಿ ತತ್ವಾತ್ಮಕವಾದ ಜಡ ಶರೀರದಲ್ಲಿ ಪರಮ ಜ್ಞಾನ ಸ್ವರೂಪವಾದ ಮಹಾಲಿಂಗದ ಚಿದಂಶಿಯಾದ ಆತ್ಮನು ದೇಹೋಹಂ ಎಂದು ಸ್ವಸ್ವರೂಪಮಂ ಮರೆದಿರ್ಪನು ನೋಡಯ್ಯಾ. ಜೀವನಿಗೆ ಕರ್ಮ ವಿಪಾಕದಿಂದ ಜ್ಞಾನತಲೆದೋರೆ ನಾನೆಲ್ಲಿಂದ ಬಂದೆ ಎನಗೀ ದೇಹ ಬಂದ ಪರಿಯಾವುದು, ಎಂದು ವಿವೇಚಿಸಿದಲ್ಲಿ ತನ್ನ ಮೂಲಸ್ವರೂಪವು, ನಿರಾಲಂಬ ಬ್ರಹ್ಮವೆಂದು, ನಿರಾಲಂಬ ಬ್ರಹ್ಮದಿಂದ ನಿಶ್ಶೂನ್ಯಲಿಂಗವು, ನಿಶೂನ್ಯಲಿಂಗದಿಂ ನಿಃಕಲಲಿಂಗವು, ನಿಃಕಲ ಬ್ರಹ್ಮದಿಂದ ಮೂಲ ಚಿತ್ತು, ಚಿತ್ತಿನಿಂದ ಚಿನ್ನಾದ, ಚಿದ್ಬಿಂದು ಚಿತ್ಕಲೆಗಳು. ಚಿನ್ನಾದ, ಚಿದ್ಬಿಂದು ಚಿತ್ಕಲೆಯಿಂ ನಾದ, ಬಿಂದು, ಕಲೆಗಳು. ನಾದ ಬಿಂದು ಕಲೆಯಿಂ ಮೂಲ ಚಿತ್ತೆಂಬ ಚತುರ್ವಿಧವು, ಗಟ್ಟಿಗೊಂಡು ಅಖಂಡ ಗೋಳಕಾಕಾರ ತೇಜೋಮೂರ್ತಿಯಾದ ಜ್ಞಾನ ಸ್ವರೂಪವಾದ ಮಹಾಲಿಂಗ. ಮಹಾಲಿಂಗವೇ ಮಹಾಸಾದಾಖ್ಯವು. ಮಹಾಸಾದಾಖ್ಯದಿಂ ಪಂಚಸಾದಾಖ್ಯಗಳು ಪಂಚಸಾದಾಖ್ಯಗಳೇ ಪಂಚಲಿಂಗ ಪ್ರಕಾಶಗಳೆಂದೆನಿಸಿ. ಪಂಚಲಿಂಗ ಪ್ರಕಾಶಗಳೇ ಪಂಚ ಆಕೃತಿಗಳೆಂದೆನಿಸಿ, ಪಂಚ ಆಕೃತಿಗಳಿಂ, ಪಂಚಾಕ್ಷರಗಳುದಯಿಸಿ ಪಂಚಾಕ್ಷರಗಳಿಂದ ಪಂಚಕಲೆಗಳುದಯಿಸಿ, ಪಂಚಕಲೆಗಳಿಂ ಪಂಚಶಕ್ತಿಗಳುದಯಿಸಿ, ಪಂಚ ಶಕ್ತಿಗಳಿಂ ಪಂಚಕರಣ ಗಳುದಯಿಸಿ ಪಂಚಕರಣಗಳಿಂ ಪಂಚ ತನ್ಮಾತ್ರೆಗಳುದಯಿಸಿ, ಪಂಚತನ್ಮಾತ್ರೆಗಳಿಂ ಪಂಚಭೂತಗಳುದಯಿಸಿ, ಪಂಚಭೂತಗಳೇ ಪಂಚ ವಿಭಾಗವಾಗಿ ವಿಭಜಿಸಿ ಸೇರಿ, ಪಂಚವಿಂಶತಿ ತತ್ವಾತ್ಮಕವಾದ ಶರೀರವಾಗಿದೆಯೆಂದು, ಶರೀರವು ಜಡವೆಂದು ಆತ್ಮನ ಚೇತನದಿಂದಾ ವ್ಯವಹರಿಸುವುದೆಂದು, ಆತ್ಮನು ತನ್ನ ಮೂಲ ಸ್ವರೂಪ ಜ್ಞಾನವನ್ನು ಮರೆತು, ಶರೀರದ ನಾಮ, ರೂಪು, ಕ್ರಿಯೆ, ಗುಣಗಳು, ತನ್ನವೆಂದು ಭಾವಿಸಿ ವ್ಯವಹರಿಸುವುದರಿಂದಾ, ಎಂಭತ್ನಾಲ್ಕು ಲಕ್ಷ ಜೀವಿಗಳಲ್ಲಿ ಬರುವನೆಂದು ಅರಿದು, ಈ ಭವಬಂಧದ ಬಿಡುಗಡೆಗೆ ಗುರೂಪಾವಸ್ಥೆಯನ್ನು ಹೊಂದಿ ಪರ ಶಿವ ಸ್ವರೂಪನಾದ ಶ್ರೀ ಗುರುವು ಕ್ರಿಯಾ ದೀಕ್ಷೆಯಿಂ ತನುವಂ ಶುದ್ಧಂಗೈದು ಇಷ್ಟಲಿಂಗ ರೂಪಾತ್ಮಕವಾದ ಶಿವಲಿಂಗವಂ ತನುವಿನ ಮೇಲೆ ಸ್ಥಾಪಿಸಿ, ಮಂತ್ರ ದೀಕ್ಷೆಯಿಂ ಮನಸ್ಸಿಗೆ ಅನವರತವೂ ನೆನೆವುದಕ್ಕೆ ಶ್ರೋತ್ರದ್ವಾರಾ ಮಂತ್ರವನ್ನುಪದೇಶಿಸಲು ಭಾವಕ್ಕೆ ಮಹಾಲಿಂಗ ಸ್ವರೂಪ ನೀನೆಂದು ಅಭಯ ಹಸ್ತವನ್ನಿರಿಸಿ ಕೃಪೆಗೈಯಲು ತನುವಿಗೆ ಲಿಂಗ ಸಂಸ್ಕಾರದಿಂದ ತನುವಿನ ಕ್ರಿಯೆಗಳು ಶುದ್ಧವಾಗಿ, ಲಿಂಗದ ಕ್ರಿಯೆಗಳಾಗಿ ಅಳವಡಲು ಶ್ರೋತ್ರದಲ್ಲಿ ಉಪದೇಶಿಸಿದ ಮಂತ್ರವು ಜಿಹ್ವೆಯಲ್ಲಂಕುರಿಸಿ ಮನದಲ್ಲಿ ನೆನಹು ನೆಲೆಗೊಳ್ಳಲು ಹಸ್ತ ಮಸ್ತಕ ಸಂಯೋಗದಿಂದಾ ಮಹಾಲಿಂಗ ತಾನೆಂಬ ಭಾವ ಅಳವಡಲು ಶರೀರವೆಲ್ಲಾ ಮಂತ್ರಮಯಾಗಿ

ಶ್ಲೋಕ : ಮಂತ್ರ ಮಧ್ಯದ್ಭವೇತ್ ಲಿಂಗಂ। ಲಿಂಗ ಮಧ್ಯದ್ಭವೇನ್ಮಂತ್ರಂ॥

ಮಂತ್ರ ಲಿಂಗದ್ವಯೋರೈಕ್ಯಂ ಇಷ್ಟಲಿಂಗ॥ ಎಂಬುದಾಗಿ ಪಂಚತತ್ವಂಗಳೆಲ್ಲವೂ ಮಂತ್ರಮಯವಾಗಲು ಪಂಚವಿಂಶತಿ ತತ್ವಂಗಳೆಲ್ಲವು ಮಂತ್ರದಿಂದ ಲಿಂಗ ತತ್ವಗಳಾಗಿ ಭಕ್ತಿಮುಖವಾಗಿ ಅಳವಡಲು ಪಂಚಕರಣಂಗಳೇ ಭಾವಲಿಂಗದ ಹಸ್ತಗಳಾಗಿ, ಪಂಚ ಪ್ರಾಣಗಳೇ ಲಿಂಗ ಪ್ರಾಣಗಳಾಗಿ, ಪಂಚಜ್ಞಾನೇಂದ್ರಿಯಗಳೇ ಪ್ರಾಣಲಿಂಗದ ಮುಖಗಳಾಗಿ ಅಳವಟ್ಟು ಪಂಚಕರ್ಮೇಂದ್ರಿಯಗಳೇ ಇಷ್ಟಲಿಂಗದ ಕಾಲುಗಳಾಗಿ, ಪಂಚ ವಿಷಯಂಗಳೇ ಪ್ರಸಾದವಾಗಿ,

ಅಷ್ಟವಿಧ ಸಕೀಲಗಳಿಂದ ಅರ್ಪಣವಾಗಲು, ಪಂಚವಿಂಶತೀ ತತ್ವಂಗಳು, ಪಂಚಭೂತಗಳು, ಪಂಚತನ್ಮಾತ್ರೆಗಳು, ಪಂಚಕರಣಗಳು, ಪಂಚಶಕ್ತಿಗಳು, ಪಂಚಕಲೆಗಳು, ಪಂಚಾಕ್ಷರಗಳು, ಪಂಚ ಆಕೃತಿಗಳು, ಪಂಚಲಿಂಗ ಪ್ರಕಾಶಗಳಾಗಿ ಸಾದಾಖ್ಯಗಳಾಗಿ ಸರ್ವವೂ ಲಿಂಗಮಯವಾಗಿ ಮಹಾಲಿಂಗವಾಗಿ ಸಮರಸವಾಗಲು ಮಹಾಲಿಂಗವೇ ತಾನೆಂದರಿವುದೇ ಪಿಂಡಜ್ಞಾನವೆಂದರು ಓದಿರಯ್ಯಾ ಶ್ರೀ ಮತ್ತ್ಯೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ಆತ್ಮನಿಗೆ ಪ್ರಕೃತಿಯ ಸಂಗದಿಂದ ಕಿಂಚಿಜ್ಞನಾಗಿ ಪಂಚಭೂತಂಗಳು ಸಂಬಂಧಿಸಿ ಪಂಚ ಭೂತಯುಕ್ತವಾದ ದೇಹವೇ ತಾನೆಂದು ಬಗೆದಿರ್ಪನಯ್ಯಾ, ದೇಹಕ್ಕೆ ಉಪಯುಕ್ತವಾದ, ವಸ್ತುಗಳು, ಸಾಧನಗಳೇ ತಾನೆಂದು ಬಗೆವನಯ್ಯಾ, ಹೊಲ, ಮನೆ, ಧನ, ವಸ್ತುಗಳು, ತನ್ನವೆಂದು ತಿಳಿದಿರುವೆಯಯ್ಯಾ. ಅವುನಿನ್ನವುಗಳಲ್ಲಾ, ವಿಚಾರಿಸಿ ನೋಡಯ್ಯಾ. ಕರ್ಮೇಂದ್ರಿಯ ಜ್ಞಾನೇಂದ್ರಿಯ ವಿಷಯೇಂದ್ರಿಯ, ಪವನೇಂದ್ರಿಯ, ಕರಣೇಂದ್ರಿಯಗಳಿಂದೊಡಗೂಡಿದ ತನುವೇ ತಾನೆಂದು ನಂಬಿರುವೆಯಯ್ಯಾ. ಇಂದ್ರಿಯಗಳಾವುವು ನೀನಲ್ಲಾ, ಸರ್ವ ಇಂದ್ರಿಯಗಳೆಲ್ಲವನ್ನು ಚೇಷ್ಟಿಸುವಾತನು ತಾನೆಂದು ತಾನೇ ಸತ್, ಚಿತ್, ಆನಂದ, ನಿತ್ಯನಾದ ಪರಮಾತ್ಮ (ಲಿಂಗ) ಚೇತನವೆಂದು, ಪಂಚ ವಿಂಶಾತ್ಮಕವಾದ ತನುವನ್ನು ಲಿಂಗಕ್ಕರ್ಪಿಸಿ ಪರಮಾತ್ಮನ (ಲಿಂಗ) ಚೇತನದಿಂದಾ ವ್ಯವಹರಿಸುವುದೆಂದೆಯಯ್ಯಾ ಶ್ರೀ ಮತ್ತ್ಯೂನ್ಯ ಸಿಂಹಸನಾಧೀಶ್ವರ ನಿರಂಜನ ಸಂಗಮನಾಥಾ.

ಮಾಯಾ ವಿಲಾಸ ವಿಡಂಬನ ಸ್ಥಲ

ಇಂತು ಸಮ್ಯಗ್ ಜ್ಞಾನೋದಯವಾದ ಮಹಂತನು ಪೂರ್ವಾಪರಬಂಧಕ್ಕೆ ಕಾರಣವಾದುದು, ಮಾಯಾ ಪ್ರಭಾವವೆಂದರಿದು ಮಾಯಾ ರೂಪದಲ್ಲಿ ತೋರುವ ಸಂಸ್ಕೃತಿ ಭ್ರಾಂತಿಯಿಂ ನಿರಸನವಂ ಮಾಡಲು ಸಂಸಾರ ಹೇಯ ಸ್ಥಲದೊಳಗೆ ಮಾಯಾ ವಿಲಾಸ ವಿಡಂಬನ ಸ್ಥಲವೆಂದು ನುಡಿದ ವಚನಗಳು :

ಅಡವಿಯೊಳು ಹುಲ್ಲು ಮೇಯಲು ಹುಲ್ಲೆ ಹವಣಿಸುತ್ತಿದೆ, ಹುಲ್ಲು ಮೇದು ಮೇದು, ಹುಲ್ಲೆ ತಣಿಯದಯ್ಯಾ ತೃಪ್ತಿಯಾಗದೆ, ಕ್ಷುಧಾಗ್ನಿ ಈರೇಳುಲೋಕವ ನುಂಗಿತ್ತು. ಹುಲ್ಲೆಯೇ ಹುಲಿಯಾಗಿ ನುಂಗುತ್ತಿದೆ. ಶಿವ ಶಿವಾ ಹುಲಿಯನ್ನು ಕೊಂದು ಹುಲ್ಲೆಗೆ ಮಹಾಲಿಂಗದ ಸಂಗವ ಮಾಡಿ ರಕ್ಷಿಸಯ್ಯಾ ಶ್ರೀ ಮತ್ತ್ಯೂನ್ಯಸಿಂಹಸನಾಧೀಶ್ವರ ನಿರಂಜನ ಸಂಗಮನಾಥಾ.

ಸಂಕ್ಷಿಪ್ತ ಭಾವಾರ್ಥ: ಪ್ರಕೃತಿಗೆ ವಶನಾದ ಜೀವನೆಂಬ ಹುಲ್ಲೆಯ ಭವರಾಟಳವೆಂಬ ಅಡವಿಯಲ್ಲಿ ಪಂಚೇಂದ್ರಿಯ ಮುಖಾಂತರ ಪಂಚವಿಷಯಗಳೆಂಬ ಹುಲ್ಲನ್ನು ತಿನ್ನುತ್ತಾ ಸುಖಿಪೆನೆಂದು ಪ್ರಯತ್ನ ಮಾಡುತ್ತಾ, ಅಂದರೆ ಪಂಚವಿಷಯಗಳಿಂದ ಸುಖವೆಂದು ನಂಬಿ ಪ್ರಯತ್ನ ಮಾಡುತ್ತಾ ಹೋಗುತ್ತದೆ. ತನುಗುಣದಿಂದ ಜೀವನೆಂಬ ಹುಲ್ಲೆ ಪಂಚವಿಷಯಗಳಿಂದೊದಗಿದ ಸುಖವೆಂದು ನಂಬಿ, ಪಂಚವಿಷಯಗಳಿಂದೊದಗಿದ ಸುಖವು ಎಷ್ಟು ಒದಗಿದರೂ ಜೀವನಿಗೆ ತೃಪ್ತಿಯಾಗದಯ್ಯಾ. ನಿಜವಾದ ತೃಪ್ತಿಯಾಗದೇ ವಿಷಯಗಳ ದಾಹವು (ಬಯಕೆಯು) ಜಾಸ್ತಿಯಾಗಿ ಎಷ್ಟು ಒದಗಿದರೂ ಹದಿನಾಲ್ಕು ಲೋಕವನ್ನೆಲ್ಲಾ ಕಂಗೆಡಿಸಿ ಆ ದಾಹಕ್ಕೆ ಸಿಕ್ಕಿ ಹೋಗುತ್ತಿಹುದು; ಅಹಂಕಾರಕ್ಕೆ ವಶವಾಗಿ ತಿರುಗುತ್ತಾ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳೆಂಬ ಹುಲಿಗೆ ವಶವಾಗಿ ತಿರುಗುತ್ತಿರ್ಪಲ್ಲಿ ಅನೇಕ ಜನ್ಮದ ಪುಣ್ಯದಿಂದಾ ಶ್ರೀ ಗುರುವು ಪ್ರಾಪ್ತವಾಗಲು, ಶ್ರೀ ಗುರುವು ದೀಕ್ಷೆಯನ್ನು ಮಾಡಿ ಕ್ರಿಯಾಲಿಂಗವನ್ನು ಸಂಬಂಧಿಸಿ ಇಂದಿನಿಂದ ನೀನು ಜೀವನಲ್ಲ

ಈ ಲಿಂಗ ಸ್ವರೂಪವೇ ನೀನೆಂದು ಲಿಂಗ ಕ್ರಿಯಾಚಾರಗಳನ್ನು ಪಾಲಿಸೆಂದು ತಿಳಿಸಲು, ಸದ್‌ಭಕ್ತಿ ಕ್ರಿಯೆಯಿಂದ ಲಿಂಗದಾಚರಣೆಯಿಂದಾ ವಿಷಯಂಗಳು ಪ್ರಸಾದವಾಗಿ ಮಾರ್ಪಟ್ಟು ಅರಿಷಡ್‌ವರ್ಗವೆಂಬ ಹುಲಿಯು ನಾಶವಾಗಲು, ಮಹಾಲಿಂಗ ಸ್ವರೂಪನಾಗಿ ನಿತ್ಯ ಸುಖವನ್ನು ಪಡೆಯುವನೆಂದು ತಿಳಿದು ಕೊಂಬುದು ತತ್ವಜ್ಞಾನಿಗಳು.

ಗ್ರಾಮದೊಳು ಕಡವರದ ನಿಧಿಯ ಕದಿಯಲು ಏಕದಶ ಕಳ್ಳರು ಕಾದಿರ್ಪರಯ್ಯಾ, ನಿಧಿಯ ಕದ್ದು ಬಯಲ ಪರ್ವತವ ಕೂಡಿಟ್ಟು ಸುಖಿಪೆನೆಂದು ಬಂಧನದಲ್ಲಿ ತಿರುಗತಿರ್ಪರು ನೋಡಯ್ಯಾ ಕಾವಲುಗಾರನ ಮೊರೆಹೊಗಲು ಕಾವಲುಗಾರನೊಂದು ರತ್ನವ ಸಂಬಂಧಿಸಲು ಒಂದು ಮೂರಾಗಲು ರತ್ನ ಪ್ರಕಾಶದಲ್ಲಿ ಕಳ್ಳರು ಶಿಷ್ಯರಾಗಿ ಸೇವೆಯ ಮಾಡಲು ಬಂಧನ ಬಿಟ್ಟೋಡಿ ಸುಖಿಸುವೆನಂದೆಯಯ್ಯಾ ಶ್ರೀ ಮತ್ತ್ಯೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ಸಂಕ್ಷಿಪ್ತ ಭಾವಾರ್ಥ : ಪಂಚಭೂತ ಸಮ್ಮಿಶ್ರವಾದ ಶರೀರವೆಂಬ ಗ್ರಾಮದಲ್ಲಿ ಸ್ವಸ್ವರೂಪ ಜ್ಞಾನವೆಂಬ ಸಂಪತ್ತು ಇದೆ. ಪ್ರಕೃತಿಗೆ ವಶವಾದ ಮನುಷ್ಯರು ಶರೀರವೇ ನಾನೆಂದು ಕರ್ಮೆಂದ್ರೀಯಗಳಾದ ವಾಕ್ಕು, ಪಾಣಿ, ಪಾದ, ಗುಹ್ಯ ಗುದಗಳಿಂದಲೂ, ಶ್ರೋತ್ರ, ತ್ವಕ್ಕು, ನೇತ್ರ, ಜಿಹ್ವೆ, ಘ್ರಾಣಗಳೆಂಬ ಜ್ಞಾನೇಂದ್ರಿಯಗಳು, ಮನಸ್ಸಿಗೆ ವಶವಾಗಿ, ಏಕದಶ ಇಂದ್ರಿಯಗಳ ದ್ವಾರ, ತನ್ನ ನಿಜಸ್ವರೂಪವನ್ನು ಮರೆಯಿಸಿ, ತನುಗುಣಗಳಿಂದ ಇಂದ್ರಿಯಗಳಿಂದೊದಗಿದ ಸುಖವೇ ಶಾಶ್ವತವೆಂದು ನಂಬಿ, ಭವವೆಂಬ ಅಡವಿಯಲ್ಲಿ ತಿರುಗುತ್ತಾ ಇರುವ ಕಾಲದಲ್ಲಿ ಅನೇಕ ಜನ್ಮದ ಪುಣ್ಯದಿಂದಾ, ಧರ್ಮರಕ್ಷಣೆ ಮಾಡುವ ಶ್ರೀ ಗುರುವಂ ಮೊರೆ ಹೊಗಲು ಶ್ರೀ ಗುರುವು ದೀಕ್ಷೆಯಂ ಮಾಡಿ ಚಿಲ್ಲಿಂಗವನ್ನು ಕೊಟ್ಟು ಇಂದಿನಿಂದ ನೀನು ಲಿಂಗ ಸ್ವರೂಪನು ಸಾಕ್ಷಾತ್ ಪರಮಾತ್ಮ ಸ್ವರೂಪನು, ಶರೀರವು ಲಿಂಗಯ್ಯನದು ಎಂದು ಇಷ್ಟಲಿಂಗವನ್ನು ಸಂಬಂಧಿಸಿ, ಲಿಂಗದ ವ್ರತಗಳನ್ನು ಪಾಲಿಸಲು ತಿಳಿಸಲು ಗುರುತೋರಿಸಿದ ಲಿಂಗವು ಮಂತ್ರದ ನೆನಹಿನಿಂದಾ ಪ್ರಾಣಲಿಂಗವಾಗಿ ಭಾವದಲ್ಲಿ ಭಾವಲಿಂಗವಾಗಿ ಅಳವಟ್ಟು, ಹನ್ನೊಂದು ಇಂದ್ರಿಯುಗಳೆಲ್ಲವು ಲಿಂಗದ ಇಂದ್ರಿಯಗಳಾಗಿ, ಲಿಂಗದ ದಿವ್ಯ ಪ್ರಕಾಶದಲ್ಲಿ ಆಚರಿಸುತ್ತಾ ಲಿಂಗಾಂಗ ಸಾಮರಸ್ಯವನ್ನು ಪಡೆದು ನಿತ್ಯಸುಖವನ್ನು ಪಡೆವೆನೆಂದು ತಿಳಿದುಕೊಂಬುದು ತತ್ವಜ್ಞಾನಿಗಳು.

ಮೂರು ಗೂಡಿನ ಹಕ್ಕಿಗೆ ವಿವಿಧ ಬಣ್ಣದ ವೇಶ್ಯೆ ಬಂದು ಕವಿದಿರ್ಪಳು ನೋಡಯ್ಯಾ, ವೇಶ್ಯೆಗೆ ಒಳಗಾದವರ ಭಂಗವನು ಏನೆಂದು ಹೇಳುವೆನಯ್ಯಾ? ಕಣ್ಣು, ಕಾಲುಳ್ಳವನಿಂದಾ ಅಗ್ನಿ ಸಂಬಂಧಿಸಲು ಗೂಡೆಲ್ಲಾ ಅಗ್ನಿಮಯವಾಗಲು ವೇಶ್ಯೆ ಬಂದು ದಾಸಿಯಾಗಿ ಕಣ್ಣು ಕಾಲಿನಿಂದ ಸೇವೆ ಮಾಡಲು ಸುಖಿಪೆಯಯ್ಯಾ ಶ್ರೀ ಮತ್ತ್ಯೂನ್ಯಸಿಂಹಾನಾಧೀಶ್ವರ ನಿರಂಜನ ಸಂಗಮನಾಥಾ.

ಸಂಕ್ಷಿಪ್ತ ಭಾವಾರ್ಥ:- ಸ್ಥೂಲ, ಸೂಕ್ಷ್ಮ, ಕಾರಣವೆಂಬ ಮೂರು ಶರೀರದಲ್ಲಿ ಜೀವನೆಂಬ ಪಕ್ಷಿಯು ಇಚ್ಛಾಶಕ್ತಿಯೆಂಬ ವೇಶ್ಯೆಗೆ ವಶವಾಗಿ ಆಚರಿಸುತ್ತಾ ವ್ಯವಹರಿಸಿರ್ಪರು. ಇಚ್ಛಾ ಶಕ್ತಿಗೆ ವಶವಾದವರು ಯತಿಗಳಾಗಲಿ, ಸ್ವಾಧ್ಯಾಯಿಗಳಾಗಲಿ, ಸರ್ವವಿದ್ಯಾ ಕಲಾವಂತರಾಗಲಿ ಹೊನ್ನು, ಹೆಣ್ಣು, ಮಣ್ಣು ಕೀರ್ತಿವಾರ್ತೆ ಆಡಂಬರಗಳಿಗೆ ಒಳಗಾಗಿ ತನ್ನ ಸ್ವರೂಪವನ್ನು ಮರೆತು 84 ಲಕ್ಷ ಜೀವ ರಾಶಿಗಳಲ್ಲಿ ತಿರುಗಿ ಹುಟ್ಟುತ್ತಾ ಸಾಯುತ್ತಾ ಹೋಗುವರು. ಅನೇಕ ಜನ್ಮದ ಪುಣ್ಯದಿಂದಾ ಪರಮಾತ್ಮಜ್ಞಾನ, ಪರಮಾತ್ಮನ ಕ್ರಿಯೆಯನ್ನು ಹಿಂದಿನದನ್ನು ಸೇರಿಸಿ ಆಚರಿಸುವಂತೆ ಶ್ರೀ ಗುರುವಂ ಮೊರೆಹೋಗಲು ಶ್ರೀ ಗುರುವು ದೀಕ್ಷೆಯಿಂದ ಚಿದಗ್ನಿ ಸ್ವರೂಪವಾದ ಚಿಲ್ಲಿಂಗವನ್ನು ಸಂಬಂಧಿಸಲು

ಲಿಂಗವು ಮಂತ್ರದ್ವಾರ ಮನವನ್ನಾವರಿಸಿ ಮನದಲ್ಲಿ ಲಿಂಗ ಕಳೆ ಸ್ಥಾಪಿತವಾಗಿ ಇಚ್ಛಾ ಶಕ್ತಿಯು ಭಕ್ತಿಮುಖವಾಗಿ ಲಿಂಗದ ಮನವು ಲಿಂಗದ ಚಿಜ್ಞಾನವಾಗಿ ನೆಲೆಗೊಂಡು, ಅಂಗದಲ್ಲಿ ಸ್ವಸ್ವರೂಪದ ಇಚ್ಛಾ ಶಕ್ತಿಯಾಗಿ ಲಿಂಗದ ಸತ್ಕ್ರಿಯೆಯ ಆಚರಣೆಗಳು ಅಳವಡಲು ಸರ್ವಾಂಗದಲ್ಲಿ ಲಿಂಗ ಕಳೆ ವೇಧಿಸಿ ತನು, ಮನ, ಭಾವಂಗಳು ಲಿಂಗದ ನಿಬ್ಬೆರಗಿನಲ್ಲಿ ಲಿಂಗಪ್ರಕಾಶದಲ್ಲಿ ಲಿಂಗಾಂಗ ಸಾಮರಸ್ಯವನ್ನು ಪಡೆದು, ನಿತ್ಯ ಸುಖವನ್ನು ಪಡೆಯುವೆನೆಂದು ತಿಳಿದುಕೊಂಬುದು ತತ್ವಜ್ಞಾನಿಗಳು.

ಮಾಯೆಯ ಹಾವಳಿಯನೇನೆಂಬೆನಯ್ಯಾ ಬಗೆಬಗೆಯ ಹೋರಾಟಕ್ಕೆ ಹಚ್ಚಿ ಭವದಲ್ಲಿ ಬರಿಸಿತ್ತು ಮಾಯೆ; ಯತಿಗಳೆಂಬವರ ವ್ರತಹೀನರ ಮಾಡಿತ್ತು ಮಾಯೆ; ಪೂಜ್ಯರೆಂಬವರ ವ್ಯಾಜ್ಯಕ್ಕೆ ನಿಲ್ಲಿಸಿತ್ತು ಮಾಯೆ; ವಿರತಿಯೆಂಬುವರ ಕೀರ್ತಿ ವಾರ್ತೆಗೆ ಗುರಿಮಾಡಿತ್ತು ಮಾಯೆ; ಗುರುಗಳೆಂಬುವರನ್ನು ಅರುಹು ಹೀನರನ್ನಾಗಿ ಮಾಡಿಸಿತ್ತು ಮಾಯೆ; ನಿನ್ನವರಲ್ಲದವರ ಕುನ್ನಿಗೆ ಸರಿಮಾಡಿತ್ತು ಮಾಯೆ; ನಿನ್ನ ಕೃಪೆಯೊಂದನ್ನೇ ದಯಪಾಲಿಸಯ್ಯಾ ಶ್ರೀ ಮತ್ತೂನ್ಯ ಸಿಂಹಸನಾಧೀಶ್ವರ ನಿರಂಜನ ಸಂಗಮನಾಥಾ.

ಮಾಯಾ ಪ್ರಕೃತಿಗೆ ವಶವಾದ ಜೀವಿಗಳನೇನೆಂಬೆನಯ್ಯಾ; ಆಶಾಪಾಶ, ತೃಷಾಪಾಶಮಂ ತೊಡಿಸಿ ಕೆಡವಿತ್ತು ಮಾಯೆ; ಬಾಹ್ಯಾಡಂಬರದ ಅಂದ ಚಂದದೊಳಗೆ ಸಿಲ್ಕಿಸಿ ಬಳಲಿಸಿತ್ತು ಮಾಯೆ. ಕೀರ್ತಿವಾರ್ತೆಯ ಅಂದಮಂ ಕಣ್ಣು ಮನಕ್ಕೆ ತೋರಿ ಬೆರಗು ಮಾಡಿ, ಕುಣಿದಾಡಿಸಿತ್ತು ಮಾಯೆ. ಸಟೆಯನೆ ದಿಟವೆಂದು ಬಾಯಬಿಡಿಸಿತ್ತು ಮಾಯೆ; ಗುರು, ಲಿಂಗ, ಜಂಗಮ, ಭಕ್ತಿಯನ್ನರಿಯದನ್ನಕ್ಕ ಭವದಲ್ಲಿ ಕೆಡವಿತ್ತು ಮಾಯೆ; ಶ್ರೀ ಗುರು ಲಿಂಗ ಜಂಗಮ ಭಕ್ತಿಯ ತೋರಿ ಮಾಯೆಯ ಕಳೆಯಯ್ಯಾ ಶ್ರೀ ಮತ್ತೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ಮಾಯಾ ಪ್ರಕೃತಿಯು ಮಾಡಿದ ತೊಡಕನೇನೆಂಬೆನಯ್ಯಾ ನವಕೋಟಿ ಬ್ರಹ್ಮರಿಗೆ ಪ್ರಳಯವ ಮಾಡಿತ್ತು ಮಾಯೆ. ದಶಕೋಟಿ ನಾರಾಯಣರಿಗೆ ಭವ ಭವದಲ್ಲಿ ಬರಿಸಿತ್ತು ಮಾಯೆ. ಕೊಟ್ಯಾನು ಕೋಟಿ ರುದ್ರ ಈಶ್ವರ ಸದಾಶಿವರಿಗೆ ಪ್ರಳಯವ ಮಾಡಿತ್ತು ಮಾಯೆ. ಕೊಟ್ಯಾನು ಕೋಟಿ ಮನು ಮುನಿಗಳು, ಪ್ರಮಥಗಣ, ರುದ್ರಗಣ, ದೇವಗಣ, ನರರು ಸುರರು ಮೊದಲಾದ ದೇವಾನು ದೇವತೆಗಳ ಪ್ರಳಯಕ್ಕೊಳಗು ಮಾಡಿತ್ತು ಮಾಯೆ. ಕೀರ್ತಿ ವಾರ್ತೆಯವರುಗಳಂ ಸುತ್ತಿ ಸುತ್ತಿ ಕೆಡವಿಸಿತ್ತು ಮಾಯೆ. ಬಲ್ಲೆವೆಂಬ ಬಲುಗೈಯ್ಯರ ಹುಲ್ಲಿಂದ ಕಡೆಮಾಡಿತ್ತು ಮಾಯೆ. ಗುರುಲಿಂಗ, ಜಂಗಮ, ಭಕ್ತರಲ್ಲದ, ಬರಿಯ ವೇದ ಶಾಸ್ತ್ರ ಪುರಾಣಾಗಮ ಬಲ್ಲಿದರಂ ತಪೋನಿಷ್ಠರಂ ಇಂತೀ ಸರ್ವರೂ ಮಾಯೆಯ ಕಾಲುಗಾಹಿನ ಸರಮಾಲೆ ಕಾಣಾ ಶ್ರೀ ಮತ್ತೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ಜಗದ ಜೀವಿಗಳಿಗೆ ಭಿನ್ನ ಭಿನ್ನವಾಗಿ ಮಾಯಾಜಾಲವ ಹರಹಿದೆ ನೋಡಯ್ಯಾ. ಈ ಜಾಲಕ್ಕೆ ಹೊರಗಾದವರನಾರನೂ ಕಾಣೆ. ನಾ ಬಲ್ಲೆ ಬಲ್ಲೆನೆಂಬ ಗುರುಹಿರಿಯರಿಗೆ ನಿಜವೆನಿಸಿ ತೋರಿ ಅಹಂಕಾರದ ಜಾಲದಿ ಮುಚ್ಚಿತ್ತು ಮಾಯೆ. ಅರಿಯೆನೆಂಬ ಅಜ್ಞಾನಿಗಳಿಗೆ ಮರವೆಯ ಜಾಲವಾಗಿ ಕಾಡಿತ್ತು ಮಾಯೆ. ಗುರು-ಲಿಂಗ-ಜಂಗಮ-ಭಕ್ತರಲ್ಲದವರಿಗೆ ಪರಿಪರಿಯ ವ್ಯವಹಾರವನೊಡ್ಡಿ ಬಿಸಾಡಿತ್ತು ಮಾಯೆ. ಗುರು, ಲಿಂಗ, ಜಂಗಮ, ಭಕ್ತಿಯೊಂದನ್ನೇ ಕರುಣಿಸಯ್ಯಾ ಶ್ರೀ ಮತ್ತೂನ್ಯ ಸಿಂಹಸನಾಧೀಶ್ವರ ನಿರಂಜನ ಸಂಗಮನಾಥಾ.

ಪಂಚ ಪಾಶದೊಳು ಕಟ್ಟಿ ವಿವಿಧ ಮಾಯಾ ಜಾಲವ ಹರಹಿ, ಆಸೆಯೆಂಬ ದಾಹನಿಕ್ಕಿ

ಪರಶಿವನಾಡಿಸಿದ ಬೇಂಟೆಯ ಈ ಜಾಲಕ್ಕೆ ಹೊರಗಾಗಿ ಪಾಶವ ಹರಿದು ಹೋಹಬಲ್ಲಿದರ ನಾರನೂ ಕಾಣೆ. ಬಲ್ಲಿದರೆಲ್ಲರೂ ಬಲೆಯಲ್ಲಿ ಸಿಲ್ಕಿ ಪಾಶಕ್ಕೊಳಗಾದರು. ಸದ್ಭಕ್ತಿಯ ಲೇಸತೋರಿ, ಆಸೆಯ ಕಳೆದು, ಜಾಲವಹರಿದು, ಪಾಶವ ಕಳೆಯಯ್ಯಾ ಶ್ರೀ ಮತ್ಶೂನ್ಯ ಸಿಂಹಸನಾಧೀಶ್ವರ ನಿರಂಜನ ಸಂಗಮನಾಥಾ.

ಇಂತು ಮಾಯಾ ಪ್ರಭಾವವನರಿತು ವಿಡಂಬಿಸಿದರೂ ಮಾಯೆಯು ಪ್ರತಿಯೊಬ್ಬ ಜೀವಿಗೂ ಶರೀರದಲ್ಲಿ ಪಂಚಭೂತಗಳದ್ವಾರಾ ಸೂಕ್ಷ್ಮವಾಗಿ ಬಂಧಿಸಿ ಅನೇಕ ಜನ್ಮಗಳಿಗೆ ಕಾರಣವಾಗುವುದು. ಶರೀರವೇ ನಾನೆಂದು ಶರೀರವೇ ಶಾಶ್ವತವೆಂದು ವ್ಯವಹರಿಸುವುದೇ ಕಾರಣವೆಂದರಿದು ಶರೀರದ ಸ್ವರೂಪು ನಿರಸನವಂ ಮಾಡಲು ಸಂಸಾರ ಹೇಯ ಸ್ಥಲದೊಳಗೆ ಶರೀರದ ನಿರಸನ ಸ್ಥಲಮಾದುದು.

ಶರೀರ ನಿರಸನ ಸ್ಥಲ

ಎಲುವಿನ ಗುಂಪು, ಚರ್ಮದ ಹೊದಿಕೆ, ರಕ್ತದ ನಾಳ, ಮಾಂಸದ ಮೆತ್ತಿಗೆ, ಕರುಳಿನ ಬಳ್ಳಿ, ನರಗಳ ಸುತ್ತುವಳ್ಳಿ, ಮೂತ್ರದ ಮಡು, ಮಲದ ಗುಂಡಿ, ಶ್ಲೇಷ್ಮದ ಕುಳಿ, ಕ್ರಿಮಿ ಸಂಕುಳದ ಉತ್ಪತ್ತಿಯ ಬೀಜ, ರೇತೋ ರಜಸ್ಸಿನಿಂ ಬಲಿದ ರುಜೆಗಳಿಗಾಧಾರಮಾದ ಅನವರತವೂ ದುರ್ಗಂಧವೊಸರುವ ಶರೀರವೇ ನಾನೆಂದು ಮಾಡಬಾರದ ಪಾಪವ ಮಾಡಿ ಅಘೋರ ನರಕವನ್ನುಣ್ಣುವಾಗ ಅಡ್ಡ ಬಪ್ಪವರಾರೋ? ದೇಹ ಸಂಸಾರವನತಿಗಳೆದು, ಗುರುಮಾರ್ಗಮಂ ಪಿಡಿದು ಲಿಂಗಮಂ ನಂಬಿ ನಿನ್ನ ನೀನರಿಯಾ ಶ್ರೀ ಮತ್ಶೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ಅಸ್ತಿ, ಮಾಂಸ, ಕೀವು, ರಕ್ತ, ಮಲ ಮೂತ್ರ, ನರ, ಶುಕ್ಲ, ಮೇಧಸ್ಸು ಕ್ರಿಮಿಗಳ ಉತ್ಪತ್ತಿಯ ಬೀಜ ತೊಗಲಿನಿಂ ಮುಚ್ಚಿ, ಕೇಶಗಳೆಂಬ ಕಸದಿಂ ದುರ್ವಾಸನೆಯ ಕುಂಡದಿಂ ಕೂಡಿದ ತನುವೆಂಬ ಮನೆಯೇ ನಾನೆಂದು ಬಗೆದು ಮಾಡಬಾರದ ಪಾಪವಮಾಡಿ ಸುಖಿಪೆನೆಂಬಲ್ಲಿಗೆ ಮಹಾ ಮೃತ್ಯುವಿಗೆ ತುತ್ತಾಗಿ, ಮನೆ ನಷ್ಟವಾಗಿ ಹೋದಡೆಯೂ ಮನೆಯೊಡೆಯಂಗೆ ಪುನರಪಿ ಮನೆಯಂ ರಚಿಸಿ ಸುಖಸುತಿರ್ಪನೆಂದು ತಿರುಗುತಿಪ್ಪದು ತಪ್ಪದು. ಇಂತಪ್ಪ ಮನೆಗೆ ಮರಳಿ ಬಾರದಂತೆ ನಿನ್ನ ಕೃಪೆಯಂ ಮಾಡಿ ಸಲಹಯ್ಯಾ ಶ್ರೀ ಗುರುವೇ ಶ್ರೀ ಮತ್ಶೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ಪಂಚ ಪಾಶದೊಳ್ ಶಿಲ್ಕಿ ಉಭಯ ಗೂಡಿನೊಳ್ ಕಟ್ಟಿರ್ಪುದಯ್ಯಾ, ಮೂರನೇ ಗೂಡಂ ರಚಿಸಿ ವ್ಯವಹರಿಸಿ ಬಿಟ್ಟು ತಿರುಗುತಿರ್ಪ ಹಂಸನ ಗತಿಯ ಲೆಕ್ಕವ ನೋಡಯ್ಯಾ. ಪಂಚಗ್ರಾಮದೊಳ್ ತಿರುಗಿ ಎಂಭತ್ತು ನಾಲ್ಕು ಲಕ್ಷ ಪುರದೊಳ್ ನೆಲೆಯ ಕಾಣದೆ, ಸುತ್ತುತಿರ್ಪನು ನೋಡಾ! ಬೀಜ ದ್ವಾರದಿಂ ದ್ವಿವಿಧವಾಗಿ ವಿಭಜಿಸಿ ದ್ವಿವಿಧ ಪುರದಿಂ ದ್ವಿವಿಧ ಭಾಗವು ಉಭಯರ ಸಂಗದಿಂ ಬೆರೆತು ಬಲಿದು ಚೀಲದೊಳ್ ಮೊರೆಯಿಟ್ಟು ನೆನೆವುದಯ್ಯಾ. ಸೂಕ್ಷ್ಮ ದ್ವಾರದೊಳ್ ಹೊರಬಂದು ರೂಹಾಗಿ ತೋರಿ ಆಸೆಯೆಂಬ ಮಾಯೆಯೊಳ್ ತ್ರಿವಿಧ ರಾಟೆಯೊಳ್ ನೆಲೆಯ ಕಾಣದಿರ್ದನೊ ತ್ರಿವಿಧವಾಗಿ ಬಂದು ತ್ರಿವಿಧಮಂ ಕಳೆದು ತ್ರಿವಿಧಮಂ ಕಲಿಸಿ, ಸುಖಮಂ ಕೊಟ್ಟು ತ್ರಿವಿಧ ಶರೀರಕ್ಕೆ ಮರಳಿ ಬಾರದಂತೆ ಮಾಡಯ್ಯಾ ಶ್ರೀ ಮತ್ ಶೂನ್ಯ ಸಿಂಹನಾಧೀಶ್ವರ ನಿರಂಜನ ಸಂಗಮನಾಥಾ.

ವಿವರಣೆ ವ್ಯಾಖ್ಯೆ : ಪ್ರಕೃತಿಯ ಮಾಯಾಶಕ್ತಿಗೆ ವಶವಾದ ಆತ್ಮನು ಬ್ರಹ್ಮನ ಸೃಷ್ಟಿ, ವಿಷ್ಣುವಿನ ಸ್ಥಿತಿ, ರುದ್ರನ ಲಯ, ಈಶ್ವರನ ತಿರೋಧಾನ, ಸದಾಶಿವನ ಅನುಗ್ರಹವೆಂಬ ಪಂಚ ಪಾಶದೊಳ್‌ಸಿಲ್ಕಿ, ನಿರಾಕಾರ (ಕಾರಣ) ಶರೀರ, ನಿರಾಕಾರ ಸಾಕಾರ (ಸೂಕ್ಷ್ಮ) ಶರೀರ, ಸಾಕಾರ (ಸ್ಥೂಲ) ಶರೀರದಿಂ ಬಂಧಿಸಿರ್ಪನು. ಪೃಥ್ವಿ, ಅಪ್ಪು ತತ್ವಗಳಿಂ ನಿರ್ಮಿತವಾದುದೇ ಸ್ಥೂಲತನು. ಅಗ್ನಿವಾಯು ತತ್ವದಿಂ ವ್ಯಕ್ತಿಕರವಾದುದೇ ಸೂಕ್ಷ್ಮತನು. ಆಕಾಶ ಅಹಂಕಾರ ತತ್ವದಿಂದ ವ್ಯಕ್ತವಾದುದೇ ಕಾರಣ ತನು. ಆತ್ಮನು ಸ್ಥೂಲ ತನುವಿನ ಕರ್ಮಂಗಳ ಸಂಘಟನದಿಂದಾ, ಸೂಕ್ಷ್ಮ , ಕಾರಣ ಶರೀರಂಗಳೊಳ್ ವಾಯು ರೂಪದಿಂ ಬಂಧಿಸಿರ್ಪನು. ವಾಯುವು ಸೂಕ್ಷ್ಮ ಕಾರಣ, ಶರೀರಗಳಂಪಿಡಿದು ಸ್ಥೂಲ ಶರೀರದೋಳ್ ಶ್ವಾಶೋಚ್ಛ್ವಾಸಗತಿಯಿಂ ಬಂಧಿಸಿರ್ಪುದು. ಶ್ವಾಶೋಚ್ಛ್ವಾಸ ಗತಿಯು ಆರುಸಾರೆ ಗತಿಸಲು ಒಂದು ವಿಘಳಿಗೆ ಮಾನವನ ಶರೀರದ ಆಯುಗತಿಪುದು. ಇಪ್ಪತ್ತೊಂದು ಸಹಸ್ರದ ಆರುನೂರು ಸಾರಿ ಆಡಲು ಒಂದು ದಿನ ಶರೀರದ ಆಯುಗತಿಪುದು. ಈ ಪ್ರಕಾರ ಜೀವಿಗಳ ಆಯುಷ್ಯ ಶ್ವಾಶೋಚ್ಛ್ವಾಸ ಗತಿಯನನುಸರಿಸಿರ್ಪುದು. ಆಯುಗತಿಸಲು ಸ್ಥೂಲ ಶರೀರವು ಯಾತನೆಯಂಬಿಟ್ಟು, ಸೂಕ್ಷ್ಮ ಕಾರಣ ಶರೀರಗಳೊಳ್ ಜೀವನು ಬಂಧನವಡೆದು ಅನೇಕ ಭವಗಳಂ ತಿರುಗುತ್ತಾ ಸೂಕ್ಷ್ಮ ಕಾರಣ ಶರೀರದಿಂ ಸ್ಥೂಲ ಶರೀರಮಂ ಸೃಜಿಸಿ, ಶ್ವಾಸೋಚ್ಛ್ವಾಸ ಆಡುತ್ತಾ ಆಯುಕಳೆಯಲು ಸ್ಥೂಲ ಶರೀರಮಂ ಬಿಟ್ಟು ಅಗ್ನಿ, ವಾಯು, ಆಕಾಶ, ತತ್ವಗಳಾದ ಸೂಕ್ಷ್ಮ , ಕಾರಣ ಶರೀರದಿಂ ಹೊರಟು ಪುನರಪಿ ತಿರುಗಿ ಎಂಭತ್ನಾಲ್ಕು ಲಕ್ಷ ಜೀವರಾಶಿಯಲ್ಲಿ ಸುಖವ ಕಾಣದೆ ಹುಟ್ಟಿ, ಹುಟ್ಟಿ, ಸಾಯುತ್ತಾ ತಿರುಗುವನು. ಆಕಾಶ, ವಾಯು, ಅಗ್ನಿ, ತತ್ವಗಳಾದ ಕಾರಣ-ಸೂಕ್ಷ್ಮ ಶರೀರಗಳು ಲಿಂಗಶರೀರವೆಂದು ಒಂದೇ ಆಗಿ ಭೂಮಿ, ಜಲದಿಂ ಕೂಡಿದ ಸ್ಥೂಲ ಶರೀರವಂ ಸೃಜಿಸುತ್ತಾ, ಪ್ರಾಣವಾಯುವಿನದ್ವಾರ ಬಿಡುತ್ತಾ, ಪ್ರಾಣವಾಯುವಿನ ದ್ವಾರ ಆತ್ಮನು ಊರ್ಧ್ವಕ್ಕೆ ಹೋಗಿ ಆಕಾಶದಲ್ಲಿ ನಿಂದು ಮೇಘಂಗಳೋಳ್ ಸೇರಿ, ಮಳೆಯ ದ್ವಾರ ಭೂಮಿಗೆ ಬಿದ್ದು ಕರ್ಮಾನುಸಾರವಾಗಿ, ಸಸ್ಯಾದಿ ವರ್ಗಗಳಾಗಿ ಉದಿಸಿ, ಅನೇಕ ಜನ್ಮದ ಕರ್ಮದ ಪರಿಪಾಕದಿಂ ಸಸ್ಯಾದಿ ಧಾನ್ಯವೂ ಒಂದೇ ಆತ್ಮನೇ ಪೋಷಕ ಶಕ್ತಿ, ಚೇತನ ಶಕ್ತಿಯೆಂದು ದ್ವಿವಿಧ ಭಾಗವಾಗಿ ಪೋಷಕ ಶಕ್ತಿ, ಹೆಣ್ಣು ಮಕ್ಕಳಲ್ಲಿ ರಜಸ್ಸಾಗಿ ಬೆಳೆದು, ಚೇತನ ಶಕ್ತಿ ಗಂಡು ಮಕ್ಕಳಲ್ಲಿ ವೀರ್ಯವಾಗಿ ಬೆಳೆದು, ರತಿಕಾಲದೋಳ್ ಪುರುಷರ ವೀರ್ಯವೂ ಸ್ತ್ರೀಯರ ರಜಸ್ಸಿನಲ್ಲಿ ಸೇರಲು, ಅದೇ ಬಲಿಯುತ್ತಾ, ಗುಳ್ಳೆಯ ಆಕಾರವಾಗಿದ್ದು, ಬಲಿದು ದೊಡ್ಡದಾಗಿ ಒಂದು ತಿಂಗಳಿಗೆ ತಲೆಯ ಭಾಗವೂ ನಿರ್ಮಾಣವಾಗುತ್ತಾ, ಮೂರು ತಿಂಗಳಿಗೆ ಪೂರ್ಣ ತಲೆಯೂ ನಿರ್ಮಾಣವಾಗಿ, ಐದು ತಿಂಗಳಿಗೆ ಮುಂಡದ ಭಾಗವನ್ನು ನಿರ್ಮಿಸಿಕೊಂಡು, ಏಳು ತಿಂಗಳಿಗೆ, ಕೈಕಾಲು, ಬೆರಳು, ಉಗುರು, ಕೂದಲು, ಕಣ್ಣು, ಕಿವಿ, ಬಲಿತು, ಜರಾಯುವೆಂಬ ಚೀಲದೋಳ್ ಅವಯವಗಳೆಲ್ಲಾ ನಿರ್ಮಾಣವಾಗಿ, ಎಂಟನೇ ತಿಂಗಳಲ್ಲಿ ಆ ಪಿಂಡಕ್ಕೆ ಪೂರ್ವಜ್ಞಾನೋದಯವಾಗಲು ಎರಡು ಕೈಗಳನ್ನು ಮುಗಿದು ಕೊಂಡು ಪರಮಾತ್ಮನೇ ಕರ್ತನೆಂದು ತಿಳಿದು, ಹೇ ದೇವಾ ನಿನ್ನನ್ನು ಮರೆತದ್ದರಿಂದಾ ಎಂಭತ್ನಾಲ್ಕು ಲಕ್ಷ ಜೀವ ರಾಶಿಗಳಲ್ಲಿ ಒಂದೊಂದು ಜನ್ಮದಲ್ಲಿ ಕೋಟ್ಯಾನುಕೋಟಿ ಜನ್ಮಗಳನ್ನು ಧರಿಸುತ್ತಾ ಬಂದೇಂ. ಈ ಭವ ಬಂಧನದಿಂ ಪಾರು ಮಾಡು. ಹೇ ಪರಮಾತ್ಮ ನಿನ್ನನ್ನು ಬಿಡೆನೆಂದು ಮೊರೆಯಿಡುತ್ತಾ ಇರುವಲ್ಲಿ ನವಮಾಸ ತುಂಬಲು, ವಿಷ್ಣು ಮಾಯೆಯಿಂ ಪ್ರಸೂತಿಕಾ ವಾಯುವಿನ ಚಲನೆಯಿಂ ಅಕ್ಕಸಾಲಿಗನ ಕಂಬೆಚ್ಚಿನಿಂದಾ ಚಿನ್ನದ ಶಲಾಕೆ ಈಚಿದೋಪಾದಿ ಯೋನಿಯೆಂಬ ಸೂಕ್ಷ್ಮ ದ್ವಾರದಿಂ ನುಸುಳಿ ಹೌಹಾರಿ ಚೀರುತ್ತಾ, ಮಲ ಮೂತ್ರದಲ್ಲಿ ತೇಲಿ ದೊಡ್ಡವರಾಗಿ, ವಿಷಯಗಳೋಳ್ ವ್ಯವಹರಿಸಿ ಆಸೆಗೆ ಸಿಕ್ಕು, ಹೊನ್ನು,

ಹೆಣ್ಣು, ಮಣ್ಣಿಗೆ, ಹೋರಾಡಿ, ಬ್ರಹ್ಮನ ಸೃಷ್ಠಿ, ವಿಷ್ಣುವಿನಸ್ಥಿತಿ, ರುದ್ರನ ಲಯವೆಂಬ ರಾಟೆಯಲ್ಲಿ ಸಿಕ್ಕು ಮಾಡಬಾರದ ಪಾಪವನೆ ಮಾಡಿ, ಉಣಬಾರದ ಊಟವನು ಉಂಡು ಅಜ್ಞಾನದಿಂ ತಿರುಗುತಿರ್ಪಲ್ಲಿ, ಹಿಂದಣ ಜ್ಞಾನೋದಯದ ಪರಿಪಕ್ವತೆಯಿಂದಾ ಪರಮಾತ್ಮನೇ ಶ್ರೀ ಗುರುವಾಗಿ ಬಂದು ದೀಕ್ಷೆಯಿಂದಾ, ತನುವಂ ಶುದ್ಧವಂ ಮಾಡಿ ಇಷ್ಟಲಿಂಗವನ್ನು ಸಂಬಂಧಿಸಿ, ಮಂತ್ರ ದೀಕ್ಷೆಯಿಂದಾ, ಮಂತ್ರದ ನೆನಹಿನಿಂದಾ ಲಿಂಗವಾಗಿ ಪೂಜಿಸಿಕೊಂಡು ಮನೋವಿಕಾರವನ್ನು ಕಳೆದು ಪ್ರಾಣಲಿಂಗವಾಗಿ ಸೂಕ್ಷ್ಮ ಶರೀರವನ್ನು ಶುದ್ಧಿಸಿ ಜಂಗಮವಾಗಿ, ಪ್ರಪಂಚುಕತನವನ್ನು ಕಳೆದು ಪಾದೋದಕ ಪ್ರಸಾದದಿಂದ ಕಾರಣ ಶರೀರದಲ್ಲಿ ಭಾವಲಿಂಗವನ್ನು ಸಂಬಂಧಿಸಿ ತ್ರಿವಿಧ ದಾಸೋಹಮಂ ಕಲಿಸಿ ಪ್ರಸಾದಾರ್ಪಣದಿಂ ವ್ಯವಹರಿಸುವ ನಿತ್ಯ ಸುಖಮಂ ಕೊಟ್ಟು ಸಲಹೆಂಬುದು ಭಾವಾರ್ಥ.

ಶಿವ ಕರುಣೆಯಂ ಪಡೆವೊಡೆ, ಶಿವಭಕ್ತಿ ಸಂಜನಿಸುವೊಡೆ, ತನುವೇ ನಾನೆಂಬ ಮೋಹ ಬಿಡದಯ್ಯ, ತನುವಿನ ವಿವರವ ಕೇಳು ಎಲುವೆಂಬ ಕಟ್ಟಿಗೆಗಳಿಂ, ನರಗಳೆಂಬ ಬಳ್ಳಿಗಳಿಂ, ರಕ್ತದ ನೀರಿನಿಂ, ಮಾಂಸದ ಕೆಸರಿನಿಂ, ಚರ್ಮದ ಹೊದಿಕೆಯಿಂ, ರೋಮಗಳೆಂಬ ಹುಲ್ಲಿನಿಂ ಕೂಡಿದ ಸಕಲ ರೋಗಗಳಿಗೆ ತವರ್ಮನೆಯೆನಿಸಿದ ಅಷ್ಟ ರಂಧ್ರಗಳೆಂಬ ಕಿಟಕಿಗಳಿಂ ಬಾಯಿಯೆಂಬ ದೊಡ್ಡ ದ್ವಾರಮುಳ್ಳ, ತನು ರೂಪಕ್ಕೆ ಮಮಕರಿಸುವೆ, ಇಂತಪ್ಪ ದುರ್ಮಯವಾದ ತನುವಿನ ಸಂಗದಿಂದಲೇ ಪವಿತ್ರಾನ್ನ, ನೀರು, ದುರ್ಗಂಧದ ಮಲಮೂತ್ರ, ಶ್ಲೇಷ್ಮ, ಕೀವು ಎಂದು ಓಕರಿಸುವೆ, ತನುವಿನ ಮೋಹಮಂ ಬಿಸುಟು ಲಿಂಗ ಮೋಹಿಯಾಗಿ ಚರಿಸುವಂತೆ ಮಾಡಯ್ಯಾ ಶ್ರೀ ಮತ್ಸೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ಇಂತು ತನುಗುಣ ನಿರಸನ ಮಾಡಿದ ಮಹಂತನು ಅನೇಕ ಜನ್ಮ ಪರಿಪಾಕದಿಂದಾ ಪರಮಾತ್ಮನೋಳ್ ಭಕ್ತಿಯುದಯಿಸಲು ಪರಮಾತ್ಮನ ಕಾರುಣ್ಯ ಸ್ಥಲವೆಂದು ನುಡಿದ ವಚನಂಗಳು:-

ಪರಮಾತ್ಮನ ಕಾರುಣ್ಯ ಸ್ಥಲ

ಎಲ್ಲೈ ಲಿಂಗವೇ ನಾನು ವಾಕ್ಕಿನಲ್ಲಿ ಬಸವಾಶಿವಾ ಎನಲೊಲ್ಲದೆ, ಕುಶಬ್ದವ ನುಡಿವೆ, ಲಿಂಗ ಭಕ್ತಿಯೆಂತು ಸಂಜನಿಪುದಯ್ಯಾ, ಅನವರತವೂ ಸಜ್ಜನರ ಸಂಗದಲ್ಲಿ ಸದ್ವಿಷಯಂಗಳ ಬಿಟ್ಟು, ದುರ್ಜನರ ಸಂಗದಲ್ಲಿ ದುರ್ವಿಷಯಗಳೊಡನಾಟ ಮಾಡುವೆ. ಸಜ್ಜನರ ಸಂಗದಿಂದಾ ದುರ್ಜನರ ದುರ್ವಿಷಯಗಳು ದೂರವಾಗುವುದಯ್ಯಾ. ನಿಮ್ಮ ಅನುಭಾವಿಗಳ ಸಂಗದಿಂದಾ ವಿಷಯದ ದುರ್ವಾಸನೆ ದೂರವಾಗುವುದಯ್ಯಾ. ನಿಮ್ಮ ಭಕ್ತರ ಸಂಗದಿಂದಾ ಭವದ ಗುಣಗಳು ದೂರವಾಗುವುದಯ್ಯಾ. ಅನವರತವೂ ನಿಮ್ಮ ಶರಣರ ಸಂಗದಿಂದಾ ಮರಣ ದೂರವಾಗುವುದಯ್ಯಾ. ಇದು ಕಾರಣ ಅನವರತವೂ ನಿಮ್ಮ ಶರಣರ ಸಂಗವನ್ನೇ ಕರುಣಿಸಿ ರಕ್ಷಿಸಯ್ಯಾ ಶ್ರೀ ಮತ್ಸೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ವಿಶ್ವದೊಳಗೆಲ್ಲಾ ನೀನೇ ದೇವಾ, ವಿಶ್ವತೋಬಾಹುನೀನೇ ದೇವಾ, ವಿಶ್ವತೋಮುಖ ನೀನೇ ದೇವಾ, ವಿಶ್ವತೋಚಕ್ಷು ನೀನೇ ದೇವಾ, ವಿಶ್ವತೋಹಸ್ತ ನೀನೇ ದೇವಾ, ವಿಶ್ವತೋಪಾದ ನೀನೇ ದೇವಾ, ವಿಶ್ವೋದರ ಸ್ವರೂಪು ನೀನೇ ದೇವಾ, ವಿಶ್ವಾಂತರ್ಯಾಮಿ ನೀನೇ ದೇವಾ, ವಿಶ್ವತೋಚೈತನ್ಯ ಸೂತ್ರಧಾರಿ ನೀನೇ ದೇವಾ, ವಿಶ್ವಾತ್ಮಕನು ನೀನೇ ದೇವಾ, ವಿಶ್ವ ನಟನಾಟಕನು

ನೀನೇ ದೇವಾ, ವಿಶ್ವ ಕರ್ತೃ ನೀನೇ ದೇವಾ, ವಿಶ್ವ ಭರ್ತೃ ನೀನೇ ದೇವಾ, ವಿಶ್ವ ಹಂತ ನೀನೇ ದೇವಾ ಶ್ರೀ ಮತ್ತೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ವಿಶ್ವಭರಿತನು ನೀನೇ ದೇವಾ, ವಿಶ್ವತೋರೂಪು ನೀನೇ ದೇವಾ, ವಿಶ್ವನಿಯಾಮಕನು ನೀನೇ ದೇವಾ, ವಿಶ್ವದಾತನು ನೀನೇ ದೇವಾ, ವಿಶ್ವಾಧಾರನು ನೀನೇ ದೇವಾ, ವಿಶ್ವಕ್ಕೆ ದಾನಿಯು ನೀನೇ ದೇವಾ, ವಿಶ್ವಕ್ಕೆ ಭರ್ತೃ ನೀನೇ ದೇವಾ, ವಿಶ್ವ ಪೋಷಕ ನೀನೇ ದೇವಾ, ವಿಶ್ವ ಹಂತ ನೀನೇ ದೇವಾ, ಶ್ರೀ ಮತ್ತೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ಭೂಮಿ ನಿನ್ನದಾನ, ಹೇಮ ನಿನ್ನದಾನ, ಕಾಮಿನಿ ನಿನ್ನದಾನ, ನಿಮ್ಮ ದಾನವನುಂಡು, ಅನ್ಯರನು ಹೊಗಳುವ ಕುನ್ನಿಗಳನೇನೆಂಬೆನಯ್ಯಾ ಶ್ರೀ ಮತ್ತೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ನೆಲವು ನಿಮ್ಮ ದಾನ, ಜಲವು ನಿಮ್ಮ ದಾನ, ಬಲುವಹ ಫಲಗಳು ನಿಮ್ಮ ದಾನ, ಎಲ್ಲೆಡೆಯಲ್ಲಿ ಸುಳಿಯುವ ಗಾಳಿ ನಿಮ್ಮ ದಾನ, ನಿಮ್ಮ ದಾನವನುಂಡು ಅನ್ಯರನು ಹೊಗುಳುವ ಕುನ್ನಿಗಳ ನೇನೆಂಬೆನಯ್ಯಾ ಶ್ರೀ ಮತ್ತೂನ್ಯ ಸಿಂಹಾನಾಧೀಶ್ವರ ನಿರಂಜನ ಸಂಗಮನಾಥಾ.

ತನುವು ನಿಮ್ಮ ದಾನ, ಮನವು ನಿಮ್ಮ ದಾನ, ಧನವು ನಿಮ್ಮ ದಾನ ನಿಮ್ಮ ದಾನವನುಂಡು ಅನ್ಯರನು ಹೊಗಳುವ ಕುನ್ನಿಗಳನೇನೆಂಬೆನಯ್ಯಾ ಶ್ರೀ ಮತ್ತೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ-

ಕಾಯ ನಿಮ್ಮ ದಾನ, ಪ್ರಾಯ ನಿಮ್ಮದಾನ, ಧಾನ್ಯ ನಿಮ್ಮದಾನ, ಪಾನ್ಯ ನಿಮ್ಮ ದಾನ, ಉಣಿಸು ನಿಮ್ಮ ದಾನ, ತಿನಿಸು ನಿಮ್ಮ ದಾನ, ಭೋಗ ನಿಮ್ಮ ದಾನ, ಭಾಗ್ಯ ನಿಮ್ಮ ದಾನ ಸರ್ವವೂ ನಿಮ್ಮ ದಾನವಿದ್ದು, ಕಾಯ ಪ್ರಾಯ ಉಳ್ಳನ್ನಲ್ಲಿಯೇ ಪೂಜಿಸದ ಅನ್ಯಾಯಿಗಳನೇನೆಂಬೆನಯ್ಯಾ ಶ್ರೀ ಮತ್ತೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ಮಳೆಯು ನಿಮ್ಮ ದಾನ, ಬೆಳೆಯು ನಿಮ್ಮ ದಾನ, ಹಲವು ತರದ ಫಲಗಳೆಲ್ಲವೂ ನಿಮ್ಮ ದಾನ. ನಿಮ್ಮ ದಾನವನುಂಡು ಅನ್ಯರನು ಹೊಗಳುವ ಕುನ್ನಿಗಳನೇನೆಂಬೆನಯ್ಯಾ ಶ್ರೀ ಮತ್ತೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ಬಸವಾ, ಶಿವಾ, ಎಂದು ಓದದವನ ಓದು ವ್ಯರ್ಥ. ಬಸವಾ ಎಂದು ಲಿಂಗವ ಪೂಜಿಸದವನ ಹಸ್ತ ವ್ಯರ್ಥ. ನಿಮ್ಮ ನೋಡದವನ ಕಣ್ಣು ವ್ಯರ್ಥ. ಬಸವಾ. ಬಸವಾ, ಬಸವಾ ಎಂದು ನಿಮ್ಮ ಹೊಗಳದವನ ಬಾಯಿ ವ್ಯರ್ಥ. ನಿಮ್ಮ ನೆನೆಯದವನ ಮನ ವ್ಯರ್ಥ. ಬಸವಾ ನಿಮ್ಮ ಭಕ್ತನಲ್ಲದವನ ಜನ್ಮ ವ್ಯರ್ಥ. ಶಿವಾ ನಿಮ್ಮ ಶರಣರ ಸಂಗವಿಲ್ಲದವನ ಅಂಗವ್ಯರ್ಥ. ಇದು ಕಾರಣ ಅನವರತವೂ ನಿಮ್ಮ ಶರಣರ ಸಂಗವನ್ನೇ ಕರುಣಿಸಿ ಸಲಹಯ್ಯ ಶ್ರೀ ಮತ್ತೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ಓಂ ಶ್ರೀ ಗುರು ಬಸವ ಲಿಂಗಾಯ ನಮಃ

ಕರಣ ಹಸಿಗೆಯ ವಿಷಯ

ವಚನ : ನಿಃ ಕಲ ಪ್ರಣವದಿಂದಾ ಪ್ರಣವ ನಾದವು ಉದಯಿಸಿತ್ತು. ಆ ನಾದ ಬ್ರಹ್ಮದಿಂದ ಚಿತ್ಶಕ್ತಿ ಉದಯಿಸಿತ್ತು. ಚಿತ್ ಶಕ್ತಿಯ ಸಹಸ್ರಾಂಶದಲ್ಲಿ ಪರಾಶಕ್ತಿಯುದಯುಸಿತ್ತು. ಆ ಪರಾಶಕ್ತಿಯ ಸಹಸ್ರಾಂಶದಲ್ಲಿ ಆದಿಶಕ್ತಿ ಉದಯಿಸಿತ್ತು. ಆದಿ ಶಕ್ತಿಯ ಸಹಸ್ರಾಂಶದಲ್ಲಿ ಇಚ್ಛಾಶಕ್ತಿಯುದಯಿಸಿತು. ಆ ಇಚ್ಛಾಶಕ್ತಿಯ ಸಹಸ್ರಾಂಶದಲ್ಲಿ ಜ್ಞಾನಶಕ್ತಿಯುದಯಿಸಿತ್ತು. ಆ ಜ್ಞಾನ ಶಕ್ತಿಯ ಸಹಸ್ರಾಂಶದಲ್ಲಿ ಕ್ರಿಯಾ ಶಕ್ತಿಯುದಯಿಸಿತ್ತು. ಈ ಶಕ್ತಿಗಳು ಶರೀರದಲ್ಲಿ ಆತ್ಮನೊಡನೆ ಬೆರೆತು, ಚೈತನ್ಯವಾಗಿ ವ್ಯವಹರಿಸಿರ್ಪವು ನೋಡಾ ಶ್ರೀ ಮತ್ ಶೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ವಚನ : ಆಕಾಶದ ಪಂಚತತ್ವದ ಯಿಂದ್ರಿಯಗಳು, ಪಂಚಕರಣಗಳು ವಾಯುವಿನ ಪಂಚತತ್ವದ ಇಂದ್ರಿಯಗಳು, ಪಂಚವಾಯುಗಳು. ಅಗ್ನಿ ತತ್ವದ ಪಂಚಯಿಂದ್ರಿಯಗಳು ಪಂಚವಿಷಯಗಳು. ಜಲ ತತ್ವದ ಪಂಚಯಿಂದ್ರಿಯಗಳು ಜ್ಞಾನೇಂದ್ರಿಯಗಳು. ಭೂ ತತ್ವದ ಭಾಗದ ಇಂದ್ರಿಯಗಳು ಕರ್ಮೇಂದ್ರಿಯಗಳು. ಇವುಗಳಿಗೆ ಪಂಚವಿಂಶತೀ ತತ್ವಗಳೆಂದು ಕರೆಯುವರು.

ಆಕಾಶ ತತ್ವದ ಪಂಚಕರಣಗಳು ಪರಾಶಕ್ತಿಯ ಸ್ವರೂಪು. ನಿಃಕಲತತ್ವದಿಂದ ಆತ್ಮ ತತ್ವಕ್ಕಂಗವಾಗಿ, ಪರಾಶಕ್ತಿಯಿಂದಲೇ ಹುಟ್ಟಿ, ಪರಾಶಕ್ತಿಯಿಂದಲೇ ಬೆಳೆದು, ಪರಾಶಕ್ತಿಯಾಧೀನವಿಡಿದು ವರ್ತಿಸಿ, ಪರಾಶಕ್ತಿಯಲ್ಲಿಯೇ ಅಡಗಿ, ಪರಾಶಕ್ತಿಯ ತದ್ರೂಪು ತದಾಕಾರವಾಗಿ ಒಪ್ಪುತ್ತಿಹವು. ವಾಯು ತತ್ವದ ಪಂಚಪ್ರಾಣಾದಿವಾಯುಗಳು ಆದಿಶಕ್ತಿಯ ಸ್ವರೂಪು. ನಿಃಕಲ ತತ್ವದಿಂ ಆತ್ಮ ತತ್ವದ ಚೈತನ್ಯದಿಂದಾ ಆದಿ ಶಕ್ತಿಯಿಂದಲೇ ಹುಟ್ಟಿ ಆದಿ ಶಕ್ತಿಯಿಂದಲೇ ಬೆಳೆದು, ಆದಿಶಕ್ತಿಯಾಧೀನವಿಡಿದು ವರ್ತಿಸಿ, ಆದಿ ಶಕ್ತಿಯಲ್ಲಿಯೇ ಅಡಗಿ ಆದಿ ಶಕ್ತಿಯ ತದ್ರೂಪು ತದಾಕಾರವಾಗಿರುತಿಹವು.

ಭೂತಾದಿ ಪಂಚವಿಷಯಗಳು ಇಚ್ಛಾಶಕ್ತಿಯ ಸ್ವರೂಪು. ಪಂಚ ಭೂತದ ಅಗ್ನಿ ತತ್ವಗಳೈದು, ನಿಃಕಲ ತತ್ವದಿಂದಾ ಆತ್ಮತತ್ವಕ್ಕಂಗವಾದ ಇಚ್ಛಾಶಕ್ತಿಯಿಂದಲೇ ಹುಟ್ಟಿ, ಇಚ್ಛಾಶಕ್ತಿಯಿಂದಲೇ ಬೆಳೆದು, ಇಚ್ಛಾಶಕ್ತಿಯಾಧೀನವಿಡಿದು ವರ್ತಿಸಿ, ಇಚ್ಛಾಶಕ್ತಿಯಲ್ಲಿಯೇ ಅಡಗಿ ಇಚ್ಛಾಶಕ್ತಿಯ ತದ್ರೂಪು ತದಾಕಾರವಾಗಿರುತಿಹವು.

ಶ್ರೋತ್ರಾದಿ ಜ್ಞಾನೇಂದ್ರಿಯಗಳು ಜ್ಞಾನ ಶಕ್ತಿಯ ಸ್ವರೂಪು. ಈ ಜಲ ತತ್ವದ ಜ್ಞಾನೇಂದ್ರಿಯಗಳೈದು, ನಿಃಕಲ ತತ್ವದಿಂದಾ ಆತ್ಮ ತತ್ವಕ್ಕಂಗವಾದ ಜ್ಞಾನ ಶಕ್ತಿಯಿಂದಲೇ ಹುಟ್ಟಿ ಜ್ಞಾನ ಶಕ್ತಿಯಿಂದಲೇ ಬೆಳೆದು, ಜ್ಞಾನ ಶಕ್ತಿಯಾಧೀನವಿಡಿದು ವರ್ತಿಸಿ, ಜ್ಞಾನ ಶಕ್ತಿಯಲ್ಲಿಯೇ ಅಡಗಿ, ಜ್ಞಾನ ಶಕ್ತಿಯ ತದ್ರೂಪು ತದಾಕಾರವಾಗಿರುತಿಹವು.

ವಾಗಾದಿ ಕರ್ಮೇಂದ್ರಿಯಗಳೈದು ಕ್ರಿಯಾ ಶಕ್ತಿಯ ಸ್ವರೂಪು. ಭೂ ತತ್ವದ ಕರ್ಮೇಂದ್ರಿಯಗಳೈದು ನಿಃಕಲ ತತ್ವದಿಂದಾ ಆತ್ಮ ತತ್ವಕ್ಕಂಗವಾದ ಕ್ರಿಯಾ ಶಕ್ತಿಯಿಂದಲೇ ಹುಟ್ಟಿ ಕ್ರಿಯಾ ಶಕ್ತಿಯಿಂದಲೇ ಬೆಳೆದು, ಕ್ರಿಯಾ ಶಕ್ತಿಯಾಧೀನವಿಡಿದು ವರ್ತಿಸಿ, ಕ್ರಿಯಾ ಶಕ್ತಿಯಲ್ಲಿಯೇ ಅಡಗಿ ತದ್ರೂಪು ತದಾಕಾರವಾಗಿರುತಿಹವು.

ಕರ್ಮೇಂದ್ರಿಯಗಳು

ಇನ್ನು ವಾಕ್ಕು, ಪಾಣಿ, ಪಾದ, ಗುಹ್ಯ, ಪಾಯು (ಗುದ) ಈ ಐದು ಕರ್ಮೇಂದ್ರಿಯಗಳು,

ಇವಕ್ಕೆ ವಿವರ: ವಾಗೀಂದ್ರಿಯಕ್ಕೆ : ನಾಗವಾಯು, ಅಲ್ಲಿ ಸುವಾಕ್ಯ ದುರ್ವಾಕ್ಯ ವಿಷಯ. ಪಾಣೇಂದ್ರಿಯಕ್ಕೆ : ಕೂರ್ಮವಾಯು ಆದಾನ, ವಿದಾನ ವಿಷಯ. ಪಾದೇಂದ್ರಿಯಕ್ಕೆ : ಕೃಕರವಾಯು ಅಲ್ಲಿ ಗಮನಾ ಗಮನ ವಿಷಯ. ಗುಹ್ಯೇಂದ್ರೀಯಕ್ಕೆ : ದೇವದತ್ತವಾಯು, ಅಲ್ಲಿ ಆನಂದ ಅನಾನಂದ ವಿಷಯ. ಗುದೇಂದ್ರಿಯಕ್ಕೆ : ಧನಂಜಯವಾಯು, ಅಲ್ಲಿ ಸರ್ಜನ ವಿಸರ್ಜನ ವಿಷಯ. ಈ ಕರ್ಮೇಂದ್ರೀಯಗಳು ಕ್ರಿಯಾ ರೂಪವಾದ ಹೃಷೀಕಂಗಳೆಂದುಂಟಾಗಿರುತ್ತಿಹವು. ಕಡಿವ, ಕೊಯ್ಯುವ, ಕಟ್ಟುವ, ಬೀಸುವ ಮುಂದಾತ ಕ್ರಿಯೆಗಳು ಒಬ್ಬಾತ್ಮನಿಂದಲ್ಲದೆ ಸ್ವಯಾಧೀನದಿಂದ ಚೇಷ್ಠಿ ಸಲರಿಯವು. ಇವು ತಮ್ಮ ತಮ್ಮ ಸಂಬಂಧವಾದ ವಿಷಯಗಳನ್ನು ಮನ ಸ್ವಾಧೀನ ಪಡಿಸಿಕೊಂಡು ವಾಯುವಿನ ಚೈತನ್ಯ ಬಲದಿಂದಲೇ ಗ್ರಹಿಸುತಿಹವಾದ ಕಾರಣ ಕ್ರಿಯಾ ರೂಪಮಾದ ಪಂಚಹೃಷೀಕಂಗಳೆಂಬ ನಾಮವು ಪ್ರಸಿದ್ಧವಾಯಿತು.

ವಾಗೀಂದ್ರಿಯಕ್ಕೆ : ನಾಗವಾಯುವೇ ಮೂಲ ಚೈತನ್ಯವಾಗಿಪ್ಪುದು. ಅಲ್ಲಿ ಆಕಾಶ ತತ್ವವೇ ಮೂಲಭೂತವಾಗಿಹುದು. ನಾಗವಾಯು ವಾಸವಾಗಿದ್ದ ಕಾಲದಲ್ಲಿ ಮಾತು ಕಥೆ ಪ್ರಸಂಗವನಾಡುವುದಕ್ಕೆ ಸುಸ್ಥಿರವಾಗಿ ಬರುತ್ತಿಹುದು. ಅದು ನಷ್ಟವಾಗಿ ಹೋಗಲು ನಾಲಿಗೆಯೆಂಬುದು ತೊದಲು ಬಿದ್ದು ಮಾತು ಕಥೆ ಪ್ರಸಂಗವನಾಡುವುದಕ್ಕೆ ಸುಸ್ಥಿರವಾಗಿ ಬರಲರಿಯದು.

ಹಸ್ತೇಂದ್ರಿಯಕ್ಕೆ : ವಾಯು ತತ್ವವೇ ಮೂಲವಾಗಿಹುದು. ಅಲ್ಲಿ ಕೂರ್ಮ ವಾಯುವೇ ಮೂಲ ಚೈತನ್ಯವಾಗಿಪ್ಪುದು. ಆ ಮೂಲ ಭೂತವು ವಾಸವಾಗಿದ್ದ ಕಾಲದಲ್ಲಿ ಆವುದಾನೊಂದು ಆದಾನ ವಿದಾನ (ಹಿಡಿವ ಬಿಡುವ) ಕ್ರಿಯೆಗಳಿಗೆ ಸುಸ್ಥಿರವಾಗಿ ಬರುತ್ತಿಹುದು. ಅದು ನಷ್ಟವಾಗಿ ಹೋಗಲು ತೋಳೆಂಬ ಬಂದವು ಬೀಳು ಬಿದ್ದು ಕೊಂಡು ಆದಾನ ವಿದಾನ ಕ್ರೀಯೆಗಳಿಗೆ ಸುಸ್ಥಿರವಾಗಿ ಬರಲರಿಯದು.

ಪಾದೇಂದ್ರಿಯಕ್ಕೆ : ಕೃಕರವಾಯುವೇ ಮೂಲ ಚೈತನ್ಯವಾಗಿಹುದು. ಅಲ್ಲಿ ಅಗ್ನಿ ತತ್ವವೇ ಮೂಲ ಭೂತವಾಗಿಹುದು. ಆ ಮೂಲ ಭೂತವು ಪಾದೇಂದ್ರಿಯದೊಳಗೆ ವಾಸವಾಗಿದ್ದ ಕಾಲದಲ್ಲಿ ಅವುದಾನೊಂದು ಹೋಹ ಬಾಹ ಎಡೆಯಾಟಗಳಿಗೆ ಸುಸ್ಥಿರವಾಗಿ ಬರುವುದು. ಆ ಮೂಲಭೂತವು ನಷ್ಟವಾಗಿ ಹೋಗಲು ಕಾಲುಗಳೆರಡು ಬಂಧವಾಗಿ ಸರವೇಗಾಲು ಬಿದ್ದುಕೊಂಡು ಅವುದಾನೊಂದು ಹೋಹ ಬಾಹ ಎಡೆಯಾಟಗಳಿಗೆ ಸುಸ್ಥಿರವಾಗಿ ಬರಲರಿಯದು.

ಗುಹ್ಯೇಂದ್ರೀಯಕ್ಕೆ : ಮೂಲ ದೇವದತ್ತವಾಯುವೇ ಚೈತನ್ಯವಾಗಿಹುದು. ಅಲ್ಲಿ ಜಲ ತತ್ವವೇ ಮೂಲ ಭೂತವಾಗಿಹುದು. ಆ ಮೂಲಭೂತವು ವಾಸವಾಗಿದ್ದ ಕಾಲದಲ್ಲಿ ಆವುದಾನೊಂದು ಸಂಸಾರ ಮಥನಕ್ಕೆ ಸುಸ್ಥಿರವಾಗಿ ಬರುವುದು. ಆ ಮೂಲಭೂತವು ನಷ್ಟವಾಗಿ ಹೋಗಲು ಆವುದಾನೊಂದು ಸಂಸಾರ ಮಥನಕ್ಕೆ ಸುಸ್ಥಿರವಾಗಿ ಬರಲರಿಯದು.

ಗುದೇಂದ್ರಿಯಕ್ಕೆ : ಗುದವೆಂಬುದೊಂದು ಕ್ರಿಯಾ ರೂಪಮಾದ ಹೃಷೀಕಕ್ಕೆ ಧನಂಜಯ ವಾಯುವೇ ಮೂಲ ಚೈತನ್ಯವಾಗಿಪ್ಪುದು. ಅಲ್ಲಿ ಪೃಥ್ವಿ ತತ್ವವೇ ಮೂಲ ಭೂತವಾಗಿಪ್ಪುದು. ಆ

ಮೂಲ ಭೂತವು ಗುದೇಂದ್ರಿಯದಲ್ಲಿ ವಾಸವಾಗಿದ್ದ ಕಾಲದಲ್ಲಿ ಆವುದಾನೊಂದು ಸರ್ಜನ ವಿಸರ್ಜನ ಕ್ರಿಯೆಗಳಿಗೆ ಸುಸ್ಥಿರವಾಗಿ ಬರುವುದು. ಆ ಮೂಲ ಭೂತವು ನಷ್ಟವಾಗಿ ಹೋಗಲು ಸರ್ಜನ ವಿಸರ್ಜನ ಕ್ರಿಯೆಗಳಿಗೆ ಸುಸ್ಥಿರವಾಗಿ ಬರಲರಿಯದು.

ಈ ಪ್ರಕಾರದಿಂದ ಕ್ರಿಯಾ ರೂಪಮಾದ ಪಂಚಹೃಷೀಕಂಗಳ ಹಸಿಗೆಯ ವಿಚಾರವನ್ನು ತಿಳಿದುಕೊಂಬುದು ತತ್ವ ಜ್ಞಾನಿಗಳು.

ಜ್ಞಾನೇಂದ್ರಿಯಗಳು

ಶ್ರೋತ್ರ, ತ್ವಕ್ಕು, ನೇತ್ರ, ಜಿಹ್ವೆ, ಘ್ರಾಣ, ಇವು ಜ್ಞಾನೇಂದ್ರಿಯಗಳು. ಶಬ್ದ ವಿಷಯವನುಳ್ಳ ಶ್ರವಣೇಂದ್ರಿಯವು, ಸ್ಪರ್ಶನ ವಿಷಯವನುಳ್ಳ ತ್ವಗೀಂದ್ರಿಯವು, ರೂಪು ವಿಷಯವನುಳ್ಳ, ನಯನೇಂದ್ರಿಯವು, ರಸವಿಷಯವನುಳ್ಳ ರಸನೇಂದ್ರಿಯವು, ಗಂಧ ವಿಷಯವನುಳ್ಳ, ನಾಸಿಕೇಂದ್ರವು. ಇವುಗಳಿಗೆ ಅರಿವು ಸ್ವರೂಪಮಾದ ಹೃಷೀಕಗಳೆಂಬ ಅಭಿದಾನವು ಉಂಟು. ಇವು ತಮ್ಮ ತಮ್ಮ ಸಂಬಂಧವಾದ ವಿಷಯಗಳನ್ನು ತಿಳುವಳಿಕೆ ಮಾತ್ರದಿಂದಲೇ ಗ್ರಹಿಸುವವಾದ ಕಾರಣ, ಜ್ಞಾನೇಂದ್ರಿಯಗಳೆಂಬ ನಾಮವು ಪ್ರಸಿದ್ಧವಾಗಿರುತಿಹವು.

1. **ಶ್ರೋತ್ರೇಂದ್ರಿಯಕ್ಕೆ :** ಆಕಾಶವೆಂಬ ಮಹಾಭೂತ, ಶಬ್ದ ವಿಷಯ, ಅಕ್ಷರ, ಅನಕ್ಷರಾತ್ಮಕ ಇವು ಶಬ್ದಭೇದ.

2. **ತ್ವಗೀಂದ್ರಿಯಕ್ಕೆ :** ವಾಯುವೆಂಬ ಮಹಾಭೂತ, ಸ್ಪರ್ಶನ ವಿಷಯ, ಶೀತ, ಉಷ್ಣ, ಮೃದು, ಕಠಿಣ, ನುಣುಪು, ಮಿಶ್ರ, ಇವು ಸ್ಪರ್ಶನ ಭೇದ

3. **ನೇತ್ರೇಂದ್ರಿಯಕ್ಕೆ :** ಅಗ್ನಿಯೆಂಬ ಮಹಾಭೂತ, ರೂಪು ವಿಷಯ, ಪೀತ, ಶ್ವೇತ, ಹರಿತ, ಕಪೋತ, ಕೃಷ್ಣ, ಮಾಣಿಕ್ಯ, ರೂಪು, ಭೇದ.

4. **ಜಿಹ್ವೇಂದ್ರಿಯಕ್ಕೆ :** ಅಪ್ಪುವೆಂಬ ಮಹಾಭೂತ, ಅಲ್ಲಿ ರಸ ವಿಷಯ; ಮಧುರ, ಒಗರು, ಖಾರ, ಹುಳಿ, ಕಹಿ, ಲವಣ ಇವು ರಸಭೇದ.

5. **ನಾಶಿಕೇಂದ್ರಿಯಕ್ಕೆ :** ಪೃಥ್ವಿಯೆಂಬ ಮಹಾಭೂತ ಅಲ್ಲಿ ಗಂಧ ವಿಷಯ, ಸುಗಂಧ, ದುರ್ಗಂಧ, ಇವು ಗಂಧ ಭೇದ. ಶಬ್ದ ವಿಷಯವನ್ನುಳ್ಳ ಶ್ರವಣೇಂದ್ರಿಯವು, ಸ್ಪರ್ಶನ ವಿಷಯವನ್ನುಳ್ಳ ತ್ವಗೀಂದ್ರೀಯವು, ರೂಪು ವಿಷಯವನ್ನುಳ್ಳ ನಯನೇಂದ್ರಿಯವು, ಗಂಧ ವಿಷಯವನ್ನಳ್ಳ ನಾಸಿಕೇಂದ್ರಿಯವು, ಅರಿವು ಸ್ವರೂಪಮಾದ ಹೃಷೀಕಂಗಳೆಂಬ ಅಭಿದಾನವು. ಇವು ತಮ್ಮ ತಮ್ಮ ಸಂಬಂಧವಾದ ವಿಷಯಂಗಳನ್ನು ತಿಳುವಳಿಕೆ ಮಾತ್ರದಿಂದಲೇ ಗ್ರಹಿಸುವವಾದ ಕಾರಣ, ಜ್ಞಾನೇಂದ್ರಿಯಗಳೆಂಬ ನಾಮವು ಪ್ರಸಿದ್ಧವಾಗಿಹುದು.

ಶ್ರವಣೇಂದ್ರಿಯಕ್ಕೆ : ಆಕಾಶ ತತ್ವವೇ ಮೂಲಭೂತವಾಗಿಹುದು. ಆಕಾಶ ತತ್ವವು ಮೂಲಭೂತವು ಶ್ರವಣೇಂದ್ರಿಯದೊಳಗೆ ವಾಸವಾಗಿದ್ದ ಕಾಲದಲ್ಲಿ ಕುಶಬ್ದ, ಸುಶಬ್ದಗಳನ್ನು ಆಲಿಸುವುದಕ್ಕೆ ಸುಸ್ಥಿರವಾಗಿ ಬರುವುದು. ಆಕಾಶ ತತ್ವದ ಮೂಲಭೂತವು ನಷ್ಟವಾಗಿ ಹೋಗಲು ಕಿವುಡನಾಗಿ ವ್ಯವಹರಿಸುವನು.

ತ್ವಗೀಂದ್ರಿಯಕ್ಕೆ : ವಾಯುವೆಂಬ ಮೂಲಭೂತವೆ ಚೈತನ್ಯವಾಗಿಪ್ಪುದು. ಅದು ವಾಸವಾಗಿದ್ದ ಕಾಲದಲ್ಲಿ ಸುಸ್ಪರ್ಶನ ದುಸ್ಪರ್ಶನಂಗಳನವಗ್ರಹಿಸುವುದಕ್ಕೆ ಸುಸ್ಥಿರವಾಗಿ ಬರುವುದು. ಮೂಲಭೂತವು ನಷ್ಟವಾಗಿ ಹೋಗಲು ಗಜ ಚರ್ಮದ ಹಾಗೆ ಸುಸ್ಪರ್ಶನ, ದುಸ್ಪರ್ಶನಂಗಳ ನವಗ್ರಹಿಸುವುದಕ್ಕೆ ಸುಖಕರವಾಗಿ ಬರಲರಿಯದು.

ನೇತ್ರವೆಂಬ ಜ್ಞಾನೇಂದ್ರಿಯಕ್ಕೆ : ಅಗ್ನಿಯೆಂಬ ಮಹಾಭೂತವೇ ಮೂಲ ಚೈತನ್ಯವಾಗಿಪ್ಪುದು. ಅಗ್ನಿಯೆಂಬ ಮಹಾಭೂತವು ನಯನೇಂದ್ರಿಯದಲ್ಲಿ ವಾಸವಾಗಿದ್ದ ಕಾಲದಲ್ಲಿ ಆವುದಾನೊಂದು ಸುರೂಪು, ಕುರೂಪುಗಳನವಗ್ರಹಿಸುವುದಕ್ಕೆ ಸುಸ್ಥಿರವಾಗಿ ಬರುವದು. ಅಗ್ನಿಯೆಂಬ ಮಹಾಭೂತವು ನಷ್ಟವಾಗಿ ಹೋಗಲು ಸುರೂಪು ಕುರೂಪುಗಳನ್ನು ಅವಗ್ರಹಿಸುವುದಕ್ಕೆ ಸುಖಕರವಾಗಿ ಬರಲರಿಯದು.

ಜಿಹ್ವೇಂದ್ರಿಯವೆಂಬ ಜ್ಞಾನೇಂದ್ರಿಯಕ್ಕೆ : ಅಪ್ಪುವೆಂಬ ಮಹಾಭೂತವೇ ಮೂಲ ಚೈತನ್ಯವಾಗಿಹುದು. ಅಪ್ಪುವೆಂಬ ಮಹಾಭೂತವು ರಸನೇಂದ್ರಿಯದಲ್ಲಿ ವಾಸವಾಗಿದ್ದ ಕಾಲದಲ್ಲಿ ಸುರುಚಿ, ಕುರುಚಿಗಳನ್ನು ಅವಗ್ರಹಿಸುವುದಕ್ಕೆ ಸುಸ್ಥಿರವಾಗಿ ಬರುವುದು. ಆ ಇಂದ್ರಿಯದಲ್ಲಿದ್ದ ಮಹಾಭೂತವು ನಷ್ಟವಾಗಿ ಹೋಗಲು ಆವುದಾನೊಂದು ಸುರುಚಿ, ಕುರುಚಿಗಳನ್ನು ಗ್ರಹಿಸುವುದಕ್ಕೆ ಸುಸ್ಥಿರವಾಗಿ ಬರಲರಿಯದು.

ನಾಸಿಕವೆಂಬ ಜ್ಞಾನೇಂದ್ರಿಯಕ್ಕೆ : ಪೃಥ್ವಿಯೆಂಬ ಮಹಾಭೂತವೇ ಮೂಲ ಚೈತನ್ಯವಾಗಿಪ್ಪುದು. ಆ ಪೃಥ್ವಿಯೆಂಬ ಮಹಾಭೂತವು ನಾಶಿಕೇಂದ್ರಿಯದೊಳಗೆ ವಾಸವಾಗಿರ್ದ ಕಾಲದಲ್ಲಿ ಆವುದಾನೊಂದು ಸುಗಂಧ ದುರ್ಗಂಧಗಳನ್ನು ಗ್ರಹಿಸುವುದಕ್ಕೆ ಸುಸ್ಥಿರವಾಗಿ ಬರುವುದು. ಆ ಪೃಥ್ವಿಯೆಂಬ ಮಹಾ ಮೂಲಭೂತವು ನಷ್ಟವಾಗಿ ಹೋಗಲು ಆವುದಾನೊಂದು ಸುಗಂಧ ದುರ್ಗಂಧಗಳನ್ನು ಗ್ರಹಿಸುವುದಕ್ಕೆ ಸುಸ್ಥಿರವಾಗಿ ಬರಲರಿಯದು. ಈ ಪ್ರಕಾರವಾಗಿ ಹೇಳಲ್ಪಟ್ಟಂತಹ ಇವು ತಾನೇ ಅರಿವು ರೂಪಮಾದ ಪಂಚ ಹೃಷೀಕಂಗಳ ಹಸಿಗೆಯ ವಿಚಾರವನ್ನು ತಿಳಿದು ಕೊಂಬುದು.

ದಶವಿಧ ವಾಯುಗಳು

(1) ಪ್ರಾಣವಾಯು (2) ಅಪಾನವಾಯು (3) ವ್ಯಾನ ವಾಯು (4) ಉದಾನವಾಯು
(5) ಸಮಾನವಾಯು (6) ನಾಗವಾಯು (7) ಕೂರ್ಮವಾಯು (8) ಕೃಕರವಾಯು
(9) ದೇವದತ್ತವಾಯು (10) ಧನಂಜಯವಾಯು

ದಶವಿಧವಾಯುವಿನ ವಿವರ

1. ಪ್ರಾಣವಾಯು : ಇಂದ್ರನೀಲವರ್ಣ ಹೃದಯ ಸ್ಥಾನದಲ್ಲಿ ಹೃತ್ಕಮಲ ಕರ್ಣಿಕಾ ಕುವರನೇ, ತನಗೆ ವಾಸಮಾಡಿಕೊಂಡು ಸದಾ ಚೈತನ್ಯವಾಗಿ ನೆಲಸಿದ್ದು ಅಂಗುಷ್ಟದಿಂದಾ ತುದಿ ನಾಸಾಗ್ರ ಪರಿಯಂತರವೂ ಉಚ್ಛ್ವಾಸ ನಿಶ್ವಾಸಗೈದು ಅನ್ನಮಂ ಜೀರ್ಣೀಕರಣ ಮಾಡಿಸುತ್ತಿಹುದು.

2. ಅಪಾನವಾಯು : ಹರಿತವರ್ಣ, ಗುದಸ್ಥಾನದಲ್ಲಿರ್ದು ಮಲಮೂತ್ರಂಗಳ ವಿಸರ್ಜನೆಯ ಮಾಡಿಸಿ, ಅಧೋದ್ವಾರಮಂ ಬಲಿಸಿ, ಅನ್ನರಸವ್ಯಾಪ್ತಿಯಂ ಮಾಡಿಸುತ್ತಾ,

ಅನ್ನೋದಕಗಳಂ ತೆಗೆದುಕೊಳ್ಳಬೇಕೆಂಬ ಅಪೇಕ್ಷೆಯಂ ಮಾಡಿಸುತ್ತಿಹುದು.

3. ವ್ಯಾನವಾಯು : ಗೋಕ್ಷೀರ ವರ್ಣ ಸರ್ವಸಂದಿನಲ್ಲಿರ್ದು, ತಾನಲ್ಲಿ ಸದಾ ಚೈತನ್ಯವಾಗಿ ನೆಲಸಿರ್ದು, ನೀಡಿಕೊಂಡಿಹುದನ್ನು ಮುದುಡುವುದು ಮುದುಡಿಕೊಂಡಿಹುದನ್ನು ನೀಡುವುದು. ಈ ಕೆಲಸ ಮಾಡಿಸುತ್ತಾ ಅನ್ನಪಾನಮಂ ತುಂಬಿಸುತ್ತಿಹುದು.

4. ಉದಾನವಾಯು : ಎಳೆಮಿಂಚಿನವರ್ಣ ಕಂಠಸ್ಥಾನದಲ್ಲಿರ್ದು, ತಾನಲ್ಲಿ ಸೀನುವ, ಕೆಮ್ಮುವ, ಆಕಳಿಸುವ, ಬಿಕ್ಕುವ, ಕನಸು ಕಾಣುವ, ಎಳಿಸುವ, ಅನ್ನವು ಜೀರ್ಣವಾಗದಿದ್ದಲ್ಲಿ, ವಾಂತಿಮಾಡಿಸುವ, ಕಣ್ಣಿನಲ್ಲಿ ನೀರು ಬರಿಸುವ ಮೂಗಿನಲ್ಲಿ ನೀರು ಸುರಿಸುವ ಕೆಲಸ ಮಾಡಿಸುತ್ತಾ, ಅನ್ನರಸ ಸ್ಥಾಪನಂಗೈಸುತ್ತಿಹುದು.

5. ಸಮಾನವಾಯು : ನೀಲವರ್ಣ ನಾಭಿಸ್ಥಾನದಲ್ಲಿರ್ದು ಅಪಾದ ಮಸ್ತಕ ಪರಿಯಂತರ ಆವರಿಸಿಕೊಂಡು ಅನ್ನರಸಮಂ ಎಲ್ಲಾ ನಾಳಗಳಿಗೂ, ರೋಮಗಳಿಗೂ ಹಂಚಿಕ್ಕುವುದು.

ಈ ಐದು ಪ್ರಾಣ ಪಂಚಕಗಳೆಂದು ಕರೆಯುವರು. ಆತ್ಮನು ಘಟವಿಡಿದು ಹುಟ್ಟುವಾಗ ಆತ್ಮನೊಡನೆ ಹುಟ್ಟಿ, ಆತ್ಮನು ಘಟದೊಳಗೆ ಜೀವಿಸಿಕೊಂಡ ಪರಿಯಂತರವೂ ಆತ್ಮನ ಸಕಲವ್ಯವಹಾರಗಳಿಗೆ ಸಹಾಯಕವಾಗಿ ಆತ್ಮನು ಘಟವ ಬಿಟ್ಟು ಹೋಗುವಾಗ ಸೂರ್ಯನಕಿರಣಗಳು ಸೂರ್ಯನೊಡನೈದುವ ಹಾಗೆ ಆತ್ಮನೊಡನೈದುತ್ತಿರುವಾದ ಕಾರಣ, ಇವುಗಳಿಗೆ ಪ್ರಾಣ ಪಂಚಕಗಳೆಂಬ ಅಭಿದಾನವೂ ವೇದ್ಯವಾಯಿತು.

6. ನಾಗವಾಯು : ಹಳದೀವರ್ಣ ರೋಮನಾಳದಲ್ಲಿರ್ದು, ಚಲನೆಯಿಲ್ಲದೆ ಆಡಿಸುತ್ತಿಹುದು. ಆಯಾಸಕ್ರಿಯೆಗಳನ್ನು ಮಾಡಿಸುತ್ತಿಹುದು. ಈ ವಾಯು ತಲೆದೋರಿದಾಗ ಆಲಾಪ ಧ್ವನಿಗಳಿಂದ ರಾಗರಚನೆಗಳಿಂದ ಗಾನಮಂ ಮಾಡಿಸುತ್ತಿಹುದು.

7. ಕೂರ್ಮವಾಯು : ಶ್ವೇತವರ್ಣ ಲಲಾಟದಲ್ಲಿರ್ದು, ಶರೀರ ಮುಂತಾಗಿ ದೇಹಮಂ ಪುಷ್ಟಿಮಾಡಿಕೊಂಡು, ಬಾಯಿ ಮುಚ್ಚುತ್ತಾ ತೆರೆಯುತ್ತಾ ನಯನಮಂ ಉನ್ಮೀಲನಮಂ ಮಾಡಿಸುತ್ತಿಹುದು.

8. ಕೃಕರವಾಯು : ಅಂಜನವರ್ಣ ನಾಶಿಕಾಗ್ರದಲ್ಲಿರ್ದು ಕ್ಷುಧಾದಿ ಧರ್ಮಂಗಳಂ ನೆಗಳಿಸಿ, ಹಸಿವು ಮೊದಲಾದ ಗುಣಂಗಳನುಂಟು ಮಾಡಿಸಿ, ಗಮನಾಗಮನಗಳಂ ಮಾಡಿಸುತ್ತಿಹುದು.

9. ದೇವದತ್ತವಾಯು : ಸ್ಫಟಿಕವರ್ಣ ಗುಹ್ಯಕಟಿಸ್ಥಾನದಲ್ಲಿರ್ದು, ಕುಳ್ಳಿರ್ದಲ್ಲಿ ಮಲಗಿಸಿ, ಮಲಗಿರ್ದಲ್ಲಿ ಏಳಿಸಿ, ನಿಲ್ಲಿಸಿ, ಚೀತರಿಸಿ, ಒರಲಿಸಿ, ಮಾತನಾಡಿಸುತ್ತಿಹುದು.

10. ಧನಂಜಯವಾಯು : ನೀಲವರ್ಣ ಬ್ರಹ್ಮರಂಧ್ರ ಸ್ಥಾನದಲ್ಲಿರ್ದು ಸಮುದ್ರ ಘೋಷಮಂ ಘೋಷಿಸಿ, ಮರಣ ಕಾಲಕ್ಕೆ ನಿರ್ಘೋಷಮಪ್ಪುದು.

ಪ್ರಥಮದಲ್ಲಿ ನಿರೂಪಣೆ ಮಾಡಿದ ಐದು ಪ್ರಾಣಾದಿವಾಯುಗಳು, ಹೋದರೂ ದ್ವಿತೀಯದಲ್ಲಿ ನಿರೂಪಣವ ಪಾಲಿಸಿದ ನಾಗಾದಿವಾಯುಗಳು ಹೋಗದೇ ನಾಗವಾಯು ಆತ್ಮನು ಘಟವ ಬಿಟ್ಟು ಹೋದ ಒಂದನೆ ಘಳಿಗೆಗೆ ಹೋಗುವುದು. ಕೂರ್ಮವಾಯು ಎರಡನೆ ಘಳಿಗೆಗೆ

ಹೋಗುವುದು. ಕೃಕರವಾಯು ಮೂರನೇ ಘಳಿಗೆಗೆ ಹೋಗುವುದು. ದೇವದತ್ತವಾಯು ನಾಲ್ಕನೇ ಘಳಿಗೆಗೆ ಹೋಗುವುದು. ಈ ನಾಲ್ಕು ವಾಯು ಹೋದರೂ ಧನಂಜಯ ವಾಯು ಎಂಬುದು ತಾನು ನಿಕ್ಷೇಪಿಸುವಂತಹ ದೇಹವಾದರೆ, ಆ ದೇಹವನ್ನೆಲ್ಲಾ, ಉಕ್ಕಿಸಿ, ಬಾಯಿಸಿ, ಊದಿಸಿ, ಒಡೆಸಿ ಭೌತಿಕಾಗ್ನಿಯಂ ಕೂಡಿ ಹೋಗುವುದು. ದಹನವಾಗುವ ದೇಹವಾದರೆ ಸರ್ವಾಂಗವೆಲ್ಲಾ ಸುಟ್ಟ ಬಳಿಕ ತಲೆಯನ್ನು ಘಟ್ಟೆಂದು ಸಿಡಿಸಿ, ಮಹಾವಾಯುವಂ ಕೂಡಿ ಹೋಗುವುದು.

ಈ ಹತ್ತು ವಾಯುಗಳಲ್ಲದೆ, ಲಿಂಗವಂತರ ಯೋಗದ ಪರಿವಿಡಿಯಲ್ಲಿ ಬೇರೆ ಐದು ಪ್ರಕಾರದ ಯೋಗಿಕವಾಯುಗಳಿಹುದು. ಅವುಗಳ ವಿವರ,

(1) ವೈರಂಭಣವಾಯು, (2) ಮುಖ್ಯವಾಯು, (3) ಪ್ರಭಂಜನವಾಯು (4) ಅಂತರ್‌ಮಹಾವಾಯು (5) ಮಹಾವಾಯು.

1. ವೈರಂಭಣ ವಾಯು : ಸೂಕ್ಷ್ಮ ಆಕಾರದಿಂದ ಅಂತರಂಗದಲ್ಲಿ ಪ್ರಕೃತಿಯನ್ನು ಜಾಗೃತಗೊಳಿಸಿ, ವಿಷಯ ವಾಸನೆಯನ್ನು ತೊಡೆದು ಹಾಕಿ, ವೈರಾಗ್ಯವನ್ನು ಭಕ್ತಿಯ ಪ್ರೇಮ ಸೂತ್ರದ ಶ್ರದ್ಧಾಭಕ್ತಿಯನ್ನು ನೆಲೆಗೊಳಿಸುವುದು.

2. ಮುಖ್ಯವಾಯು : 72,000 ನಾಡಿಗಳಿಗೆ ಆಧಾರವಾಗಿ, ನೈಜಭಕ್ತಿಗೆ ತೂರ್ಯತೆಯನ್ನು ಕೊಟ್ಟು ಪ್ರೇರೇಪಿಸುತ್ತಿಹುದು.

3. ಪ್ರಭಂಜನವಾಯು : ಅಷ್ಟಮದಂಗಳನ್ನು ಕ್ಷಯಗೊಳಿಸಿ, ಸಪ್ತ ವ್ಯಸನಗಳನ್ನೂ ನಿರ್ಮೂಲನ ಮಾಡಿ, ಅರಿಷಡ್ ವರ್ಗಗಳನ್ನು ನಿರಸನಮಾಡಿ, ಪ್ರಕೃತಿ ಸಂಬಂಧವಾದ ಗುಣಗಳನ್ನು ಕಳೆದು ನಿತ್ಯ ಸುಖಕ್ಕೆ ಅಧಿಕಾರವನ್ನು ಸಿದ್ಧಗೊಳಿಸುವುದು.

4. ಅಂತರ್ಮಹಾವಾಯು : ಪ್ರಕೃತಿಯಿಂದ ಬಂದು ತಾಗುವ ಶರೀರತ್ರಯದ ವ್ಯವಹಾರವನ್ನು ಕಳೆದು, ಸದ್ಭಕ್ತಿಯನ್ನು ಬೆಳೆಸಿ ಸೂರ್ಯ ಸ್ಥಾನದಲ್ಲಿದ್ದು ಜಾಗ್ರಸ್ಥಿತಿಯಲ್ಲಿಹುದು.

5. ಮಹಾಪ್ರಾಣವಾಯು : ಸರ್ವಾಂತರ್ಯಾಮಿಯಾಗಿ, ಮೂಲದಲ್ಲಿದ್ದು ಮೂಲಮಹಾನಾದ ಬ್ರಹ್ಮವಾಗಿ ಎಡೆಬಿಡದೆ ಜಾಗೃತ್, ಸ್ವಪ್ನ, ಸುಷುಪ್ತಿಯಲ್ಲಿ ಹರಿಯದೆ ಏಕಾಕ್ಷರ ಪರಬ್ರಹ್ಮವಾಗಿ ನುಡಿಯುತ್ತಿರುವುದು.

ಕರಣಗಳು

ಚಿತ್ತ, ಬುದ್ಧಿ, ಅಹಂಕಾರ, ಮನಸ್ಸು, ಜ್ಞಾನ ಇವು ಕರಣಗಳು. ಆತ್ಮನು ಪೃಥ್ವಿಯೆಂಬ ಮಹಾಭೂತಮಂ ಬೆರೆಸಲು ಚಿತ್ತವು ಪುಟ್ಟಿತ್ತು. ಆತ್ಮನು ಅಪ್ಪುವೆಂಬ ಮಹಾಭೂತಮಂ ಬೆರೆಸಲೊಡನೆ ಬುದ್ಧಿಯಾಯಿತ್ತು. ಆತ್ಮನು ಅಗ್ನಿಯೆಂಬ ಮಹಾಭೂತಮಂ ಬೆರೆಸಲೊಡನೆ ಅಹಂಕಾರವಾಯಿತ್ತು. ಆತ್ಮನು ವಾಯುವೆಂಬ ಮಹಾಭೂತಮಂ ಬೆರೆಸಲೊಡನೆ ಮನಸ್ಸಾಯಿತು. ಆತ್ಮನು ಆಕಾಶವೆಂಬ ಮಹಾಭೂತಮಂ ಬೆರೆಸಲೊಡನೆ ಜ್ಞಾನವಾಯಿತ್ತು.

ಚಿತ್ತ ಬುದ್ಧಿ ಅಹಂಕಾರ ಮನಸ್ಸು ಜ್ಞಾನ ಇವು ಪಂಚಕರಣಗಳು. ಇವು ತಮ್ಮ ತಮ್ಮ ಸಂಬಂಧವಾದ ವಿಷಯಗಳನ್ನು ಆತ್ಮನೊಳಗಿದ್ದುಕೊಂಡೇ ಗ್ರಹಿಸುತ್ತಿಹುವಾದ ಕಾರಣ ಇವಕ್ಕೆ

ಪಂಚಕರಣಗಳೆಂಬ ನಾಮವು ಪ್ರಸಿದ್ಧವಾಗಿಹುದು.

ಪಂಚಕರಣಗಳು - ಅವುಗಳ ಸಂಬಂಧಪಟ್ಟ ಗುಣಗಳು

1. **ಜ್ಞಾನ :** ಜ್ಞಾನಕ್ಕೆ ಆಕಾಶವೆಂಬ ಮಹಾಭೂತವು ಮೂಲ ಚೈತನ್ಯವು ಶರೀರವೇ ನಾನೆಂದು ಶರೀರ ಸಂಬಂಧದ ತನುಗುಣ ಪ್ರಕೃತಿಗೆ ಸಂಬಂಧಪಟ್ಟ ಆಲೋಚನೆಯನ್ನು ಪ್ರೇರೇಪಿಸುತ್ತಾ ಹೋಗುವುದು.

2. **ಮನಸ್ಸು :** ಮನಸ್ಸಿಗೆ ವಾಯುವೆಂಬ ಮಹಾಭೂತವೂ ಚೈತನ್ಯವು. ಅದು ಸಂಕಲ್ಪ ವಿಕಲ್ಪವನ್ನುಂಟು ಮಾಡಿಸುತ್ತಿಹುದು. ಮತ್ತಂತುಮಲ್ಲದೆ ಜ್ಞಾನ, ಅಜ್ಞಾನ, ಅರಿವು, ಮರವೆಗಳೆಂಬೆರಡನ್ನೇ ಅನುಗ್ರಹಿಸುತ್ತಿರುವುದು.

3. **ಅಹಂಕಾರ :** ಅಹಂಕಾರಕ್ಕೆ ಅಗ್ನಿಯೆಂಬ ಮಹಾಭೂತವು ಮೂಲಚೈತನ್ಯವು. ತನುಗುಣದ ಅಹಂಭಾವದಿಂದಾ ಅಹಂಕರಿಸುತ್ತಿಹುದು.

4. **ಬುದ್ಧಿ :** ಬುದ್ಧಿಗೆ ಅಪ್ಪುವೆಂಬ ಮಹಾಭೂತವು ಮೂಲ ಚೈತನ್ಯವಾಗಿಹುದು. ತನುಗುಣದ ವ್ಯವಹಾರಗಳನ್ನು ನಿಶ್ಚಯಿಸುವ ಕಾರ್ಯಮಾಡುತ್ತದೆ.

5. **ಚಿತ್ತ :** ಚಿತ್ತಕ್ಕೆ ಪೃಥ್ವಿಯೆಂಬ ಮಹಾಭೂತವು ಚೈತನ್ಯವಾಗಿಹುದು. ಇಲ್ಲಿ ಅಸತ್ಯವಾದ ಸಕಲ ಸಂಸಾರಾದಿ ಪ್ರಪಂಚವು ಸತ್ಯ ನಿತ್ಯವೆಂಬ ಭಾವನೆಯಿಂದಾ ಆದರಿಸಿ ಆನಂದಿಸುತ್ತಿಹುದು.

ಆತ್ಮನು ಕೋಟ್ಯಾಂತರ ಜನ್ಮಗಳಿಂದ ಎಂಭತ್ನಾಲ್ಕು ಲಕ್ಷ ಜೀವರಾಶಿಗಳಲ್ಲಿ ತಿರುಗಿ ತಿರುಗುತ್ತಾ ಆ ಜನ್ಮಗಳಿಗನುಸಾರವಾದ ಜನ್ಮದ ಗುಣಗಳು ಕರ್ಮವಶದಿಂದಾ ಆವರಿಸಿ ನಡೆಯುತ್ತಾ, ಪ್ರಕೃತಿಗೆ ವಶವಾಗಿ ಕರ್ಮೇಂದ್ರಿಯ, ಜ್ಞಾನೇಂದ್ರಿಯ, ಕರಣೇಂದ್ರಿಯಂಗಳಲ್ಲಿ ತನುಗುಣದಿಂದಾ ವ್ಯವಹರಿಸುತ್ತಾ, ಕೋಟ್ಯಾಂತರ ಜನ್ಮಗಳಲ್ಲಿ ಬರುವನು. ಮಾನವನಿಗೆ ಅನೇಕ ಜನ್ಮದ ಪುಣ್ಯದ ಪರಿಪಾಕದಿಂದಾ ಅರುಹು ತಲೆದೋರಿದಾಗ ತನ್ನ ಜನ್ಮದ ನಿವೃತ್ತಿಗಾಗಿ ಶ್ರೀ ಗುರುವನ್ನು ಮೊರೆ ಹೋಗುವನು. ಶ್ರೀ ಗುರುವು ಕೃಪಾದೃಷ್ಟಿಯಿಂದಾ ಸಂಸ್ಕಾರವನ್ನು ಮಾಡಿ ಸನ್ಮಾರ್ಗದ ನಡೆಯನ್ನು ತಿಳಿಸುವನು.

ಶ್ರೀ ಗುರುವು ತಿಳಿಸಿದ ಪ್ರಕಾರ ಪ್ರಕೃತಿ ತನುಗುಣ ನಿವೃತ್ತಿ ಮುಖವಾಗಿ, ಸದ್ಭಕ್ತಿಯಿಂದ ಆಚರಿಸಿದರೆ ಸುಸಂಸ್ಕೃತಿ ಬಂದು ತನುಗುಣ ನಿವೃತ್ತಿಯಾಗಿ, ನಿತ್ಯಸುಖವನ್ನು ಪಡೆಯುವನು.

ಪ್ರಕೃತಿಗೆವಶವಾದ ನಡೆಗಳು

ಕರ್ಮೇಂದ್ರಿಯಗಳು : ಗುದದಲ್ಲಿ ಅಮಂಗಲ ಮಲತ್ರಯ ವಾಸನೆ, ಗುಹ್ಯದಲ್ಲಿ ದುರ್ಮಾರ್ಗದ ಅನ್ಯಸ್ತ್ರೀ ಭೋಗದ ವಿಷಯಾನಂದ, ಪಾದದಲ್ಲಿ ದುರ್ಮಾರ್ಗದಲ್ಲಿ ನಡೆಯುವುದು, ಹೊಲ್ಲದ ಕೆಟ್ಟಕಾರ್ಯಗಳಿಗೆ ಓಡಾಡುವುದು, ಸ್ಥಾವರ ಕ್ಷೇತ್ರಗಳ ಭಕ್ತಿಯ ಆಚರಣೆ, ಹಸ್ತದಲ್ಲಿ ಚೌರ್ಯ ಮೊದಲಾದ ಕೆಟ್ಟ ಕೃತಿಗಳ ವ್ಯವಹಾರ, ವಾಕ್ಕಿನಲ್ಲಿ ಅಸತ್ಯವಾದ ದುರ್ವಾಕ್ಯದ ಉಚ್ಚಾರಣೆ, ನಿಂದೆ, ಇಂತೀ ದುಃಕ್ರಿಯೆಗಳ ಕುಚಿತ್ತವಳಿದು, ಗುರುಸಂಸ್ಕಾರಿಯಾಗಿ, ಸುಚಿತ್ತದಿಂದಾ ಶೌಚಶುದ್ಧಿ, ಅಧೋಗತಿಗಿಳಿವ ಮಲತ್ರಯಂಗಳ ವಿಸರ್ಜಿಸುವುದಾಗಿ, ಶಿವಾನುಭವಿಗಳ ಸತ್ಸಂಗದಲ್ಲಿ

ಆನಂದಿಸುವುದೇ ಆನಂದವಾಗಲು ಗುರುಮಾರ್ಗಾಚಾರದಲ್ಲಿ ನಡೆಯುವುದೇ ಪಾದಂಗಳಾಗಲು ಲಿಂಗಪೂಜಾನಿಷ್ಠೆಯಿಂದ ಕಾಯಕ ಮಾಡಿ, ಕಾಯಕದಿಂದ ಬಂದುದ ದಾಸೋಹವ ಮಾಡುವುದೇ ಹಸ್ತದ ಕ್ರಿಯೆಗಳಾಗಲು, ಸತ್ಯವಾಕ್ಯ ಶಿವಮಂತ್ರೋಚ್ಚಾರಣೆಯೇ ವಾಕ್ಯಮದಾಗಲು, ಶ್ರದ್ಧಾಭಕ್ತಿ ನೆಲೆಗೊಂಡು ಪೃಥ್ವಂಶ ಗುಣಗಳು ನಷ್ಟವಾಗಿ ಆಚಾರಲಿಂಗವು ನೆಲೆಗೊಳ್ಳುವುದು.

ಜ್ಞಾನೇಂದ್ರಿಯಗಳು : ನಾಸಿಕೇಂದ್ರಿಯದಲ್ಲಿ ದುರ್ವಿಷಯ ವಾಸನಾಪೇಕ್ಷೆಯ ನಾಸಿಕ ಲಂಪಟ, ಜಿಹ್ವೇಂದ್ರಿಯದಲ್ಲಿ ಪರಪಾಕ ಭಕ್ಷಣ, ಅಭಕ್ಷಭಕ್ಷಣ, ಅಪಾನಪೇಯ, ತಂಬಾಕು ಮೊದಲಾದ ಜಿಹ್ವೆಯ ಜುಂಜುಕತ್ವದ ಬಯಕೆ, ಧೂಮ್ರಪಾನ, ಮದ್ಯಪಾನ ಮೊದಲಾದ ಜಿಹ್ವಾಲಂಪಟ. ನಾಟ್ಯ, ಸಿನೆಮಾ, ಟಿ.ವಿ. ಮೊದಲಾದ ಚಿತ್ತಂಗಳ ನಾನಾವರ್ಣದ ಕುರೂಪು ನೇತ್ರಲಂಪಟ. ವಿಷಯೇಚ್ಛೆಯ ಆಭರಣಾದಿಗಳ ದುಸ್ಪರ್ಶನ ಲಂಪಟ, ಹಾಸ್ಯ, ರಸ ಪ್ರಸಂಗ ಭಂಡಶಬ್ದ, ಹಿಂಸಾಶಬ್ದ ಮೊದಲಾದ ಕುಶಬ್ದಗಳ ಶೋತ್ರ ಲಂಪಟವನಳಿದು, ನಾಶಿಕದಲ್ಲಿ ಲಿಂಗಪೂಜಾ ಪುಷ್ಪಧೂಪಾದಿ ಪರಿಮಳಗಳ ಸುವಾಸನೆಯ ವಿಷಯವಾಗಿ ಆಚರಿಸುವುದು. ಜಿಹ್ವೆಯ ಜುಂಜುಕತ್ವವನುಳಿದು ಲಿಂಗಾರ್ಪಿತ ನೈವೇದ್ಯ ಪಾದೋದಕ ಪ್ರಸಾದವಾಗಿ ಆಚರಿಸುವುದು. ನೇತ್ರದಲ್ಲಿ ಲಿಂಗರೂಪೇ ನೋಟವಾಗಿ ಆಚರಿಸುವುದು. ತ್ವಕ್ಕಿನಲ್ಲಿ ಶ್ರೀ ವಿಭೂತಿ ರುದ್ರಾಕ್ಷಿ ಶಿವಲಿಂಗಧಾರಣೆಯಲ್ಲದೇ ಅನ್ಯವಪ್ಪ ಮಾಯಾ ಚೋಹಂಗಳಂ ಧರಿಸದಿಹುದು. ಶ್ರೋತ್ರದಲ್ಲಿ ಮಹಾಮಂತ್ರ ಗುರುವಾಕ್ಯ ಅನುಭಾವಿಗಳ ಅನುಭವವಲ್ಲದೆ ಅನ್ಯವಪ್ಪ ಮಾಯಾ ಕುಶಬ್ದಂಗಳಂ ಕೇಳದಿಹುದು. ಈ ರೀತಿ ನಡೆದಲ್ಲಿ ಪ್ರಕೃತಿಗುಣಗಳಾದ ಜಲತತ್ವದ ಮಾಯಾಮೋಹಗುಣಗಳು ನಷ್ಟವಾಗಿ ಗುರುಲಿಂಗವು ನೆಲೆಗೊಳ್ಳುವುದು.

ವಿಷಯೇಂದ್ರಿಯಗಳು : ವಿಷಯಗಳ ದುರ್ವಾಸನಾಪೇಕ್ಷೆ, ಅಭಕ್ಷಭಕ್ಷಣ, ಅಪಾನಪೇಯಗಳಲ್ಲಿ ವಿಷಯಾಪೇಕ್ಷೆ. ನಾನಾರೂಪು, ಕುರೂಪುಗಳ ರೂಪುಗಳ ನೋಟದಾಪೇಕ್ಷೆ ಹಂಸತೂಲಿಕಾತಲ್ಪ ಮೊದಲಾದ ದುಸ್ಪರ್ಶನದ, ದುರ್ವಿಷಯಾಪೇಕ್ಷೆ, ಭಂಡಶಬ್ಧ, ಹೀನಶಬ್ಧ, ಅಪಶಬ್ಧ ಮೊದಲಾದವುಗಳಂ ಬಿಟ್ಟು, ಅನುಭಾವಿಗಳ ಸಂಗದಿಂದ, ಲಿಂಗಪೂಜಾ ಜಂಗಮಪೂಜಾ ಪರಿಮಳದ ಧೂಪದೀಪಾದಿಗಳ ವಾಸನೆ ಸದ್ವಾಸನೆಯನ್ನು ಲಿಂಗ ಮುಂತಾಗಿ ವಾಸಿಸುವುದು. ಅನ್ನ, ನೀರು ಎಂದು ಉಪಯೋಗಿಸುವುದ ಬಿಟ್ಟು, ಲಿಂಗಾರ್ಪಿತ ಪಾದೋದಕ, ಪ್ರಸಾದವನ್ನು ಲಿಂಗ ಮುಂತಾಗಿ ಭೋಗಿಸುವುದು. ವಿಷಯಗಳಿಂದೊಡಗೂಡಿದ ಕುರೂಪುಗಳ ಬಿಟ್ಟು ಲಿಂಗರೂಪವನ್ನು ಸಂಬಂಧಿಸಿಕೊಂಡು ನೋಡುವುದು. ಅಂಗಕ್ಕೆ ತಟ್ಟುವ ದುಸ್ಪರ್ಶನಂಗಳ ವಿಸರ್ಜಿಸಿ, ಲಿಂಗವನ್ನು ಸಂಬಂಧಿಸಿಕೊಂಡು ಸ್ಪರ್ಶಿಸುವುದು. ಪರಮಾತ್ಮನ ವಿಷಯದ ಶಬ್ದಗಳು, ಅನುಭಾವಿಗಳ ಅನುಭಾವದ ಮಾತುಗಳು, ಲಿಂಗಶಬ್ದಗಳು ಪ್ರಣವನಾದಗಳಾಗಿ ಅಳವಡಲು ಅಗ್ನಿಂಶದ ಗುಣಗಳು ನಷ್ಟವಾಗಿ ಶಿವಲಿಂಗವು ನೆಲೆಗೊಳ್ಳುವುದು.

ಪಂಚವಾಯುಗಳು

ಪ್ರಾಣವಾಯು : ಸ್ವಗೃಹ, ಸ್ವಕ್ಷೇತ್ರ ಸ್ವದೇಶಂಗಳೇ ನಮ್ಮವು ಎಂಬ ಅಭಿಮಾನವನ್ನು ಹುಟ್ಟಿಸುತ್ತಾ ವ್ಯವಹರಿಸುವುದು.

ಅಪಾನವಾಯು : ಧಾರೇಷಣ, ವಿತ್ತೇಷಣ, ಪುತ್ರೇಷಣ ಇವರೇ ನಮ್ಮವರು ಎಂದು ಅಭಿಮಾನದಿಂದ ವರ್ತಿಸುತ್ತದೆ.

ವ್ಯಾನವಾಯು : ಧನಕನಕ ವಸ್ತು ಆಭರಣಗಳಲ್ಲಿ ಅಭಿಮಾನದಿಂದ ವರ್ತಿಸುತ್ತದೆ.

ಉದಾನವಾಯು : ಪ್ರಕೃತಿವಶದಿಂದಾ ಯತೇಷ್ಟವಾಗಿ ಆಹಾರವನ್ನು ತಿನ್ನುತ್ತಾ ನಿದ್ರಾವಶನಾಗಿ ಭಯವುಳ್ಳ ಗುಣಗಳನ್ನು, ಮೈಥುನ ಮೊದಲಾದ ದುರ್ಗುಣಗಳ ಅಪೇಕ್ಷೆಯನ್ನು ಬೆಳೆಸುತ್ತದೆ.

ಸಮಾನವಾಯು : ಜಾಗ್ರತ್ತಿನಲ್ಲಿಯೂ, ಸ್ವಪ್ನದಲ್ಲಿಯೂ ನಿದ್ರೆಯಲ್ಲಿಯೂ ಮರವೆಯನ್ನು ಪುಟ್ಟಿಸುತ್ತದೆ.

ಪುಣ್ಯವಶದಿಂದ ಗುರುಸಂಸ್ಕಾರವನ್ನು ಪಡೆದ ಮಾನವನಿಗೆ ವಾಯುವಿಕಾರಗಳು ಅಡಗುತ್ತವೆ. ಆಗಮನ ವ್ಯಾದಿಗಳಂ ಬಿಟ್ಟು ಶ್ರೀ ಗುರು ಸಂಸ್ಕಾರಿಯಾಗಿ, ಶ್ರೀ ಗುರುವಿನಲ್ಲಿ ಪ್ರಾಣಾಭಿಮಾನ ಸ್ಥಿರವಾಗಲು, ಪ್ರಾಣವಾಯು ಮಂತ್ರದಿಂದ ಶ್ವಾಶೋಛ್ವಾಸಗಳು ಆಡಿ, ಲಿಂಗದಿಂದೊಡಗೂಡಿ ಆಡಲು ಮಂತ್ರಪ್ರಾಣಿಯಾಗಿ, ಲಿಂಗಪ್ರಾಣಿಯಾಗಿ ಆಚರಿಸಿದಲ್ಲಿ ಪ್ರಾಣವಾಯುವಿನ ಗುಣಂಗಳು ಕಳೆದು ಲಿಂಗಪ್ರಾಣಿಯಾಗಿ ಆಚರಿಸುವನು.

ಅಪಾನವಾಯು : ಷಡುಯಿಂದ್ರಿಯಗಳು ಷಡುಲಿಂಗದಲ್ಲಿ ಭಕ್ತಿಯಿಂದ ಆಚರಿಸಿ ನಡೆಯಲು ಅಪಾನವಾಯುವಿನ ಗುಣಗಳು ನಷ್ಟವಾಗುವವು.

ವ್ಯಾನವಾಯು : ತನುವೇ ಭಕ್ತ, ಪ್ರಾಣವೇ ಜಂಗಮವಾಗಿ ಆಚರಿಸಿದಲ್ಲಿ, ಬಹಿರಂಗ ಜಂಗಮ ಭಕ್ತಿಯಿಂದಾ, ಧನವು ಜಂಗಮಕ್ಕೆ ವ್ಯಯಿಸಲು. ಧನವು ಸತ್ಕಾರ್ಯಗಳಿಗೆ ವ್ಯಯಿಸಿದಲ್ಲಿ ವ್ಯಾನವಾಯುವಿಕಾರವು ನಷ್ಟವಾಗುವವು.

ಉದಾನವಾಯು : ತನುವಿನಲ್ಲಿ ಇಷ್ಟಲಿಂಗದ ಭಕ್ತಿ. ಮನದಲ್ಲಿ ಪ್ರಾಣಲಿಂಗದ ಭಕ್ತಿ, ಭಾವದಲ್ಲಿ ಭಾವಲಿಂಗದ ಭಕ್ತಿಯಿಂದಾ ಲಿಂಗವು ನೆಲೆಗೊಂಡು. ಸ್ಥಿರಗೊಳ್ಳಲು, ಉದಾನವಾಯುವಿನ ಗುಣ ನಷ್ಟವಾಗುವುದು.

ಸಮಾನವಾಯು : ಪ್ರಕೃತಿಯ ಗುಣಗಳನ್ನು ಬಿಟ್ಟು ಗುರುಕೊಟ್ಟ ಮಂತ್ರದಲ್ಲಿಯೂ, ಲಿಂಗದ ಧ್ಯಾನದಲ್ಲಿಯೂ, ತದ್ಗತವಾಗಿ ಆಚರಿಸಿದಲ್ಲಿ ಸಮಾನವಾಯುವಿನ ಗುಣನಷ್ಟವಾಗುವುದು.

ಮೂಲದ ವಾಯುವಿಕಾರವೆಲ್ಲವೂ ನಷ್ಟವಾಗಲು, ಮನೋವಿಕಾರವೂ ನಷ್ಟವಾಗಿ ಕುಮನವು ಸುಮನವಾಗಿ ಜಂಗಮಲಿಂಗವು ನೆಲೆಗೊಳ್ಳುವುದು.

ಷಟ್‌ಕರಣಗಳು

ಚಿತ್ತ, ಬುದ್ಧಿ, ಅಹಂಕಾರ, ಮನಸ್ಸು, ಜ್ಞಾನ, ಭಾವ. ಬ್ರಹ್ಮನಾನೆಂಬ ವಾಗಾದ್ವೈತದ ಭ್ರಮೆಯ ಸಾಧನೆಯಂ ಮಾಡಲು ಕರಣಗಳ ಭ್ರಮೆಗಳು ಉಲ್ಬಣಗೊಳ್ಳುವವು.

1. ಚಿತ್ತ : ಯಮ, ನಿಯಮಾದಿ ಅಷ್ಟಾಂಗಯೋಗಂಗಳ ಅಂಗಸಾಧನೆಯ ಹಮ್ಮಿನ ಮತ್ತತ್ವದಿಂದಾ ವ್ಯವಹರಿಸಬೇಕೆಂಬ ಬಯಕೆಯ ಭ್ರಮೆಯಲ್ಲಿರುವುದು.

2. ಬುದ್ಧಿ : ಚತುರ್ಮುದ್ರಾಂಗ ಲಕ್ಷಣ. ಜೀವ, ಮನ, ಸಂಚಲ, ಹಮ್ಮಿನ ಮತ್ತತ್ವದಿಂದಾ ವ್ಯವಹರಿಸುವ ಬಯಕೆಯ ಭ್ರಮೆಯಲ್ಲಿರುವುದು.

3. ಅಹಂಕಾರ : ಅಣಿಮಾದ್ಯಷ್ಟ ಸಿದ್ಧಿಗಳಿಂದಾತ್ಮ ಬುದ್ಧಿಹೀನತ್ವದ ಸಂಚಲ ಹಮ್ಮಿನ ಮತ್ತತ್ವದಿಂದಾ ವ್ಯವಹರಿಸುವ ಬಯಕೆಯ ಭ್ರಮೆಯಲ್ಲಿರುವುದು.

4. ಮನಸ್ಸು : ವಾಯುಯೋಗ, ಮನಯೋಗ, ಲಯಯೋಗ, ಹಠಯೋಗ, ರಾಜಯೋಗಂಗಳ ತಸ್ಕರ ಭ್ರಾಂತಿ ಸಂಚಲ ಹಮ್ಮಿನ ಮತ್ತತ್ವದಿಂದಾ ವ್ಯವಹರಿಸುವ ಬಯಕೆಯ ಭ್ರಮೆಯಲ್ಲಿರುವುದು.

5. ಜ್ಞಾನ : ಪಿಂಡ ಬ್ರಹ್ಮಾಂಡಯೋರೈಕ್ಯಂ ಬ್ರಹ್ಮೋಹಂ ಎಂಬ ಅವಧೂತ ಸಂಚಲ ಹಮ್ಮಿನ ಮತ್ತತ್ವದಿಂದಾ ವ್ಯವಹರಿಸುವ ಬಯಕೆಯ ಭ್ರಮೆಯಲ್ಲಿರುವುದು.

6. ಭಾವ : ಯತಿಯೋಗ ಸಿದ್ಧತ್ವ, ಮುದ್ರಾಲಕ್ಷಣ ಭ್ರಾಂತಿ, ವೇದಾಂತವೆಂಬ ಅಂಗಯೋಗ ಮಾರ್ಗಂಗಳ ಮತ್ತತ್ವದಿಂದಾ ವ್ಯವಹರಿಸುವ ಬಯಕೆಯ ಭ್ರಮೆಯಲ್ಲಿರುವುದು. ಇಂತಿ ಭ್ರಾಂತಿಯ ಬಯಕೆಯ ಮಾರ್ಗಂಗಳಂ ಬಿಟ್ಟು, ಗುರುಕೊಟ್ಟ ಲಿಂಗವಲ್ಲದೆ ಅನ್ಯವ ನೆನೆಯದೆ ಪೂಜಿಸದಿಪ್ಪುದೇ ಲಿಂಗಾಚಾರ. ಸಜ್ಜನನಾಗಿ, ಸತ್ಕಾಯಕ ಮಾಡಿ ದಾಸೋಹಮಾಡಿ ಸದ್ಭಕ್ತಿಯಿಂದಿರುವುದೇ ಸದಾಚಾರ. ಸರ್ವಭಕ್ತರೆಲ್ಲರೂ ಸಾಕ್ಷಾತ್ ಪರಮಾತ್ಮನೆಂದು ಸದ್‌ಭಕ್ತಿಯಿಂದ ನಡೆಯುವುದೇ ಶಿವಾಚಾರ. ಸದ್‌ಭಕ್ತಿಯ ತತ್ವಕ್ಕೆ, ಆಚರಣೆಗೆ ಸಮಾಜದಲ್ಲಿ ತೊಂದರೆ ಕೊಡುವುದನ್ನು ಕಂಡು ಅವರ ದುಷ್ಟಗುಣಗಳನ್ನು ಬಿಡಿಸಿ ಸದಾಚಾರವನ್ನು ತಿಳಿಸುವುದೇ ಗಣಾಚಾರ. ಶಿವಶರಣರೆಲ್ಲರೂ ಹಿರಿಯರು, ತಾನು ಅವರ ಸೇವಕನೆಂಬ ಭಾವನೆಯಿಂದಾ ನಡೆಯುವುದೇ ಭೃತ್ಯಾಚಾರ. ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲದ ತತ್ವದಂತೆ ನಡೆಯುವುದೇ ಧರ್ಮಾಚಾರ.

ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ, ಭೃತ್ಯಾಚಾರ, ಧರ್ಮಾಚಾರಂಗಳ ಪಾಲಿಸುತ್ತಾ, ಸುಜ್ಞಾನದಿಂದ ನಡೆದೊಡೆ ಪ್ರಸಾದಲಿಂಗವು ನೆಲೆಗೊಳ್ಳುವುದು. ಭಾವದ ಭ್ರಮೆಗಳಾದ ಪ್ರಪಂಚ, ಸಂಕಲ್ಪ, ಆಸೆ, ಅಜ್ಞಾನ, ಮರಹು, ಇಂತಿರುವ ಮಾಯಾ ಮಿಥ್ಯವಂಬಿಟ್ಟು, ಸತ್, ಚಿತ್, ಆನಂದ, ನಿತ್ಯತ್ವ, ಪರಿಪೂರ್ಣತ್ವ, ಅಖಂಡತ್ವ, ಸ್ವರೂಪ ತಾನೆಯೆಂಬ ಅರುಹಿನ ಪರಂಜ್ಯೋತಿ ಪ್ರಭೆಯು ನೆಲೆಗೊಳ್ಳುವಲ್ಲಿ ಮಹಾಲಿಂಗವು ಸ್ಥಿರವಾಗಿ ನೆಲೆಗೊಳ್ಳುವುದು.

ಶಕ್ತಿಗಳು

ಕ್ರಿಯಾಶಕ್ತಿ, ಜ್ಞಾನಶಕ್ತಿ, ಇಚ್ಛಾಶಕ್ತಿ, ಆದಿಶಕ್ತಿ, ಪರಾಶಕ್ತಿ, ಚಿತ್‌ಶಕ್ತಿ. ಆತ್ಮನ ಚೇತನದಿಂದಾ ಶಕ್ತಿಗಳು ವರ್ತಿಸುತ್ತವೆ.

ಕ್ರಿಯಾಶಕ್ತಿಯು ಕರ್ಮೇಂದ್ರಿಯಗಳಲ್ಲಿ, ಜ್ಞಾನಶಕ್ತಿಯು ಜ್ಞಾನೇಂದ್ರಿಯಗಳಲ್ಲಿ, ಇಚ್ಛಾಶಕ್ತಿಯು ವಿಷಯೇಂದ್ರಿಯಗಳಲ್ಲಿ, ಆದಿಶಕ್ತಿಯು ಪಂಚವಾಯುಗಳಲ್ಲಿ, ಪರಾಶಕ್ತಿಯು ಪಂಚಕರಣಗಳಲ್ಲಿ, ಶಕ್ತಿಯ ಕ್ರಿಯೆಗಳು ನಡೆಯುತ್ತವೆ. ಈ ಶಕ್ತಿಗಳು ಪ್ರಕೃತಿಗೆ ವಶವಾಗಿ ಅಜ್ಞಾನದಿಂದ ನಡೆಯಲು

ಕಾರಣವಾಗುತ್ತವೆ. ಇತ್ತ ಗುರು ಕಾರುಣ್ಯವ ಪಡೆದು, ಲಿಂಗಾಂಗ ಸಂಬಂಧಿಯಾಗಿ ಆಚರಿಸುವ ಶಿವಶರಣರುಗಳಿಗೆ ದೈವೀ (ಸತ್) ಶಕ್ತಿಗಳಾಗಿ ಕಾರ್ಯಗೈಯ್ಯುವವು.

ಕ್ರಿಯಾಶಕ್ತಿಯು ಎರಡು ವಿಧವಾಗಿ ವ್ಯವಹರಿಸುವುದು.

ಲೋಕದಾತ್ಮರುಗಳಿಗೆ ಕ್ರಿಯಾಶಕ್ತಿಯು ಅಸಿ (ಕತ್ತಿ) ಯಿಂದಾ ಕೆಲ್ಸ ಮಾಡುವುದು ಮಸಿ ಇದ್ದಿಲು ಮುಂತಾದ ವ್ಯವಹಾರ ಕೃಷಿ, ವಾಣಿಜ್ಯ, ಯೋಜನೆ, ಗೋಪಾಲತ್ವವೆಂಬ ಷಟ್‌ಕರ್ಮಗಳನ್ನು ತನುಗುಣದಿಂದಾ ಕ್ರಿಯೆಗಳನ್ನು ಮಾಡುವುದು.

ಇತ್ತ ಗುರುಕಾರುಣ್ಯವ ಪಡೆದು, ಲಿಂಗಾಂಗ ಸಂಬಂಧಿಯಾಗಿ ಆಚರಿಸುವ ಶಿವಶರಣರುಗಳಿಗೆ, ಗುರುಭಕ್ತಿ, ಲಿಂಗಪೂಜೆ, ಜಂಗಮದಾಸೋಹ, ಪಾದೋದಕ ಸೇವನೆ ಪ್ರಸಾದಾರ್ಪಣ ಮುಂತಾದ ಸನ್ನಡೆಯನ್ನುಂಟು ಮಾಡುವುದು.

ಕರ್ಮೆಂದ್ರಿಯಗಳೈದು ಕ್ರಿಯಾಶಕ್ತಿಯ ಸ್ವರೂಪವಿತ್ತಾದ ಕಾರಣ, ವಾಗಾದಿ ಕರ್ಮೆಂದ್ರೀಯಗಳೊಳಗೆ, ಮಂತ್ರದ ನೆನಹಾದ ಬಸವಾ ಶಿವಾ ಎಂಬುದೇ ವಾಕ್ಕು. ಶಿವಾಚಾರವನ್ನು (ಲಿಂಗಾಚಾರವನ್ನು) ಧೃಡವಿಡಿವುದೇ ಪಾಣಿ. ಗುರುಮಾರ್ಗಾಚಾರದಲ್ಲಿ ನಡೆವುದೇ ಪಾದ. ಶಿವಾನುಭಾವಿಗಳ ಸತ್ಸಂಗದಲ್ಲಿ ಆನಂದಿಸುವುದೇ ಗುಹ್ಯ. ಮಲತ್ರಯಂಗಳ ವಿಸರ್ಜಿಸುವುದೇ ಗುದ. ಈ ರೀತಿಯಲ್ಲಿ ವಾಗಾದಿ ಕರ್ಮೆಂದ್ರಿಯಗಳು ನಿವೃತ್ತಿಯಾಗಿ ಕ್ರಿಯಾಶಕ್ತಿಯು ಪರಮಾತ್ಮನದಾಗಿ ಆಚರಿಸುತ್ತದೆ.

ಜ್ಞಾನಶಕ್ತಿಯು ಎರಡು ವಿಧವಾಗಿ ಆಚರಿಸುವುದು. ಲೋಕದಾತ್ಮರುಗಳಿಗೆ ಗುರು ಸಾಮಾನ್ಯ ನರನೆಂತಲೂ, ಲಿಂಗವು ಶಿಲೆಯೆಂತಲೂ, ಜಂಗಮವು ಸಾಮಾನ್ಯ ಮಾನವನೆಂತಲೂ, ಪಾದೋದಕವು ಸಾಮಾನ್ಯ ನೀರೆಂತಲೂ, ಪ್ರಸಾದವು ಎಂಜಲೆಂತಲೂ ಪ್ರೇರೇಪಿಸಿ ಕೊಡುತ್ತಿಹಳು. ಇತ್ತ ಗುರುಕಾರುಣ್ಯವ ಪಡೆದು ಲಿಂಗಾಂಗ ಸಂಬಂಧಿಯಾಗಿ ಆಚರಿಸುವ ಶಿವಶರಣರುಗಳಿಗೆ, ನಿಃಕಲಬ್ರಹ್ಮದ ಸತ್ ಸ್ವರೂಪವೇ ಗುರುವೆಂತಲೂ, ನಿಃಕಲ ಬ್ರಹ್ಮದ ಚಿದ್ರೂಪವೇ ಲಿಂಗವೆಂತಲೂ, ನಿಃಕಲಬ್ರಹ್ಮದ ಆನಂದ ಸ್ವರೂಪವೇ ಜಂಗಮವೆಂತಲೂ, ನಿಃಕಲ ಬ್ರಹ್ಮದ ನಿತ್ಯತ್ವವೇ ಪಾದೋದಕವೆಂತಲೂ, ನಿಃಕಲ ಬ್ರಹ್ಮದ ಪರಿಪೂರ್ಣತ್ವವೇ ಪ್ರಸಾದವೆಂತಲೂ, ನಿಃಕಲಬ್ರಹ್ಮದ ಅಖಂಡತ್ವವೇ ಸದ್‌ಭಕ್ತಿಯೆಂಬ ಸದಾಜ್ಞಾನವನ್ನೇ ಪ್ರೇರೇಪಿಸಿ ಕೊಡುತ್ತಿಹಳು.

ಶ್ರೋತ್ರಾದಿ ಜ್ಞಾನೇಂದ್ರಿಯುಗಳೈದು. ಜ್ಞಾನಶಕ್ತಿಯ ಸ್ವರೂಪಿದ್ದಿತಾದ ಕಾರಣ, ಶ್ರೋತ್ರದಲ್ಲಿ ಪರಮಾತ್ಮನ ವಿಷಯ, ವಚನಾನುಭವಿಗಳ ಗುರು, ಜಂಗಮರ, ತತ್ವಾನುಭವವಲ್ಲದೇ ಅನ್ಯವಪ್ಪ ಮಾಯಾ ಕುಶಾಸ್ತ್ರಗಳಂ ಕೇಳದಿಹುದು. ತ್ವಕ್ಕಿನಲ್ಲಿ ಶ್ರೀವಿಭೂತಿ ರುದ್ರಾಕ್ಷಿ ಶಿವಲಿಂಗ ಧಾರಣೆಯಲ್ಲದೆ ಅನ್ಯವಪ್ಪ ಮಾಯಾ ಚೋಹಂಗಳಂ ಧರಿಸದಿಹುದು. ನೇತ್ರದಲ್ಲಿ ಶಿವಲಿಂಗ ನಿರೀಕ್ಷಣೆಯಲ್ಲದೆ, ಅನ್ಯವಪ್ಪ ಮಾಯಾ ಕುಚಿತ್ರಗಳು, ಟಿ.ವಿ. ಮೊದಲಾದ ಮಾಯಾ ಕುರೂಪುಗಳ ನೋಡದಿಹುದು.

ಜಿಹ್ವೆಯಲ್ಲಿ ಲಿಂಗಾರ್ಪಿತ ಪಾದೋದಕ ಪ್ರಸಾದವಲ್ಲದೇ ಅನ್ಯವಪ್ಪ ಮಾಯಾ ಉಚ್ಚಿಷ್ಟಂಗಳಂ, ಭುಂಜಿಸದಿಹುದು. ಘ್ರಾಣದಲ್ಲಿ ಶಿವನಿರ್ಮಾಲ್ಯ ಧೂಪದೀಪಾದಿಗಳ ವಾಸನೆಯಲ್ಲದೆ, ಅನ್ಯವಪ್ಪ ಮಾಯಾ ದುರ್ವಾಸನೆಗಳ ವಾಸಿಸದಿಹುದು. ಈ ರೀತಿಯಲ್ಲಿ

ಆಚರಿಸಿದಲ್ಲಿ ಜ್ಞಾನೇಂದ್ರಿಯಗಳು ನಿವೃತ್ತಿಯಾಗಲು ಜ್ಞಾನಶಕ್ತಿಯು ಪರಮಾತ್ಮನದಾಗಿ ಆಚರಿಸುತ್ತದೆ.

ಇಚ್ಛಾಶಕ್ತಿಯೂ ಎರಡು ವಿಧವಾಗಿ ಆಚರಿಸುವುದು. ಅದು ಹೇಗೆಂದೊಡೆ : ಲೋಕದಾತ್ಮರುಗಳಿಗೆ, ಹುಸಿ, ಕಳವು, ಪರದಾರ, ಹಿಂಸೆ, ಅತಿಕಾಂಕ್ಷೆ ಎಂಬ ಪಂಚಮಹಾಪಾತಕಂಗಳ ಮೇಲಣಿಚ್ಛೆಯನ್ನುಂಟು ಮಾಡಿಕೊಡುತ್ತಿಹಳು. ಇತ್ತ ಗುರುಕಾರುಣ್ಯವ ಪಡೆದು, ಲಿಂಗಾಂಗ ಸಂಬಂಧಿಗಳಾಗಿ ಆಚರಿಸುವಂತಹ ಶಿವಶರಣರುಗಳಿಗೆ ಪಂಚಾಚಾರಗಳ ಪಾಲನೆಯ ಮೇಲಣಿಚ್ಛೆಯನ್ನುಂಟು ಮಾಡಿಕೊಡುತ್ತಿಹಳು.

ಶಬ್ದಾದಿ ವಿಷಯಗಳೈದು ಇಚ್ಛಾಶಕ್ತಿಯ ಸ್ವರೂಪಿದ್ದಿತ್ತಾದ ಕಾರಣ, ಶಬ್ದ ಗುರುಜಂಗಮರ ಶರಣರ ಅನುಭಾವಿಗಳ ಶಬ್ದವಾಗಿ ನಡೆಯುವುದು. ಸ್ಪರ್ಶನ ಲಿಂಗಪೂಜೆ ಮತ್ತು ಸತ್ಕಾಯಕ ಮಾಡುವುದು, ಆಚರಿಸುವುದು. ರೂಪು ಶಿವಶರಣರ ಲಿಂಗದ ರೂಪೇ ಪರಿವರ್ತನೆಯಾಗಿ ಆಚರಿಸುವುದು. ರಸ, ಪಾದೋದಕ, ಪ್ರಸಾದ ಸೇವನೆಯಾಗಿ ಆಚರಿಸುವುದು. ವಾಸನೆ ಲಿಂಗನಿರ್ಮಾಲ್ಯ ಗಂಧವಾಸನೆಯಾಗಿ ಶಬ್ದಾದಿ ವಿಷಯಗಳೈದು ನಿವೃತ್ತಿಯಾಗಿ ಇಚ್ಛಾಶಕ್ತಿಯು ಪರಮಾತ್ಮನದಾಗಿ ಆಚರಿಸುತ್ತದೆ.

ಆದಿಶಕ್ತಿಯು ಎರಡು ವಿಧವಾಗಿ ಆಚರಿಸುತ್ತದೆ. ಲೋಕದಾತ್ಮರುಗಳಿಗೆ ಜಾತಿ, ವರ್ಣ, ಆಶ್ರಮ, ಕುಲಗೋತ್ರ ಸೂತ್ರ ನಾಮಾಚಾರಗಳನ್ನೇ ಆದಿಯ ಮಾಡಿಕೊಡುತ್ತಿಹಳು. ಇತ್ತ ಗುರುಕಾರುಣ್ಯವ ಪಡೆದು, ಲಿಂಗಾಂಗ ಸಂಬಂಧಿಯಾಗಿ, ಭಕ್ತಿ ಜ್ಞಾನ ವೈರಾಗ್ಯ ತ್ರಿವಿಧವನ್ನೇ ಆದಿಯ ಮಾಡಿಕೊಡುತ್ತಿಹಳು. ಕುಲವೇ ಲಿಂಗದ ಕುಲವಾಗಿಯೂ, ಗೋತ್ರವೇ ಬಸವನ ಗೋತ್ರವಾಗಿಯೂ, ಸೂತ್ರವೇ ಲಿಂಗದ ಸೂತ್ರವಾಗಿಯೂ, ಸಕಲಸದ್‌ಭಕ್ತಗಣಂಗಳೇ ತಂದೆ-ತಾಯಿ ಬಂಧು-ಬಳಗಗಳಾಗಿ ಅಳವಡಿಸಿಕೊಂಡು ಆಚರಿಸುವಂತಹ ಆಚರಣೆಯನ್ನೇ (ಆದಿಯ) ಮಾಡಿಕೊಡುತ್ತಿಹಳು.

ಮತ್ತಂತುಮಲ್ಲದೆ ಪ್ರಾಣಾದಿವಾಯುಗಳು ಆದಿಶಕ್ತಿಯ ಸ್ವರೂಪಿದ್ದಿತ್ತಾದ ಕಾರಣ, ವಾಯುವಿಕಾರವೆಲ್ಲವೂ ಹೋಗಿ ಪ್ರಾಣವಾಯುವೇ ಸತ್ ಎಂತಲೂ, ಅಪಾನವಾಯುವೇ ಚಿತ್ ಎಂತಲೂ, ವ್ಯಾನ ವಾಯುವೇ ಆನಂದವೆಂತಲೂ, ಉದಾನವಾಯುವೇ ನಿತ್ಯತ್ವವೆಂತಲೂ, ಸಮಾನವಾಯುವೇ ಪರಿಪೂರ್ಣತ್ವವೆಂತಲೂ, ಇನ್ನುಳಿದ ವಾಯುಗಳೆಲ್ಲವೂ ಅಖಂಡತ್ವವನ್ನುಂಟು ಮಾಡಿಕೊಡುತ್ತಿಹವು. ಮೇಲ್ಕಂಡ ವಾಯುಗಳೆಲ್ಲವೂ, ಪರಮಾತ್ಮನ ಲಕ್ಷಣ ಸ್ವರೂಪಿಯಾಗಿ ನಿವೃತ್ತಿಯಾದುದೇ ಆದಿಶಕ್ತಿಯು.

ಪರಾಶಕ್ತಿಯು ಎರಡು ವಿಧವಾಗಿ ಆಚರಿಸುತ್ತದೆ. ಲೋಕದಾತ್ಮರುಗಳಿಗೆ ಇಂದ್ರಿಯ ವಿಷಯಗಳೇ ಪ್ರಾಪಂಚಿಕವಾದ ಹೋರಾಟವನ್ನೇ ಪರವಶ ಮಾಡಿಕೊಡುತ್ತಿಹಳು, ಇತ್ತ ಗುರು ಕಾರುಣ್ಯವ ಪಡೆದು, ಲಿಂಗಾಂಗ ಸಂಬಂಧಿಯಾಗಿ ಆಚರಿಸುವ ಶಿವಶರಣರುಗಳಿಗೆ ಅಂಗವೇ ಶರಣನಾಗಿ, ಶರಣನೇ ಸತಿಯಾಗಿ, ಲಿಂಗವೇ ಪತಿಯಾಗಿ, ಇಂದ್ರಿಯಗಳೆಲ್ಲಾ ಲಿಂಗೇಂದ್ರೀಯಗಳಾಗಿ, ವಿಷಯಗಳೆಲ್ಲಾ ಲಿಂಗಪ್ರಸಾದವಾಗಿ, ಅಳವಡಿಸಿಕೊಂಡು ಆಚರಿಸುವಂತಹ ಆಚರಣೆಯನ್ನು, ಪರವಶಮಾಡಿಕೊಡುತ್ತಿಹಳು.

ಮತ್ತಂತುಮಲ್ಲದೆ, ಚಿತ್ತಾದಿ ಕರಣಗಳು ಪರಾಶಕ್ತಿಯ ಸ್ವರೂಪಿದ್ದಿತಾದ ಕಾರಣ, ಚಿತ್ತದಲ್ಲಿ ದಾಸೋಹ ಭಾವನೆ, ಬುದ್ಧಿಯಲ್ಲಿ ನಿರ್ವಂಚನೆ, ಅಹಂಕಾರದಲ್ಲಿ ನಿರಹಂಕಾರ, ಮನದಲ್ಲಿ

ಮಂತ್ರಧ್ಯಾನ, ಜ್ಞಾನದಲ್ಲಿ ಅಜ್ಞಾನವಳಿದು, ಲಿಂಗ ಸುಜ್ಞಾನವಾಗಿ, ಚಿತ್ತಾದಿಕರಣಂಗಳು ನಿವೃತ್ತಿಯಾದುದೇ ಪರಾಶಕ್ತಿಯು.

ಚಿತ್‌ಶಕ್ತಿಯು ಎರಡು ವಿಧವಾಗಿ ಆಚರಿಸುತ್ತದೆ. ಲೋಕದಾತ್ಮರುಗಳಿಗೆ ಅಹಂ ಮಾನ್ಯತೆಯಿಂದಾ ಭಿನ್ನಭಕ್ತಿಯಿಂದಾ ಉಲಿವ ಮೂಲ ಅಹಂಕಾರವನ್ನೇ ಉಂಟುಮಾಡಿ ಕೊಡುತ್ತಿಹಳು.

ಇತ್ತ ಗುರುಕಾರುಣ್ಯವ ಪಡೆದು, ಲಿಂಗಾಂಗ ಸಂಬಂಧಿಯಾಗಿ ಆಚರಿಸುವಂತಹ ಶಿವಶರಣರುಗಳಿಗೆ ತಮ್ಮ ಸ್ವಸ್ವರೂಪವಾದ ನಿಜವನರಿವಂತಹ ಮೂಲಭಾವನೆಯನ್ನುಂಟು ಮಾಡಿಕೊಡುತ್ತಿಹಳು.

ಮತ್ತಂತುಮಲ್ಲದೆ, ಭಾವಾದಿಕರಣಂಗಳೈದು ಚಿತ್‌ಶಕ್ತಿಯ ಸ್ವರೂಪಿದ್ದಿತಾದ ಕಾರಣ, ಭಾವದಲ್ಲಿ ಸಹಜ ಸ್ವರೂಪದ ಭಕ್ತಿಯಾಗಿ, ಚಿತ್ತವೇ ಹಸ್ತವಾಗಿ, ಮನವೇ ಲಿಂಗವಾಗಿ, ಹೃದಯವೇ ಮುಖವಾಗಿ, ಪರಿಣಾಮವೇ ಪ್ರಸಾದವಾಗಿ, ಭಾವಾದಿಕರಣಗಳೈದು ನಿವೃತ್ತಿಯಾದುದೇ ಚಿತ್‌ಶಕ್ತಿಯು.

ಇಚ್ಛಾಶಕ್ತಿಯು ಇಂದ್ರಿಯಗಳಾದ ವಿಷಯಂಗಳು ಅಗ್ನಿತತ್ವ ಸಂಬಂಧಗಳೆಂದೂ ನಿರೂಪಿಸುವೆವು. ಕರ್ಮೇಂದ್ರಿಯಗಳು ಭೂತತ್ವದ ಪಂಚಕಗಳೆಂದೂ, ಜ್ಞಾನೇಂದ್ರಿಯಗಳು, ಜಲತತ್ವದ ಪಂಚಕಗಳೆಂದೂ, ನಿರೂಪಿಸುವೆವು. ಕೆಲವು ವಚನಕಾರರು, ಜ್ಞಾನೇಂದ್ರಿಯವು, ಅಗ್ನಿತತ್ವ ವಿಭಾಗವೆಂದು, ನಿರೂಪಿಸಿರುವರು, ಭೂತತ್ವದ, ಜಲತತ್ವದ ಇಂದ್ರಿಯಗಳು, ಸ್ವತಂತ್ರವಾಗಿ ಕಾಣುತ್ತವೆ. ಅಗ್ನಿತತ್ವವೂ ವಸ್ತುವಿನ ಮರೆಯಲ್ಲಿ ಪ್ರಕಟವಾಗುವುದಾದ ಕಾರಣ, ವಿಷಯಗಳು ಸಾಕಾರವಸ್ತುವಿನ ಆಧಾರದಿಂದ ಪ್ರಕಟವಾದ ಕಾರಣ, ವಿಷಯಗಳು ಅಗ್ನಿತತ್ವದ ಭಾಗವೆಂದು ನಿರೂಪಿಸಲಾಗಿದೆ.

ಪರಿಪೂರ್ಣಾಂಗ, ಪರಿಪೂರ್ಣಲಿಂಗದ ಆಚರಣೆಯೆಂಬುದು ತಾನು ಸರ್ವರಿಗೂ ವೇದ್ಯವಾದೀತೇ ಕ್ರಿಯಾಬಾಹ್ಯರಾದ ವೇದಾಂತಿಗಳಿಗೆ? ಜ್ಞಾನ ಬಾಹ್ಯರಾದ ಸಿದ್ಧಾಂತಿಗಳಿಗೆ, ಜ್ಞಾನಕ್ರಿಯಾ ಬಾಹ್ಯರಾದ ಯೋಗಾಭ್ಯಾಸಿಗಳಿಗೆ ವೇದ್ಯವಾಗದು. ಇವರಿಗೆ ಷಟ್‌ಕರಣಗಳ ವರ್ತನೆ ನಷ್ಟವಾಗದ ಕಾರಣ ಸಾಧ್ಯವಾಗದು. ಷಟ್‌ಕರಣಗಳು, ಸುಚಿತ್ತ, ಸುಬುದ್ಧಿ, ನಿರಹಂಕಾರ, ಸುಮನ, ಸುಜ್ಞಾನ, ಸದ್‌ಭಾವ.

1. **ಸುಚಿತ್ತಾ** : ಹೊನ್ನು, ಹೆಣ್ಣು, ಮಣ್ಣು, ಸಕಲ ಕರಣಗಳಿಂದೊಡಗೂಡಿ, ಸತಿಸುತಾದಿಗಳ ಮೋಹವೇ ಕುಚಿತ್ತ. ಇವರುಗಳ ಮೇಲಣ ಮೋಹವನ್ನುಳಿದು, ಲಿಂಗ ಶರೀರದಲ್ಲಿ ಲಿಂಗಧಾರಿಯಾಗಿ ಲಿಂಗ ಮೋಹಿಯಾಗಿ, ಲಿಂಗಯ್ಯನ ಹೆಂಡರು, ಲಿಂಗಯ್ಯನ ಮಕ್ಕಳು, ಸೊತ್ತು ಲಿಂಗಯ್ಯನದು. ಲಿಂಗಯ್ಯನ ವ್ಯವಹಾರವಾಗಿ, ನಿರ್ಮೋಹಿಯಾಗಿ ಆಚರಿಸುವುದೇ ಸುಚಿತ್ತವು.

ಈ ನಡೆಯು ಸ್ಥಿರಗೊಂಡಾಗ ಪಂಚಾಚಾರ ಸ್ವರೂಪವಾದ ಆಚಾರ ಬ್ರಹ್ಮವು ಘ್ರಾಣೇಂದ್ರಿಯದಲ್ಲಿ ನೆಲೆಗೊಳ್ಳುವುದು.

2. **ಸುಬುದ್ಧಿ** : ಪರಧನ, ಪರಸತಿ, ಪರದೈವ, ಪರನಿಂದೆ, ಪರಹಿಂಸೆ ಇವೇ ಪಂಚಮಹಾಪಾತಕಂಗಳೊಡನೆ ಕೂಡಿಕೊಂಡು ಆಚರಿಸುವುದೇ ಕುಬುದ್ಧಿ. ಇಂತಪ್ಪ

ಕುಬುದ್ಧಿಯೆಂಬುದು ಕೆಡಲು, ಗುರುಕೃಪೆಯು ಪಡೆದು ಅಷ್ಟಾವರಣ ಸಂಬಂಧದಿಂದಾ ಗುರುಮಾರ್ಗದಲ್ಲಾಚರಿಸಿ, ಷಡಾಚಾರಗಳನ್ನು ಪಾಲಿಸುತ್ತಾ, ಏಕಲಿಂಗ ನಿಷ್ಠಾಪರನಾಗಿ ಆಚರಿಸುವುದು, ಸುಬುದ್ಧಿ. ಇದು ಸ್ಥಿರವಾಗಿ ಇಂಬುಗೊಂಡಾಗ ಗುರೂಪದೇಶಿಸಿದ ಮಂತ್ರವು ಜಿಹ್ವೆಯಲ್ಲಿ ನೆಲೆಗೊಂಡು ಸುಬುದ್ಧಿಯೆಂಬ ಕರಕಮಲಕ್ಕೆ ಮಂತ್ರಸ್ವರೂಪರಾದ ಗುರುಮೂರ್ತಿಯಾದ ಗುರುಲಿಂಗವು ಜಿಹ್ವೆಯಲ್ಲಿ ನೆಲೆಗೊಳ್ಳುವುದು.

3. ನಿರಹಂಕಾರ : ತನುತ್ರಯ ಸಂಬಂಧವಾದ ರೂಪು, ರುಚಿ, ತೃಪ್ತಿಗಳನ್ನು ಲಿಂಗಾರ್ಪಿತ ವಿಹೀನವಾಗಿ ಜೀವಭಾವದಿಂದ ಭುಂಜಿಸಿ, ದೇಹೋಹಂ ಎಂದು ಉಲಿಹುದೇ ಅಹಂಕಾರ. ಇಂತಪ್ಪ ಅಹಂಕಾರವು ನಷ್ಟವಾಗಬೇಕಾದರೆ, ಗುರುಕಾರುಣ್ಯವ ಪಡೆದು ಸ್ಥೂಲ ತನುವಿನಲ್ಲಿ ಇಷ್ಟಲಿಂಗವು ಸಂಬಂಧವಾಗಿ, ಸೂಕ್ಷತನುವಿನಲ್ಲಿ ಪ್ರಾಣಲಿಂಗ ಸಂಬಂಧವಾಗಿ, ಕಾರಣ ತನುವಿನಲ್ಲಿ ಭಾವಲಿಂಗವ ಸಂಬಂಧಿಸಿಕೊಂಡು, ಇಷ್ಟಲಿಂಗಕ್ಕೆ ರೂಪನ್ನರ್ಪಿಸಿ, ಪ್ರಾಣಲಿಂಗಕ್ಕೆ ರುಚಿಯನ್ನರ್ಪಿಸುತ್ತಾ, ಭಾವಲಿಂಗಕ್ಕೆ ತೃಪ್ತಿಯನ್ನರ್ಪಿಸಿ, ಲಿಂಗಮುಖದಿಂದುಳುಮೆಯಾಗಿ ಬಂದ ಶುದ್ಧ, ಸಿದ್ಧ, ಪ್ರಸಿದ್ಧ ಪ್ರಸಾದವ ಪಡೆದು, ಕರಸ್ಥಲದಲ್ಲಿಯ ಲಿಂಗದಲ್ಲಿ ದೃಷ್ಟಿಸ್ಥಿರವಾಗಿ, ನೇತ್ರದಲ್ಲಿ ಅಳವಡಲು ಅಹಂಕಾರವಳಿದು, ನಿರಾಹಂಕಾರವು ನೆಲೆಗೊಂಡು, ನಿರಹಂಕಾರವೆಂಬ ಕರಕಮಲಕ್ಕೆ ಪರಮ ಪ್ರಕಾಶಸ್ವರೂಪವಾದ ಶಿವಲಿಂಗವು ನೇತ್ರೇಂದ್ರೀಯದಲ್ಲಿ ನೆಲೆಗೊಳ್ಳುವುದು.

4. ಸುಮನ : ಹೃದಯ ಕಮಲದ ಅಷ್ಟದಳಾಗ್ರ ಗತಿಯೊಡನೆ ಪ್ರಕೃತಿಗೆ ವಶವಾದ ಜೀವನು ಸಂಚಲ ವ್ಯವಹಾರವಾಗಿ ಮಾಡಬಾರದ ಕೃತ್ಯಗಳನ್ನು ನೆನೆಯುತ್ತಾ ಮಾಡುತ್ತಾ ಇರುವನು.

ಮತ್ತಂ ಪ್ರಕೃತಿಗೆ ವಶವಾದ ಜೀವನು ಹೃದಯ ಕಮಲದ ಅಷ್ಟದಳಗಳಲ್ಲಿ ಪೂರ್ವದಿಕ್ಕಿನ ದಳದ ಮೇಲೆ ಸಂಚರಿಸುವಾಗ ಜೀವನು ಗುಣಿಯಾಗುವನು. ಆಗ್ನೇಯ ದಿಕ್ಕಿನಲ್ಲಿ ಸಂಚರಿಸುವಾಗ ಹಸಿವೆಯಿಂದ ಬಳಲುವನು. ದಕ್ಷಿಣದಿಕ್ಕಿನಲ್ಲಿ ಸಂಚರಿಸುವಾಗ ದುರಾಚಾರಿಯಾಗಿ ನಡೆಯುವನು. ನೈರುತ್ಯದಿಕ್ಕಿನಲ್ಲಿ ಸಂಚರಿಸುವಾಗ, ಕೋಪಿಷ್ಠನಾಗುವನು, ಪಶ್ಚಿಮದಿಕ್ಕಿನಲ್ಲಿ ಸಂಚರಿಸುವಾಗ ನಿದ್ರಾಲಸ್ಯಕ್ಕೆ ಒಳಗಾಗುವನು. ವಾಯುವ್ಯದಿಕ್ಕಿನಲ್ಲಿ ಸಂಚರಿಸುವಾಗ ಚಂಚಲನಾಗುವನು. ಉತ್ತರದಿಕ್ಕಿನಲ್ಲಿ ಸಂಚರಿಸುವಾಗ, ಧರ್ಮಶೀಲನಾಗುವನು. ಈಶಾನ್ಯದಿಕ್ಕಿನಲ್ಲಿ ಸಂಚರಿಸುವಾಗ ವಿಷಯಗಳಲ್ಲಿ ಲೋಲುಪ್ತನಾಗುವನು. ಅಧೋಮಾರ್ಗಕ್ಕಿಳಿದಾಗ ಜೀವನು ವಿಷಯ ಲೋಲುಪ್ತತೆಯಲ್ಲಿ ಮಿತಿಮೀರಿ ಅತಿ ಪಾಪಿಷ್ಠನಾಗಿ ದುಃಖದಿಂದ ಕೂಡುವನು. ಊರ್ಧ್ವದಳಗಳಾದ ನಾಲ್ಕು ದಳದಲ್ಲಿ, ಧರ್ಮ, ಭಕ್ತಿ ಜ್ಞಾನ, ವೈರಾಗ್ಯದಿಂದ ಇರುವನು. ಇವುಗಳನ್ನು ಮೀರಿ, ಗುರುಭಕ್ತಿ ಸಂಪನ್ನನಾಗಿ ಆಚರಿಸಲು, ಕರಸ್ಥಲದಲ್ಲಿಯ ಲಿಂಗ ಅನಿಮಿಷ ದೃಷ್ಟಿಯಿಂದ ನೇತ್ರದಲ್ಲಿ ಲಿಂಗ ಕಳೆ ಸಂಬಂಧಿಸಿ, ಮಂತ್ರದಿಂದೊಡಗೂಡಿ ಶ್ವಾಸೋಚ್ಛ್ವಾಸಗಳು ಲಿಂಗದ ಶ್ವಾಸೋಚ್ಛ್ವಾಸಗಳಾಗಿ ಅಳವಟ್ಟು ಲಿಂಗಕಳೆಯು ಹೃದಯದಲ್ಲಿ ಸ್ಥಿರಗೊಂಡು ಪ್ರಾಣಲಿಂಗವಾಗಿ ಆಚರಿಸಲು, ಮನದ ಪೂರ್ವಗುಣಗಳು ನಷ್ಟವಾಗಿ, ಗುರುಭಕ್ತಿ, ಲಿಂಗಭಕ್ತಿ, ಜಂಗಮಭಕ್ತಿ, ಪಾದೋದಕದಲ್ಲಿ ಭಕ್ತಿ, ಪ್ರಸಾದದಲ್ಲಿ ಭಕ್ತಿ, ಅಷ್ಟಾವರಣದ ಭಕ್ತಿಯಿಂದ ಧರ್ಮ ಸದ್ಭಕ್ತಿ ಮತ್ತು ಭಯ, ಭಕ್ತಿ, ಭೃತ್ಯ, ಕಿಂಕರತೆ, ಜ್ಞಾನ ವೈರಾಗ್ಯ ಚಿದೈಶ್ವರ್ಯವೆಂಬ ಚತುರ್ದಳ ಊರ್ಧ್ವಮುಖವಾಗಿ ಅಚಲಾನಂದ ಪೂಜೆಯ ಕೈಕೊಂಡೊಪ್ಪುವ ಪ್ರಾಣಲಿಂಗವು ಸ್ಥಿರಗೊಂಡಿರುವುದೇ **ಸುಮನ**. ಅಂತಪ್ಪ ಸುಮನವೆಂಬ ಕರಕಮಲದಲ್ಲಿ ಯಜನ ಸ್ವರೂಪವಾದ ಜಂಗಮಲಿಂಗವು ತ್ವಗೀಂದ್ರಿಯದಲ್ಲಿ ಸಂಬಂಧವಾಗಿ ನೆಲೆಗೊಳ್ಳುವುದು.

5. ಸುಜ್ಞಾನ : ದೇಹವೇ ಸತಿಯಾಗಿಯೂ ಆತ್ಮನೇ ಪತಿಯಾಗಿಯೂ ಸಕಲ ಕರಣಗಳೇ ತನ್ನಯ ತೊತ್ತಾಗಿಯೂ ಘಟ ಸಂಸಾರಿಯಾಗಿ ಆಚರಿಸುವುದೇ ಅಜ್ಞಾನವು. ಅಂತಪ್ಪ ಅಜ್ಞಾನವು ಗುರುಭಕ್ತಿಯಿಂದ ನಷ್ಟವಾಗಿ ಹೋಗಿ, ಶರಣನೇ ಸತಿಯಾಗಿ, ಲಿಂಗವೇ ಪತಿಯಾಗಿ ಇಂದ್ರಿಯಗಳೆಲ್ಲಾ ಲಿಂಗೇಂದ್ರಿಯಗಳಾಗಿ ಅರ್ಪಿಸುವ ಕ್ರಿಯೆಗಳೆಲ್ಲವೂ ಲಿಂಗದ ಕ್ರಿಯೆಗಳಾಗಿ ಆಚರಿಸುವುದೇ ಸುಜ್ಞಾನವು. ಲಿಂಗ ಪ್ರಸಾದಿಯಾಗಿ ಅಳವಡಿಸಿಕೊಂಡು, ಲಿಂಗಾಂಗ ಸಂಸಾರಿಯಾಗಿ ಆಚರಿಸುವುದೇ ಸುಜ್ಞಾನವು. ಅಂತಪ್ಪ ಸುಜ್ಞಾನವೆಂಬ ಕರಕಮಲವು ನೆಲೆಗೊಂಡಲ್ಲಿ ಸುಜ್ಞಾನವೆಂಬ ಕರಕಮಲಕ್ಕೆ ಈಳನ ಸ್ವರೂಪವಾದ ಪ್ರಸಾದ ಲಿಂಗವು ಶ್ರೋತ್ರೇಂದ್ರಿಯದಲ್ಲಿ ಸಂಬಂಧವಾಗಿ ನೆಲೆಗೊಳ್ಳುವುದು.

6. ಸದ್ಭಾವ : ಅರಿಷಡ್ವರ್ಗಂಗಳೊಡನೆ ಕೂಡಿಕೊಂಡು, ಲಿಂಗಾಂಗವೆರಡಕ್ಕೆ ಭಿನ್ನವಿಟ್ಟು, ನಾನು ಭಕ್ತ ಬೇಡುವವನು, ದೇವರು ಕೊಡುವವನು, ದೇವರು ಬೇರೆ ಇದ್ದಾನೆಂದು ಸ್ಥಾವರಾದಿ ಹಲವು ದೇವರನ್ನು ಪೂಜಿಸಿ ಫಲಪದಂಗಳ ಪಡೆದು ಅನುಭವಿಸುತ್ತಾ, ಅನೇಕ ಭವಂಗಳಲ್ಲಿ ಬರುವಂತಹದೇ ದುರ್ಭಾವವು. ಅನೇಕ ಜನ್ಮದ ಪುಣ್ಯದಿಂದಾ ಗುರುಕರುಣಮಂ ಪಡೆದು ಜ್ಞಾನಮಾರ್ಗವಿಡಿದು ನಡೆದು ದುರ್ಭಾವವೆಂಬ ಕರಕಮಲವು ನಷ್ಟವಾಗಿ ಹೋಗಿ, ಸದ್ಭಾವವು ನೆಲೆಗೊಂಡು, ಶಿಖಿ ಕರ್ಪೂರ ಸಂಯೋಗವಾದ ಹಾಗೆ ಲಿಂಗದಲ್ಲಿ ತಾ ಕೂಡಿ, ತನ್ನಲ್ಲಿ ಲಿಂಗವು ಕೂಡಿ, ತಾನು, ಲಿಂಗವೆಂಬ ಉಭಯಭಾವವಳಿದು ಪರವಸ್ತು ತಾನಾಗಿರುವುದೇ ಸದ್ಭಾವವು. ಇಂತಪ್ಪ ಸದ್ಭಾವವೆಂಬ ಕರಕಮಲವು ನೆಲೆಗೊಂಡಲ್ಲಿ ಆ ಕರಕಮಲಕ್ಕೆ ಬೋಧಾಸ್ವರೂಪವಾದ ಮಹಾಲಿಂಗವು ಹೃದಯೇಂದ್ರಿಯದಲ್ಲಿ ನೆಲೆಗೊಳ್ಳುವುದು.

ಮತ್ತೊಂದು ವಿಧಾನವನ್ನು ತಿಳಿಯುವುದು. ಮಾನವನು ತನ್ನ ನಿಜಸ್ವರೂಪವನ್ನರಿಯದೆ ಎಂಭತ್ನಾಲ್ಕು ಲಕ್ಷ ಜೀವರಾಶಿಗಳನ್ನು ಸುತ್ತುತ್ತಾ ತಾನಾರೆಂದು ತಿಳಿಯದೆ ಶರೀರವೇ ನಾನೆಂದು, ಕರ್ಮೇಂದ್ರಿಯ, ಜ್ಞಾನೇಂದ್ರಿಯ, ವಿಷಯೇಂದ್ರಿಯ, ಪವನೇಂದ್ರಿಯ, ಕರಣೇಂದ್ರಿಯಗಳಿಂದ ಶರೀರವೇ ನಾನೆಂದು ಮಾಡಬಾರದಂಥಾ ದುಷ್ಕೃತ್ಯದಿಂದಾ ನಡೆದು ಕೋಟ್ಯಾಂತರ ಜನ್ಮಗಳಲ್ಲಿ ತಿರುಗುತ್ತಾ ಹೋಗುವವನು. ಹೀಗೆ ಕೋಟ್ಯಾಂತರ ಜೀವಗತಿಗಳಲ್ಲಿ ತಿರುಗುತ್ತಿರ್ಪಲ್ಲಿ ಅನೇಕ ಜನ್ಮದ ಪುಣ್ಯದಿಂದಾ ಮನುಷ್ಯ ಜನ್ಮಕ್ಕೆ ಬರಲು, ಮನುಷ್ಯ ಜನ್ಮದಲ್ಲಿ ತಾನಾರು, ತಾನು ಎಲ್ಲಿಂದ ಬಂದೆ? ತನಗೀ ದೇಹವು ಬಂದ ಪರಿಯಾವುದು? ಎಂಬ ವಿವೇಕ ತಲೆದೋರಿದಾಗ, ಈ ಜನ್ಮ ನಿವೃತ್ತಿಗೆ, ಭವ ಬಂಧ ನಿವೃತ್ತಿಗೆ, ಶ್ರೀ ಗುರುವಂ ಮೊರೆಹೊಗಲು ಶ್ರೀ ಗುರುವು ನೀನು ಭವ ಬಂಧನಕ್ಕೆ ಹೆದರಬೇಡಾ ನೀನು ಸಾಕ್ಷಾತ್ ಪರಮಾತ್ಮನು ಎಂದು ತಲೆಯ ಮೇಲೆ ಅಭಯಹಸ್ತವನ್ನಿಟ್ಟು ಭಾವದಲ್ಲಿ ಭಾವಲಿಂಗಮಂ ಸ್ಥಾಪನೆ ಮಾಡಿ, ಶ್ರೋತ್ರದಲ್ಲಿ ಮಹಾಮಂತ್ರೋಪದೇಶವ ಮಾಡಿ, ಮನದಲ್ಲಿ ಪ್ರಾಣಲಿಂಗವ ಸ್ಥಾಪನೆ ಮಾಡಿ, ತನುವಿನಲ್ಲಿ ಇಷ್ಟಲಿಂಗವ ಸ್ಥಾಪನೆ ಮಾಡಿ, ಆ ಮಂತ್ರವು ಜಿಹ್ವೆಯಲ್ಲಿ ಅಂಕುರಿಸಿ, ಮನವು ಲಿಂಗದೊಡಗೂಡಿ ಪ್ರಾಣಲಿಂಗವಾದ ಕೂಡಲೇ ಸರ್ವಇಂದ್ರಿಯಗಳಲ್ಲಿ ಪ್ರವಹಿಸಿ, ಕರ್ಮೇಂದ್ರಿಯಗಳಿಂದ ಗುದದಲ್ಲಿ 'ನ' ಕಾರದೊಳಗಣ 'ನ' ಕಾರ ಮಂತ್ರವು ಸಂಬಂಧವಾಗಿ, ಆಚಾರಲಿಂಗದೊಳಗಣ ಆಚಾರಲಿಂಗವಾಗಿ ನೆಲೆಗೊಳ್ಳುವುದು. ಗುಹ್ಯದಲ್ಲಿ 'ನ' ಕಾರದೊಳಗಣ 'ಮ' ಕಾರಮಂತ್ರವು ಸಂಬಂಧವಾಗಿ, ಆಚಾರಲಿಂಗದೊಳಗಣ ಗುರುಲಿಂಗವಾಗಿ ನೆಲೆಗೊಳ್ಳುವುದು. ಪಾದದಲ್ಲಿ 'ನ' ಕಾರದೊಳಗಣ 'ಶಿ' ಕಾರ ಪ್ರಣವ ಸಂಬಂಧವಾಗಿ, ಆಚಾರಲಿಂಗದೊಳಗಣ ಶಿವ ಲಿಂಗವಾಗಿ

ನೆಲೆಗೊಳ್ಳುವುದು. ಹಸ್ತದಲ್ಲಿ 'ನ' ಕಾರದೊಳಗಣ 'ವ' ಕಾರ ಪ್ರಣಮ ಸಂಬಂಧವಾಗಿ, ಆಚಾರ ಲಿಂಗದೊಳಗಣ ಜಂಗಮ ಲಿಂಗವಾಗಿ ನೆಲೆಗೊಳ್ಳುವುದು. ವಾಕ್ಕಿನಲ್ಲಿ 'ನ' ಕಾರದೊಳಗಣ 'ಯ' ಕಾರ ಪ್ರಣಮ ಸಂಬಂಧವಾಗಿ ಆಚಾರ ಲಿಂಗದೊಳಗಣ ಪ್ರಸಾದ ಲಿಂಗವಾಗಿ, ನೆಲೆಗೊಳ್ಳುವುದು. ಹೃದಯದಲ್ಲಿ 'ನ' ಕಾರ ಮಂತ್ರದೊಳಗಣ 'ಓಂ' ಕಾರ ಪ್ರಣವ ಸಂಬಂಧವಾಗಿ, ಸರ್ವಾಂಗದಲ್ಲಿ ಆಚಾರ ಲಿಂಗದೊಳಗಣ ಮಹಾಲಿಂಗವಾಗಿ ನೆಲೆಗೊಳ್ಳುವುದು. ಜ್ಞಾನೇಂದ್ರಿಯದ ಭಾಗವಾದ ನಾಸಿಕದಲ್ಲಿ 'ಮ' ಕಾರದೊಳಗಣ 'ನ' ಕಾರ ಪ್ರಣಮ ಸಂಬಂಧವಾಗಿ ಗುರುಲಿಂಗದೊಳಗಣ ಆಚಾರಲಿಂಗವಾಗಿ ನೆಲೆಗೊಳ್ಳುವುದು. ಜಿಹ್ವೆಯಲ್ಲಿ 'ಮ' ಕಾರದೊಳಗಣ 'ಮ' ಕಾರ ಪ್ರಣಮ ಸಂಬಂಧವಾಗಿ ಗುರುಲಿಂಗದೊಳಗಣ ಗುರುಲಿಂಗವಾಗಿ ನೆಲೆಗೊಳ್ಳುವುದು. ನೇತ್ರದಲ್ಲಿ 'ಮ' ಕಾರದೊಳಗಣ 'ಶಿ' ಕಾರ ಪ್ರಣಮ ಸಂಬಂಧವಾಗಿ ಗುರುಲಿಂಗದೊಳಗಣ ಶಿವಲಿಂಗವಾಗಿ ನೆಲೆಗೊಳ್ಳುವುದು. ತ್ವಕ್ಕಿನಲ್ಲಿ 'ಮ' ಕಾರದೊಳಗಣ 'ವ' ಕಾರ ಪ್ರಣಮ ಸಂಬಂಧವಾಗಿ ಗುರುಲಿಂಗದೊಳಗಣ ಜಂಗಮಲಿಂಗವಾಗಿ ನೆಲೆಗೊಳ್ಳುವುದು. ಕಿವಿಯಲ್ಲಿ 'ಮ' ಕಾರದೊಳಗಣ 'ಯ' ಕಾರ ಪ್ರಣಮ ಸಂಬಂಧವಾಗಿ ಗುರುಲಿಂಗದೊಳಗಣ ಪ್ರಸಾದಲಿಂಗವಾಗಿ ನೆಲೆಗೊಳ್ಳುವುದು. ಹೃದಯದಲ್ಲಿ 'ಮ' ಕಾರದೊಳಗಣ 'ಓಂ' ಕಾರ ಪ್ರಣಮ ಸಂಬಂಧವಾಗಿ ಗುರುಲಿಂಗದೊಳಗಣ ಮಹಾಲಿಂಗವಾಗಿ ನೆಲೆಗೊಳ್ಳುವುದು. ವಿಷಯೇಂದ್ರಿಯಗಳಾದ ಗಂಧದಲ್ಲಿ 'ಶಿ' ಕಾರದೊಳಗಣ 'ನ' ಕಾರ ಪ್ರಣಮ ಸಂಬಂಧವಾಗಿ ಶಿವಲಿಂಗದೊಳಗಣ ಆಚಾರಲಿಂಗವಾಗಿ ನೆಲೆಗೊಳ್ಳುವುದು. ರಸವಿಷಯದಲ್ಲಿ 'ಶಿ' ಕಾರದೊಳಗಣ 'ಮ' ಕಾರ ಪ್ರಣಮ ಸಂಬಂಧವಾಗಿ ಶಿವಲಿಂಗದೊಳಗಣ ಗುರುಲಿಂಗವಾಗಿ ನೆಲೆಗೊಳ್ಳುವುದು. ರೂಪು ವಿಷಯದಲ್ಲಿ 'ಶಿ' ಕಾರ ಪ್ರಣಮದೊಳಗಿನ 'ಶಿ' ಕಾರ ಪ್ರಣಮ ಸಂಬಂಧವಾಗಿ ಶಿವಲಿಂಗದೊಳಗಣ ಶಿವಲಿಂಗವಾಗಿ ನೆಲೆಗೊಳ್ಳುವುದು. ಸ್ಪರ್ಶನ ವಿಷಯದಲ್ಲಿ 'ಶಿ' ಕಾರ ಪ್ರಣಮದೊಳಗಣ 'ವ' ಕಾರ ಪ್ರಣಮ ಸಂಬಂಧವಾಗಿ ಶಿವಲಿಂಗದೊಳಗಣ ಜಂಗಮಲಿಂಗವಾಗಿ ನೆಲೆಗೊಳ್ಳುವುದು. ಶಬ್ದ ವಿಷಯದಲ್ಲಿ 'ಶಿ' ಕಾರದೊಳಗಣ 'ಯ' ಕಾರ ಪ್ರಣಮ ಸಂಬಂಧವಾಗಿ, ಶಿವಲಿಂಗದೊಳಗಣ ಪ್ರಸಾದಲಿಂಗವಾಗಿ ನೆಲೆಗೊಳ್ಳುವುದು. ತೃಪ್ತಿ ವಿಷಯದಲ್ಲಿ 'ಶಿ' ಕಾರದೊಳಗಣ 'ಓಂ' ಕಾರ ಪ್ರಣಮ ಸಂಬಂಧವಾಗಿ ಶಿವಲಿಂಗದೊಳಗಣ ಮಹಾಲಿಂಗವಾಗಿ ನೆಲೆಗೊಳ್ಳುವುದು.

ಪವನೇಂದ್ರಿಯಗಳಾದ ಪ್ರಾಣವಾಯುವಿನಲ್ಲಿ 'ವ' ಕಾರ ಪ್ರಣಮದೊಳಗಣ 'ನ' ಕಾರ ಪ್ರಣಮ ಸಂಬಂಧವಾಗಿ ಜಂಗಮಲಿಂಗದೊಳಗಣ ಆಚಾರಲಿಂಗವಾಗಿ ನೆಲೆಗೊಳ್ಳುವುದು. ಅಪಾನ ವಾಯುವಿನಲ್ಲಿ 'ವ' ಕಾರ ಪ್ರಣಮದೊಳಗಣ 'ಮ' ಕಾರ ಪ್ರಣಮ ಸಂಬಂಧವಾಗಿ ಜಂಗಮಲಿಂಗದೊಳಗಣ ಗುರುಲಿಂಗವಾಗಿ ನೆಲೆಗೊಳ್ಳುವುದು. ವ್ಯಾನ ವಾಯುವಿನಲ್ಲಿ 'ವ' ಕಾರದೊಳಗಣ 'ಶಿ' ಕಾರ ಪ್ರಣಮ ಸಂಬಂಧವಾಗಿ ಜಂಗಮಲಿಂಗದೊಳಗಣ ಶಿವಲಿಂಗವಾಗಿ ನೆಲೆಗೊಳ್ಳುವುದು. ಉದಾನವಾಯುವಿನಲ್ಲಿ 'ವ' ಕಾರ ಪ್ರಣಮದೊಳಗಣ 'ವ' ಕಾರ ಪ್ರಣಮ ಸಂಬಂಧವಾಗಿ ಜಂಗಮಲಿಂಗದೊಳಗಣ ಜಂಗಮಲಿಂಗವಾಗಿ ನೆಲೆಗೊಳ್ಳುವುದು. ಸಮಾನ ವಾಯುವಿನಲ್ಲಿ 'ವ' ಕಾರ ಪ್ರಣಮದೊಳಗಣ 'ಯ' ಕಾರ ಪ್ರಣಮ ಸಂಬಂಧವಾಗಿ, ಜಂಗಮಲಿಂಗದೊಳಗಣ ಪ್ರಸಾದಲಿಂಗವಾಗಿ ನೆಲೆಗೊಳ್ಳುವುದು. ನಾಗ, ಕೂರ್ಮಾ, ಕೃಕರ, ದೇವದತ್ತ, ಧನಂಜಯ- ವಾಯುಗಳಲ್ಲಿ 'ವ' ಕಾರ ಪ್ರಣಮದೊಳಗಣ ಓಂಕಾರ ಪ್ರಣಮ ಸಂಬಂಧವಾಗಿ ಜಂಗಮಲಿಂಗದೊಳಗಣ ಮಹಾಲಿಂಗವಾಗಿ ನೆಲೆಗೊಳ್ಳುವುದು. ಕರಣೇಂದ್ರಿಯಗಳಾದ ಚಿತ್ತದಲ್ಲಿ 'ಯ' ಕಾರದೊಳಗಣ 'ನ' ಕಾರ ಪ್ರಣಮ ಸಂಬಂಧವಾಗಿ

ಪ್ರಸಾದಲಿಂಗದೊಳಗಣ ಆಚಾರಲಿಂಗವಾಗಿ ನೆಲೆಗೊಳ್ಳುವುದು. ಬುದ್ಧಿಯಲ್ಲಿ 'ಯ' ಕಾರದೊಳಗಣ 'ಮ' ಕಾರ ಪ್ರಣಮ ಸಂಬಂಧವಾಗಿ, ಪ್ರಸಾದಲಿಂಗದೊಳಗಣ ಗುರುಲಿಂಗವಾಗಿ ನೆಲೆಗೊಳ್ಳುವುದು. ಅಹಂಕಾರದಲ್ಲಿ 'ಯ' ಕಾರ ಪ್ರಣಮದೊಳಗಣ 'ಶಿ' ಕಾರ ಪ್ರಣಮ ಸಂಬಂಧವಾಗಿ ಪ್ರಸಾದ ಲಿಂಗದೊಳಗಣ ಶಿವಲಿಂಗವಾಗಿ ನೆಲೆಗೊಳ್ಳುವುದು. ಮನದಲ್ಲಿ 'ಯ' ಕಾರ ಪ್ರಣಮದೊಳಗಣ 'ವ' ಕಾರ ಪ್ರಣಮ ಸಂಬಂಧವಾಗಿ ಪ್ರಸಾದ ಲಿಂಗದೊಳಗಣ ಜಂಗಮಲಿಂಗವಾಗಿ ನೆಲೆಗೊಳ್ಳುವುದು.

ಜ್ಞಾನದಲ್ಲಿ 'ಯ' ಕಾರದೊಳಗಣ 'ಯ' ಕಾರ ಪ್ರಣಮ ಸಂಬಂಧವಾಗಿ ಪ್ರಸಾದ ಲಿಂಗದೊಳಗಣ ಪ್ರಸಾದ ಲಿಂಗವಾಗಿ ನೆಲೆಗೊಳ್ಳುವುದು. ಭಾವದಲ್ಲಿ 'ಯ' ಕಾರದೊಳಗಣ 'ಓಂ' ಕಾರ ಪ್ರಣಮ ಸಂಬಂಧವಾಗಿ ಪ್ರಸಾದಲಿಂಗದೊಳಗಣ ಮಹಾಲಿಂಗವಾಗಿ ನೆಲೆಗೊಳ್ಳುವುದು. ಶರಣನ ಪ್ರಕೃತಿಯ ಜೀವಗುಣಗಳು ನಷ್ಟವಾಗಿ, ಸರ್ವೇಂದ್ರಿಯಗಳು ನಷ್ಟವಾಗಿ, ಸರ್ವೇಂದ್ರಿಯಗಳು ಲಿಂಗವಾಗಿ, ಲಿಂಗ ಪ್ರಸಾದವಾಗಿ ಆಚರಿಸುತ್ತಾ ಸರ್ವಾಂಗ ಲಿಂಗಿಯಾಗಿ ಮಹಾಲಿಂಗ ಪ್ರಕಾಶದಲ್ಲಿ ಲೀಯತೆಯನ್ನು ಪಡೆಯುವರೆಂದು ತಿಳಿದುಕೊಂಬುದು ತತ್ವಜ್ಞಾನಿಗಳೆಂದರುಹಿದರಯ್ಯಾ ಶ್ರೀ ಮತ್ಶೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ಸೂತಕಗಳು

ಜಾತಿ ಸೂತಕ, ಜನನ ಸೂತಕ, ಪ್ರೇತ ಸೂತಕ, ಉಚ್ಚಿಷ್ಠ ಸೂತಕ, ರಜ ಸೂತಕ. ಷಟ್‌ಸ್ಥಲಕ್ಕೆ ಸಂಬಂಧಿಸಿದ ಸೂತಕಗಳು, ಕುಲ ಸೂತಕ, ಛಲ ಸೂತಕ, ತನು ಸೂತಕ, ಮನ ಸೂತಕ, ನೆನಹು ಸೂತಕ, ಭಾವ ಸೂತಕ ಇವಕ್ಕೆ ವಿವರ :

ಜಾತಿ ಸೂತಕ : ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಚಂಡಾಲ, ಹೊಲೆಯ ಎಂದು ಅನೇಕ ಜಾತಿ ಪಂಗಡಗಳಲ್ಲಿ ನನ್ನ ಜಾತಿಯೇ ಶ್ರೇಷ್ಠವೆಂದು ಹೇಳುವುದು.

ಜನನ ಸೂತಕ : ಹೆರಿಗೆಯಾದಾಗ ಸೂತಕವೆಂದು ಹೊರಗಿಡುವುದು. ಮೂರುದಿನ, ಐದುದಿನ, ಹತ್ತುದಿನವೆಂದು ಹೊರಗಿಡುವುದು.

ಪ್ರೇತ ಸೂತಕ : ಮನೆಗಳಲ್ಲಿ ಯಾರಾದರೂ ಸತ್ತರೆ ಆ ಮನೆತನದವರು ಮತ್ತು ಸಂಬಂಧಿಗಳು, ಶವವನ್ನು ಮುಟ್ಟಿದವರು ಸೂತಕವೆಂದು ಆಚರಿಸುವುದು.

ರಜ ಸೂತಕ : ಹೆಣ್ಣು ಮಕ್ಕಳು ಯಾರಾದರೂ ರಜೋದರ್ಶನವಾದಾಗ ಮೂರುದಿನವೂ, ಐದುದಿನವೂ ಮುಟ್ಟಾದರೆಂದು ಹೊರಗಿಡುವುದು.

ಉಚ್ಚಿಷ್ಠ ಸೂತಕ : ಎಂಜಲು ಎಂಬ ಭಾವನೆಯಿಂದ ಆಚರಿಸುವುದು.

ಕುಲ ಸೂತಕ : ಲಿಂಗವಂತರಲ್ಲಿ ಒಳಭೇದವನ್ನುಂಟು ಮಾಡುತ್ತಾ, ಸಾದರು, ನೊಣಬರು, ಬಣಜಿಗರು, ಸೆಟ್ಟರು, ಪಂಚಮಸಾಲಿಯವರು, ನೇಕಾರರು, ಕುಂಚಕರು, ಕ್ಷೌರದವರು, ಅಗಸರು ಇನ್ನು ಮುಂತಾದ ಒಳಭೇದವನ್ನು ಮಾಡುವುದು.

ಛಲ ಸೂತಕ : ಯಾರಾದರೂ ಸತ್ಪುರುಷರು, ಒಳಭೇದವನ್ನು ಮಾಡಬಾರದು ಎಂದು

ಅದು ಲಿಂಗವಂತನ ಲಕ್ಷಣವಲ್ಲ ಎಂದು ವಿವೇಕ ಹೇಳಿದರೆ, ಅವರ ಮೇಲೆ ಕಠೋರ ಕೋಪ ತಾಳಿ ಛಲಿಯಾಗಿ ವ್ಯವಹರಿಸುವುದು.

ತನುಸೂತಕ : ಅಂಗದ ಮೇಲೆ ಲಿಂಗವನ್ನು ಧರಿಸಿದ ಮೇಲೆ ಶರೀರ ಲಿಂಗಯ್ಯನದೆಂಬ ಭಾವವನ್ನು ಮರೆದು ಮಡಿ ಮೈಲಿಗೆಯೆಂದು ಆಚರಿಸುವುದು.

ಮನ ಸೂತಕ : ದೀಕ್ಷೆಯಾಗಿ ಲಿಂಗವನ್ನು ಧರಿಸಿ ಮನದಲ್ಲಿ ಮಂತ್ರವು ಸ್ಥಿರಗೊಂಡು, ಮನವು ಪ್ರಾಣಲಿಂಗವಾಗಿ ವ್ಯವಹರಿಸದೇ ಮನವು ಮಿಥ್ಯವಿಚಾರದ ಆಚರಣೆಯಿಂದ ಮನೋವಿಕಾರಿಯಾಗಿರುವುದು.

ನೆನಹು ಸೂತಕ : ಲಿಂಗದಲ್ಲಿ ಮನವು ನೆಲೆಗೊಳ್ಳದೆ ಲಿಂಗದ ನೆನಹು ತನ್ನಲ್ಲಿ ಸ್ಥಿರಗೊಳಿಸದೆ, ವಿಷಯಗಳ ಭ್ರಾಂತಿಯ ನೆನಹಿನಲ್ಲಿರುವುದು.

ಭಾವ ಸೂತಕ : ಸಂಸ್ಕಾರದಿಂದ ತನುವಿನಲ್ಲಿ ಇಷ್ಟಲಿಂಗ ಸಂಬಂಧಿಸದೆ, ಮನಪ್ರಾಣಲಿಂಗವಾಗದೆ, ಭಾವದ ಭ್ರಮೆಗಳಿಂದ ಕೂಡಿ ಆಚರಿಸುವುದು.

ಕುಲ ಸೂತಕ : ಉಳ್ಳನ್ನಕ್ಕರ ಭಕ್ತನಲ್ಲ, ಛಲಸೂತಕ ಉಳ್ಳನ್ನಕ್ಕರ ಮಹೇಶ್ವರನಲ್ಲ, ತನು ಸೂತಕ ಉಳ್ಳನ್ನಕ್ಕರ ಪ್ರಸಾದಿಯಲ್ಲ, ಮನಸೂತಕ ಉಳ್ಳನ್ನಕ್ಕರ ಪ್ರಾಣಲಿಂಗಿಯಲ್ಲ, ನೆನಹು ಸೂತಕ ಉಳ್ಳನ್ನಕರ ಶರಣನಲ್ಲ, ಭಾವಸೂತಕ ಉಳ್ಳನ್ನಕ್ಕರ ಐಕ್ಯನಲ್ಲ ಇವರನೆಂದೂ ಮುಟ್ಟಬಾರದೆಂದು ಪ್ರಭುದೇವರು ತಿಳಿಸುವರು.

ವಚನ : ಗುರು-ಶಿಷ್ಯರ ಗುರುತ್ವ, ಲಿಂಗಾಂಗ ಸಾಮರಸ್ಯವನ್ನುಪಮಿಸಬಾರದಯ್ಯಾ. ಸೂತಕ, ಪಾತಕ ವರ್ಜಿತ, ಶರಣನನೇನೆಂದುಪಮಿಸಬಾರದು. ಅನಾದಿ ಪ್ರಕೃತಿ ಸಂಬಂಧದಿಂದಾ ಬರುವ ಸೂತಕದಲ್ಲಿ ಜನನ ಸೂತಕವು ಶ್ರೀ ಗುರುಕರಕಮಲದಲ್ಲಿ ಜನಿಸಿದನಾಗಿ, ಜನನ ಸೂತಕ ಹೋಯಿತ್ತು. ಜಾತಿ ಸೂತಕವು ಅಜಾತಲಿಂಗಸಂಗದಿಂದ ಲಿಂಗದವನಾಗಿ ಆಚರಿಸುವುದರಿಂದಾ, ಜಾತಿಸೂತಕ ಹೋಯಿತ್ತು. ಪ್ರೇತಸೂತಕವು ಶ್ರೀ ವಿಭೂತಿ, ರುದ್ರಾಕ್ಷಿ, ಇಷ್ಟಲಿಂಗಧಾರಣದಿಂದಾ ಪ್ರೇತಸೂತಕ ಹೋಯಿತು. ರಜಸ್ಸೂತಕವು ಲಿಂಗಸಂಸ್ಕಾರದಿಂದಾ, ಮಹಾಮಂತ್ರ ಮನನದಿಂದಾ ಸಂಸ್ಕಾರಗೊಂಡು ಶರೀರವು ಮಂತ್ರ ಶರೀರಿಯಾಗಿ ರಜಸ್ಸೂತಕವು ಹೋಯಿತ್ತು. ಗುರು-ಜಂಗಮರ ಒಕ್ಕುಮಿಕ್ಕ ಪ್ರಸಾದ ಸ್ವೀಕರಿಸಿದನಾಗಿ ಉಚ್ಚಿಷ್ಠ ಸೂತಕ ಹೋಯಿತ್ತು.

ಕುಲಸೂತಕ : ಅಂಗದ ಮೇಲೆ ಲಿಂಗವ ಧರಿಸಿದವರೆಲ್ಲಾ ನನ್ನವರು ಎಂದು ಆಚರಿಸಿದಲ್ಲಿ ಕುಲಸೂತಕ ಹೋಯಿತ್ತು.

ಛಲಸೂತಕ : ಲಿಂಗಪೂಜೆ ನಿಷ್ಠೆಯಿಂದ ಛಲಿಯಾಗಿ ವ್ರತವನ್ನು ಆಚರಿಸಿದಲ್ಲಿ ಛಲಸೂತಕ ಹೋಯಿತ್ತು. ತನು ಸೂತಕ ತನುವಿನಲ್ಲಿ ಲಿಂಗ ಸಂಬಂಧಿಸಿದ ಮೇಲೆ ಸರ್ವೇಂದ್ರಿಯಗಳಲ್ಲಿ ಲಿಂಗಾರ್ಪಿತದಿಂದ ಆಚರಿಸಿದಲ್ಲಿ ತನುಸೂತಕ ಹೋಯಿತ್ತು.

ಮನಸೂತಕ : ಮನದಲ್ಲಿ ಮಂತ್ರದ ನೆನಹು ನೆಲೆಗೊಂಡು, ಮನವು ಲಿಂಗವಾಗಿ, ಪ್ರಾಣಲಿಂಗವಾಗಿ, ಆಚರಿಸಿದಲ್ಲಿ, ಮನಸೂತಕವು ಹೋಯಿತ್ತು.

ನೆನಹುಸೂತಕ : ನೆನಹಿನಲ್ಲಿ ಲಿಂಗದ ನೆನಹು ನೆಲೆಗೊಂಡಲ್ಲಿ ನೆನಹು ಸೂತಕ ಹೋಯಿತ್ತು.

ಭಾವಸೂತಕ : ಭಾವದ ಭ್ರಮೆಗಳಡಗಿ ಭಾವದಲ್ಲಿ ಲಿಂಗವಾಗಿ ಆಚರಿಸುವುದು ಅಳವಟ್ಟಲ್ಲಿ, ಭಾವಸೂತಕ ಹೋಯಿತ್ತು. ಸರ್ವಸೂತಕಂಗಳು ಅಳಿದು, ಗುರುಶಿಷ್ಯರಿಗೆ ಲಿಂಗಧ್ಯಾನ ಅಳವಟ್ಟು ಧ್ಯಾನದಲ್ಲಿ ಲಿಂಗವು ನೆಲೆಗೊಂಡು ಮಹಾಲಿಂಗವಾಗಿ, ಮಹಾಲಿಂಗವು ಚಿದ್ಬಯಲಿನಲ್ಲಿ ಅಡಗಿ, ಸದ್ಗುರು ಸತ್‌ಶಿಷ್ಯರಿಗೆ ಮಹಾಬಯಲೊಳಗೆ ಬಯಲ ವ್ಯವಹಾರ ಅಳವಟ್ಟು ನಿಂದ ನಿಲವು. ಶ್ರೀಮತ್ಶೂನ್ಯ ಸಿಂಹಾಸನಾಧೀಶ್ವರಬಲ್ಲನಲ್ಲದೆ ಉಳಿದ ಅಜ್ಞಾನಿಗಳೆತ್ತ ಬಲ್ಲರಯ್ಯ.

ಅರಿಷಡ್‌ವರ್ಗಗಳು ಉತ್ಪತ್ತಿ ಅವುಗಳ ಪರಿಹಾರ

ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ.

ಕಾಮ : ಪರವಸ್ತುವಿನಲ್ಲಿ ಬಯಕೆ, ಪರಸತಿಯರ ಬಯಕೆ ಇನ್ನು ತನ್ನದಲ್ಲದ ವಸ್ತುವನ್ನು ಬಯಸುವುದೇ ಕಾಮ.

ಕ್ರೋಧ : ತಾನು ಬಯಸಿದ ಹಾಗೆ ಪ್ರಾಪ್ತವಾಗದಿದ್ದಲ್ಲಿ ತನ್ನ ಬಯಕೆಗೆ ಅಡ್ಡಬರುವವರ ಮೇಲೆ ಕೋಪವು ಪುಟ್ಟುಗುಂ.

ಲೋಭ : ತಾನು ಬಯಸಿದ ವಸ್ತು ಇರಬೇಕೆಂಬ ಬಯಕೆ ಧೃಡವಾಗಲು ಲೋಭವು ಜನಿಯಿಸುಗುಂ.

ಮೋಹ : ತಾನು ಬಯಸಿದ ವಸ್ತುಗಳಲ್ಲಿ ಪ್ರೀತಿಯು ಅತಿಶಯವಾಗಿ ಮಮಕರಿಸುವುದೇ ಮೋಹವೆಂದು, ಪೇಳಲ್ಪಡುಗುಂ.

ಮದ : ತನ್ನಲ್ಲಿರುವ ವಸ್ತುವು ನನ್ನವುಗಳು ನಾನು ಇದಕ್ಕೆ ಅಧಿಕಾರಿಯೆಂಬ ಅಹಂಕಾರವಳವಡಲು ಮದವೆಂದು ಹೇಳುವರು.

ಮತ್ಸರ : ತನ್ನಂತೆ ಇತರರಿಗೆ ಪ್ರಾಪ್ತವಾಗಲು ಅಸೂಯೆಯುಳ್ಳವನಾಗಿ, ಮತ್ಸರ ಉದಿಸುವುದು.

ಇವುಗಳ ಪರಿಹಾರ :

ಕಾಮ : ಮಾನವನಿಗೆ ಅನೇಕ ಜನ್ಮದ ಸುಕೃತದ ಫಲದಿಂದಾ ಶ್ರೀ ಗುರುವು ಪ್ರಾಪ್ತವಾಗಿ, ಗುರುಕರುಣಮಂ ಪಡೆದು, ಗುರುಮಾರ್ಗದಲ್ಲಿ ಭಕ್ತಿಯುಳ್ಳವನಾಗಿ ಹಾಗೂ ಪ್ರೀತಿಯುಳ್ಳವನಾಗಿ ಆಚರಿಸಲು ಕಾಮ ಹೋಯಿತ್ತು.

ಕ್ರೋಧ : ಗುರುಕರುಣದಿಂ ಲಿಂಗಮಂ ಪಡೆದು ಲಿಂಗಪೂಜಾ ಲಿಂಗವ್ರತಗಳನ್ನು ಛಲಿಯಾಗಿ ಪಾಲಿಸುವನಾಗಿ ಕ್ರೋಧ ಹೋಯಿತ್ತು.

ಲೋಭ : ತಾನು ಸತ್ಕಾಯಕದಿಂದ ಗಳಿಸಿದ ಧನವು. ದುರ್ವ್ಯವಹಾರಗಳಿಗೆ,

ದುರ್ವ್ಯಸನಗಳಿಗೆ ಹೋಗದೆ ಅಪಾತ್ರಕ್ಕೆ ವ್ಯಯಿಸದೆ, ಜಂಗಮ ದಾಸೋಹಾದಿ ಸತ್ಕಾರ್ಯಗಳಿಗೆ ವ್ಯಯಿಸುವನಾಗಿ ಲೋಭ ಹೋಯಿತ್ತು.

ಮೋಹ : ಯೋಗಿಗಳು ಯೋಗ ಸಾಧನೆಯಿಂದಾ ಸಹಸ್ರಾರದಲ್ಲಿರುವ ಅಮೃತವನ್ನು ಸೇವಿಸುವೆವೆಂದು ಹೇಳುವುದನ್ನೇ ಲಿಂಗಭಕ್ತನು ಭಕ್ತಿಯಿಂದಾ ಪಶ್ಚಿಮ ಶೂನ್ಯ ಚಕ್ರಗಳಲ್ಲಿರುವ ಚಿದಮೃತವನ್ನೇ ಸಹಸ್ರಾರದಿಂದ ಜಂಗಮಪಾದದಿಂದ ಪಾದೋದಕವನ್ನಾಗಿ ಪಡೆದುಕೊಂಡು ಸೇವಿಸುವನಾಗಿ ಪಾದೋದಕ ಮೋಹಿಯಾದಲ್ಲಿ ಮೋಹಹೋಯಿತ್ತು.

ಮದ : ಜಂಗಮನಿಂದ ಪ್ರಸಾದವನ್ನು ಪಡೆದುಕೊಂಡು ಇಂದ್ರಿಯಗಳಲ್ಲಿ ಲಿಂಗವನ್ನು ಸಂಬಂಧಿಸಿ, ಕಾಯಾರ್ಪಣ, ಕರುಣಾರ್ಪಣ, ಭಾವಾರ್ಪಣದಿಂದಾ ಲಿಂಗದ ಎಚ್ಚರದಿಂದ ಆಚರಿಸಿ, ಚಿತ್ಕಾಯವಾಗಿ (ಚಿದ್ದೇಹವಾಗಿ), ಭೃತ್ಯಾಚಾರಿಯಾಗಿ ನಡೆವಲ್ಲಿ, ಮದ ಹೋಯಿತ್ತು.

ಮತ್ಸರ : ವಿಭೂತಿ ರುದ್ರಾಕ್ಷಿ ಲಿಂಗವನ್ನು ಧರಿಸಿಕೊಂಡು, ಶ್ರೀಗುರು ಕರುಣಿಸಿದ ಲಿಂಗದಲ್ಲಿ ದೃಷ್ಟಿ ಸಿಟ್ಟು, ಲಿಂಗಕಳೆ ಮನದಲ್ಲಿ ಪ್ರಾಣಲಿಂಗವಾಗಿ ನೆಲೆಗೊಂಡು, ಲಿಂಗದೃಷ್ಟಿ ಅಳವಟ್ಟು, ವಿಶ್ವವೆಲ್ಲವೂ ಲಿಂಗಯ್ಯನದೆಂಬ ಭಾವ ಬಂದು ವಿಶ್ವದ ನೋವೇ ತನ್ನ ನೋವೆಂದು ತಿಳಿದು ಆಚರಿಸುವಲ್ಲಿ ಮತ್ಸರ ಹೋಯಿತ್ತು.

ಇಂತೀ ಅಷ್ಟಾವರಣ ಸಂಗದಿಂದಾ ಅರಿಷಡ್ವರ್ಗಂಗಳಿಲ್ಲದೆ ಇರುತಿರ್ಪ ಶರಣರ ಸಂಗದಲ್ಲಿರಿಸಿ, ರಕ್ಷಿಸಯ್ಯಾ ಶ್ರೀಮತ್ಶೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ಸಪ್ತವ್ಯಸನಗಳು ಅವುಗಳ ನಿವಾರಣೆಗಳು

ಸಪ್ತವ್ಯಸನಗಳು : ತನುವ್ಯಸನ, ಮನವ್ಯಸನ, ಧನವ್ಯಸನ, ರಾಜ್ಯವ್ಯಸನ, ವಿಶ್ವವ್ಯಸನ, ಉತ್ಸಾಹವ್ಯಸನ, ಸೇವಕವ್ಯಸನ.

ತನುವ್ಯಸನ : ತನುವ್ಯಸನವೆತ್ತಿದಲ್ಲಿ ಶರೀರ ಸಣ್ಣ ಆಗುತ್ತಾ ಸೊರಗಿರುವೆನು, ಬಡವಾದೆನು ಎನ್ನುತ್ತಿಹನು. ಗುರುಕಾರುಣ್ಯವ ಪಡೆದು ಅನ್ನ ನೀರಿನಿಂದ ಬೆಳೆಯುವ ಕಾಯವು ಎಂಬ ಭಾವನೆ ಹೋಗಿ, ಅನ್ನ ನೀರು ಉಪಯೋಗಿಸುವುದನ್ನು ಕಳೆದು ಪಾದೋದಕ ಪ್ರಸಾದ ಜೀವಿಯಾಗಿ ಆಚರಿಸಿದಲ್ಲಿ ತನುವ್ಯಸನ ಹೋಯಿತ್ತು. ಲಿಂಗದ ಕಾಯವೆಂದು ಅರಿತು ಆಚರಿಸುವಲ್ಲಿ ತನುವ್ಯಸನ ಹೋಯಿತ್ತು.

ಮನವ್ಯಸನ : ಮನವ್ಯಸನವೆತ್ತಿದಲ್ಲಿ ಹುಸಿ, ಕಳವು, ಪರದಾರ, ಪರರ ವಸ್ತುವ ಅಪಹರಣ ಚಿಂತೆಯಿಂದ ಕೂಡಿರುತ್ತಿಹನು. ಸಂಸ್ಕಾರದಿಂದ ಲಿಂಗವನ್ನು, ಮಂತ್ರವನ್ನು ಪಡೆದು, ಮಂತ್ರದಲ್ಲಿ, ಲಿಂಗದ ನೆನಹು ನೆಲೆಗೊಂಡು ಲಿಂಗಯ್ಯನ ಇಚ್ಛೆಯಲ್ಲಿ ನಡೆಯುವೆನೆಂಬ ದೃಢಭಾವನೆ ನೆಲೆಗೊಂಡಲ್ಲಿ ಮನವ್ಯಸನ ಹೋಯಿತ್ತು.

ಧನವ್ಯಸನ : ಧನವ್ಯಸನವೆತ್ತಿದಲ್ಲಿ ಲೋಭತ್ವದಿಂದ ದುಡ್ಡಿಗೆ ದುಡ್ಡು ಸಂಗ್ರಹಿಸಿ ಲೆಕ್ಕಗುಣಿಸುತ್ತಾ ಅದೇ ಚಿಂತೆಯಲ್ಲಿರುವನು. ಗುರುಸಂಸ್ಕಾರಿಯಾಗಿ ಜಂಗಮಭಕ್ತಿ ನೆಲೆಗೊಂಡು, ಧನವು ಲಿಂಗಯ್ಯನದು ಲಿಂಗಯ್ಯನು ನಮಗೆ ಒದಗಿಸಿದಾಗ ಲಿಂಗಯ್ಯನ ಕಾರ್ಯಕ್ಕೆ ಸಲಿಸುವೆನೆಂದು ಜಂಗಮದಾಸೋಹಾದಿ ಕಾರ್ಯಗಳಿಗೆ ಸಲಿಸುವಲ್ಲಿ ಧನವ್ಯಸನ ಹೋಯಿತ್ತು.

ರಾಜ್ಯವ್ಯಸನ : ರಾಜ್ಯವ್ಯಸನವೆತ್ತಿದಲ್ಲಿ ಭೂಮಿ ಸ್ಥಾನ-ಮಾನ, ವಾಹನ, ಆಭರಣ, ವಸ್ತ್ರ ಅನುಲೇಪನ, ವೈಭವಮಂ ಬಯಸುತ್ತಿಹನು. ಲಿಂಗಸಂಗಿಯಾಗಿ ಲಿಂಗಮುಂದುಗೊಂಡು ಲಿಂಗಯ್ಯನ ಇಚ್ಛೆಯಂತೆ ವಸ್ತು ಬರುವವೆಂದು ಲಿಂಗಯ್ಯನ ಇಚ್ಛೆಯಿಲ್ಲದಾಗ, ತೊಲಗುವವೆಂದು, ನಂಬಿದಲ್ಲಿ ರಾಜ್ಯವ್ಯಸನ ಹೋಯಿತ್ತು.

ವಿಶ್ವವ್ಯಸನ : ವಿಶ್ವವ್ಯಸನವೆತ್ತಿದಲ್ಲಿ ಗೃಹ ಕ್ಷೇತ್ರ, ಸೀಮೆಯಂ, ಬಯಸುತ್ತಿಹನು. ಸಂಸ್ಕಾರಿಯಾಗಿ ಅಂಗಕ್ಕೆ ಲಿಂಗ ಸಂಬಂಧವಾದ ಮೇಲೆ ಶರೀರವು ಲಿಂಗಯ್ಯನ ಸೊತ್ತು, ಎಲ್ಲವೂ ಲಿಂಗಯ್ಯನದೆಂದು ಆಚರಿಸಿದಲ್ಲಿ ವಿಶ್ವವ್ಯಸನ ಹೋಯಿತ್ತು.

ಉತ್ಸಾಹವ್ಯಸನ : ಉತ್ಸಾಹವ್ಯಸನವೆತ್ತಿದಲ್ಲಿ ಪುತ್ರ, ಮಿತ್ರ, ಕಳತ್ರಾದಿಗಳಲ್ಲಿ ಸದಾ ಮೋಹದಿಂದ ಇರುತ್ತಿಹನು. ಸಂಸ್ಕಾರಿಯಾಗಿ ಅಂಗಕ್ಕೆ ಲಿಂಗಸಂಬಂಧವಾಗಿ ಶರೀರವು ಲಿಂಗಯ್ಯನದು ಹೆಂಡಿರು ಮಕ್ಕಳು ಸರ್ವರೂ ಲಿಂಗಯ್ಯನವರೆಂದು ಆಚರಿಸುವನಾಗಿ ಉತ್ಸಾಹ ವ್ಯಸನ ಹೋಯಿತ್ತು.

ಸೇವಕವ್ಯಸನ : ಸೇವಕ ವ್ಯಸನವೆತ್ತಿದಲ್ಲಿ ಹೋದಿಹೆ, ಬಂದಿಹೆ, ಕೊಂಡಿಹೆ, ಕೊಟ್ಟಿಹೆ ಮುಂತಾದ ಅಧಿಕಾರಮಂ ಬಯಸುತ್ತಿಹನು. ಸದ್ಭಕ್ತಿಯಿಂದ ಕಿಂಕುರ್ವಾಣತೆ ನೆಲೆಗೊಂಡು ವಿಶ್ವವೆಲ್ಲವು ಪರಮಾತ್ಮನ ಆಡುಂಬೊಲ ನಾವೆಲ್ಲರೂ ಪರಮಾತ್ಮನ ಸೇವೆಯನ್ನು ಸಲ್ಲಿಸಬೇಕೆಂಬ ಧೃಡಭಾವನೆ ಬಲಿತಲ್ಲಿ, ಸೇವಕ ವ್ಯಸನ ಹೋಯಿತ್ತು. ಇಂತೀ ಸಪ್ತವ್ಯಸನಂಗಳು ಸದ್ಭಕ್ತಿಯಲ್ಲಿ ಅಳಿದುಳಿದ ಸದ್‌ಭಕ್ತರ ಸಂಗದಲ್ಲಿರಿಸಯ್ಯ ಶ್ರೀಮತ್ಶೂನ್ಯ ಸಿಂಹಾಸನಾಧೀಶ್ವರ, ನಿರಂಜನ ಸಂಗಮನಾಥಾ.

ಅಷ್ಟಮೂರ್ತಿ ಮದಂಗಳು ಅವುಗಳ ನಿವೃತ್ತಿಯ ವಿವರ

ಪೃಥ್ವಿಮೂರ್ತಿಮದ, ಅಪ್ಪುಮೂರ್ತಿಮದ, ಪಾವಕಮೂರ್ತಿಮದ, ಪವನಮೂರ್ತಿಮದ, ಅಂಬರಮೂರ್ತಿಮದ, ರವಿಮೂರ್ತಿಮದ, ಶಶಿಮೂರ್ತಿಮದ, ಆತ್ಮಮೂರ್ತಿಮದ.

1. ಪೃಥ್ವಿಮೂರ್ತಿಮದ : ಪೃಥ್ವಿಮದವೆತ್ತಿದಲ್ಲಿ ತನುಗುಣಭರಿತನಾಗಿ ವಸ್ತ್ರಾಭರಣ ಅನುಲೇಪನ, ತಾಂಬೂಲಮಂ ಬಯಸುತ್ತಿಹನು. ಮಾನವನಿಗೆ, ಅನೇಕ ಜನ್ಮದ ಪುಣ್ಯದಿಂದಾ ಸ್ವಸ್ವರೂಪದ ಜ್ಞಾನದ ಅರಿವು ತಲೆದೋರಿ, ಗುರುಕಾರುಣ್ಯವ ಪಡೆದು ಗುರುಭಕ್ತಿಯ ಗುರುಸೇವೆಯಿಂದ ಸದಾಚಾರಿಯಾದಲ್ಲಿ ಪೃಥ್ವಿಮೂರ್ತಿಮದ ಹೋಯಿತ್ತು.

2. ಅಪ್ಪು (ಜಲ) ಮೂರ್ತಿಮದ : ಜಲಮೂರ್ತಿಮದವೆತ್ತಿದಲ್ಲಿ ಸಂಸಾರಭರಿತನಾಗಿ ಎನಗೆ ಬೇಕು, ಮನೆಗೆ ಬೇಕು, ಮಕ್ಕಳಿಗೆ ಬೇಕೆನ್ನುತ್ತಿಹನು. ಇತ್ತ ಗುರುಕಾರುಣ್ಯವ ಪಡೆದ ಸದ್‌ಭಕ್ತರಿಗೆ ಲಿಂಗಭಕ್ತಿಯೆಡೆಗೊಂಡು ಸರ್ವವೂ ಲಿಂಗಯ್ಯನದು, ಸರ್ವರೂ ಲಿಂಗಯ್ಯನವರು ಎಂಬ ಭಾವನೆಯಿಂದ ಆಚರಿಸಿದಲ್ಲಿ ಜಲಮೂರ್ತಿಮದ ಹೋಯಿತ್ತು.

3. ಅಗ್ನಿಮೂರ್ತಿಮದ : ಅಗ್ನಿಮೂರ್ತಿಮದವೆತ್ತಿದಲ್ಲಿ ಕಾಮ್ಯರಸಭರಿತನಾಗಿ ಕರೆಸಬೇಕು, ನೆರೆಸಬೇಕು, ನೋಡಬೇಕು, ನುಡಿಸಬೇಕು, ಆಲಂಗಿಸಬೇಕೆನಿಸುತ್ತಿಹನು. ಇತ್ತ ಗುರುಕಾರುಣ್ಯ ಪಡೆದು ಜಂಗಮ ಭಕ್ತಿಯಲ್ಲಿ ತದ್ಗತನಾಗಲು ವಿಶ್ವಚೈತನ್ಯ ಸ್ವರೂಪವನ್ನು ತಿಳಿದು

ಆಚರಿಸಿ ಕಿಂಕುರ್ವಾಣತೆಯಿಂದ ದಾಸೋಹದ ಸೇವೆ ಸಲ್ಲಿಸುವನಾಗಿ ಅಗ್ನಿಮೂರ್ತಿಮದ ಹೋಯಿತ್ತು.

4. **ಪವನಮೂರ್ತಿಮದ** : ಪವನಮೂರ್ತಿಮದವೆತ್ತಿದಲ್ಲಿ ಪಯಣಭರಿತನಾಗಿ, ಹೋಹೆ, ಬಂದಿಹೆ, ಕೊಂದಿಹೆ, ಕೊಟ್ಟಿಹೆನೆನ್ನುತ್ತಿಹನು. ಇತ್ತ ಗುರುಕಾರುಣ್ಯವ ಪಡೆದ ಸದ್‌ಭಕ್ತರಿಗೆ ಕಿಂಕುರ್ವಾಣ ಭಕ್ತಿಯಿಂದ ಪಾದೋದಕ ಮೋಹಿಯಾಗಿ ಶರಣರ ಸಂಗದಲ್ಲಿ ಆಚರಿಸಲು ಪವನಮೂರ್ತಿಮದ ಹೋಯಿತ್ತು.

5. ಅಂಬರಮೂರ್ತಿಮದ : ಅಂಬರಮೂರ್ತಿಮದವೆತ್ತಿದಲ್ಲಿ, ವಾಹನಭರಿತನಾಗಿ, ಆನೆ ಬೇಕು, ಕುದುರೆ ಬೇಕು, ಕಾರು ಬೇಕು, ಸೇನೆ, ದಳ, ತಂತ್ರ, ಛತ್ರ, ಚಾಮರ ಮೊದಲಾದ ವಸ್ತುವ ಬಯಸುತ್ತಿಹನು. ಇತ್ತ ಗುರು ಕಾರುಣ್ಯವ ಪಡೆದ ಸದ್‌ಭಕ್ತರಿಗೆ ಪ್ರಸಾದ ಭಕ್ತಿಯಳವಟ್ಟು ಪ್ರಸಾದದಾಚಾರದಿಂದಾ ಪರಮಾತ್ಮನ ಇಚ್ಛೆಯಿಂದ ಅವನು ಇರಿಸಿದಂತೆ ಇರುವೆನು ಎಂದು, ಪ್ರಸಾದ ಕಾಯರಾದಾಗ ಅಂಬರಮೂರ್ತಿ ಮದ ಹೋಯಿತ್ತು.

6. ರವಿಮೂರ್ತಿಮದ : ರವಿಮೂರ್ತಿಮದವೆತ್ತಿದಲ್ಲಿ ಕೋಪಾಗ್ನಿಭರಿತನಾಗಿ, ಸಾಧಿಸಿಹೆ, ಭೇದಿಸಿಹೆ, ಕೊಂದಿಹೆ, ತಿಂದಿಹೆ ಎನ್ನುತ್ತಿಹನು. ಇತ್ತ ಗುರುಕಾರುಣ್ಯವ ಪಡೆದ ಸದ್‌ಭಕ್ತರಿಗೆ ಅಂತರಂಗದ ಚಿತ್ಪ್ರಕಾಶವನ್ನೇ ಶ್ರೀ ಗುರುವು ಬಹಿಷ್ಕರಿಸಿ ಭಸ್ಮವಾಗಿ ಕೊಟ್ಟ ಮೇಲೆ, ಸದ್‌ಭಕ್ತರು ಚಿದ್ಭಸ್ಮವನ್ನು ಧರಿಸಲು ಅವಗುಣಂಗಳೆಲ್ಲವೂ ಅಳಿದು ಚಿತ್ಪ್ರಕಾಶದಲ್ಲಿ ಆಚರಿಸುವರಾಗಿ ರವಿಮೂರ್ತಿಮದ ಹೋಯಿತ್ತು.

7. ಶಶಿಮೂರ್ತಿಮದ : ಶಶಿಮೂರ್ತಿಮದವೆತ್ತಿದಲ್ಲಿ ಚಿಂತಾಭರಿತನಾಗಿ ಆದೀತೋ ಆಗದೋ, ಇದ್ದಿತೋ ಇಲ್ಲವೋ, ಏನೋ ಎಂತೋ ಎನ್ನುತ್ತಿಹನು. ಇತ್ತ ಗುರುಕಾರುಣ್ಯವ ಪಡೆದ ಸದ್‌ಭಕ್ತರಿಗೆ, ಶ್ರೀ ಗುರುವು ಅಂತರಂಗದ ಚಿತ್ಶಿಖಿಯನ್ನೇ ಬಹಿಷ್ಕರಿಸಿ, ರುದ್ರಾಕ್ಷಿಯಾಗಿ ಆಶೀರ್ವದಿಸಲು, ಚಿತ್‌ರುದ್ರಾಕ್ಷಿಯಲ್ಲಿ ಸದ್‌ಭಕ್ತಿ ಅಳವಟ್ಟು, ಲಿಂಗಜ್ಞಾನ ದೃಷ್ಟಿಯಿಂದ ಆಚರಿಸುವರಾಗಿ ಶಶಿಮೂರ್ತಿಮದ ಹೋಯಿತ್ತು.

8. **ಆತ್ಮಮೂರ್ತಿಮದ** : ಆತ್ಮಮೂರ್ತಿಮದವೆತ್ತಿದಲ್ಲಿ ಅಹಂಕಾರಭರಿತನಾಗಿ ಎನ್ನಿಂದ ಬಲ್ಲಿದರಿಲ್ಲಾ, ಎನಗಿನ್ನಾರು ಇದಿರಿಲ್ಲವೆಂದು ಅಹಂಕಾರದಿಂದ ಆಚರಿಸುವನು. ಇತ್ತ ಗುರುಕಾರುಣ್ಯವ ಪಡೆದ ಸದ್‌ಭಕ್ತರಿಗೆ, ಶ್ರೀಗುರುವು ಉಪದೇಶಿಸಿದ ಮಂತ್ರದಲ್ಲಿ ನಿಷ್ಠೆ ಬಲಿದು, ಲಿಂಗದಲ್ಲಿ ಮಂತ್ರದ ನೆನಹು ಸ್ಥಿರಗೊಂಡು ಮನವು ಪ್ರಾಣಲಿಂಗವಾಗಿ ನೆಲೆಗೊಂಡು ಸರ್ವಾಂಗವೂ ಲಿಂಗವಾಗಲು ಶಿವಶರಣರ ದಾಸನೆಂಬ ಭಾವಸ್ಥಿರವಾಗಿ, ದಾಸೋಹಂಭಾವಿಯಾಗಿ ಆಚರಿಸಲು ಆತ್ಮಮೂರ್ತಿ ಮದ ಹೋಯಿತ್ತು. ಇಂತೀ ಅಷ್ಟಮೂರ್ತಿಮದಂಗಳು ಅಷ್ಟಾವರಣ ಸಂಬಂಧದಿಂದಾ ಅಳಿದು ಅಷ್ಟಾವರಣದಾಚರಣೆಯುಳಿದು ಆಚರಿಸುವ ಸದ್‌ಭಕ್ತರ ಸಂಗದಲ್ಲಿರಿಸಿ ರಕ್ಷಿಸಯ್ಯಾ ಶ್ರೀ ಮತ್ಸೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ಅಂತರಂಗದಷ್ಟಮದಗಳು

ಸಂಸ್ಥಿತಮದ, ತೃಣೀಕೃತ ಮದ, ವರ್ತಿನಿಮದ, ಕ್ರೋಧಿನಿಮದ, ಮೋಹಿನಿಮದ,

ಅತಿಚಾರಿಣಿಮದ, ಗಂಧಚಾರಿಣಿಮದ, ವಾಸಿನಿಮದ ಇವು ಆತ್ಮರುಗಳ ಮನದಲ್ಲಿ ನೆನಹು ರೂಪಿನಿಂದ ಇರುವಂತಹುಗಳು.

ಅಷ್ಟಾತ್ಮಗಳು : ಜೀವಾತ್ಮ ಅಂತರಾತ್ಮ ಪರಮಾತ್ಮ ನಿರ್ಮಲಾತ್ಮ ಶುದ್ಧಾತ್ಮ ಜ್ಞಾನಾತ್ಮ ಮಹಾತ್ಮ ದಿವ್ಯಾತ್ಮ (ಭೂತಾತ್ಮ).

ಅಷ್ಟತನುಗಳು : ಸ್ಥೂಲತನು, ಸೂಕ್ಷ್ಮತನು, ಕಾರಣತನು, ನಿರ್ಮಲತನು, ಆನಂದತನು, ಶುದ್ಧತನು, ಚಿದ್ರೂಪತನು, ಚಿನ್ಮಯತನು.

ಬಹಿರಂಗದಷ್ಟಮದಂಗಳು : ಕುಲಮದ, ಛಲಮದ, ಧನಮದ, ರೂಪುಮದ, ಯೌವ್ವನಮದ, ವಿದ್ಯಾಮದ, ರಾಜ್ಯಮದ, ತಪೋಮದ. ಜೀವನು ಪ್ರಕೃತಿ ಸಂಬಂಧವಾದ ಅಷ್ಟಮೂರ್ತಿಮದಗಳ ವಿಕಾರಗಳಿಗೆ ತುತ್ತಾಗಿ, ಅಲ್ಲಿ ತನ್ನ ಸ್ವಸ್ವರೂಪವನ್ನು ಮರೆತು, ಕೋಟ್ಯಾಂತರ ಜನ್ಮಗತಿಗಳಲ್ಲಿ ತಿರುಗುತ್ತಾ, ತನ್ನ ಅಂತರಂಗದಲ್ಲಿರುವ ಅಷ್ಟಾವರಣಗಳ ಮೂಲಸ್ವರೂಪವನ್ನರಿಯದೇ ತಿರುಗುತ್ತಿರ್ಪಲ್ಲಿ ಅನೇಕ ಜನ್ಮದ ಪುಣ್ಯದಿಂದ, ತನ್ನಂತರಂಗದ ಪರವಸ್ತುವೇ ಶ್ರೀಗುರುವಾಗಿ ಬರಲು, ಮಲತ್ರಯ ಸಂಬಂಧದ ಬುದ್ಧಿಯಾದ ಜೀವನಿಗೆ ವಿವೇಕ ತಲೆದೋರಿ, ಶ್ರೀ ಗುರುವಂ ಮೊರೆಹೋಗಲು ಶ್ರೀ ಗುರುಕೃಪಾದೃಷ್ಟಿಯಿಂದ ಶಿಷ್ಯನ ಅಜ್ಞಾನವನ್ನು, ಜ್ಞಾನಕತ್ತರಿಯಿಂದ ಕಳೆದು, ಅಂತರಂಗದಲ್ಲಿ ಅಷ್ಟಾವರಣಗಳ ಅರಿವನ್ನು ತಿಳಿಸಿ, ಅಂತರಂಗದ ಅಷ್ಟಾವರಣಗಳನ್ನು ಬಹಿರಂಗದಲ್ಲಿ ಆಚರಿಸಲು ತಿಳಿಸಿ ಬಹಿರಂಗದ ಅಷ್ಟಾವರಣದ ಆಚರಣೆಯಿಂದ ಅಂತರಂಗದ ಅರಿವು ಜಾಗ್ರತವಾಗಿ, ಅಷ್ಟಾತ್ಮಗಳ ಪ್ರಕೃತಿ ಗುಣಗಳು ಅಳಿದು, ಅಷ್ಟತನುಗಳು ಶುದ್ಧತೆಯನ್ನು ಪಡೆದು, ಅಂತರಂಗದ ಬಹಿರಂಗದ ಅಷ್ಟಮದಗಳು ಅಳಿದು ನಡೆವ ವಿಚಾರವೆಂತೆಂದೊಡೆ :

ಅಷ್ಟಾತ್ಮರುಗಳ ನಿವಾರಣೆ : ಜೀವಾತ್ಮ ಅಂತರಾತ್ಮ ಪರಮಾತ್ಮ ನಿರ್ಮಲಾತ್ಮ ಶುದ್ಧಾತ್ಮ ಜ್ಞಾನಾತ್ಮ ಮಹಾತ್ಮ ದಿವ್ಯಾತ್ಮ (ಭೂತಾತ್ಮ).

ಜೀವಾತ್ಮ : ದೇಹಭಾವದ ವ್ಯವಹಾರದಿಂ ತನ್ನ ನಿಜಸ್ವರೂಪವನ್ನು ಮರೆದಿರುವಾತ್ಮನೇ, ಜೀವಾತ್ಮನು. ಜನನ ಮರಣಕ್ಕೆ ಹೇಸಿ, ಶ್ರೀಗುರುವಂ ಮೊರೆಹೋಗಲು ಶ್ರೀಗುರುವು, ಮುತ್ತಿರ್ದ ಮಾಯಾಪ್ರಪಂಚಮಂ ಕೆಡಿಸಿ ಜೀವನೇ ಶಿವನಲ್ಲ, ಆ ಪರಶಿವನೆ ಇಷ್ಟಬ್ರಹ್ಮ ಆ ಇಷ್ಟಬ್ರಹ್ಮವೇ ನಿನ್ನ ಪ್ರಾಣ, ಆ ಪ್ರಾಣವೇ ಇಷ್ಟಲಿಂಗವೆಂದರುಹಿ, ಜೀವ ಶಿವನಲ್ಲಿ ಆ ಪರಶಿವನೇ ಜೀವನೆಂಬ ಪರ್ಯಾಯಮಂ ತೋರಿಸಿ, ಆತ್ಮನ ಜೀವಭಾವಮಂ ಕಳೆದು ಶಿವಭಾವವೆಂದೆನಿಸಿದಲ್ಲಿ ಜೀವಾತ್ಮ ಭಾವನಷ್ಟವಾಯಿತು.

ಅಂತರಾತ್ಮ : ದೇಹದ ಜಡತ್ವಮಂ ಕಂಡು ತಾನಾರು ಎಂದು ಅರಿವು ಮರೆವೆಗಳಿಂದಾ ಚಿಂತಿಸುವಾತ್ಮನೇ ಅಂತರಾತ್ಮನು. ಇತ್ತ ಗುರುಕಾರುಣ್ಯವ ಪಡೆದ ಮೇಲೆ ಶ್ರೀಗುರುವು ಮಸ್ತಕದಲ್ಲಿ ಅಭಯಹಸ್ತವನ್ನಿಟ್ಟು ಭಾವದಲ್ಲಿ ಲಿಂಗಸಂಬಂಧವ ಮಾಡಿ ನಿರಾಕಾರ ವಸ್ತುವನ್ನೇ ಮಂತ್ರಕ್ಕೆ ತಂದು ಶ್ರೋತ್ರದಲ್ಲಿ ಶ್ರೀಗುರುವು ಮಹಾಮಂತ್ರೋಪದೇಶವ ಮಾಡಲು ಲಿಂಗವು, ಮಂತ್ರವು, ಮನದಲ್ಲಿ ನೆಲೆಗೊಂಡು, ಪ್ರಾಣಲಿಂಗವಾಗಿ ನೆಲೆಗೊಳ್ಳಲು ಅಂತರಾತ್ಮಭಾವವಳಿಯಿತ್ತು.

ಪರಮಾತ್ಮ: ತನ್ನ ಸ್ವಸ್ವರೂಪದ ತತ್ವವನರಿದು ಪರತತ್ವದಲ್ಲಿರುವುದೇ ಪರಮಾತ್ಮ

ಪ್ರಕೃತಿ ಸಂಬಂಧವಾವರಿಸಿ, ತನ್ನ ಸ್ವರೂಪದ ಅರಿವು ಮರೆದಿರುವಲ್ಲಿ, ಲಿಂಗದ ಅರಿವು, ಜಂಗಮದ ಭಕ್ತಿನೆಲೆಗೊಂಡಲ್ಲಿ ಪರಮಾತ್ಮ ಭಾವ ಸ್ಥಿರವಾಯಿತ್ತು.

ನಿರ್ಮಲಾತ್ಮನು : ಆಣವಾದಿ ಮಲತ್ರಯಗಳಿಗೆ ದೂರವಾಗಿರುವಾತ್ಮನೇ ನಿರ್ಮಲಾತ್ಮನು. ಮಾನವನು ತನ್ನ ನಿಜಸ್ವರೂಪವನ್ನು ಮರೆದು, ಶರೀರವೇ ನಾನೆಂದು ವ್ಯವಹರಿಸುತ್ತಿರುವಲ್ಲಿ ನಿರ್ಮಲಾತ್ಮ ಮರೆಯಾಯಿತ್ತು. ಅನೇಕ ಜನ್ಮದ ಪುಣ್ಯದಿಂದ ಶ್ರೀಗುರುವಂ ಮೊರೆಹೋಗಲು ಶ್ರೀ ಗುರುವು ಇಚ್ಛಾಶಕ್ತಿ ಸಂಕುಚಿತ ಸ್ಥಿತಿಯನ್ನು ಹೊಂದಿ, ನನ್ನ ತಂದೆತಾಯಿಗಳೇ ನನ್ನವರೆಂಬ ಮರವೆಯನ್ನು ಕಳೆದು, ಶ್ರೀ ಗುರುವೇ ತಂದೆತಾಯಿಯೆಂಬ ಜ್ಞಾನದಿಂದ ನಡೆಯಲು ತಿಳಿಸಿದಲ್ಲಿ ಆಣವ ಮಲವು ಅಳಿವುದು (ಕಳೆವುದು). ಹೆಂಡಿರು ಮಕ್ಕಳು ನನ್ನವರೆಂಬ ಮಾಯಾಮಲವನ್ನು ಕಳೆಯಲು ಇಂದಿನಿಂದಾ ಶಿವಶರಣರೇ ಬಂಧುಗಳು, ಬಳಗವು ಎಂದು ತಿಳಿಯಬೇಕು. ಹಣ, ಆಸ್ತಿ, ಬಂಗಾರ, ಸೊತ್ತು ನನ್ನದೆಂಬ ಕಾರ್ಮಿಕಮಲವನ್ನು ಇದು ಪರಮಾತ್ಮನ ಸೊತ್ತು, ಅವನು ಇರಿಸಿದಂತೆ ಇರುವೆ, ಅವನು ಮಾಡಿಸಿದಂತೆ ಮಾಡುವೆನೆಂಬ ಕ್ರಿಯೆಯು ಧೃಢವಾಗಲು, ಕಾರ್ಮಿಕಮಲವನ್ನು ಸುಜ್ಞಾನಕತ್ತರಿಯಿಂದ ಕಳೆಯಲು ಮಲತ್ರಯಗಳು ಅಳಿದು ನಿರ್ಮಲಾತ್ಮ ಸ್ಥಿರವಾಯಿತ್ತು.

ಶುದ್ಧಾತ್ಮ : ಶುದ್ಧಾಂತಃಕರಣದೇಹಿಯೆಂದು. ಅಂತಃಶುಚಿ, ಬಹಿಃಶುಚಿಯಾಗಿರ್ಪಾತನೇ ಶುದ್ಧಾತ್ಮನು. ಶುದ್ಧಾತ್ಮ ಭಾವವು ತನುಗುಣದಿಂದ ವ್ಯವಹರಿಸಿದಲ್ಲಿ ಮರೆಯಾಗಿರ್ಪುದು. ಅನೇಕ ಜನ್ಮದ ಪುಣ್ಯದಿಂದ ಶ್ರೀ ಗುರು ಕಾರುಣ್ಯವನ್ನು ಪಡೆಯಲು ಶ್ರೀಗುರುವು ಆಹಾರ, ನೀರನ್ನು ಪಾದೋದಕವನ್ನಾಗಿ ಸೇವಿಸುವ ಆಚರಣೆಯನ್ನು ತಿಳಿಸಲು ಅಂದಿನಿಂದ ಜಲವನ್ನು ಪಾದೋದಕವನ್ನಾಗಿ ಸೇವಿಸಲು ಶುದ್ಧಾತ್ಮ ಸ್ಥಿರವಾಯಿತ್ತು.

ಜ್ಞಾನಾತ್ಮ : ಸದಾ ನಿತ್ಯಾನಿತ್ಯ ವಿವೇಕ ವಿಚಾರದಲ್ಲಿ ಪರಾಂಬರಿಕೆಯಲ್ಲಿ ಕೂಡಿರುವಾತ್ಮನೇ ಜ್ಞಾನಾತ್ಮನು.

ಜ್ಞಾನಾತ್ಮಭಾವವೂ ಪ್ರಕೃತಿ ಸಂಬಂಧದಿಂದಾ ತನುವೇ ನಾನೆಂದು ವ್ಯವಹರಿಸುತ್ತಾ, ಜ್ಞಾನಾತ್ಮ ಭಾವವು ಮರೆಯಾಗಿ ವ್ಯವಹರಿಸುವವನು. ಅನೇಕ ಜನ್ಮದ ಪುಣ್ಯದ ಪರಿಪಾಕದಿಂದಾ ಶ್ರೀಗುರುಕಾರುಣ್ಯವಂ ಪಡೆಯಲು, ಶ್ರೀಗುರುವು ನಿನ್ನ ನಿಜಸ್ವರೂಪವೇ ಲಿಂಗವೆಂದು ತಿಳುಹಿ, ಲಿಂಗವನ್ನು ಸಂಬಂಧಿಸಿದ ಮೇಲೆ (ನೀನು) ತಾನು ಲಿಂಗವು, ಶರೀರವು ಲಿಂಗಯ್ಯನದು, ಶರೀರದ ಪೋಷಣೆಗೆ ಅನ್ನವನ್ನು ಶಿವಮಂತ್ರದಿಂದ ಪ್ರಸಾದವಾಗಿ ಸ್ವೀಕರಿಸುತ್ತಾ, ಪ್ರಸಾದ ಕಾಯನು ಎಂದು ತಿಳುಹಿದಲ್ಲಿ ಸರ್ವವೂ ಪ್ರಸಾದವೆಂದು ಆಚರಿಸುವನಾಗಿ, ಜ್ಞಾನಾತ್ಮ ಭಾವ ಸ್ಥಿರವಾಯಿತು.

ಮಹಾತ್ಮ : ಮಹಾಮಹಿಮಾಸ್ಪದನಾಗಿ ಮೆರೆವಾತ್ಮನೇ ಮಹಾತ್ಮನು. ಪ್ರಕೃತಿಗೆ ವಶನಾಗಿ ತನ್ನ ಮೂಲಸ್ವರೂಪವನ್ನು ಮರೆತು ಕಿಂಚಿಜ್ಞತ್ವದಿಂದ ವ್ಯವಹರಿಸುವನಾಗಿ ಮಹಾತ್ಮಭಾವ ಮರೆಸಿ ವ್ಯವಹರಿಸುವನು. ಅನೇಕ ಜನ್ಮದ ಪುಣ್ಯದಿಂದಾ ಶ್ರೀಗುರು ಕಾರುಣ್ಯವಂ ಪಡೆದ ಮೇಲೆ ಶ್ರೀಗುರುವು ಅಂತರಂಗದ ಲಿಂಗಜ್ಞಾನ ಪ್ರಕಾಶವೇ ಬಹಿರಂಗದಲ್ಲಿ ಭಸಿತವಾಗಿರುವುದೆಂದೂ, ಅಂತರಂಗದ ಚಿತ್‌ಶಿಖಿಯೇ ಬಹಿರಂಗದಲ್ಲಿ ಚಿದ್ರುದ್ರಾಕ್ಷಿಯಾಗಿ ಅಳವಡುವುದೆಂದು ತಿಳಿಸಲು, ದೇಹಭಾವವು ತೊಲಗಿ, ಶಿವಜ್ಞಾನ ತಾನೆಂಬ ಪ್ರಕಾಶದಲ್ಲಿ ಲಿಂಗನೋಟ ಅಳವಡಲು ಮಹಾತ್ಮಭಾವವು ಸ್ಥಿರವಾಯಿತು.

ದಿವ್ಯಾತ್ಮ (ಭೂತಾತ್ಮ) : ಸಕಲ ಪ್ರಾಣಿಗಳಿಗೆ ಚೈತನ್ಯಸ್ವರೂಪವಾಗಿರುವಾತ್ಮನೇ ದಿವ್ಯಾತ್ಮನು. ಜೀವಗುಣದಿಂದ ತನುವೇ ತಾನೆಂದು ವ್ಯವಹರಿಸುತ್ತಾ ತಿರುಗುವನಾಗಿ, ದಿವ್ಯಾತ್ಮ ಭಾವ ಮರೆಯಾಯಿತ್ತು. ಅನೇಕ ಜನ್ಮದ ಪುಣ್ಯದಿಂದ ಶ್ರೀಗುರು ಕೃಪೆಯನ್ನು ಪಡೆದು ಲಿಂಗಾಂಗ ಸಂಬಂಧಿಯಾದ ಮೇಲೆ ಶ್ರೀಗುರುವು ಲಿಂಗವೇ ನೀನು ನಿನ್ನ ನಾಮವೇ ಮಂತ್ರವೆಂದು ತಿಳಿಸಿ ವಾಯುಪ್ರಾಣಿಯಾಗಿ ಆಚರಿಸುವುದನ್ನು ಬಿಡಿಸಿ, ಮಂತ್ರಪ್ರಾಣಿಯಾಗಿ ಆಚರಿಸಲು ತಿಳಿಸಿ, ಕರದಲ್ಲಿರುವ ಲಿಂಗದಲ್ಲಿ ಅನುಮಿಷ ದೃಷ್ಟಿಯಿಂದ ಮಂತ್ರವು ಲಿಂಗವು ಸ್ಥಿರಗೊಂಡು ಲಿಂಗಪ್ರಾಣಿಯಾಗಿ ಪ್ರಾಣಲಿಂಗವಾಗಿ ಅಳವಟ್ಟು ಸರ್ವವೂ ಲಿಂಗವಾಗಿ ಲಿಂಗಚೈತನ್ಯವಾಗಿ ಆಚರಿಸುವನಾಗಿ ದಿವ್ಯಾತ್ಮ ಸ್ಥಿರವಾಯಿತ್ತು. ಇಂತೀ ಅಷ್ಟಾವರಣ ಸಂಗದಿಂದ ಅಷ್ಟಾತ್ಮಗಳು ಶುದ್ಧಿಯಾಗುವವೆಂದು ತಿಳಿದುಕೊಂಬುದು ತತ್ವಜ್ಞಾನಿಗಳು. ಇಂತೀ ಅಷ್ಟಾತ್ಮಗಳು ಶುದ್ಧಿಯಾಗಿರ್ಪ ಮಹಾತ್ಮರ ಸಂಗದಲ್ಲಿರಿಸಿ ರಕ್ಷಿಸಯ್ಯಾ ಶ್ರೀ ಮತ್ತೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ಅಷ್ಟತನುಗಳ ವಿವರ, ಅಷ್ಟಾವರಣಗಳ ಸಂಬಂಧದ ಆಚರಣೆ

ಅಷ್ಟತನುಗಳು : ಸ್ಥೂಲತನು, ಸೂಕ್ಷ್ಮತನು, ಕಾರಣ ತನು, ನಿರ್ಮಲ ತನು, ಆನಂದ ತನು, ಶುದ್ಧ ತನು, ಚಿದ್ರೂಪ ತನು, ಚಿನ್ಮಯ ತನು.

ಸ್ಥೂಲತನು : ಪೃಥ್ವಿ, ಅಪ್ಪು, ತತ್ವಗಳಿಂದ ನಿರ್ಮಾಣವಾದುದೇ ಸ್ಥೂಲ ತನು. ಅಗ್ನಿತತ್ವ, ವಾಯುತತ್ವಗಳಿಂದ ನಿರ್ಮಾಣವಾದುದೇ ಸೂಕ್ಷ್ಮತನು, ಆಕಾಶತತ್ವ ಆತ್ಮನ ಅಹಂ ತತ್ವದಿಂದ ನಿರ್ಮಾಣವಾದುದೇ ಕಾರಣ ತನು ಕರ್ಮೇಂದ್ರಿಯಗಳಿಂದಾದುದೇ ನಿರ್ಮಲತನು. ಪಂಚವಿಷಯಗಳಿಂದಾದುದೇ ಆನಂದ ತನು. ಪಂಚಜ್ಞಾನೇಂದ್ರಿಯಗಳಿಂದಾದುದೇ ಶುದ್ಧ ತನು. ಪಂಚವಾಯುಗಳಿಂದಾದುದೇ ಚಿದ್ರೂಪತನು, ಪಂಚಕರಣಗಳಿಂದ ನಿರ್ಮಾಣವಾದುದೇ ಚಿನ್ಮಯ ತನು. ಇವು ಅಷ್ಟತನುಗಳು, ಮಾನವನಿಗೆ ಅನೇಕ ಜನ್ಮದ ಅರಿವು ತಲೆದೋರಿ, ಶ್ರೀ ಗುರುವಂ ಮೊರೆಹೋಗಲು ಶ್ರೀ ಗುರುವು ದೀಕ್ಷಾ ಕಾಲದಲ್ಲಿ ಉಪಮಾ ದೀಕ್ಷೆಯನ್ನು ಮಾಡುತ್ತಾನೆ.

ಉಪಮಾದೀಕ್ಷೆಯ ವಿವರ : ಅಯ್ಯಾ ನಿನ್ನಿಷ್ಟ ತನುವಿನ ಮಧ್ಯದಲ್ಲಿ ಪರಬ್ರಹ್ಮ ನಿಜವಸ್ತುವೇ ನಿನ್ನ ಪಾವನ ನಿಮಿತ್ತಾರ್ಥವಾಗಿ ಅಷ್ಟಾವರಣ ಸ್ವರೂಪಿನಿಂದಾ ನೆರೆದಿರ್ಪುದು ನೋಡಾ, ಅದರ ವಿಚಾರವೆಂತೆಂದೊಡೆ: ನಿನ್ನ ಸ್ಥೂಲತನುವಿನ ಮಧ್ಯದಲ್ಲಿ ಪರಬ್ರಹ್ಮಸ್ವರೂಪ ತಾನೆಂಬ ಅರುಹೇ ಶ್ರೀ ಗುರುವಾಗಿ ನೆಲಸಿರ್ಪರು ನೋಡಾ, ನಿನ್ನ ಸೂಕ್ಷ್ಮತನುವಿನ ಮಧ್ಯದಲ್ಲಿ ಸ್ವಸ್ವರೂಪಜ್ಞಾನವೇ ಲಿಂಗವಾಗಿ ನೆಲಸಿರ್ಪುದು ನೋಡಾ. ನಿನ್ನ ಕಾರಣ ತನುವಿನ ಮಧ್ಯದಲ್ಲಿ ನಿನ್ನ ಸ್ವಾನುಭಾವವೇ ಜಂಗಮವಾಗಿ ನೆಲಸಿರ್ಪುದು ನೋಡಾ. ನಿನ್ನ ನಿರ್ಮಲ ತನುವಿನ ಮಧ್ಯದಲ್ಲಿ ಕರುಣಾಮೃತವೇ ಪಾದೋದಕವಾಗಿ ನೆಲಸಿರ್ಪುದು ನೋಡಾ. ನಿನ್ನ ಆನಂದ ತನುವಿನ ಮಧ್ಯದಲ್ಲಿ ಪರಮಾತ್ಮನ ಪ್ರಸನ್ನತೆಯೇ ಕೃಪಾಪ್ರಸಾದವಾಗಿ ನೆಲಸಿರ್ಪುದು ನೋಡಾ. ನಿನ್ನ ಶುದ್ಧ ತನುವಿನ ಮಧ್ಯದಲ್ಲಿ ಪರಮಾತ್ಮನ ಚಿತ್‌ಪ್ರಕಾಶವೇ ಭಸಿತವಾಗಿ ನೆಲಸಿರ್ಪುದು ನೋಡಾ. ನಿನ್ನ ಚಿದ್ರೂಪ ತನುವಿನ ಮಧ್ಯದಲ್ಲಿ ಚಿತ್ಕಾಂತಿಯೇ ರುದ್ರಾಕ್ಷಿಯಾಗಿ ನೆಲಸಿರ್ಪುದು ನೋಡಾ. ನಿನ್ನ ಚಿನ್ಮಯ ತನುವಿನ ಮಧ್ಯದಲ್ಲಿ ಚಿದಾನಂದವೇ ಮಂತ್ರವಾಗಿ ನೆಲಸಿರ್ಪುದು. ನಿನ್ನ ಸರ್ವಾಂಗದಲ್ಲಿ ಪರಾತ್ಪರ ನಿಜವಸ್ತುವೇ ಶ್ರೀಗುರುವಾಗಿ ಅಷ್ಟಾವರಣ ಸ್ವರೂಪಿನಿಂದಾ ನೆಲಸಿರ್ಪರೆಂದು ತಿಳಿಸಿ, ಸಂಸ್ಕಾರವ

ಮಾಡಿ ಬಹಿರಂಗದಲ್ಲಿ ಆಚರಿಸಲಿಕ್ಕೆ ಕೊಟ್ಟು ಅಷ್ಟಾವರಣ ತತ್ವವನ್ನು ಬಹಿರಂಗದಲ್ಲಿ ಆಚರಣೆ ಮಾಡಿದಲ್ಲಿ, ಮೊದಲಿನ ಪ್ರಕೃತಿಯಂಗವು ನಾಶವಾಗಿ, ಭಕ್ತನಂಗದಲ್ಲಿ ಶ್ರೀಗುರುವೇ ಸ್ವಸ್ವರೂಪಜ್ಞಾನದಲ್ಲಿ ಆಚರಣೆಯಲ್ಲಿ ನಿಂದು, ಗುರೂಪದಿಷ್ಟಿತ ಇಷ್ಟಲಿಂಗವೇ ಮನದ ಜ್ಞಾನದಲ್ಲಿ ಲಿಂಗವಾಗಿ ನಿಂದು, ಸ್ವಸ್ವರೂಪಜ್ಞಾನವೇ ಸ್ವಾನುಭಾವವಾಗಿ ಸತ್ಕಾಯಕ ಮಾಡಿ ದಾಸೋಹದ ನಡೆಯಿಂದ ಭಾವದಲ್ಲಿ ಜಂಗಮವಾಗಿ ನೆಲಸಿ, ಜಂಗಮದ ಪಾದೋದಕದ ನಿತ್ಯಆಚರಣೆಯ ಸಹಜ ಸಂಬಂಧದಾಚರಣೆಯೇ ಕರುಣಾ, ವಿನಯ, ಸಮತಾ, ಗುಣಗಳಿಂದ ಜಿಹ್ವೆಯಲ್ಲಿ ಚಿದ್ರಸವಾಗಿ ನೆಲಸುವುದು. ಪ್ರಸಾದದ ಸಹಜ ಸಂಬಂಧದಾಚರಣೆಯಿಂದ ಪರಮಾತ್ಮನ ಪ್ರಸನ್ನತೆಯಿಂದೊಡಗೂಡಿ ನಾಸಿಕದಲ್ಲಿ ನೆಲೆಸಿ ಶಾಂತಿಕಳೆ ಚಿತ್ಪ್ರಕಾಶದ ಭಸಿತದ ಆಚರಣೆಯಿಂದಾ. ಸರ್ವಾಂಗದ ತ್ವಕ್ಕಿನಲ್ಲಿ ಭಸಿತವಾಗಿ ನೆಲಸಿ, ಚಿತ್ಕಾಂತಿಯ ರುದ್ರಾಕ್ಷಿಯ ಭಕ್ತಿಯ ಆಚರಣೆಯಿಂದಾ ನೇತ್ರದಲ್ಲಿ ಲಿಂಗದ ದೃಷ್ಟಿಯಾಗಿ ನೆಲಸಿ, ಶ್ರೀ ಗುರೂಪದಿಷ್ಟಿತ ಲಿಂಗದ ನಾಮವಾದ ಮಂತ್ರವು ಶ್ರೋತ್ರದಿಂದ ಮನದಲ್ಲಿ ನೆಲೆಗೊಂಡು ಮಂತ್ರದಲ್ಲಿ ಲಿಂಗವು ನೆಲೆಗೊಂಡು ಶ್ರೋತ್ರವು ಪ್ರಸಾದಲಿಂಗವಾಗಿ ಶರೀರವೆಲ್ಲವೂ ಮಂತ್ರಮಯವಾಗಿ ಸಂಸ್ಕಾರದ ಆಚರಣೆಯು ಅಳವಟ್ಟು ಭಕ್ತನಲ್ಲಿ ಪ್ರಕೃತಿಯಂಗವು ಅಳಿದು ಅಷ್ಟಾವರಣ ಸ್ವರೂಪವಾಗುವುದೆಂದು ತಿಳಿದುಕೊಂಬುದು ತತ್ವಜ್ಞಾನಿಗಳು. ಇಂತೀ ಪ್ರಕೃತಿ ಸ್ವರೂಪವಾದ ಅಂಗವು ನಷ್ಟವಾಗಿ ಆಚರಣೆಯಿಂದ ಅಷ್ಟಾವರಣವಂಗವಾಗಿರ್ಪ ಶರಣರ ಸಂಗದಲ್ಲಿರಿಸಿ ರಕ್ಷಿಸಯ್ಯಾ ಶ್ರೀಮತ್ಶೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ಅಂತರಂಗದಷ್ಟಮದಗಳು ಅವುಗಳ ನಿವಾರಣೆ

ಅಂತರಂಗದಷ್ಟಮದಗಳು : ಸಂಸ್ಥಿತಮದ, ತೃಣೀಕೃತಮದ ವರ್ತಿನೀಮದ ಕ್ರೋಧಿನಿಮದ, ಮೋಹಿನಿಮದ, ಅತಿಚಾರಿಣಿಮದ, ಗಂಧಚಾರಿಣಿಮದ, ವಾಸಿನಿಮದ ಇವು ಆತ್ಮರುಗಳ ಮನದಲ್ಲಿ ನೆನಹು ರೂಪದಿಂದ ಇರುವಂತಹುಗಳು. ಶಿವಾಂಶಿಕನಾದಾತ್ಮನು ತನ್ನ ನಿಜವನ್ನು ಮರೆದು, ಶರೀರ ಸಂಬಂಧಿಯಾಗಿ ಅನೇಕ ಗತಿಗಳಲ್ಲಿ ಬರುವನು.

ಸಂಸ್ಥಿತಮದ : ಆತ್ಮನಲ್ಲಿ ದೇಹೋಹಂ ಎಂದೆಂಬ 'ದೇಹವೇ ನಾನು' ಎಂಬ ಮೂಲ ಅಹಂಕಾರವುಳ್ಳದ್ದೇ ಸಂಸ್ಥಿತಮದವು. ಅನೇಕ ಜನ್ಮದ ಪುಣ್ಯದಿಂದ ಶ್ರೀಗುರುವಂ ಮರೆಹೋಗಲು ಶ್ರೀ ಗುರುವು ದೀಕ್ಷೆಯಿಂದ ಗುರುಕಾರುಣ್ಯವ ಪಡೆದ ಸದ್‌ಭಕ್ತರಿಗೆ ಗುರುಭಕ್ತಿಯಿಂದ ಗುರುಸೇವಾ ಸದಾಚಾರ ಸದ್ಭಕ್ತಿ ಅಳವಡಲು ಸಂಸ್ಥಿತವೆಂಬ ಮದವಳಿಯಿತ್ತು.

ತೃಣೀಕೃತಮದ : ತನ್ನ ಅಹಂಕಾರದ ವರ್ತನೆಯನ್ನು ಕಂಡು ಯಾರಾದರೂ ನೀತಿಯನ್ನು ಹೇಳಿದರೆ, ಅವರನ್ನು ಹುಲ್ಲುಕಡ್ಡಿಗೆ ಸಮಾನಮಾಡಿ ತಿರಸ್ಕರಿಸಿ ನುಡಿಯುವುದೇ ತೃಣೀಕೃತವೆಂಬ ಮದವು. ಇತ್ತ ಗುರುಕಾರುಣ್ಯ ಪಡೆದ ಸದ್‌ಭಕ್ತರಿಗೆ ಶಿವಭಕ್ತರೇ ಹಿರಿಯರು. ಶ್ರೀ ಗುರುವಿನಿಂದ ಪಡೆದ ಲಿಂಗದಲ್ಲಿ ನಿಷ್ಠೆಯುಳ್ಳವನಾಗಿ, ಲಿಂಗವ್ರತವನ್ನು ಛಲಿಯಾಗಿ ಪಾಲಿಸುತ್ತಾ, ಸರ್ವರೂ ಲಿಂಗಸ್ವರೂಪರೆಂಬ ಭಾವದಿಂದ, ಅವರ ಸೇವಕರೆಂಬ ಭಾವವಳವಡಲು ತೃಣೀಕೃತವೆಂಬ ಮದವಳಿಯಿತ್ತು.

ವರ್ತಿನಿಮದ : ಸದಾ ಪರಧನ, ಪರಸತಿ, ಪರನಿಂದೆ, ಪರದೈವ, ಪರಹಿಂಸೆಯಿಂದ

ನಡೆಯುತ್ತಾ ತಾನು ಗಳಿಸಿದ ಧನವನ್ನು ಕೆಟ್ಟ ಕಾರ್ಯಗಳಿಗೆ ವ್ಯಯಿಸುತ್ತಾ ಆಚರಿಸುವುದೇ ವರ್ತಿನಿ ಎಂಬ ಮದವು. ಇತ್ತ ಗುರು ಕಾರುಣ್ಯವಂ ಪಡೆದ ಸದ್‌ಭಕ್ತಂಗೆ ಪ್ರಕೃತಿಯ ದುರ್ನಡತೆಯನ್ನು ಬಿಟ್ಟು ಗುರುಭಕ್ತಿ, ಲಿಂಗಪೂಜಾ, ಜಂಗಮ ದಾಸೋಹಾದಿ ಕಾರ್ಯಗಳಿಗೆ, ಸತ್ಕಾರ್ಯಗಳಿಗೆ ವ್ಯಯಿಸುವನಾಗಿ ವರ್ತಿನಿಮದವಳಿಯಿತ್ತು.

ಕ್ರೋಧಿನಿ ಮದ : ಯಾರಾದರೂ ಸತ್ಪುರುಷರು ಕೆಟ್ಟವರ್ತನೆಯನ್ನು ಕಂಡು ನೀತಿಯನ್ನು ಹೇಳಿದರೆ ಅವರ ಮೇಲೆ ಕಟ್ಟುಗ್ರ ಕೋಪವನ್ನು ತಾಳುವಂತಹುದೇ ಕ್ರೋಧಿನಿಯೆಂಬ ಮದವು. ಇತ್ತ ಗುರುಕಾರುಣ್ಯವ ಪಡೆದ ಸದ್‌ಭಕ್ತನು ಜಂಗಮಭಕ್ತಿ ಸಂಪನ್ನನಾಗಿ, ಕಿಂಕುರ್ವಾಣತೆಯಿಂದ ಜಂಗಮ ಪಾದೋದಕವನ್ನು ಸೇವಿಸುತ್ತಾ, ಗುರುಪಾದೋದಕದಿಂದ ಕರುಣೆಯುಳ್ಳವನಾಗಿ, ಲಿಂಗಪಾದೋದಕದಿಂದ ವಿನಯ ಸಂಪನ್ನನಾಗಿ, ಜಂಗಮ ಪಾದೋದಕದಿಂದ ಸಮತಾಭಾವಿಯಾಗಿ ಆಚರಿಸುವನಾಗಿ, ಕ್ರೋಧಿನಿ ಮದವಳಿಯಿತ್ತು.

ಮೋಹಿನಿ ಮದ : ಸದಾ ತನ್ನ ದೇಹ, ಸತಿಸುತಾದಿಗಳ ಮೇಲಣ ಮಮಕಾರ ಮುಂದುಗೊಂಡು ಆಚರಿಸುವುದೇ ಮೋಹಿನಿಯೆಂಬ ಮದವು. ಇತ್ತ ಗುರುಕಾರುಣ್ಯವಂ ಪಡೆದ ಸದ್‌ಭಕ್ತಂಗೆ ಪಾದೋದಕ ಪ್ರಸಾದದಲ್ಲಿ ಮೋಹವುಳ್ಳವನಾಗಿ, ಲಿಂಗಾರ್ಪಣದಿಂದ ಪ್ರಸಾದ ಕಾಯನಾಗಿ ಆಚರಿಸಿದವನಾಗಿ, ಮೋಹಿನಿಮದವಳಿಯಿತ್ತು.

ಅತಿಚಾರಿಣಿ ಮದ : ವಿಷಯೋದ್ರೇಕವೆಗ್ಗಳಿಸಿ ಸರ್ವದರಲ್ಲಿ ಮುಖದಪ್ಪಿ ವರ್ತಿಸುವಂತಹ ವರ್ತನೆಯೆ ಅತಿಚಾರಿಣಿಯೆಂಬ ಮದವು. ಇತ್ತ ಗುರುಕಾರುಣ್ಯ ಪಡೆದ ಸದ್‌ಭಕ್ತಂಗೆ ಅಂತರಂಗದ ಚಿತ್‌ಪ್ರಕಾಶವನ್ನೇ ಭಸಿತವನ್ನಾಗಿ ಧರಿಸುವ ಆಚರಣೆಯುಳ್ಳವನಾಗಿ ಚಿದ್‌ಭಸ್ಮದ ಪ್ರಭಾವದಿಂದ ಶರೀರದ ದುಷ್ಟಗುಣಗಳಾದ ವಿಷಯಗುಣಗಳಳಿದು ಸದ್ಗುಣಗಳು ಪ್ರಭಾವಿಸಿ ನಡೆವನಾಗಿ ಅತಿಚಾರಿಣಿಯೆಂಬ ಮದವಳಿಯಿತ್ತು.

ಗಂಧಚಾರಿಣಿ ಮದ : ಆಣವಾದಿ ಮಲತ್ರಯಂಗಳ ದುರ್ವಾಸನೆಯು ಸ್ವೀಕಾರದೊಡಗೂಡಿ ಆಚರಿಸುವುದೇ ಗಂಧಚಾರಿಣಿಯೆಂಬ ಮದವು. ತಂದೆ, ತಾಯಿಯಿಂದ ಹುಟ್ಟಿದವನು ಎಂದು ತಿಳಿಯುವುದೇ. ತ್ರೈಮಲಗಳ ನಿವಾರಣೆ ಹೇಗೆಂದು ತಿಳಿಸುವದು.

ಆಣವ ಮಲ : ಶ್ರೀಗುರುವು ನೀನು ಪರಮಾತ್ಮನೆಂದು ತಿಳಿಸಿ, ಇಂದಿನಿಂದ ನಿನಗೆ ಪರಮಾತ್ಮನೇ ತಾಯಿ, ಪರಮಾತ್ಮನೇ ತಂದೆಯೆಂದು ತಿಳಿಸಿ ಆ ಪರವಸ್ತು ಸ್ವರೂಪವೇ ಶ್ರೀಗುರುವೆಂದು ಅಂದಿನಿಂದ ಶ್ರೀ ಗುರುವೇ ತಂದೆ, ಶ್ರೀಗುರುವೇ ತಾಯಿಯೆಂದು ನಂಬಿ ಆಚರಿಸಲು ಆಣವ ಮಲ ನಾಶವಾಯಿತ್ತು.

ಮಾಯಾಮಲ : ನನ್ನ ಹೆಂಡಿರು ಮಕ್ಕಳು ನನ್ನವರು ಬಂಧುಗಳು ಎಂದು ನಂಬಿರುವುದನ್ನು ಬಿಡಿಸಿ, ಇಂದಿನಿಂದ ಶಿವಶರಣರೇ ನನ್ನ ಬಂಧುಗಳು ಸರ್ವಸ್ವ ಎಂದು ಅರುಹಿ ಆಚರಿಸಲಿಕ್ಕೆ ತಿಳುಹಿ ಅದರಂತೆ ಆಚರಿಸಲು ಮಾಯಾಮಲವಳಿಯಿತ್ತು.

ಕಾರ್ಮಿಕಮಲ : ಮನೆ, ಹೊಲ, ಹಣ, ಬಂಗಾರವೇ ನನ್ನವು ಎನ್ನುವ ಭಾವವನ್ನು ಕಳೆದು, ಪರಮಾತ್ಮನೇ ನನ್ನವನು ಪರಮಾತ್ಮನೆ ಆಧಾರವೆಂದು ಶ್ರೀಗುರು ತಿಳಿಸಿದಂತೆ ಪರಮಾತ್ಮನ ಕೃಪೆಯೆಂದು ನಡೆಯಲು ಕಾರ್ಮಿಕಮಲವಳಿಯಿತ್ತು.

ಗಂಧಚಾರಿಣಿ ಮದ : ವಿಷಯ ವಾಸನೆಯನ್ನು ಬಿಡಿಸಿ ಅಂತರಂಗದ ಚಿತ್ಕಾಂತಿಯನ್ನೇ ಬಹಿಷ್ಕರಿಸಿ ರುದ್ರಾಕ್ಷಿಯನ್ನು ಕೊಟ್ಟು. ಆ ರುದ್ರಾಕ್ಷಿಯಲ್ಲಿ ಭಕ್ತಿಯುಳ್ಳವನಾಗಿ ಆಚರಿಸಲು ನೇತ್ರದಲ್ಲಿ ಲಿಂಗದೃಷ್ಟಿಯುಳವಡಲು ಗಂಧಚಾರಿಣಿಯೆಂಬ ಮದವಳಿಯಿತ್ತು.

ವಾಸಿನಿ ಮದ : ಸತ್ಪುರುಷರ ಸಂಗದಿಂದಲಾದರೂ ಶಿವಾನುಭವದ ಕೇಳಿಕೆಯಿಂದಲಾದರೂ ಮಲತ್ರಯಂಗಳ ವಿಷಯವಾಸನೆ ಹಿಂಗದಿರುವುದೇ ವಾಸಿನಿಯೆಂಬ ಮದವು ಇತ್ತ ಗುರುಕಾರುಣ್ಯವ ಪಡೆದ ಸದ್‌ಭಕ್ತನು ಲಿಂಗಾಂಗ ಸಂಬಂಧಿಯಾಗಿ ಗುರೂಪದಿಷ್ಟಿತ ಮಂತ್ರದಲ್ಲಿ ಮನಮುಳುಗಿ ಮಂತ್ರ ನೆನಹು ಲಿಂಗನೆನಹು ಮನದಲ್ಲಿ ನೆಟ್ಟು, ಸರ್ವ‌ಇಂದ್ರಿಯಗಳೆಲ್ಲವು ಲಿಂಗದಲ್ಲಿ ಎರಕವಾಗಲು ಮಂತ್ರ, ಲಿಂಗ ಪ್ರಕಾಶದಲ್ಲಿ ವ್ಯವಹರಿಸಲು ವಾಸಿನಿಯೆಂಬ ಮದವಳಿಯಿತ್ತು. ಇಂತೀ ಬಹಿರಂಗದಷ್ಟಾವರಣಂಗಳ ಆಚರಣೆಯಿಂದ ಅಂತರಂಗದಷ್ಟಾವರಣಂಗಳ ಅರಿವು ಧೃಡವಾಗಿ ಅಳವಟ್ಟು ಅಂತರಂಗದಷ್ಟಮದಂಗಳಳಿದು ನಿಂದ ಸದ್‌ಭಕ್ತರ ಸಂಗದಲ್ಲಿರಿಸಯ್ಯಾ ಶ್ರೀಮತ್ಶೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ಬಹಿರಂಗದಷ್ಟಮದಂಗಳು, ಅವುಗಳ ನಿವಾರಣೆ

ಬಹಿರಂಗದಷ್ಟಮದಂಗಳು : ಕುಲಮದ, ಛಲಮದ, ಧನಮದ, ರೂಪುಮದ, ಯೌವ್ವನಮದ, ವಿದ್ಯಾಮದ, ರಾಜ್ಯಮದ, ತಪೋಮದ.

ಕುಲಮದ : ಉತ್ತಮ ಕುಲದಲ್ಲಿ (ಜಾತಿಯಲ್ಲಿ) ಹುಟ್ಟಿದ ಸತ್ಪುರುಷರಾದೊಡೆ ನಾವು ಮಹಾಕುಲೋತ್ತಮರು, ನಮ್ಮ ಶ್ರೇಷ್ಠ ಕುಲಕ್ಕೆ ಆರೂ ಸಮಾನ ಬರಲರಿಯರು ಎಂದು ಹೇಳುವುದೇ ಕುಲಮದವು. ಮಾನವನಿಗೆ ಅನೇಕ ಜನ್ಮದ ಪುಣ್ಯದಿಂದ ಗುರುಕಾರುಣ್ಯವ ಪಡೆದು ಶ್ರೀಗುರು ಕರಜಾತನಾಗಿ, ಶ್ರೀ ಗುರುವಿನಿಂದ ಲಿಂಗವ ಪಡೆದು, ಲಿಂಗದವನಾಗಿ ಲಿಂಗಯ್ಯ ನಮ್ಮವನು ಎಂದು ಹೇಳುವನಾಗಿ ಕುಲಮದ ಹೋಯಿತ್ತು.

ಛಲಮದ : ಯಾರಾದರೂ ಸತ್ಪುರುಷರು ನಿನ್ನ ಕುಲವನ್ನು ಎಷ್ಟು ಹೊಗಳುವಿಯೋ ಎಂದು ಮೂದಲಿಸಿದಲ್ಲಿ ತನ್ನ ಕುಲದ ಪೆರ್ಮೆಗೆ ಅವರ ಮೇಲೆ ಛಲವ ಮಾಡಿ ತೊಂದರೆ ಪಡಿಸುವುದೇ ಛಲಮದವು. ಇತ್ತ ಗುರು ಕಾರುಣ್ಯವನ್ನು ಪಡೆದು ಗುರೂಪದಿಷ್ಟವಾದ ಲಿಂಗದಲ್ಲಿ ನಿಷ್ಠೆಯುಳ್ಳವನಾಗಿ ಲಿಂಗದ ವ್ರತವನ್ನು ಛಲಿಯಾಗಿ ಪಾಲಿಸುತ್ತಾ ಸರ್ವರೂ ಲಿಂಗ ಚೈತನ್ಯರೆಂದು, ಲಿಂಗಸ್ವರೂಪರೆಂದು ನಡೆದಲ್ಲಿ ಛಲಮದ ಹೋಯಿತ್ತು.

ಧನಮದ : ಆವನಾದರೂ ಸಂಪತ್ತುಳ್ಳ ಪುರುಷನಾದೊಡೆ ನಮ್ಮ ಸಂಪತ್ತಿಗೆ ನಮ್ಮ ಸಿರಿಗೆ, ಆರೂ ಸಮಾನರು ಇಲ್ಲ ಎಂದು ಅಹಂಕರಿಸುವುದೇ ಧನಮದವು. ಅನೇಕ ಜನ್ಮದ ಪುಣ್ಯದಿಂದ ಶ್ರೀಗುರು ಕಾರುಣ್ಯವನ್ನು ಪಡೆದು ಜಂಗಮಭಕ್ತಿ ನೆಲೆಗೊಂಡು ವಸ್ತುಗಳೆಲ್ಲವೂ ಪರಮಾತ್ಮನವೆಂದು ಭಾವಿಸಿ ಪರಮಾತ್ಮನ ಸೊತ್ತನ್ನು ಪರಮಾತ್ಮನಿಗೆ ಕೊಡುವೆನೆಂದು ಜಂಗಮದಾಸೋಹಕ್ಕೆ ಸಮಾಜಕಾರ್ಯಗಳಿಗೆ ಧನವ ಸವೆಸುತ್ತಾ, ಅಪಾತ್ರಕ್ಕೆ, ಧನವ ಸವೆಸದೆ (ವ್ಯಯಿಸದೆ) ಪರಮಾತ್ಮನ ಸೊತ್ತನ್ನು ಪರಮಾತ್ಮನಿಗೆ ಸವೆಸುವ ಭಾವಉಳ್ಳವನಾದಲ್ಲಿ ಧನಮದ ಹೋಯಿತ್ತು.

ರೂಪುಮದ : ಸರ್ವಲಕ್ಷಣ ಸಂಪನ್ನನಾಗಿ ಒಳ್ಳೆಯ ರೂಪು ಉಳ್ಳವನಾದೊಡೆ ನಮ್ಮ ರೂಪು ಲಾವಣ್ಯಕ್ಕೆ ಆರೂ ಸಮಾನಂಬರಲರಿಯರು ಎಂದು ಹೇಳಿಕೊಳ್ಳುವುದೇ ರೂಪುಮದವು. ಇತ್ತ ಗುರುಕಾರುಣ್ಯವಂ ಪಡೆದು ಶ್ರೀ ಗುರುವು ಇಷ್ಟಲಿಂಗವನ್ನು ಕೊಟ್ಟು ಲಿಂಗದ ರೂಪೇ ತನ್ನ ರೂಪೆಂದರುಹಿ, ಪಾದೋದಕವನ್ನು ಕೊಟ್ಟು, ಪಾದೋದಕದ ಆಚರಣೆಯನ್ನು ತಿಳುಹಿ, ಪಾದೋದಕದ ಆಚರಣೆಯಿಂದ, ಕರುಣೆ, ವಿನಯ, ಸಮತಾ ಗುಣಗಳಿಂದ ತನ್ನಲ್ಲಿ ಲಿಂಗದ ರೂಪೇ ತನ್ನ ರೂಪೆಂಬ ಭಾವವಳವಡಲು ರೂಪಮದ ಹೋಯಿತ್ತು.

ಯೌವ್ವನಮದ : ಪ್ರಾಪ್ತವಯಸ್ಸಿನವರು ಯೌವ್ವನದಿಂದ ಸಮರ್ಥರಾದರೆ ನಮ್ಮ ಯೌವ್ವನಕ್ಕೆ ಆರೂ ಸಮಾನಂ ಬರಲರಿಯರು ಎಂದು ಹೇಳಿಕೊಳ್ಳುವುದೇ ಯೌವ್ವನಮದವು. ಶ್ರೀ ಗುರು ಕಾರುಣ್ಯವಂ ಪಡೆದು ಲಿಂಗಸ್ವರೂಪವೇ ತಾನೆಂದರಿತು ಪ್ರಕೃತಿ ಸಂಬಂಧದಿಂದ ಶರೀರಕ್ಕೆ ಬಾಲ್ಯ, ಯೌವ್ವನ, ವಾರ್ಧಕ್ಯಗಳು ಶರೀರಕ್ಕೆ ಹೊರತು ತನಗಲ್ಲವೆಂದು ಅರಿತು, ಶ್ರೀಗುರು ಕರುಣೆಯಿಂದ ಪರಮಾತ್ಮನ ಪ್ರಸನ್ನತೆಯೇ ಪ್ರಸಾದವೆಂಬ ನಿಲವನ್ನು ತಳೆದು, ಪ್ರಸಾದದಾಚರಣೆಯನ್ನು ಆಚರಿಸಿ, ಪ್ರಸಾದ ಕಾಯನಾದಲ್ಲಿ ಯೌವ್ವನ ಮದ ಹೋಯಿತ್ತು.

ವಿದ್ಯಾಮದ : ಚೌಷಷ್ಠಿ ವಿದ್ಯಾಕಲಾ ಪಂಡಿತನಾದೊಡೆ ನಾವು ಮಹಾವಿದ್ಯಾವಂತರು ನಮ್ಮ ಪಾಂಡಿತ್ಯಕ್ಕೆ ಆರೂ ಸರಿಯಿಲ್ಲಯೆಂದು ಹೇಳಿಕೊಳ್ಳುವುದೇ ವಿದ್ಯಾಮದವು. ಇತ್ತ ಗುರುಕಾರುಣ್ಯವನ್ನು ಪಡೆದು ಶ್ರೀ ಗುರುವಿನಿಂದ ಲಿಂಗವನ್ನು ಪಡೆದು ತನ್ನ ಸ್ವಸ್ವರೂಪ ಜ್ಞಾನವನ್ನರಿತು ಆಚರಿಸುವ ಜ್ಞಾನವೇ ನಿಜವಾದ ವಿದ್ಯೆಯೆಂದು ತಿಳಿದು, ಮಿಕ್ಕಿನ ವಿದ್ಯೆಗಳೆಲ್ಲಾ ಜೀವನ ಪೋಷಣೆಯ (ಹೊಟ್ಟೆಹೊರೆಯುವ) ವಿದ್ಯೆಗಳೆಂದು ಅರಿತು, ಶ್ರೀ ಗುರುವಿನಿಂದ ಅಂತರಂಗದ ಚಿತ್ಪ್ರಕಾಶವೇ ಭಸಿತವೆಂದು ಬಹಿರಂಗದ ಭಸಿತದ ಪ್ರಕಾಶದಲ್ಲಿ ಭಕ್ತಿಯುಳ್ಳವನಾಗಿ ಆಚರಿಸಿದಲ್ಲಿ ವಿದ್ಯಾಮದ ಹೋಯಿತ್ತು.

ರಾಜ್ಯಮದ : ಈ ಪ್ರಪಂಚವನ್ನು ಒಂದೇ ಛತ್ರದಡಿಯಲ್ಲಿ ಆಳುವಂತಹ ಪುರುಷರಾಯಿತ್ತಾದೊಡೆ, ನಮ್ಮ ರಾಜ್ಯಕ್ಕೆ, ನಮ್ಮ ಭೂಮಿಗೆ, ನಮ್ಮ ಸೊತ್ತಿಗೆ ಆರೂ ಸಮಾನಂಬರಲರಿಯರು ಎಂದು ಹೇಳಿಕೊಳ್ಳುವುದೇ ರಾಜ್ಯಮದವು. ಇತ್ತ ಗುರುಕಾರುಣ್ಯವನ್ನು ಪಡೆದು ಶ್ರೀ ಗುರುವಿನಿಂದ ಲಿಂಗವನ್ನು ಪಡೆದು ಲಿಂಗವೇ ತಾನೆಂದು ಶರೀರವು ಲಿಂಗಯ್ಯನದು, ಇಂದ್ರಿಯಂಗಳು ಲಿಂಗಯ್ಯನವು, ಹೆಂಡಿರು ಮಕ್ಕಳು ಸರ್ವರೂ ಲಿಂಗಯ್ಯನವರ, ಸ್ವತ್ತು, ರಾಜ್ಯವಸ್ತುಗಳು ಲಿಂಗಯ್ಯನವೆಂದೇ ಅರಿಯಲು, ಶ್ರೀಗುರುವು ಅಂತರಂಗದ ಚಿತ್ಕಳೆಯನ್ನೇ ಬಹಿರಂಗದಲ್ಲಿ ಶ್ರೀ ರುದ್ರಾಕ್ಷಿಯನ್ನಾಗಿ ಕೊಡಲು ಚಿದ್ರುದ್ರಾಕ್ಷಿ ಕಳೆಗಳೇ ನೇತ್ರದಲ್ಲಿ ಸಂಬಂಧಿಸಿ, ಲಿಂಗದಕಳೆಯಾಗಿ ಲಿಂಗದೃಷ್ಟಿ ಅಳವಡಲು ರಾಜ್ಯಮದವಳಿಯಿತ್ತು.

ತಪೋಮದ : ಉಗ್ರತಪವಂ ಮಾಡುವರಾಗಿ ಒಳ್ಳೆಯ ಜಿತೇಂದ್ರಿಯರಾದಲ್ಲಿ ನಾವ ಮಹಾತಪಸ್ವಿಗಳು, ನಾವು ಮಹಾ ಜೀತೇಂದ್ರಿಯರು. ನಮ್ಮ ತಪಸ್ಸಿಗೆ ನಮ್ಮ ಜೀತೇಂದ್ರಿಯತ್ವಕ್ಕೆ ಆರೂ ಸಮಾನಂಬರಲರಿಯರು ಎಂದು ಹೇಳಿಕೊಳ್ಳುವುದೇ ತಪೋಮದವು. ಅನೇಕ ಜನ್ಮದ ಪುಣ್ಯದಿಂದಾ ಗುರುಕಾರುಣ್ಯವನ್ನು ಪಡೆದು ಲಿಂಗಸಂಬಂಧಿಯಾಗಿ ಲಿಂಗದ ನಾಮವಾದ ಮಹಾಮಂತ್ರವನ್ನು ಪಡೆದು ಮಂತ್ರವು, ಲಿಂಗವು ಭಕ್ತಿಯಿಂದ ಅಂತರಂಗದ ಪ್ರಾಣಲಿಂಗವಾಗಿ ಅಳವಡಲು, ಲಿಂಗವೇ ತಾನೆಂದು ಲಿಂಗಯ್ಯ ನಡೆಸಿದಂತೆ ನಾವೆಲ್ಲಾ ನಡೆಯುವವರು,

ಲಿಂಗಯ್ಯನಿರಿಸಿದಂತೆ ನಾವಿರುವವರು ಎಂದು ಅರಿತು ಆಚರಿಸಿದಲ್ಲಿ ತಪೋಮದವಳಿಯಿತ್ತು. ಲಿಂಗವ್ರತವನ್ನು ಪಾಲಿಸುತ್ತಾ, ಅಷ್ಟಾವರಣವೇ ಅಂಗವಾಗಿ, ಪಂಚಾಚಾರವೇ ಪ್ರಾಣವಾಗಿ, ಷಟ್‌ಸ್ಥಲವೇ ಆತ್ಮವಾಗಿ, ಗುರು ಲಿಂಗ, ಜಂಗಮ, ಭಕ್ತಿಯಿಂದಾ ದಾಸೋಹಂಭಾವದಿಂದ ನಡೆಯುವವರಿಗೆ ಅಷ್ಟಮದಂಗಳು ನಾಶವಾಗಿರ್ಪವೆಂದು ತಿಳಿದುಕೊಂಬುದು ತತ್ವಜ್ಞಾನಿಗಳು. ಇಂತೀ ಅಷ್ಟಮದಂಗಳಾವುವು ಇಲ್ಲದಿರ್ಪ ಸದ್‌ಭಕ್ತರ ತೋರಿ ಬದುಕಿಸಯ್ಯಾ ಎನ್ನನು ಶ್ರೀಮತ್ಶೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ದಶನಾಡಿಗಳು ಅವುಗಳ ಕ್ರಿಯೆಗಳು

ಶ್ಲೋಕ : ಈಡಾ, ಪಿಂಗಳಾಶ್ಚೈವ, ಸುಷುಮ್ನಾಚ ತೃತೀಯಕಂ ಗಾಂಧಾರಿಹಸ್ತಿ, ಜಿಹ್ವಾಚ, ಪೂಷ, ಪಯಶ್ವಿನೀ ಅಲಂಬು ಲಕುಹಶ್ಚೈವ ಶಂಕಿನಿದಶನಾಡಿಕಾ ।

ಈಡನಾಡಿ-ಚಂದ್ರನಾಳ, ಪಿಂಗಳನಾಡಿ-ಸೂರ್ಯನಾಳ, ಸುಷುಮ್ನನಾಡಿ-ಮಧ್ಯನಾಳ, ಗಾಂಧಾರಿನಾಡಿ-ಬಲದನೇತ್ರ, ಹಸ್ತಿ ಜಿಹ್ವಾನಾಡಿ-ಎಡದ ನೇತ್ರ, ಪೂಷಾನಾಡಿ-ಬಲದಕರ್ಣ, ಪಯಶ್ವಿನಿ ನಾಡಿ-ಎಡದ ಕರ್ಣ, ಅಲಂಬುನಾಡಿ-ಮೇಢ್ರನಾಳ, ಲಕುಹನಾಡಿ-ಗುದನಾಳ, ಶಂಕಿನೀನಾಡಿ-ನಾಭಿನಾಳ ಇಂತಿವು ದಶ ನಾಡಿಸ್ಥಾನಗಳು.

1. **ನಾಡಿಸ್ಥಾನಗಳು :** ಇವಕ್ಕೆ ಅಧಿದೇವತೆಗಳಾವುವುವೆಂದೊಡೆ ಈಡೆಗೆ ಹರಿ ಅಧಿದೇವತೆ, ಪಿಂಗಳೆಗೆ ಬ್ರಹ್ಮನಧಿದೇವತೆ, ಸುಷುಮ್ನೆಗೆ ರುದ್ರನಧಿದೇವತೆ. ಗಾಂಧಾರಿಗೆ ಇಂದ್ರನಧಿದೇವತೆ, ಹಸ್ತಿಜಿಹ್ವೆಗೆ ವರುಣನಧಿದೇವತೆ, ಪೂಷೆಗೆ ದಿಗ್ದೇವತೆ ಅಧಿದೇವತೆ, ಪಯಶ್ವಿನಿಗೆ ಪದ್ಮೋದ್ಭವನಧಿದೇವತೆ, ಲಕುಹಕ್ಕೆ ಭೂಮಿ ಅಧಿದೇವತೆ, ಅಲಂಬುವಿಗೆ ಸೂರ್ಯನಧಿದೇವತೆ. ಶಂಕಿನಿಗೆ ಚಂದ್ರನಧಿದೇವತೆ. ಇಂತಿವು ದಶನಾಡಿಗಳ ಅಧಿದೇವತೆಗಳು.

2. ಪಂಚವಿಂಶತಿ ತತ್ವಾತ್ಮಕವಾದ ದೇಹದಲ್ಲಿ ಜೀರ್ಣವಾದ ಅರಳಿ ಪರ್ಣದೋಪಾದಿಯಲ್ಲಿ ನಾಡಿಗಳು ಪರಿಪೂರ್ಣವಾಗಿರುತ್ತಿಹವು. ಅದರೊಳಗೆ 72 ಸಾವಿರ ನಾಡಿಗಳೇ ಪ್ರಧಾನ ನಾಡಿಗಳಾಗಿರವವು. ಅದರೊಳಗೆ ಹದಿನೈದು ನೂರುನಾಡಿಗಳೇ ಕಾರಣ ನಾಡಿಗಳಾಗಿರುವವು. ಅದರೊಳಗೆ ಏಳುನೂರು ನಾಡಿಗಳೇ ಮುಖ್ಯನಾಡಿಗಳಾಗಿರುತ್ತಿಹವು. ಅದರೊಳಗೆ ನೂರುನಾಡಿಗಳೇ ಮುಖ್ಯನಾಡಿಗಳಾಗಿರುತ್ತಿಹವು. ಅದರೊಳಗೆ ಐವತ್ತು ನಾಡಿಗಳೇ, ಪ್ರಧಾನನಾಡಿಗಳಾಗಿರುತ್ತಿಹವು. ಅದರೊಳಗೆ ಇಪ್ಪತ್ತೆಂಟು ನಾಡಿಗಳೆ ಪ್ರಯೋಜನ ನಾಡಿಗಳಾಗಿರುತ್ತಿಹವು. ಅದರೊಳಗೆ ದಶವಿಧ ಭೇದನಾಡಿಗಳೇ ಅತ್ಯಧಿಕ ಮುಖ್ಯನಾಡಿಗಳಾಗಿರುತ್ತಿಹವು. ಈ ದಶವಿಧ ಭೇದನಾಡಿಗಳೊಳಗೆ ಈಡಾ, ಪಿಂಗಳ, ಸುಷುಮ್ನವೆಂಬ ಈ ತ್ರಿವಿಧ ನಾಡಿಗಳು ಅತ್ಯಂತ ಬೀಜನಾಡಿಗಳಾಗಿರುತ್ತಿಹವು.

ನಾಡಿಗಳ ಸ್ಥಾನಗಳು

ಈಡಾನಾಡಿ ಆವುದಯ್ಯ ಎಂದರೆ, ಶಶಿಸಂಬಂಧವಾದ ವಾಮಭಾಗದ ನಾಸಾಪುಟವು. **ಪಿಂಗಳನಾಡಿ** ಆವುದಯ್ಯಾ ಎಂದಡೆ ಆದಿತ್ಯ ಸಂಬಂಧವಾದ ದಕ್ಷಿಣ ನಾಸಾಪುಟವು. **ಸುಷುಮ್ನ** ನಾಡಿ ಆವುದಯ್ಯ ಎಂದೊಡೆ ಈಡೆಪಿಂಗಳೆಗೆ ಮಧ್ಯಸ್ಥವಾಗಿ ಊರ್ಧ್ವಗಾಮಿಯಾದ ಪಶ್ಚಿಮಭಾಗದ ನಾಸಾಪುಟವು, **ಗಾಂಧಾರಿ** ನಾಡಿಯೆಂದರೆ ಬಲದ ನೇತ್ರ, **ಹಸ್ತಿ ಜಿಹ್ವೆ**ಯೆಂದೊಡೆ ಎಡದ

ನೇತ್ರ, **ಪೂಷಾ**ಯೆಂದೊಡೆ ಬಲದ ಕರ್ಣ, **ಪಯಶ್ವಿನಿ**ಯೆಂದೊಡೆ ಎಡದ ಕರ್ಣ, **ಲಕುಹ**ಯೆಂದೊಡೆ, ಗುದನಾಳವು, **ಅಲಂಬು**ಯೆಂದೊಡೆ ಮೇಢ್ರನಾಳವು, **ಶಂಕಿನಿ**ಯೆಂದೊಡೆ ನಾಭಿನಾಳವು ಇವು ನಾಳಂಗಳ ಸ್ಥಾನಂಗಳು.

ನಾಡಿಸಂಬಂಧ ಅಧಿದೇವತೆಗಳು : ಈಡೆಗೆ ಹರಿಯು ಅಧಿದೇವತೆ. ಇಲ್ಲಿ ಆತ್ಮನು ತಾನೇ ನಾರಾಯಣನೆಂಬ ಅಧಿದೇವತಾ ಅಭಿದಾನದಿಂದ ಹದಿನಾರಂಗುಲ ಪ್ರಮಾಣದಿಂದ ವಾಯುವನ್ನು ಹೊರಗೆ ರೇಚಿಸುತ್ತಿಹನು. ಪಿಂಗಳೆಗೆ ಬ್ರಹ್ಮನಧಿದೇವತೆ, ಇಲ್ಲಿ ಆತ್ಮನು ಅಜನೆಂಬ ಅಧಿದೇವತಾನಾಮದಿಂದ ಹನ್ನೆರಡಂಗುಲ ಪ್ರಮಾಣ ವಾಯುವಿನೊಳಗೆ ನಾಲ್ಕು ಅಂಗುಲ ಪ್ರಮಾಣ ವಾಯುವ ಕತ್ತರಿಸಿ, ಹನ್ನೆರಡಂಗುಲ ಪ್ರಮಾಣ ವಾಯುವ ಪೂರೈಸುವಂತಹ ಕರ್ತವ್ಯವನ್ನುಂಟು ಮಾಡುತ್ತಿಹನು. ಸುಷುಮ್ನೆಗೆ ರುದ್ರನಧಿದೇವತೆ. ಅಲ್ಲಿ ಆತ್ಮನು ಹನ್ನೆರಡಂಗುಲ ಪ್ರಮಾಣ ವಾಯುವಿನೊಳಗೆ ದ್ವಯಂಗುಲವನುಳಿದು, ದಶಾಂಗುಲ ಪ್ರಮಾಣವಾಯುವನ್ನು ಒಂದನೊಂದು ಪೂರ್ಣಕುಂಭದಂತೆ ತಡೆದು ನಿಲ್ಲಿಸುವ ಕರ್ತವ್ಯವನ್ನು ನಡೆಸುತ್ತಿಹನು. ಗಾಂಧಾರಿಗೆ ಇಂದ್ರನಧಿದೇವತೆ. ಅಲ್ಲಿ ಆವುದಾನೊಂದು ಚಿತ್ರ ವಿಚಿತ್ರ ರೂಪುಗಳ ನೋಡಬೇಕೆಂಬ ನಿರೀಕ್ಷಣ ಕೃತ್ಯವನ್ನು ನಡೆಸುತ್ತಿಹನು. ಹಸ್ತಿ ಜಿಹ್ವೆಗೆ ವರುಣನಧಿದೇವತೆ, ಇಲ್ಲಿ ಆತ್ಮನು ಮಲಗುವಂತಹ ನಿದ್ರಾವ್ಯಸನ ಕೃತ್ಯವನ್ನುಂಟುಮಾಡಿ ನಡೆಸುತ್ತಿಹನು.

ಪೂಷಂಗೆ ದಿಗ್ದೇವತೆ ಅಧಿದೇವತೆ. ಇಲ್ಲಿ ಆತ್ಮನು ಆವುದಾನೊಂದು ನಾದಾದಿ ಶಬ್ದಂಗಳ ಲಾಲಿಸುವ ಕೃತ್ಯವನ್ನುಂಟು ಮಾಡಿ ನಡೆಸುತ್ತಿಹನು. ಪಯಶ್ವಿನಿಗೆ ಪದ್ಮೋದ್ಭವನಧಿದೇವತೆ, ಅಲ್ಲಿ ಆತ್ಮನು ಆವುದಾನೊಂದು ಪಂಚಮಹಾವಾದ್ಯಂಗಳ ಲಾಲಿಸಬೇಕೆಂಬ ಇಚ್ಛಾಕೃತ್ಯವನ್ನುಂಟು ಮಾಡಿ ನಡೆಸುತ್ತಿಹನು. ಲಕುಹಂಗೆ ಭೂಮಿಯಧಿದೇವತೆ. ಅಲ್ಲಿ ಆತ್ಮನು ದೇಹದ ಭಾರವನ್ನೆಲ್ಲಾ ವಹಿಸಿಕೊಂಡಿರುವಂತಹ ಕೃತ್ಯವನ್ನುಂಟು ಮಾಡಿ ನಡೆಸುತ್ತಿಹನು. ಅಲಂಬುವಿಗೆ ಸೂರ್ಯನಧಿದೇವತೆ. ಅಲ್ಲಿ ಆತ್ಮನು ಕ್ಷುಧಾದಿ ಧರ್ಮಂಗಳನ್ನೆಗಳಿಸುವಂತಹ ಕೃತ್ಯವನ್ನುಂಟು ಮಾಡಿ ನಡೆಸುತ್ತಿಹನು. ಶಂಕಿನಿಗೆ ಚಂದ್ರನಧಿದೇವತೆ ಅಲ್ಲಿ ಆತ್ಮನು ತಾನೇ ನಾಡಿಗಳಿಗೆ ಮೂಲವಾಗಿಯೂ ಗುಡ್ಡೆಯಾಗಿಯೂ ಕ್ಷುಧಾದಿ ಧರ್ಮಂಗಳಿಗೆ ಶಾಂತಿಯನ್ನೈದಿಸುವಂತಹ ಕೃತ್ಯವನ್ನುಂಟು ಮಾಡಿ ನಡೆಸುತ್ತಿಹನು. ಈ ಹತ್ತು ಪ್ರಕಾರವಾದ ನಾಡಿಗಳ ನಾಳಂಗಳ, ಅಧಿದೇವತೆಗಳ ಭೇದದ ಹಾಸಿಗೆಯ ವಿಚಾರವನ್ನು ತಿಳಿದುಕೊಂಬುವುದು ತತ್ವಜ್ಞಾನಿಗಳು.

ನಾಡಿಗಳು, ಚಕ್ರಗಳು ಅವುಗಳಲ್ಲಿ ಲಿಂಗಸಂಬಂಧ

ನಾಡಿಗಳು ದೇಹದಲ್ಲೆಲ್ಲಾ ಪಸರಿಸುತ್ತವೆ. ಅವು ಜೀರ್ಣವಾದ ಅರಳಿಪರ್ಣದಂತೆ ಇರುತ್ತವೆಂದು ವಚನಕಾರರು ವರ್ಣಿಸುವುದುಂಟು. ಅವು ಅಸಂಖ್ಯಾತವಾಗಿವೆ. ಆದರೂ ಅವುಗಳಲ್ಲಿ ಮುಖ್ಯವಾದುವು ಎಪ್ಪತೆರಡು ಸಾವಿರನಾಡಿಗಳು. ಅವುಗಳಲ್ಲಿ ಹದಿನೈದು ನೂರು ಕಾರಣನಾಡಿಗಳು. ಅವುಗಳಲ್ಲಿ ನೂರು ನಾಡಿಗಳು ಮುಖ್ಯನಾಡಿಗಳು ಅವುಗಳಲ್ಲಿ ಐವತ್ತು ನಾಡಿಗಳು ಪ್ರಧಾನನಾಡಿಗಳು. ಅವುಗಳಲ್ಲಿ ಇಪ್ಪತ್ತೆಂಟು ನಾಡಿಗಳು, ಪ್ರಯೋಜನ ನಾಡಿಗಳೆಂದು ಹೇಳುವರು. ಅವುಗಳಲ್ಲಿ ಹತ್ತುನಾಡಿಗಳು ಅತ್ಯಧಿಕ ನಾಡಿಗಳು. ಅವು ಈಡಾ, ಪಿಂಗಳ, ಸುಷುಮ್ನ, ಗಾಂಧಾರಿ, ಹಸ್ತಿಜಿಹ್ವೆ, ಪೂಷಾ, ಪಯಶ್ವಿನಿ, ಅಲಂಬು, ಲಕುಹ, ಶಂಕಿನಿ ಹೀಗೆ ಇವೆ. ಇವುಗಳಲ್ಲಿ ಈಡಾ, ಪಿಂಗಳ ಸುಷುಮ್ನ ಇವು ಅತ್ಯಂತ ಬೀಜನಾಡಿಗಳೆಂದು ಭಾವಿಸಲ್ಪಟ್ಟಿವೆ. ಈ ನಾಡಿಗಳ ಕ್ರಿಯೆಗಳು

ಶರೀರದಲ್ಲಿರುವ ನರಗಳೊಳಗಿಂದ ನಡೆಯುತ್ತವೆ. ಶರೀರವು ಉಸಿರಾಡುವುದು, ನಿರೀಕ್ಷಿಸುವುದು, ಕೇಳುವುದು, ಹಸಿವೆಯಾಗುವುದು. ಆಹಾರದಿಂದ ಅದಕ್ಕೆ ಶಾಂತಿಯಾಗುವುದು ಇವು ಅತ್ಯಂತ ಅವಶ್ಯವಾದವುಗಳಷ್ಟೇ. ಇವು ನಾಡಿಗಳ ಮೂಲಕವೇ ಚಲನಹೊಂದುತ್ತವೆ. ಈಡಾನಾಡಿ ನಾಸಾ ಪುಟದ ಎಡಭಾಗ. ಇದು ವಾಯುವನ್ನು ಹೊರಕ್ಕೆ ಹಾಕುತ್ತದೆ. ಪಿಂಗಳನಾಡಿ ಇದು ನಾಸಾಪುಟದ ಬಲಭಾಗ ಇದು ವಾಯುವನ್ನು ಒಳಕ್ಕೆ ಎಳೆದುಕೊಳ್ಳುತ್ತದೆ. ಸುಷುಮ್ನ ಇವುಗಳಿಗೆ ಮಧ್ಯವಾಗಿದ್ದ ತಲೆ ಮಿದುಳಿನಲ್ಲಿ ಪ್ರವೇಶಿಸಿ ಅದು ವಾಯುವನ್ನು ಕುಂಭಕದಂತೆ ತಡೆಯುತ್ತದೆ. ಗಾಂಧಾರಿನಾಡಿ ಇದು ಬಲದ ನೇತ್ರ ನಿರೀಕ್ಷಣ ಕೃತ್ಯವನ್ನು ಮಾಡುತ್ತದೆ. ಹಸ್ತಿ ಜಿಹ್ವೆ ಇದು ಎಡದ ನೇತ್ರ ನಿದ್ರಾವ್ಯಸನಕ್ಕೆ ಕಾರಣವಾಗಿದೆ. ಪೂಷಾ ಇದು ಬಲದಕರ್ಣ ಇದು ನಾದಾದಿ ಶಬ್ದಗಳನ್ನು ಕೇಳಿಸುತ್ತದೆ. ಪಯಶ್ವಿನಿ ಇದು ಎಡದ ಕರ್ಣ ವಾದ್ಯಾದಿಗಳನ್ನು ಕೇಳಿಸುತ್ತದೆ.

ಲಕುಹ ಇದು ಗುದದಲ್ಲಿದ್ದು ದೇಹದ ಧಾರಿಣೆಯನ್ನು ಹೊರುತ್ತದೆ. ಅಲಂಬು ಇದು ಮೇಢ್ರಾದಲ್ಲಿದ್ದು ಕ್ಷುಧಾದಿಗಳನ್ನುಂಟು ಮಾಡುತ್ತದೆ. ಶಂಕಿನಿ ನಾಡಿ ಇದು ನಾಭಿಯಲ್ಲಿದ್ದು ಕ್ಷುಧಾದಿಗಳನ್ನು ಉಪಶಮನ ಮಾಡುತ್ತದೆ. ಇವುಗಳಿಗೆ ಆತ್ಮನ ಚೈತನ್ಯದಿಂದ ವ್ಯವಹರಿಸುವುದಕ್ಕೆ ಬೇರೆ ಬೇರೆ ಅಧಿದೇವತೆಗಳಿಂದ ತಿಳಿಸುತ್ತಾರೆ. ಇವುಗಳಿಗೆ ಸುಷುಮ್ನನಾಡಿಯ ಮಹತ್ವವು ವಿಶೇಷವಿದೆ. ಅದು ಗುದಸ್ಥಾನದಿಂದ ಬೆನ್ನೆಲುಬಿನ ನಡುವೆ ತಂತಿಯಂತೆ ತಲೆಯ ಹಿಂದಿನವರೆಗೂ ಉದ್ದವಾಗಿರುತ್ತದೆ. ಇದಕ್ಕೆ ಬಲಗಡೆಗೆ ಇರುವುದು ಪಿಂಗಳನಾಡಿ ಅದು ಸಹ ಕಪಾಲ ಪರಿಯಂತರ ಇದ್ದು, ಸೂರ್ಯಮಂಡಲವನ್ನು ವ್ಯಾಪಿಸಿಕೊಂಡು ಬಲಮೂಗಿನಿಂದಾ ಹೊರಟು ಹೋಗುತ್ತದೆ. ಈಡೆಯು ಸುಷುಮ್ನ ನಾಡಿಯ ಎಡಗಡೆಯಿಂದ ಮೂಲಾಧಾರದಿಂದ ಕಪಾಲ ಪರಿಯಂತರ ಹೋಗಿ ಮಿದುಳಿನ ಚಂದ್ರ ಮಂಡಲವನ್ನು ವ್ಯಾಪಿಸಿರುತ್ತದೆ. ಅದರ ಮೂಲಕ ಎಡಮೂಗಿನಿಂದ ಉಸಿರು ಹೊರಟುಹೋಗುತ್ತದೆ. ಸುಷುಮ್ನ ನಾಡಿಯ ಆಗ್ನೇಯದಲ್ಲಿ ಸೂಕ್ಷ್ಮರಂಧ್ರವಿರುತ್ತದೆ. ಅದೇ ಬ್ರಹ್ಮರಂಧ್ರವು. ಈ ಸುಷುಮ್ನ ನಾಡಿಯನ್ನು ಚೈತನ್ಯಗೊಳಿಸುವುದರಿಂದ ಮನುಷ್ಯನ ಯೋಗ ಸಾಮರ್ಥ್ಯವೂ ಹೆಚ್ಚುವುದು. ಆಸನ ಮತ್ತು ಪ್ರಾಣಯಾಮ ಇವುಗಳೊಡನೆ ಕೂಡಿದ ಯೋಗ ಸಾಧನೆಯಿಂದಾ ನಾಡಿಯೂ ಉತ್ತೇಜಿತವಾಗುವುದು. ಒಂಭತ್ತು ಚಕ್ರಗಳು ಅವುಗಳಿಗೆ ಆಧಾರ ಚಕ್ರವಾಗಿರುವ ಹತ್ತನೇ ಅಣುಚಕ್ರಗಳಿಗೂ ಈ ನಾಡಿಗಳಿಗೂ ನಿಕಟ ಸಂಬಂಧ ಇರುತ್ತದೆ. ಈ ಚಕ್ರಗಳೊಳಗಿಂದ ಹೊರಡುವ ಶಕ್ತಿಗಳು ಅತ್ಯಂತ ಸೂಕ್ಷ್ಮ ಸ್ಥಿತಿಯಲ್ಲಿದ್ದು ಅವು ನಾಡಿಗಳ ಮೂಲಕವೇ ಶರೀರದಲ್ಲಿದ್ದು ಪ್ರಕಟವಾಗುತ್ತವೆ. ಆದ್ದರಿಂದಾ ನಾಡಿಗಳನ್ನು ಬಲಪಡಿಸಿ ಅವುಗಳನ್ನು ಅಂಕಿತದಲ್ಲಿಟ್ಟುಕೊಳ್ಳತಕ್ಕದ್ದು. ಇದರಿಂದ ಶರೀರದ ಬಾಹ್ಯಕ್ರಿಯೆಗಳಿಗೆ ಚಕ್ರಗಳು ಪರಸ್ಪರವಾಗಿ ಸುವ್ಯವಸ್ಥೆಯಿಂದ ನಡೆಯುವವು.

ಚಕ್ರಗಳು ಅವುಗಳ ವಿವರಣೆಗಳು

ನಾಡಿಗಳು ಮೂಲಚಿತ್ತುವಿನ ಮೂಲಕ ಆತ್ಮನ ಶಕ್ತಿಯಿಂದ ಮಿದುಳಿನಲ್ಲಿ ಉಂಟಾಗುವ ಚೈತನ್ಯಕ್ಕೆ ಕೇಂದ್ರಸ್ಥಾನವೆಂದು ಹೇಳಬಹುದು. ಇವು ಒಟ್ಟು ಹತ್ತು ಇವೆ. ಮಿದುಳಿನಲ್ಲಿ ನಾಲ್ಕು ಉಳಿದ ಭಾಗಗಳಲ್ಲಿ ಆರು, ಹೀಗೆ ಇವೆ. ಇವುಗಳ ಸ್ಥಾನಗಳು- ಗುದನಾಳದ ಮೂಲದಲ್ಲಿ ಆಧಾರ ಚಕ್ರ. ಗುಹ್ಯದ ನಾಳದ ಮೂಲದಲ್ಲಿ, ಸ್ವಾಧಿಸ್ಥಾನ ಚಕ್ರ. ಉದರದ ನಾಭಿ ಸ್ಥಾನದಲ್ಲಿ ಮಣಿಪೂರಕ ಚಕ್ರ. ಹೃದಯದಲ್ಲಿ ಅನಾಹುತಚಕ್ರ. ಕಂಠದಲ್ಲಿ ವಿಶುದ್ಧಿ ಚಕ್ರ. ಲಲಾಟದ

ಭ್ರೂಮಧ್ಯದಲ್ಲಿ ಅಜ್ಞಾಚಕ್ರ. ಮಿದುಳಿನ ಮುಂಭಾಗದಲ್ಲಿ ಅಂದರೆ ನೆತ್ತಿಯ ಮುಂಭಾಗದಲ್ಲಿ ಸಹಸ್ರಾರ (ಬ್ರಹ್ಮ ಚಕ್ರ). ನೆತ್ತಿಯಲ್ಲಿ ಶಿಖಾಚಕ್ರ. ಮಸ್ತಕದ ಹಿಂಭಾಗದಲ್ಲಿ ಪಶ್ಚಿಮ ಚಕ್ರ. ಅದರ ಹಿಂಭಾಗದಲ್ಲಿ ಅಣುಚಕ್ರ. ಅಣುಚಕ್ರದಿಂದಾ ಮಿದುಳಿನಲ್ಲಿ ಚಲನೆಗಳುಂಟಾಗುತ್ತದೆ. ಈ ಚಲನೆಗಳು ಸ್ನಾಯುಗಳ ಮೂಲಕವಾಗಿ ಶರೀರದಲ್ಲೆಲ್ಲಾ ಹರಡುತ್ತವೆ. ಹೀಗೆ ಪಸರಿಸುವಲ್ಲಿ ನರಗಳು ಅಥವಾ ನಾಡಿಗಳ ಸ್ನಾಯುಗಳೊಳಗಿಂದ ಅವು ಮೊದಲು ಬೆನ್ನೆಲುಬಿನ ರಂಧ್ರದೊಳಗಿಂದ ಪ್ರವೇಶ ಮಾಡುತ್ತವೆ. ಅಲ್ಲಿಂದ ಮೇಲ್ಕಂಡ ಚಕ್ರಗಳಿಗೆ ಹೋಗಿ ಅಲ್ಲಿಂದ ಶರೀರದಲ್ಲೆಲ್ಲಾ ಪಸರಿಸಿ ಅದರ ಅನೇಕ ಕ್ರಿಯೆಗಳಿಗೆ ಕಾರಣವಾಗುತ್ತದೆ. ಈ ಚಲನೆಗಳಿಗೋಸ್ಕರ ಈ ಚಕ್ರಗಳು ರೈಲ್ವೆಯ ಜಂಕ್ಷನ್ನುಗಳೆಂದು ಹೇಳಬಹುದು. ಜಂಕ್ಷನ್‌ಗಳಿಗೆ ಹೇಗೆ ಅನೇಕ ದಿಕ್ಕುಗಳಿಂದಾ ರೈಲುಗಳು ಹೋಗಿ ಮುಟ್ಟುತ್ತವೊ ಅಲ್ಲಿಂದ ಅವು ಬೇರೆ ಬೇರೆ ಸ್ಥಾನಗಳಿಗೆ ಹೋಗುವವೊ ಹಾಗೆಯೇ ಚಕ್ರಗಳ ಕಾರ್ಯಗಳಿರುತ್ತವೆ. ಮಿದುಳಿನಿಂದ ಬರುವ ಚಲನೆಗಳು ಈ ಚಕ್ರಗಳಿಗೆ ಮೊದಲು ಬರುತ್ತವೆ. ಮೆದುಳಿನಲ್ಲಿರುವ ಬ್ರಹ್ಮಚಕ್ರವು ಆಧಾರ, ಸ್ವಾಧಿಸ್ಥಾನ ಚಕ್ರಗಳಿಗೂ, ಶಿಖಾಚಕ್ರವು ಮಣಿಪೂರಕ, ಅನಾಹತ ಚಕ್ರಗಳಿಗೂ ಮತ್ತು ಪಶ್ಚಿಮ ಚಕ್ರವು ವಿಶುದ್ಧಿ ಅಜ್ಞಾಚಕ್ರಗಳಿಗೆ ಪ್ರತ್ಯಕ್ಷ ಸಂಬಂಧಪಡುತ್ತವೆ. ಅಣುಚಕ್ರ ಎಲ್ಲಾ ಚಕ್ರಗಳ ಮೂಲಸೂತ್ರವಾಗಿರುತ್ತದೆ. ಮೆದುಳಿನಲ್ಲಿ ಉತ್ಪನ್ನವಾಗುವ ಈ ಚಲನೆಗಳು ಆಯಾ ಚಕ್ರಗಳ ದ್ವಾರಾ ಬೇರೆ ಬೇರೆ ಅವಯವಗಳಿಗೆ ಪಸರಿಸುತ್ತವೆ. ಹೀಗೆ ಚಕ್ರಗಳು ಶಕ್ತಿಯನ್ನು ವ್ಯವಸ್ಥೆಗೊಳಿಸುವ ಕಾರ್ಯ ಮಾಡುತ್ತವೆ.

ಈ ಚಕ್ರಗಳಿಗೆ ನಾಲ್ಕು, ಆರು, ಹತ್ತು, ಹನ್ನೆರಡು, ಹದಿನಾರು, ಎರಡು, ದಳಗಳಿವೆ. ಈ ದಳಗಳಲ್ಲಿ ಐವತ್ತು ಅಕ್ಷರಗಳಿವೆ. ಆಧಾರ ಚಕ್ರದ ನಾಲ್ಕು ದಳಗಳಿಗೆ ವ, ಶ, ಷ, ಸ ಅಕ್ಷರಗಳು. ಸ್ವಾದಿಷ್ಠಾನ ಚಕ್ರದ ಆರು ದಳಗಳಲ್ಲಿ ಬ, ಭ, ಮ, ಯ, ರ, ಲ ಅಕ್ಷರಗಳು. ಮಣಿಪೂರಕ ಚಕ್ರದಲ್ಲಿ ಡಢಣ, ತಥದಧನ, ಪಫ ಅಕ್ಷರಗಳು. ಅನಾಹತ ಚಕ್ರದಲ್ಲಿ ಕ, ಖ, ಗ, ಘ, ಞ, ಚ, ಛ, ಜ, ಝ, ಞ, ಟ, ಠ ಅಕ್ಷರಗಳು, ವಿಶುದ್ಧಿ ಚಕ್ರದಲ್ಲಿ ಅ, ಆ, ಇ, ಈ, ಉ, ಊ, ಋ, ೠ, ಎ, ಏ, ಐ, ಒ, ಓ, ಔ, ಅಂ, ಅಃ ಅಕ್ಷರಗಳು ಭ್ರೂ ಮಧ್ಯದಲ್ಲಿರುವ ಆಜ್ಞಾ ಚಕ್ರದಲ್ಲಿ ಎರಡು ದಳ ಹಂಸಂ ಅಕ್ಷರಗಳು. ಬ್ರಹ್ಮಚಕ್ರವು ಸಹಸ್ರ ದಳವುಳ್ಳದ್ದು. ಅದು ಸಹಾಸ್ರಾಕ್ಷರ ಅನಂತವೇದಗಳನ್ನೊಳಗೊಂಡಿದೆ. ಅಲ್ಲಿ ಪ್ರಣವ ಮೂಲವಾದ ಅ, ಉ, ಮ ಅಕ್ಷರಗಳು ಮುಖ್ಯವಾದವು. ಮಸ್ತಕಾಗ್ರದಲ್ಲಿರುವ ಶಿಖಾ ಚಕ್ರದಲ್ಲಿ ಮೂರು ದಳಗಳಿವೆ. ಅಲ್ಲಿ ಶೂನ್ಯತತ್ವದ ಮಂತ್ರವಾದ ಬಂ, ಸಂ, ವಂ ಅಕ್ಷರಗಳು ಇವೆ. ಪಶ್ಚಿಮ ಚಕ್ರದಲ್ಲಿ ಒಂದು ದಳವಿದೆ. ಅಲ್ಲಿ ಮೂಲ 'ಹ' ಪ್ರಣವ ಇದೆ. ಈ ಯಾವತ್ತು ಚಕ್ರಗಳಲ್ಲಿ ಶಕ್ತಿಗಳಿಗೆ ಕಾರಣವಾದ ಪ್ರಣವಾಕ್ಷರಗಳಿರುತ್ತವೆ. ಆಧಾರದಲ್ಲಿ 'ನ' ಕಾರ ಪ್ರಣವವೂ ಸ್ವಾಧಿಷ್ಠಾನದಲ್ಲಿ 'ಮ' ಕಾರವೂ, ಮಣಿಪೂರಕದಲ್ಲಿ 'ಶಿ' ಕಾರವೂ, ಅನಾಹತದಲ್ಲಿ 'ವ' ಕಾರವೂ, ವಿಶುದ್ಧಿಯಲ್ಲಿ 'ಯ' ಕಾರವೂ, ಆಜ್ಞೆಯಲ್ಲಿ 'ಓಂ' ಕಾರವೂ ಇರುತ್ತವೆ. ಬ್ರಹ್ಮಚಕ್ರದಲ್ಲಿ 'ಬ' ಕಾರವೂ, ಶಿಖಾ ಚಕ್ರದಲ್ಲಿ 'ಕ್ಷ' ಕಾರವೂ, ಪಶ್ಚಿಮ ಚಕ್ರದಲ್ಲಿ, 'ಹ' ಕಾರವು ಇರುತ್ತವೆ. ಈ ಪ್ರಣವಾಕ್ಷರಗಳ ಮೂಲಕವೇ ಮಿದುಳಿನ ಚಲನೆಗಳು ಸ್ನಾಯುಗಳೊಳಗಿನಿಂದಾ ಶರೀರದಲ್ಲಿ ಸಂಚರಿಸುತ್ತವೆ. ಅವು ಶಕ್ತಿಗಳ ರೂಪದಲ್ಲಿ ತೋರುತ್ತವೆ. ಐವತ್ತು ಅಕ್ಷರಗಳಿಗೆ ಮೂಲವಾದದ್ದು, ಲಲಾಟದಲ್ಲಿರುವ ಓಂ ಕಾರವೇ ಇರುತ್ತದೆ. ಮಿದುಳಿನಲ್ಲಿ ಉಂಟಾಗುವ ಈ ಪ್ರಣಾವಾಕ್ಷರಗಳ ಮೂಲಕ ನಾಡಿಗಳ ದ್ವಾರಾ ಶರೀರದಲ್ಲಿರುವ ಆಯಾಚಕ್ರಗಳಿಗೆ ಕಲ್ಪಿಸಿ ಅಲ್ಲಿಂದ ಶರೀರದ ಆಯಾ ಅವಯವಗಳ ಕಡೆಗೆ ಹರಿದುಹೋಗುತ್ತದೆ.

ಮಾನವನಿಗೆ ನಾಡಿಗಳು ಶರೀರದಲ್ಲೆಲ್ಲಾ ಪಸರಿಸಿದ್ದರೂ, ನಾಡಿಗಳ ಕೇಂದ್ರಸ್ಥಾನ ಒಂಬತ್ತು ಇವೆ. ಮಾನವನಿಗೆ ಪ್ರಕೃತಿ ಸಂಬಂಧದಿಂದಾಯಿರುವಂಥಾ, ಕೇಂದ್ರಸ್ಥಾನಗಳು ಮಾನವರಲ್ಲಿ ಸಾಮಾನ್ಯ ರೀತಿಯಿಂದ ಅವುಗಳು ನರಗಳು ಕೂಡುವಿಕೆಯಿಂದಾ ಕೂಡಿರುತ್ತವೆ. ಅನೇಕ ಜನ್ಮದ ಪುಣ್ಯದಿಂದ ಭಕ್ತಿ ಸಂಜನಿಸಿ ಶ್ರೀ ಗುರುವನ್ನು ಮೊರೆಹೋಗಲು ಶ್ರೀಗುರುವು ಸಂಸ್ಕಾರ ಮಾಡಿದ ಮೇಲೆ ಅವು ಚಕ್ರಗಳಾಗಿ ಪರಿವರ್ತಿಸುತ್ತವೆ. ಶ್ರೀ ಗುರುವು ಕೃಪಾದೃಷ್ಟಿಯಿಂದ ಶಿಷ್ಯನಿಗೆ ಅನುಗ್ರಹ ದೀಕ್ಷೆಯನ್ನು ಮಾಡಿ ಪ್ರತಿನಿತ್ಯ ಶ್ವಾಸೋಚ್ಛ್ವಾಸದ ಇಪ್ಪತ್ತೊಂದು ಸಾವಿರದ ಆರುನೂರು ಜಪದ ಸೂಕ್ಷ್ಮ ನಿತ್ಯ ಆಚರಣೆಯ ದ್ವಾದಶ ಮಹಾಮಂತ್ರವನ್ನು ಉಪದೇಶಿಸಿ ನವಚಕ್ರಗಳಲ್ಲಿ ನವಲಿಂಗಗಳನ್ನು ಸ್ಥಾಪಿಸಿ ಜಪಿಸಲು, ಮಂತ್ರವು-ಲಿಂಗವು ಸ್ಥಿರವಾಗಿ ಅಳವಟ್ಟು, ಮಂತ್ರದಲ್ಲಿ ಲಿಂಗವು ಅಳವಡಲು ನಾಮ ಮಧ್ಯದಲ್ಲಿ ವಸ್ತುವಿಪ್ಪಂತೆ, ಮಂತ್ರಮಧ್ಯದಲ್ಲಿ ಲಿಂಗವು ಸ್ಥಿರಗೊಳ್ಳಲು ಕ್ರಮವಾಗಿ ಆಧಾರಚಕ್ರದಲ್ಲಿ ಆಚಾರಲಿಂಗ ಮಂತ್ರದಿಂದಲೂ, ಸ್ವಾದಿಷ್ಟಾನ ಚಕ್ರದಲ್ಲಿ ಗುರುಲಿಂಗ ಮಂತ್ರದಿಂದಲೂ, ಮಣಿಪೂರಕ ಚಕ್ರದಲ್ಲಿ ಶಿವಲಿಂಗ ಮಂತ್ರದಿಂದಲೂ, ಅನಾಹತ ಚಕ್ರದಲ್ಲಿ ಜಂಗಮಲಿಂಗ ಮಂತ್ರದಿಂದಲೂ, ವಿಶುದ್ಧಿ ಚಕ್ರದಲ್ಲಿ ಪ್ರಸಾದಲಿಂಗ ಮಂತ್ರದಿಂದಲೂ, ಆಗ್ನೇಯ ಚಕ್ರದಲ್ಲಿ ಮಹಾಲಿಂಗ ಮಂತ್ರದಿಂದಲೂ, ಬ್ರಹ್ಮಚಕ್ರದಲ್ಲಿ ನಿಃಕಲಲಿಂಗ ಮಂತ್ರದಿಂದಲೂ, ಶಿಖಾಚಕ್ರದಲ್ಲಿ ನಿಶ್ಶೂನ್ಯ ಲಿಂಗ ಮಂತ್ರದಿಂದಲೂ, ಪಶ್ಚಿಮಚಕ್ರದಲ್ಲಿ ನಿರಂಜನಲಿಂಗ ಮಂತ್ರದಿಂದ ಜಪಿಸಲು, ಮಂತ್ರಲಿಂಗದ ನೆನಹಿನಿಂದ ನವಚಕ್ರಗಳಲ್ಲಿ ನವಲಿಂಗಗಳು ಸ್ಥಿರಗೊಂಡು, ನಾಡಿಗಳೆಲ್ಲವೂ ಲಿಂಗಮಯವಾಗಿ ಲಿಂಗಸಂಬಂಧದಿಂದಾ ನಾಡಿಗಳು, ಶುದ್ಧಿಯಾಗಿ, ಲಿಂಗಜ್ಞಾನ ಅಳವಟ್ಟು ಲಿಂಗವೇ ಪ್ರಕಾಶಿಸುವುದೆಂದರಿವುದಯ್ಯಾ ಶ್ರೀ ಮತ್ಶೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ವಚನ : ಮತ್ತೊಂದು ಬಗೆಯಿಂ ಪೇಳಲ್ಪಡುಗುಂ.

ದಶವಿಧ ನಾಡಿಗಳು : ದಶವಿಧ ಪಾದೋದಕದಿಂದಾ ಶುದ್ಧಿಗೈಯ್ಯುವುದು. ಅದರ ವಿವರವೆಂತೆಂದೊಡೆ.

ಆತ್ಮನು ಕರ್ಮವಶನಾಗಿ ಎಂಭತ್ನಾಲ್ಕು ಲಕ್ಷ ಜೀವರಾಶಿಗಳಲ್ಲಿ ತನ್ನ ನಿಜಸ್ವರೂಪವನ್ನು ಅರಿಯದೆ ತಿರುಗುತ್ತಾ ಸೂಕ್ಷ್ಮ ಕಾರಣ, ಶರೀರವಿಡಿದು ಸ್ಥೂಲಮಂ ರಚಿಸಿ, ಸ್ಥೂಲ ಶರೀರದಲ್ಲಿ, ಕರ್ಮಗಳನ್ನು ಮಾಡುತ್ತಾ ಸ್ಥೂಲಮಂ ಬಿಟ್ಟು ಸೂಕ್ಷ್ಮಕಾರಣಗಳಲ್ಲಿ ಆತ್ಮನು ವಾಯುವಿನಿಂ ಬಂಧಿಸಿ, ಎಂಭತ್ನಾಲ್ಕು ಲಕ್ಷ ಜೀವರಾಶಿಗಳಲ್ಲಿ ತಿರುಗುತ್ತಿರ್ಪನು. ಅನೇಕ ಜನ್ಮಪುಣ್ಯ ಪರಿಪಾಕದಿಂದ ಮನುಷ್ಯ ಜನ್ಮಕ್ಕೆ ಬರಲು, ಮನುಷ್ಯ ಜನ್ಮದಲ್ಲಿ ವಾಯು ಪ್ರಾಣಿಯಾಗಿ ತಾಯಿಯ ಗರ್ಭದಿಂ ಹೊರಬರಲು, ವಾಯುವು ತ್ರಿವಿಧ ನಾಡಿಗಳಾದ ಈಡಾ, ಪಿಂಗಳ, ಸುಷುಮ್ನನಾಡಿಗಳ ಆಧಾರದಿಂದ ಜೀವಿಗಳಿಗೆ ಆ ನಾಡಿಗಳಿಂದಾ ಪೂರಕ ರೇಚಕ ಕುಂಭಕಂಗೈವುತ್ತಾ, ದಿನ ಒಂದಕ್ಕೆ ಇಪ್ಪತ್ತೊಂದು ಸಾವಿರದ ಆರುನೂರು ಶ್ವಾಸೋಚ್ಛ್ವಾಸಗಳಂತೆ ಆಯುರ್ಗತಿಯಲ್ಲಿ ಸಿಕ್ಕಿ ತಿರುಗುತ್ತಾ ಇರುವನು. ಹೀಗಿರುತಿರ್ಪಲ್ಲಿ ಅನೇಕ ಜನ್ಮಪುಣ್ಯ ಪರಿಪಾಕದಿಂದ ವಿವೇಕ ತಲೆದೋರಿ ಶ್ರೀ ಗುರುವಂ ಮೊರೆಹೋಗಲು ಶ್ರೀಗುರುವು ಕೃಪಾದೃಷ್ಟಿಯಿಂ ನೋಡಿ, ಕ್ರಿಯಾದೀಕ್ಷೆಯಿಂದ ಅಂಗಮಂ ಶುದ್ಧಿಮಾಡಿ, ಲಿಂಗಮಂ ಸಂಬಂಧಿಸಿ ಮಂತ್ರದೀಕ್ಷೆಯಿಂದ ಮಹಾಮಂತ್ರೋಪದೇಶಮಂ ಮಾಡಿ, ಮಹಾಮಂತ್ರದಲ್ಲಿ ಲಿಂಗಸಂಬಂಧಿಸಿ, ವಾಯುಪ್ರಾಣಿಯಾಗಿದ್ದುದ ಕಳೆದು ಮಂತ್ರಪ್ರಾಣಿಯಾಗಿಸುತ್ತಾನೆ. ಮಂತ್ರದಲ್ಲಿ ಲಿಂಗವು ಸ್ಥಿರಗೊಂಡು ಲಿಂಗಪ್ರಾಣಿಯಾಗಿ ಮಾಡಲು

ಅಂದಿನಿಂದ ಪೂರ್ವದ ಪ್ರಕೃತಿ ಜೀವಿಯಾಗಿ ಆಚರಿಸುವ ಅನ್ನ ನೀರಿನಿಂದ ಬೆಳೆಯುವ ಕಾಯವನ್ನು ಬಿಡಿಸಿ, ಪಾದೋದಕ ಪ್ರಸಾದ ಜೀವಿಯನ್ನಾಗಿ ಮಾಡಲು ಶ್ರೀಗುರುವಿನ ಕರುಣೆ ಭಕ್ತನ ಭಕ್ತಿ ಕೂಡಿ ಸದ್‌ಭಕ್ತನು ಪಾದೋದಕವನ್ನು ಸಾಕ್ಷಾತ್ ಪರಬ್ರಹ್ಮವೆಂದು ಪಡೆದು ಶ್ರೀ ಗುರುವಿನ ಮೇಲೆ ಭಕ್ತಿಯಿಂದ ಈಡಾನಾಡಿಯು ಶುದ್ಧ್ಯಸಿ ಲಿಂಗಭಕ್ತಿಯಿಂದ ಪಿಂಗಳನಾಡಿಯು ಶುದ್ಧಿಯಾಗಿ, ಜಂಗಮ ಭಕ್ತಿಯಿಂದ ಸುಷುಮ್ನ ನಾಡಿಯು ಶುದ್ಧಿಯಾಗಿ ದಶವಿಧ ಪಾದೋದಕದ ಆಚರಣೆಯಿಂದ ಶಿಷ್ಯನಿಗೆ ಶ್ರೀಗುರುವು ಉಪದೇಶಿಸಲು ನಾಡಿಗಳು ಪ್ರಕೃತಿಗುಣವಳಿಯುವವು. ಅದೆಂತೆಂದೊಡೆ ದಶವಿಧ ಪಾದೋದಕದ ಆಚರಣೆಯನ್ನು ಆಚರಿಸುವುದರಿಂದ ಗುರು ಪಾದೋದಕದಿಂದ ಲಕುಹನಾಡಿಯು ಶುದ್ಧಿಯಾಗಿ, ಆಧಾರ ಚಕ್ರದಲ್ಲಿ ಆಚಾರಲಿಂಗವು ನೆಲೆಗೊಳ್ಳುವುದು. ಲಿಂಗಪಾದೋದಕದಿಂದ ಅಲಂಬುನಾಡಿಯು ಶುದ್ಧಿಯಾಗಿ, ಸ್ವಾದಿಷ್ಟಾನ ಚಕ್ರದಲ್ಲಿ ಗುರುಲಿಂಗವು ನೆಲೆಗೊಳ್ಳುವುದು. ಜಂಗಮ ಪಾದೋದಕದಿಂದ ಶಂಕಿನಿ ನಾಡಿಯು ಶುದ್ಧಿಯಾಗಿ, ಮಣಿಪೂರಕ ಚಕ್ರದಲ್ಲಿ ಶಿವಲಿಂಗವು ನೆಲೆಗೂಳ್ಳುವುದು. ಸ್ಪರ್ಶನೋದಕದಿಂದ ಈಡಾನಾಡಿಯು ಶುದ್ಧಿಯಾಗಿ, ಅನಾಹುತ ಚಕ್ರದಲ್ಲಿ ಜಂಗಮಲಿಂಗವು ನೆಲೆಗೊಳ್ಳುವುದು. ಅವಧಾರೋದಕದಿಂದ ಪಿಂಗಳನಾಡಿಯು ಶುದ್ಧಿಯಾಗಿ, ವಿಶುದ್ಧಿ ಚಕ್ರದಲ್ಲಿ ಪ್ರಸಾದಲಿಂಗವು ನೆಲೆಗೊಳ್ಳುವುದು. ಆಪ್ಯಾಯನೋದಕದಿಂದ ಗಾಂಧಾರಿನಾಡಿಯು ಶುದ್ಧಿಯಾಗಿ ಆಜ್ಞಾ ಚಕ್ರದಲ್ಲಿ ಮಹಾಲಿಂಗವು ನೆಲೆಗೊಳ್ಳುವುದು. ಹಸ್ತೋದಕದಿಂದ ಹಸ್ತಿ ಜಿಹ್ವೆನಾಡಿಯು ಶುದ್ಧಿಯಾಗಿ ಬ್ರಹ್ಮಚಕ್ರದಲ್ಲಿ ನಿಃಕಲಲಿಂಗ (ಇಷ್ಟಲಿಂಗ) ವಾಗಿ ನೆಲೆಗೊಳ್ಳುವುದು. ಪರಿಣಾಮೋದಕದಿಂದ ಪೂಷಾನಾಡಿಯು ಶುದ್ಧಿಯಾಗಿ ಶಿಖಾಚಕ್ರದಲ್ಲಿ ನಿಶ್ಶೂನ್ಯಲಿಂಗ (ಪ್ರಾಣಲಿಂಗ) ವು ನೆಲೆಗೊಳ್ಳುವುದು. ನಿರ್ನಾಮೋದಕದಿಂದ ಪಯಶ್ವಿನಿ ನಾಡಿಯು ಶುದ್ಧಿಯಾಗಿ ಪಶ್ಚಿಮ ಚಕ್ರದಲ್ಲಿ ನಿರಂಜನಲಿಂಗ (ಭಾವಲಿಂಗವು) ನೆಲೆಗೊಳ್ಳುವುದು. ಸತ್ಯೋದಕದಿಂದ ಕುಂಭಕ ನಾಡಿಯು ಶುದ್ಧಿಯಾಗಿ ಅಣುಚಕ್ರದಲ್ಲಿ ಅಣುಲಿಂಗವು ನೆಲೆಗೊಳ್ಳುವುದು. ಈ ದಶವಿಧ ಪಾದೋದಕದ ನಿತ್ಯಾಚರಣೆಯಿಂದ ದಶವಿಧನಾಡಿಗಳು ಶುದ್ಧಿಯಾಗಿ ದಶವಿಧ ಲಿಂಗವು ನೆಲೆಗೊಂಡು, ಶರಣನು ಪ್ರಸಾದವನ್ನು ಪಡೆದು ಸರ್ವಾಂಗ ಲಿಂಗಿಯಾಗಿ ಪ್ರಸಾದ ಕಾಯನಾಗಿ ಪರಬ್ರಹ್ಮಸ್ವರೂಪವಾದ ಪಾದೋದಕ ಪ್ರಸಾದದಾಚರಣೆವಿಡಿದು, ಅಖಂಡ ಬ್ರಹ್ಮಾನಂದದಲ್ಲಿ ಲಿಂಗಾನಂದದಲ್ಲಿ ನಿತ್ಯತೃಪ್ತನಾಗಿರುವನು. ಇಂಥಾ ಸದ್‌ಭಕ್ತರ ಸಂಗದಲ್ಲಿರಿಸಿ ರಕ್ಷಿಸಯ್ಯಾ ಶ್ರೀಮತ್ ಶೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ಸಪ್ತಧಾತುಗಳ ಉತ್ಪತ್ತಿ ಅವುಗಳ ವ್ಯವಹಾರವು ಲಿಂಗಸಂಬಂಧವು ಸಪ್ತಧಾತುಗಳ ಉತ್ಪತ್ತಿ: ವರ್ಣಾಂಶಿಕ ಭೇದವೆಂತೆಂದೊಡೆ

ಶ್ಲೋಕ : ರಸೋರುಧಿರ, ಮಾಂಸಂಚ, ಮೇಧಸ್ಸು, ಮಜ್ಜಾಸ್ತಿ ಚರ್ಮ, ರೇತಸಃ / ಧಾತವಃ ಸಪ್ತಧಾತಮೋಪ್ರೋಕ್ತಾ / ಸರ್ವದೇಹ ಸಮಾಶ್ರೀತಃ /

ರಸ, ರುಧಿರ, ಮಾಂಸ, ಮೇಧಸ್ಸು, ಮಜ್ಜೆ, ಅಸ್ಥಿ, ಚರ್ಮ, ರೇತ (ಶುಕ್ಲ). ರಜಸ್ಸು ಇಂತಪ್ಪ ಸಪ್ತದಾತುಗಳ ವಿವರ : ಊಟ ಮಾಡಿದ ಅನ್ನ, ಏಳು ದಿವಸಕ್ಕೆ ರಸವಹುದು. ಆ ರಸವು ಏಳುದಿನಕ್ಕೆ ರಕ್ತವಹುದು. ಆ ರುಧಿರವು ಏಳು ದಿವಸಕ್ಕೆ ಮಾಂಸವಹುದು, ಆ ಮಾಂಸವು ಏಳು ದಿವಸಕ್ಕೆ ಮೇಧಸ್ಸುಹುದು, ಆ ಮೇಧಸ್ಸು ಏಳು ದಿನಕ್ಕೆ ಚರ್ಮವಹುದು. ಆ ಚರ್ಮವು

ಏಳುದಿನಕ್ಕೆ ಅಸ್ತಿಯಹುದು. ಆ ಅಸ್ತಿಯೂ ಏಳುದಿನಕ್ಕೆ ಮಜ್ಜೆಯಹುದು. ಮಜ್ಜೆಯೂ ಏಳು ದಿನಕ್ಕೆ ಶುಕ್ಲವಹುದು. ಇಂತಿವುಗಳ ತನು ಚೇಷ್ಟವೆಂತೆಂದೊಡೆ,

ರಸಕ್ಕೆ ಕಪಿಲವರ್ಣದ ಧಾತು. ಪೃಥ್ವಂಶಿಕಾ ದೇಹ, ಮನಳುಕಿತ್ತಿಹುದು. ರುಧಿರಕ್ಕೆ ನೀಲವರ್ಣದ ಧಾತು. ಅಪ್ಪುವಿನಂಶಿಕ ದೇಹ, ಮನಳುಕಿಸುತ್ತಿಹುದು. ಮಾಂಸಕ್ಕೆ ರಕ್ತವರ್ಣದ ಧಾತು. ಅಗ್ನಿಯಂಶಿಕ ದೇಹವಂ ಕಳವಳಿಸುತ್ತಿಹುದು. ಮೇಧಸ್ಸಿಗೆ (ಚರ್ಮಕ್ಕೆ) ಮಾಂಜಿಷ್ಠ ವರ್ಣದ ಧಾತು. ಮಾರುತನಂಶಿಕ ಶರೀರವ ಬೆವರಿಸುತ್ತಿಹುದು. ಅಸ್ತಿಗೆ ಕೃಷ್ಣವರ್ಣದ ಧಾತು. ಆಕಾಶನಂಶಿಕ ಶರೀರಮಂ ಎತ್ತರೆತ್ತರವಂ ಮಾಡಿ ಮರುಳಾಗಿ ನುಡಿಸುತ್ತಿಹುದು. ಮಜ್ಜೆಗೆ ತಾಮ್ರವರ್ಣಧಾತು ಸೂರ್ಯನಂಶಿಕ ಶರೀರಮಂ ವತ್ತರಿಸಿ, ಕಳವಳಿಸಿ, ನುಡಿಸುತ್ತಿಹುದು. ಶುಕ್ಲಕ್ಕೆ ಶ್ವೇತವರ್ಣದ ಧಾತು. ಚಂದ್ರನಂಶಿಕ ಶರೀರಮಂ ಕಂಪಿಸಿ ಕಳವಳಿಸುತ್ತಿಹುದು. ಈ ಸಪ್ತಧಾತುಗಳಿಗೆ ಪ್ರಕೃತಿಗುಣವಳಿಯಲು ಲಿಂಗಸಂಬಂಧವೆಂತೆಂದೊಡೆ, ಮಾನವನಿಗೆ ಅನೇಕ ಜನ್ಮದ ಸುಕೃತದಿಂ (ಪುಣ್ಯದಿಂದ) ಜ್ಞಾನೋದಯವಾಗಿ ಶ್ರೀ ಗುರುವಂ ಮೊರೆಹೋಗಲು, ಶ್ರೀ ಗುರುವು ಕೃಪಾದೃಷ್ಟಿಯಿಂದ ಆತ್ಮನ ಅಂಗವಂ ಶುದ್ಧಿಸಿ, ಚಿದಂಗವಂ ಮಾಡಿ, ಆತ್ಮನ ಶರೀರದ ಮೇಲೆ ಲಿಂಗವಂ ಸಂಬಂಧಿಸಿ, ಶ್ರೋತ್ರದಲ್ಲಿ ಮಹಾಮಂತ್ರಮಂ ಉಪದೇಶಿಸಲು, ಲಿಂಗದೊಡಗೂಡಿ ಮಂತ್ರದ ನೆನಹಿನಿಂದ ಮನದಲ್ಲಿ ಪ್ರಾಣಲಿಂಗವಾಗಿ ಅಳವಟ್ಟು, ಮನದಲ್ಲಿ ಸ್ಥಾಪಿತವಾದ ಪ್ರಾಣಲಿಂಗವೇ ಜಿಹ್ವೆಯಲ್ಲಿ ಚಿರಸ್ಥಾಯಿಯಾಗಿ ಅಳವಡಲು, ಸದ್ ಭಕ್ತನು ಮಂತ್ರ ಸಂಸ್ಕಾರದಿಂದ ಪ್ರಸಾದವ ಶುದ್ಧೈಸಿ ಲಿಂಗಾರ್ಪಿತವ ಮಾಡಿ, ಜಿಹ್ವೆಯಲ್ಲಿ ಸ್ವೀಕರಿಸಿದ ಕೂಡಲೇ, ಆ ಪ್ರಸಾದದ ರಸದಲ್ಲಿ 'ನ' ಕಾರ ಪ್ರಣವ ಸಂಬಂಧವಾಗಿ ಆಚಾರಲಿಂಗವು ನೆಲೆಗೊಳ್ಳುವುದು. ರಕ್ತದಲ್ಲಿ 'ಮ' ಕಾರ ಪ್ರಣಮ ಸಂಬಂಧವಾಗಿ ಗುರುಲಿಂಗವು ನೆಲೆಗೊಳ್ಳುವುದು. ಮಾಂಸದಲ್ಲಿ ಶಿಕಾರ ಪ್ರಣಮ ಸಂಬಂಧವಾಗಿ ಶಿವಲಿಂಗವು ನೆಲೆಗೊಳ್ಳುವುದು. ಮೇಧಸ್ಸಿನ 'ವ' ಕಾರ ಪ್ರಣವ ಸಂಬಂಧವಾಗಿ ಜಂಗಮ ಲಿಂಗವು ನೆಲೆಗೊಳ್ಳುವುದು. ಅಸ್ತಿಗೆ, ಮಜ್ಜೆಗೆ, 'ಯ' ಕಾರ ಪ್ರಣಮ ಸಂಬಂಧವಾಗಿ ಪ್ರಸಾದ ಲಿಂಗವು ನೆಲೆಗೊಳ್ಳುವುದು. ತ್ವಕ್ಕಿಗೆ ಓಂಕಾರ ಪ್ರಣಮ ಸಂಬಂಧವಾಗಿ ಮಹಾಲಿಂಗವು ನೆಲೆಗೊಳ್ಳುವುದು. ಶುಕ್ಲಕ್ಕೆ ಷಡಕ್ಷರ ಮಂತ್ರವು ಸಂಬಂಧವಾಗಿ ನಿಃಕಲ ಲಿಂಗವು ನೆಲೆಗೊಳ್ಳುವುದು. ಶಿವಶರಣನ ಧಾತುಗಳೆಲ್ಲವು ಲಿಂಗಮಯವಾಗಿ ಅಳವಡುವುದೆಂದರಿವುದಯ್ಯಾ ಶ್ರೀ ಮತ್ಸೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ಇನ್ನು ಷಡೂರ್ಮಿಗಳ ಸ್ಥಿತಿ ಸ್ವಭಾವಮಂ ಲಿಂಗ ಸಂಬಂಧವ ಹೇಳ್ಗೆ :

ಬುಭುಕ್ಷಾತ್ ಪಿಪಾಸಾಚ ಪ್ರಾಣಧರ್ಮಂ। ಶೋಕ ಮೋಹಸ ಮನೋಧರ್ಮ ಶೃತಾಃ।

ಜನನ ಮರಣಂ ಶರೀರಧರ್ಮಂ, ಶೃತಾಃ। ಎಂದು.

ಪಿಪಾಕ್ಷುತ್‌ಸೆ, ಶೋಕ, ಮೋಹ, ಜನನ, ಮರಣ, ಈ ಆರು ಷಡೂರ್ಮಿಗಳು

ಕ್ಷುತ್-ಪಿಪಾಸೆ ಈ ಎರಡು ಪ್ರಾಣಧರ್ಮ, ಶೋಕ-ಮೋಹ ಈ ಎರಡು ಮನಸ್ಸಿನ ಧರ್ಮ ಜನನ ಮರಣ ಈ ಎರಡು ದೇಹದ ಧರ್ಮ.

ಕ್ಷುತ್ : ಬಗೆಬಗೆಯಾದ ರುಚಿರುಚಿಯಾದ ಅನ್ನವ ಊಟ ಮಾಡಬೇಕೆಂದು ಬಯಸುವುದು ಕ್ಷುತ್.

ಪಿಪಾಸೆ : ಶರೀರಕ್ಕೆ ಬೇಕಾದ ರುಚಿರುಚಿಯಾದ ಪಾನೀಯ ದ್ರವ್ಯಗಳನ್ನು ಕುಡಿಯಬೇಕೆಂಬ ಬಯಕೆ, ಪಿಪಾಸೆ.

ಶೋಕ : ಬಯಸುವ ವಸ್ತುವು ತನ್ನಿಂದಗಲಿ ಹೋದಲ್ಲಿ, ನೆನೆನೆದು ದುಃಖಿಸುವ ದುಃಖವೇ ಶೋಕ.

ಮೋಹ : ವಿಷಯ ವಸ್ತುಗಳಲ್ಲಿ ಪ್ರೀತಿಯು, ಅತಿಶಯವಾಗಿ ಮಮಕರಿಸುವುದೇ ಮೋಹವು.

ಜನನ : ಸ್ಥೂಲಮಾನವರ ಪಿಂಡವೂ ನಾನಾ ಜೀವರಾಶಿಯಲ್ಲಿ ಹುಟ್ಟಿ ಬರುವಂತಹದೇ ಜನನವು.

ಮರಣ : ಕಡೆಯಲ್ಲಿ ನಾನಾ ರುಜೆಗಳಿಂದಾ ಸಣ್ಣಿಸಿ ಜೀರ್ಣವಾಗಿ ಮೃತಿಯನ್ನೈದಿ ಶರೀರ ಬಿಡುವುದೇ ಮರಣವು.

ಇವುಗಳು ಕೆಡುವುದಕ್ಕೆ ಪರಿಹಾರ : ಮಾನವ ಸಂಸ್ಕೃತಿ ಪಾಶಕ್ಕೊಳಗಾಗಿ ಪ್ರಕೃತಿಗೆ ವಶವಾಗಿ, ಅದೇ ಶಾಶ್ವತವೆಂದು ನಡೆಯುವವರಿಗೆ ಅನೇಕ ಜನ್ಮದ ಪುಣ್ಯದ ಪರಿಪಾಕದಿಂದ ಶಿವಭಕ್ತಿಯುದಯಿಸಿ, ಈ ಸಂಸ್ಕೃತಿ ಪಾಶಕ್ಕೆ ಹೇಸಿ, ಶ್ರೀ ಗುರುವಂ ಮೊರೆಹೋಗಲು, ಶ್ರೀ ಗುರು ಕೃಪೆಯಿಂದ ಅಂಗದ ಮಲಿನವ ಕಳೆದು, ಚಿದಂಗ ಮಾಡಿ, ಲಿಂಗವ ಸಂಬಂಧಿಸಿ, ಇಂದಿನಿಂದ ಈ ತನುವು ಎಂಭತ್ನಾಲ್ಕು ಲಕ್ಷ ಜೀವರಾಶಿಯಲ್ಲಿ ಭವಬಂಧಮುಖವಾಗಿ ಹೋಗುವ ತನುವಲ್ಲಾ, ಪರಮಾತ್ಮನ ಸತ್ಕ್ರಿಯಾಚಾರ ಮಾಡುವ ತನುವು. ಶಿವ ಸತ್ಕ್ರಿಯಾಚಾರ ತನುವೆಂದು ತಿಳಿಸಿ, ಇಂದಿನಿಂದ ಈ ಕಾಯವು ಅನ್ನ ನೀರಿನಿಂದ ಬೆಳೆಯುವ ಶರೀರವಲ್ಲ, ಅನ್ನವನ್ನು ಗುರು ತಿಳಿಸಿದಂತೆ ಸಂಸ್ಕಾರವ ಮಾಡಿ, ಲಿಂಗಕ್ಕರ್ಪಿಸಿ, ಪ್ರಸಾದವಾಗಿ ಸೇವಿಸಬೇಕೆಂದು ತಿಳಿಸಿ ನೀರನ್ನು ಪಾದೋದಕ ಸಂಸ್ಕಾರ ಮಾಡಿ ಸೇವಿಸಲು ತಿಳಿಸಿ, ಪಾದೋದಕ ಪ್ರಸಾದದ ಮರ್ಮವನ್ನುರುಹಿ, ಪ್ರಸಾದ ಕಾಯವ ಮಾಡಿದನಾಗಿ ಅಂದಿನಿಂದ ಶರಣನ ವ್ಯವಹಾರವು, ನಡೆಯೂ, ಅಂಗದಾಪ್ಯಾಯವಳಿದು, ಲಿಂಗದಾಪ್ಯಾಯಳವಡಲು ಕ್ಷುತ್ತು ಕೆಟ್ಟಿತ್ತು. ಅಂಗದ ದಾಹವಳಿದು, ಲಿಂಗದ ದಾಹವೆಡೆಗೊಳಲು ಪಿಪಾಸೆ ಕೆಟ್ಟಿತ್ತು. ಅಂಗದ ವ್ಯವಹಾರಗಳಿಗೆ ಶೋಕಿಸುವುದಳಿದು, ಲಿಂಗದ ಕ್ರಿಯೆಗಳಿಗೆ ಶೋಕಿಸಲು ಶೋಕ ಕೆಟ್ಟಿತ್ತು. ಅಂಗದ ಮೋಹದಿಂದ ದುಷ್ ಕೃತ್ಯಗಳಿಗೆ ವ್ಯವಹರಿಸುವುದಳಿದು ಗುರು, ಲಿಂಗ, ಜಂಗಮ ಪಾದೋದಕ-ಪ್ರಸಾದ ಮೋಹಿಯಾಗಿ ವ್ಯವಹರಿಸಿದಲ್ಲಿ ಮೋಹ ಕೆಟ್ಟಿತ್ತು. ಶ್ರೀ ಗುರು ಕರಜಾತನಾಗಿ ಲಿಂಗ ಸಂಸ್ಕಾರದಿಂದ ಲಿಂಗ ಶರೀರಿಯಾಗಿ, ಮುನ್ನಿನ ಪ್ರಕೃತಿ ಶರೀರವು ಕಳೆದು, ಸರ್ವೇಂದ್ರೀಯಂಗಳು ಶಿವಲಿಂಗದಲ್ಲಿ ಶಿಥಿಲತ್ವಮಂ ಪಡೆದು, ಜನನ ಕೆಟ್ಟಿತ್ತು. ಶ್ರೀ ಗುರುಲಿಂಗ ಜಂಗಮ ಭಕ್ತಿಯಲ್ಲಿ ತದ್ಗತನಾಗಿ ಪಾದೋದಕ-ಪ್ರಸಾದ ಜೀವಿಯಾಗಿ, ಪ್ರಸಾದ ಕಾಯನಾಗಿ, ಲಿಂಗದಲ್ಲಿ ತನು, ಕರಣ-ಇಂದ್ರಿಯಗಳು ಲಿಂಗ ಲೀಯತೆಯನ್ನು ಪಡೆದು ಲಿಂಗೈಕ್ಯವಾದಲ್ಲಿ ಮರಣ ಕೆಟ್ಟಿತ್ತು. ಇಂತೀ ಷಡೂರ್ಮಿಗಳಳಿದು ಅಷ್ಟಾವರಣ ಸಂಗದಿಂದ ಲಿಂಗವಾಗಿ ಉಳಿದು, ಆಚರಿಸುವ ಸತ್ಯ ಶರಣರ ಸಂಗದಲ್ಲಿರಿಸಯ್ಯಾ ಎನ್ನನ್ ಶ್ರೀ ಮತ್ಸೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ಷಡ್ಭಾವ ವಿಕಾರಗಳು, ಅವುಗಳಿಗೆ ಪರಿಹಾರ

ಷಡ್ಭಾವ ವಿಕಾರಗಳು : ಅಸ್ತಿತೇ, ಜಾಯತೇ, ಪರಿಮತೆ, ವಿವರ್ಧತೆ, ಅಪಕ್ಷೀಯತೆ, ವಿನಶ್ಯತೆ.

ಅಸ್ತಿತೆ : ತನ್ನ ಮೂಲ ಸ್ವರೂಪವನ್ನು ಮರೆದು, ಗರ್ಭದಲ್ಲಿರುವುದಕ್ಕೆ ಅಸ್ತಿತೆಯೆನಿಸುವುದು.

ಜಾಯತೆ : ತಾಯಿಯ ಗರ್ಭದಿಂದ ಉದಿಸುವೆನೆಂಬುದೇ ಜಾಯತೆಯೆನಿಸುವುದು.

ಪರಿಣಮತೆ : ತಾಯಿ-ತಂದೆಗಳ ಪ್ರೀತಿಗೆ ಒಳಗಾಗಿ, ಪ್ರೀತಿಯ ಸುಖವನ್ನು ಅನುಭವಿಸುತ್ತಾ ಸಂತೋಷಿಸುವುದೇ ಪರಿಣಮತೆಯೆನಿಸುವುದು.

ವಿವರ್ಧತೆ : ಶರೀರವೇ ನಾನೆಂದು, ತಾಯಿ ತಂದೆಗಳಿಂದ ಅನ್ನ, ನೀರಿನಿಂದ ಬೆಳೆಯುವುದೇ ವಿವರ್ಧತೆಯೆನಿಸುವುದು.

ಅಪಕ್ಷೀಯತೆ : ವೃದ್ಧಾಪ್ಯದಲ್ಲಿಯ ಮತ್ತು ಅನೇಕ ರೋಗಗಳಿಂದ ಶರೀರವು ಸುಕ್ಕುತ್ತಾ, ಬಾಡುತ್ತಾ ಹೋಗುವುದೇ ಅಪಕ್ಷೀಯತೆಯೆನಿಸುವುದು.

ವಿನಶ್ಯತೆ : ಕೊನೆಗೆ ಆತ್ಮ ಚೇತನವನ್ನು ಬಿಟ್ಟು ಅಳಿದು ಹೋಗುವುದೇ ವಿನಶ್ಯತೆಯೆನಿಸುವುದು.

ಈ ದೋಷಗಳಿಗೆ ಪರಿಹಾರ : ಶ್ರೀ ಗುರುವಿನ ಕೃಪಾಗರ್ಭದಲ್ಲಿರುವೆನು ಯೆಂದರಿದಾಗಲೇ ಅಸ್ತಿತೆಯೆಂಬ ವಿಕಾರವಳಿಯಿತ್ತು. ಶ್ರೀ ಗುರುವಿನ ಕರಕಮಲದಲ್ಲಿ ಜನಿಸಿ, ಅಯೋನಿಜನೆಂದರಿದಾಗಲೇ ಜಾಯತೆಯೆಂಬ ವಿಕಾರವಳಿಯಿತ್ತು. ಶ್ರೀ ಗುರುವಿನ ಕೃಪೆಯಿಂದ ಪಡೆದ ಲಿಂಗವನ್ನು ಅಂಗದಲ್ಲಿ ಧರಿಸಿ, ಲಿಂಗ ಸುಖದಲ್ಲಿ ಪರಿಣಮಿಸುತ್ತಾ ಲಿಂಗ ಸುಖದಲ್ಲಿರುವುದರಿಂದ ಪರಿಣಮತೆಯೆಂಬುವ ವಿಕಾರವಳಿಯಿತ್ತು. ಶ್ರೀ ಗುರುವು ಕ್ರೀಯಾದೀಕ್ಷೆಯಿಂದ ತನುಗುಣವನ್ನು ಭಸ್ಮೀಕೃತವ ಮಾಡಿ ಇಂದಿನಿಂದ ನಿನ್ನ ಶರೀರವು ಅನ್ನ ನೀರಿನಿಂದ ಬೆಳೆಯುವ ಶರೀರವಲ್ಲ ಅನ್ನವನ್ನು 'ಓಂ' 'ನಾಂ' ಮಂತ್ರದಿಂದ ಸಂಸ್ಕಾರ ಮಾಡಿ ಲಿಂಗಕ್ಕರ್ಪಿಸಿ ಪ್ರಸಾದವ ಮಾಡಿ ನೀರನ್ನು 'ಓಂ' 'ಮಾಂ' ಮಂತ್ರ ಸಂಸ್ಕಾರದಿಂದ ಶುದ್ಧ ಮಾಡಿ ಪಾದೋದಕವೆಂದು ತಿಳಿದು, ಪಾದೋದಕ ಪ್ರಸಾದದಿಂದ ಬೆಳೆದ ಶರೀರವೆಂದರಿದೆನಾಗಿ ವಿವರ್ಧತೆಯೆಂಬ ವಿಕಾರವಳಿವುದು. ಶ್ರೀ ಗುರುರೂಪದಿಷ್ಠಿತ ಲಿಂಗವು ಶರೀರವನಾವರಿಸಿ ದೇಹೇಂದ್ರಿಯಾದಿಗಳೆಲ್ಲ ಲಿಂಗದಲ್ಲಿ ಅಡಗಿ, ಶಿಥಿಲತ್ವವನ್ನೈದಿದಲ್ಲಿ, ಅಪೇಕ್ಷಿಯತೆಯೆಂಬ ವಿಕಾರವಳಿವುದು. ಲಿಂಗಾಂಗದಲ್ಲಿ ಸಮರಸವಾಗಿ ಲಿಂಗಾಂಗದ ಐಕ್ಯವನರಿದು, ಲಿಂಗದಲ್ಲಿ ಲೀಯವಾಗಲು ವಿನಶ್ಯತೆಯೆಂಬ ವಿಕಾರವಳಿಯುವುದು. ಇಂತೀ ಲಿಂಗ ಸಂಗದಿಂದ ಷಡ್ಭಾವ ವಿಕಾರವಳಿದು ನಿಮ್ಮ ವಿಕಾರವೆಡೆಗೊಂಡ ಶರಣರ ಸಂಗದಲ್ಲಿರಿಸಯ್ಯಾ ಶ್ರೀ ಮತ್ಸ್ವಾನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ಪಂಚಕೋಶಗಳು ಅವುಗಳ ವಿವರ ಹಾಗೂ ಅವುಗಳಿಗೆ ಪರಿಹಾರ

ಪಂಚಕೋಶಗಳು : ಅನ್ನಮಯ ಕೋಶ, ಪ್ರಾಣಮಯ ಕೋಶ, ಮನೋಮಯ ಕೋಶ, ವಿಜ್ಞಾನಮಯಕೋಶ, ಆನಂದಮಯಕೋಶ.

ಅನ್ನಮಯ ಕೋಶ: ಪೃಥ್ವಿ, ಅಪ್ಪು, ತತ್ವ ಸಂಬಂಧವಾದಂತಹ ಸ್ಥೂಲ ಶರೀರವೇ ಅನ್ನಮಯ ಕೋಶವೆನಿಸಿವುದು.

ಪ್ರಾಣಮಯ ಕೋಶ : ಅದರೊಳಗೆ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳ ವ್ಯಾಪಾರವಾದ, ಮುಟ್ಟಿದರರಿವುದು, ಕರೆದರೆ ಕೇಳುವುದು, ಕಣ್ದೆರೆದು ನೋಡುವುದು, ಮುಂತಾದ ಗುಣಗಳುಂಟಾಗಿದ್ದು, ಘಟದೊಳಗಿನ ಪ್ರಾಣವಿದೆ ಎಂದು ತಿಳಿವುದು, ಪ್ರಾಣಮಯ ಕೋಶವೆನಿಸುವುದು.

ಮನೋಮಯಕೋಶ : ಅದರೊಳಗಣ ಚಿತ್ತು, ಬುದ್ಧಿ-ಅಹಂಕಾರಗಳೆಂಬ ತ್ರಿಕರಣಂಗಳ ವ್ಯಾಪಾರಗಳೇ.

ವಿಜ್ಞಾನಮಯ ಕೋಶ : ನೆನೆವುದು, ನಿರ್ಧರಿಸುವುದು, ಆದರಿಸುವುದು, ಅಹಂಕರಿಸುವುದು, ಈ ಮೊದಲಾದ ಗುಣಂಗಳುಂಟಾಗಿದ್ದಲ್ಲಿ ಆತ್ಮನೊಳಗೆ ಮನಸ್ಸುಯಿದೆಯೆಂದು ತಿಳಿದು ಅದರೊಳಗಣ ಬುದ್ಧಿ ಶಕ್ತಿಯೇ ವಿಜ್ಞಾನಮಯಕೋಶವು.

ಆನಂದಮಯ ಕೋಶ : ಆ ಬುದ್ಧಿ ವೃತ್ತಿಯನಳಿದು, ಬಾಹ್ಯವೇನೂ ತೋರದೇ ಪ್ರಕೃತಿಗೆ ವಶವಾದ ಆತ್ಮಸುಖವೇ ಆನಂದಮಯ ಕೋಶವು.

ಪಂಚಕೋಶಗಳನ್ನು ಶುದ್ಧ ಮಾಡುವ ವಿವರ : ಅನೇಕ ಜನ್ಮದ ಪುಣ್ಯದಿಂದ ಭಕ್ತಿಯಂಕುರಿಸಿ, ಶ್ರೀ ಗುರುವನ್ನು ಮೊರೆಹೊಕ್ಕು ಶ್ರೀ ಗುರುವು ದೀಕ್ಷೆಯಿಂದ ತನುವ ಶುದ್ಧ ಮಾಡಿ, ಲಿಂಗವನ್ನು ಸಂಬಂಧಿಸಿ, ಇಂದಿನಿಂದ ಈ ತನುವು ಪ್ರಕೃತಿಗೆ ವಶವಾದ ತನುವಲ್ಲ, ಅನ್ನ ನೀರಿನಿಂದ ಬೆಳೆಯುವ ಕಾಯವಲ್ಲ, ಆಹಾರವನ್ನು ನೀರನ್ನು ಮಂತ್ರದಿಂದ ಶುದ್ಧವ ಮಾಡಿ ಸರ್ವ ಪದಾರ್ಥಗಳನ್ನು ಸಾವಧಾನದಿಂದ ಲಿಂಗಾರ್ಪಿತವ ಮಾಡಿ, ಲಿಂಗಭೋಗೋಪ ಭೋಗಿಯಾದಲ್ಲಿ ಅನ್ನಮಯ ಕೋಶ ಕೆಟ್ಟಿತು.

ಗುರುವು ಉಪದೇಶಿಸಿದ ಮಂತ್ರವನ್ನು ಅನಿಮಿಷ ದೃಷ್ಟಿಯಿಂದ ಲಿಂಗದಲ್ಲಿ ನಿಲಿಸಿ, ಲಿಂಗದ ಶ್ವಾಸೋಛ್ವಾಸವಾಗಿ ಅಳವಟ್ಟು, ಪ್ರಾಣ ಲಿಂಗವಾಗಿ, ಲಿಂಗ ಪ್ರಾಣಿಯಾದಲ್ಲಿ ಪ್ರಾಣಮಯ ಕೋಶವು ಕೆಟ್ಟಿತ್ತು. ಅನಿಮಿಷ ದೃಷ್ಟಿಯಿಂದ, ಲಿಂಗದ ನೋಟ ಸ್ಥಿರವಾಗಿ, ಲಿಂಗ ಕಳೆ ನೇತ್ರದಲ್ಲಿ ಸಂಬಂಧಿಸಿ, ನೇತ್ರದ ಕಳೆ ಮನಸ್ಸಿನಲ್ಲಿ ಸ್ಥಿರವಾಗಿ ಅಳವಟ್ಟು, ಮನೋ ಮಧ್ಯದಲ್ಲಿ ಲಿಂಗವು ನೆಲೆಗೊಂಡು ಮನವೇ ಲಿಂಗವಾದಲ್ಲಿ ಮನೋಮಯಕೋಶ ಕೆಟ್ಟಿತ್ತು. ಲಿಂಗ ಜ್ಞಾನವು ಸ್ಥಿರಗೊಂಡು, ಜ್ಞಾತೃ, ಜ್ಞಾನ, ಜ್ಞೇಯಗಳೆಲ್ಲವೂ ಪರಮ ಜ್ಞಾನದಲ್ಲಿ (ಲಿಂಗ ಜ್ಞಾನದಲ್ಲಿ) ಅಡಗಿ, ಲಿಂಗ ಜ್ಞಾನವು ಸ್ಥಿರಗೊಳ್ಳಲು ವಿಜ್ಞಾನಮಯ ಕೋಶವು ಕೆಟ್ಟಿತ್ತು. ಲಿಂಗ ಜ್ಞಾನದ ಆನಂದದಲ್ಲಿ ಕಾಯಕ, ದಾಸೋಹದಲ್ಲಿ ನಿಂದು, ಲಿಂಗಾನಂದದ ಮಹಾ ಬೆಳಗಿನಲ್ಲಿ ಓಲಾಡುತ್ತಾ, ಆನಂದದ

ಪ್ರಕಾಶದಲ್ಲಿರಲು ಆನಂದಮಯ ಕೋಶ ಕೆಟ್ಟಿತ್ತು. ಇಂತೀ ಪಂಚಕೋಶಗಳ ಗುಣವಳಿದು ಲಿಂಗಗುಣ ಅಳವಟ್ಟು ನಿಂದ ಶರಣರ ಸಂಗದಲ್ಲಿರಿಸಿ ರಕ್ಷಿಸಯ್ಯಾ ಶ್ರೀ ಮತ್ಶೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ಷಡ್‌ಭ್ರಮೆಗಳು ಅವುಗಳ ನಿವಾರಣೆ

ಷಡ್‌ಭ್ರಮೆಗಳು : ಜಾತಿ, ವರ್ಣ, ಆಶ್ರಮ, ಕುಲ, ಗೋತ್ರ, ನಾಮ.

ಜಾತಿ ಭ್ರಮೆ : ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಇವು ನಾಲ್ಕು ಜಾತಿಭ್ರಮೆ.

ವರ್ಣ ಭ್ರಮೆ : ವರ್ಣ ಹದಿನೆಂಟರೊಳಗೆ ಶ್ರೇಷ್ಠರೆಂಬುದು ವರ್ಣ ಭ್ರಮೆ.

ಆಶ್ರಮ ಭ್ರಮೆ : ಬ್ರಹ್ಮಾಚಾರಿ, ಗೃಹಸ್ಥ, ವಾನಪ್ರಸ್ಥ, ಸನ್ಯಾಸಿ, ಕುಟೀಚ, ಅವಧೂತವೆಂದು ಹೋರಾಡುವುದು ಆಶ್ರಮ ಭ್ರಮೆ.

ಕುಲಭ್ರಮೆ : ತಾವು ಯಿರುವ ಕುಲಗಳೇ ವಿಶೇಷವೆಂದು ಭ್ರಮಿಸುವುದು. ತಾವು ಹುಟ್ಟಿದ ಜಾತಿಗಳೇ ಶ್ರೇಷ್ಠವೆಂದು ಒಳ ಭೇದಗಳನ್ನು ಮಾಡುವುದು, ತಮ್ಮ ಕುಲಾವಳಿಯೇ ಶ್ರೇಷ್ಠವೆಂದು ಭ್ರಮಿಸುವುದು ಕುಲಭ್ರಮೆ.

ಗೋತ್ರಭ್ರಮೆ : ಕಶ್ಯಪ, ಭಾರದ್ವಾಜ, ಕಣ್ವ ಮೊದಲಾದ ಋಷಿಗಳ ಮೂಲವನ್ನು ಹೇಳುವುದು ಗೋತ್ರಭ್ರಮೆ.

ನಾಮಭ್ರಮೆ : ನಾರಾಯಣ, ಬ್ರಹ್ಮ ಮೊದಲಾದ ಹೆಸರುಗಳನ್ನು ಶ್ರೇಷ್ಠವೆಂದು ಹೇಳುವುದು ನಾಮಭ್ರಮೆ. ತಮ್ಮ ತಮ್ಮ ಅಭಿದಾನದ ಹೆಸರುಗಳೇ ಶ್ರೇಷ್ಠವೆಂದು ಭ್ರಮಿಸುವುದು ಈ ಪ್ರಕಾರದಿಂದ ಹೇಳಲ್ಪಡುವುದು ನಾಮಭ್ರಮೆಗಳು.

ಮಾನವನಿಗೆ ಅನೇಕ ಜನ್ಮದ ಪುಣ್ಯದಿಂದ ಭಕ್ತಿ ಸಂಜನಿಸಿ ಶ್ರೀ ಗುರುವಂ ಮೊರೆಹೋಗಲು ಶ್ರೀ ಗುರುವು ದೀಕ್ಷೆಯ ಮಾಡಿ ಲಿಂಗವಂ ಸಂಬಂಧಿಸಿ, ನೀನು ಸಾಕ್ಷಾತ್ ಲಿಂಗ ಸ್ವರೂಪನೆಂದು ತಿಳುಹಲು, ಅಂದಿನಿಂದಲೂ ಲಿಂಗದ ಜಾತಿಯೆಂದು ಆಚರಿಸುವನಾಗಿ, ಜಾತಿ ಭ್ರಮೆ ಹೋಯಿತ್ತು.ಅಂಗದ ಮೇಲೆ ಲಿಂಗವ ಸಂಬಂಧಿಸಿದ ಮೇಲೆ ತಾನು ಲಿಂಗದ ವರ್ಣವೆಂದು ಆಚರಿಸುವನಾಗಿ ವರ್ಣಭ್ರಮೆ ಹೋಯಿತ್ತು. ಅಂಗದಲ್ಲಿ ಲಿಂಗ ಸಂಬಂಧಿಸಿವರೆಲ್ಲರೂ ಸಾಕ್ಷಾತ್ ಪರಮಾತ್ಮನೆಂದು ಅವರೇ ಹಿರಿಯರೆಂದೂ ತಾನು ಅವರ ಸೇವಕನೆಂದು ನಡೆಯುವನಾಗಿ, ಆಶ್ರಮ ಭ್ರಮೆ ಹೋಯಿತ್ತು. ಅಂಗದ ಮೇಲೆ ಲಿಂಗವ ಸಂಬಂಧಿಸಿದ ಮೇಲೆ ಲಿಂಗದ ಕುಲವೆಂದು ಹೇಳುವನಾಗಿ, ಕುಲಭ್ರಮೆ ಹೋಯಿತ್ತು. ಬಸವಣ್ಣನವರೇ ಧರ್ಮಸ್ಥಾಪಕರು. ನಾವು ಬಸವಣ್ಣನವರನ್ನೇ ನಮ್ಮ ಗೋತ್ರವೆಂದು, ಲಿಂಗದ ಸೂತ್ರವೆಂದು ಹೇಳುವನಾಗಿ, ಗೋತ್ರದ ಭ್ರಮೆ ಹೋಯಿತ್ತು.

ಅಂಗದ ಮೇಲೆ ಲಿಂಗವನ್ನು ಸಂಬಂಧಿಸಿ ಲಿಂಗವೇ ನೀನು, ನಿನ್ನ ನಾಮವೇ ಮಹಾ ಮಂತ್ರವೆಂದು ಶ್ರೀ ಗುರು ತಿಳಿಹಿದನಾಗಿ, ತನ್ನ ನಾಮ ಶ್ರೀ ಗುರು ಉಪದೇಶಿದ ಮಂತ್ರವೆಂದರಿತವನಾಗಿ ನಾಮಭ್ರಮೆ ಹೋಯಿತ್ತು. ಇಂತೀ ಷಡ್ ಭ್ರಮೆಗಳಳಿದು, ಲಿಂಗದ

ಭ್ರಮೆ ಉಳಿದವರ ಸಂಗದಲ್ಲಿರಿಸಯ್ಯಾ ಶ್ರೀಮತ್ಶೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ಪಂಚಕ್ಲೇಶಗಳು, ಅವುಗಳ ಪರಿಹಾರ

ಅವಿದ್ಯೆ, ಅಸ್ಮಿತೆ, ರಾಗ, ದ್ವೇಷ, ಅಭಿನಿವೇಶ. ಅನಾದಿ ಪ್ರಕೃತಿಯ ಆದಿಯ ಮಾಡಿಕೊಂಡು, ನೀರಿನ ಮೇಲೆ ಪಾಂಸೆ ತೋರುವ ಹಾಗೆ ಆತ್ಮನಾದಿಯ ಮಾಡಿಕೊಂಡು ತೋರುವುದೇ ಅನಾದಿ ಮಾಯೆಯು. ಈ ಮಾಯಾ ಸಂಬಂಧವಾದ ಹೊನ್ನು, ಹೆಣ್ಣು, ಮಣ್ಣು, ಪುತ್ರ, ಮಿತ್ರ ಕಳತ್ರಾದಿಗಳ ಮೇಲಣ ಮೋಹವು ಹುಟ್ಟುವುದಕ್ಕೆ, ಈ ಸಂಸ್ಕೃತಿಗೆ ಪಂಚಕ್ಲೇಶಗಳೇ ಮೂಲವು.

ಅವಿದ್ಯೆ : ಪ್ರಥಮದಲ್ಲಿ ಅವಿದ್ಯೆಯೇ ಕಾರಣ.

ತಾನು ಸತ್ ಚಿತ್ ಸ್ವರೂಪನೆಂಬುದ ಕೆಡಿಸಿ ನಿತ್ಯಾನಂದ ಸುಖಮಂ ಮರೆಯಿಸಿ, ಎಡೆಬಿಡುವಿಲ್ಲದೆ, ನಿಜದರುಹೇ ತಾನೆಂಬುದ ಮರೆಸಿ ನಾನು ಜೀವನು, ನಾನು ಸಂಸಾರಿ, ನಾನು ಪಶುವು, ನಾನು ಪಾಶಬದ್ಧನು ಎನಿಸುವ ಅಜ್ಞಾನವೇ ಅವಿದ್ಯೆಯು.

ಅಸ್ಮಿತೆ : ಈ ಅಜ್ಞಾನದಿಂದ ತೋರುವ ಸಂಸಾರದ ವಿಷಯ ಸುಖವೇ ತಾನೆಂದು ತನ್ನವೆಂದು ಬಿಡದೆ, ಅಹಂಭಾವದ ತೊಡಕಿನ ಸುಖವೇ ಅಸ್ಮಿತೆ.

ರಾಗ : ಇಂತೀ ವಿಷಯ ಸುಖಮಂ ಮೆಚ್ಚಿ ಬಿಡಲಾರದೇ ಚಿಂತಿಸುವ ಬುದ್ಧಿಯಿಂದ ಅವುಗಳ ಅತಿಶಯ ಪ್ರೀತಿಯಿಂದಿರುವುದೇ ರಾಗ.

ದ್ವೇಷ : ಇಂತೀ ಸಂಸಾರದ ಪ್ರೀತಿಯಿಂದ ಇರುವಾಗ ಆರಾದರೂ ತನ್ನ ಪ್ರೀತಿಗೆ ಅಡ್ಡ ಬಂದರೆ, ಅವರ ಮೇಲೆ ದ್ವೇಷವು ಹುಟ್ಟುವುದು.

ಅಭಿನಿವೇಶ : ಇಂತಿವು ಹಲವು ಪ್ರಕಾರದ ವಿಷಯ ಸುಖಮಂ ಮೆಚ್ಚಿ, ಬಿಡಲಾರದ ಮನದ ದುಃಖವೇ ಅಭಿನಿವೇಶವೆನಿಸುವುದು. ಇಂತೀ ಪಂಚಕ್ಲೇಶವೇ ಸರ್ವಜೀವರುಗಳಲ್ಲಿಯೂ ಬೆಳೆದು, ಪಲ್ಲವಿಸಿ ಹುದುಗಿಕೊಂಡಿರ್ಪುದು.

ಪಂಚಕ್ಲೇಶಗಳ ಪರಿಹಾರ

ಮಾನವನಿಗೆ ಅನೇಕ ಜನ್ಮದ ಪುಣ್ಯದಿಂದ ನಾನಾರು ಎಂದು, ಎನಗೀ ದೇಹ ಬಂದ ಪರಿಯಾವುದು? ಮುಂದೆ ಎಯ್ದುವ ಗತಿ ಯಾವುದು? ಎಂಬುವ ವಿವೇಕ ತಲೆದೋರಿದಾಗ ಭವ ಬಂಧನವೇ ಕಾರಣವೆಂದು, ಈ ಭವಬಂಧ ವಿಮೋಚನೆಗೆ ಮುಖ್ಯ ಮಾರ್ಗ ಯಾವುದು? ಎಂದು ವಿವೇಚಿಸಿ, ಶ್ರೀ ಗುರುವ ಮೊರೆಹೊಗಲು, ಶ್ರೀ ಗುರುವು ಭವಬಂಧಕ್ಕೆ ಹೆದರಬೇಡಾ ನೀನು ಸಾಕ್ಷಾತ್ ಪರವಸ್ತುವು ಸತ್ಯನು, ನಿತ್ಯನು, ಚಿತ್‌ಸ್ವರೂಪನು ಶಾಶ್ವತನು ಎಂದು ತಲೆಯ ಮೇಲೆ ಅಭಯಹಸ್ತವನ್ನಿಟ್ಟು ಭಾವಲಿಂಗವನ್ನು ಸಂಬಂಧಿಸಿ, ನಿರಾಕಾರ ಲಿಂಗವೇ ನೀನು ನಿನ್ನ ನಾಮವೇ ಮಂತ್ರವೆಂದು ಶ್ರೋತ್ರದಲ್ಲಿ ಉಪದೇಶಿಸಿ, ಮನದಲ್ಲಿ ಪ್ರಾಣಲಿಂಗವನ್ನು ಸ್ಥಾಪನೆ ಮಾಡಿ, ವಾಯು ಪ್ರಾಣ, ಪ್ರಾಣವಾಯುವಾಗಿದ್ದುದ ಕಳೆದು, ಲಿಂಗ ಪ್ರಾಣವಾಗಿ ಅಳವಟ್ಟು, ಪ್ರಾಣಲಿಂಗದ ಕಳೆಯನ್ನೇ ನೇತ್ರದಲ್ಲಿ ಸಂಬಂಧಿಸಿ, ನೇತ್ರದಿಂದ ಕರಕಮಲಕ್ಕೆ, ಸತ್, ಚಿತ್,

ಆನಂದ ಸ್ವರೂಪನಾದ ಬೆಳಗನ್ನೇ ಮೂರ್ತಗೊಳಿಸಲು, ಕರಸ್ಥಲದ ಲಿಂಗದಿಂದ ಲಿಂಗ ಮುಂತಾಗಿ ಚರಿಸುವ ಆಚರಣೆಯ ಲಿಂಗ ಚಿದ್ಬೆಳಗಿನಲ್ಲಿ ಅನಾದಿಯಿಂದ ತೋರುವ ಅವಿದ್ಯೆಯು ನಾಶವಾಗುವುದು.

ಅವಿದ್ಯೆ ಇನ್ನೊಂದು ವಿಧದಲ್ಲಿ ತಿಳಿಯುವುದು : ಶೂನ್ಯ ತತ್ವದ ವಿಕಾಸವೇ ವಿಶ್ವವೆಂದೂ, ವಿಶ್ವದ ಚಲನವಲನಗಳೇ ಮಹಾಲಿಂಗದ ಕ್ರಿಯೆಗಳೆಂದೂ, ಮಹಾಲಿಂಗವೇ ತಾನೆಂಬ, ಅರುಹು, ಗುರುಸಂಸ್ಕಾರದಿಂದ ತನ್ನ ಸತ್ಕ್ರಿಯಾಚರಣೆಯಿಂದ ಧೃಡವಾಗಲು ಅವಿದ್ಯೆ ಅಳಿವುದು.

ಅಸ್ಮಿತೆ : ಮಹಾಲಿಂಗದ ಗರ್ಭಾಂಬುಧಿಯೊಳ್ ತಾನಿರುವೆನು. ಒಳಗು-ಹೊರಗು ಸರ್ವವೂ ಮಹಾಲಿಂಗದ ಚಿತ್ಪ್ರಕಾಶವೇ ಎಂದರಿತಲ್ಲಿ ಅಸ್ಮಿತೇ ಎಂಬ ಕ್ಲೇಶ ಕೆಡುವುದು.

ರಾಗ : ಸರ್ವವೂ ಲಿಂಗವಿರಿಸಿದಂತೆ ತನ್ನಿರುವು ಲಿಂಗವು ನುಡಿಸದಂತೆ ನುಡಿಯುವುದು. ಲಿಂಗ ಚೇತನವು ನಡೆಸಿದಂತೆ ನಡೆಯುವುದು, ಲಿಂಗವಾಡಿಸಿದಂತೆ ಆಡುವುದೆಂದರಿತು ಆಚರಿಸಿದಲ್ಲಿ ರಾಗವೆಂಬ ಕ್ಲೇಶ ಅಳಿವುದು.

ದ್ವೇಷ : ಸರ್ವವೂ ಲಿಂಗಯ್ಯನದೇ, ಸರ್ವಚೇತನದ ಕ್ರಿಯೆಗಳೆ ಲಿಂಗದವು. ಆದರೆ ಪರಮಾತ್ಮನು ಸರ್ವದರಲ್ಲಿದ್ದರೂ ಸರ್ವವೂ ಪರಮಾತ್ಮನಲ್ಲ. ಎಲ್ಲಿ ಶಿವಭಕ್ತಿ ಶಿವಜ್ಞಾನ (ಲಿಂಗಜ್ಞಾನ)ದ ಆಚರಣೆಯಿರುವುದೋ ಅಲ್ಲಿ ಪರಮಾತ್ಮನಿರುವನೆಂದು ತಿಳಿಯುವುದು ಲಿಂಗಭಕ್ತಿ. ಲಿಂಗ ಜ್ಞಾನವುಳ್ಳ ಶರಣರೇ ಲಿಂಗಸ್ವರೂಪರೆಂದು ಭಕ್ತಿಯಿಂದ ಕಿಂಕುರ್ವಾಣತೆಯಿಂದ ಆಚರಿಸಿದಲ್ಲಿ ದ್ವೇಷವಳಿವುದು.

ಅಭಿನಿವೇಶ : ಶಿವಭಕ್ತಿ (ಲಿಂಗಭಕ್ತಿ) ಶಿವಜ್ಞಾನವುಳ್ಳ ಶರಣರೇ ಸಾಕ್ಷಾತ್‌ಲಿಂಗ ಸ್ವರೂಪರೆಂದು ಧೃಡವಿಡಿದು ಸತ್ಕಾಯಕ ದಾಸೋಹದಲ್ಲಿ ಆಚರಿಸುತ್ತಾ, ತಾನೆಂಬುದು ಮರೆದು ಲಿಂಗ ತಾನೆಂದು ತಿಳಿದು ಆಚರಿಸಿದಲ್ಲಿ ಅಭಿನಿವೇಶವಳಿವುದು.

ಪಂಚಾಗ್ನಿಗಳು

ಉದರಾಗ್ನಿ, ಮಂದಾಗ್ನಿ, ಕಾಮಾಗ್ನಿ, ಶೋಕಾಗ್ನಿ, ವಡಬಾಗ್ನಿ ಇವು ಪಂಚಾಗ್ನಿಗಳೆಂದು ಹೇಳುವರು.

ಉದರಾಗ್ನಿ : ಆತ್ಮನು ಶರೀರದಿಂದ ಊಟ ಮಾಡಿದಂಥ ಅನ್ನ ಪಾನಾದಿಗಳನ್ನು ಜೀರ್ಣೀಕರಿಸಿ ಒಡಲು ತಾಪಿಸುವಂತಹ ತಾಪವೇ ಉದರಾಗ್ನಿಯು.

ಮಂದಾಗ್ನಿ : ಶರೀರಕ್ಕೆ ಶೈತ್ಯವಾವರಿಸಿ ಹಸಿವು, ತೃಷೆಗಳು ನಿಂದು ಮಂದವಾದ ನಿರ್ದೀಪನ ತಾಪವೇ ಮಂದಾಗ್ನಿಯು.

ಕಾಮಾಗ್ನಿ : ವಿಷಯ ವಿಕಾರದ ವಿರಹ ಸಂತಾಪವೇ ಕಾಮಾಗ್ನಿಯು.

ಶೋಕಾಗ್ನಿ : ನಾನಾ ಪ್ರಕೃತಿ ಜೀವಿಯು, ಪ್ರಕೃತಿಗೆ ವಶವಾಗಿ, ವಿಷಯಗಳ ಬಯಕೆಗಾಗಿ ಚಿಂತಿಸುವ, ಜೀವನ ತಾಪವೇ ಶೋಕಾಗ್ನಿಯು.

ವಡಬಾಗ್ನಿ : ಕೊನೆಗೆ ಮಹೇಶ್ವರ ಜ್ವರದ ತಾಪವು, ಮೃತ್ಯುವಿನ ಜ್ವರವೇ ವಡಬಾಗ್ನಿಯೆಂದು ಹೇಳುವರು.

ಇವೇ ಪಂಚಾಗ್ನಿಗಳ ಭೇದವು. ಉದರಾಗ್ನಿ ವೆಗ್ಗಳಿಸಿದರೆ ಅನ್ನ ಪಾನಾದಿಗಳ ತೆಗೆದುಕೊಂಡಲ್ಲಿ ಪರಿಹಾರವಪ್ಪುದು. ಮಂದಾಗ್ನಿ ವೆಗ್ಗಳಿಸಿದರೆ ಕಷಾಯ ಔಷಧಿಗಳಂ ತೆಗೆದುಕೊಂಡಲ್ಲಿ ಪರಿಹಾರವಪ್ಪುದು. ಕಾಮಾಗ್ನಿ ವೆಗ್ಗಳಿಸಿದರೆ ವಿಷಯದ ತೃಷ್ಣೆಗೆ ಬಯಸಿದ ಸ್ತ್ರೀಯರ ಸಂಪರ್ಕದಿಂದ ಕಾಮಾಗ್ನಿ ಪರಿಹಾರವಪ್ಪುದು. ಕೋಪಾಗ್ನಿ ವೆಗ್ಗಳಿಸಿದರೆ ಹೋದಂತಹ ಚಿಂತಿಸುವ ವಸ್ತುಗಳು ಮರಳಿ ದೊರಕೊಂಡಲ್ಲಿ ಪರಿಹಾರವಪ್ಪುದು. ವಡಬಾಗ್ನಿ ವೆಗ್ಗಳಿಸಿದಲ್ಲಿ ಪ್ರಾಣವೇ, ಪ್ರಾಯಶ್ಚಿತ್ತವಲ್ಲದೆ, ಮರಳಿ ಅದಕ್ಕೆ ಪ್ರಾಯಶ್ಚಿತ್ತವಿಲ್ಲ. ಮಾನವನಿಗೆ ಅನೇಕ ಜನ್ಮದ ಪುಣ್ಯದಿಂದ ಭಕ್ತಿಯಂಕುರಿಸಿ ಶ್ರೀ ಗುರುವಂ ಮೊರೆಹೋಗಲು ಶ್ರೀ ಗುರುವು ಸಂಸ್ಕಾರದಿಂದ ಲಿಂಗಮಂ ಸಂಬಂಧಿಸಿ ಲಿಂಗಾರ್ಪಿತದಿಂದ ಪ್ರಸಾದವ ಮಾಡಿ ಆಚರಿಸುವನಾಗಿ ಪ್ರಸಾದ ಭೋಗೋಪಭೋಗಿಯಾಗಿ ಆಚರಿಸಿದಲ್ಲಿ ಉದರಾಗ್ನಿ ಹೋಯಿತ್ತು. ಲಿಂಗಭೋಗೋಪ ಭೋಗಿಯಾಗಿ ಪ್ರಸಾದಕಾಯನಾಗಿ ಆಚರಿಸಿದಲ್ಲಿ ಮಂದಾಗ್ನಿಯಳಿಯಿತ್ತು. ಅಷ್ಟಾವರಣ ನಿಷ್ಠೆಯಿಂದಾ, ಲಿಂಗ ನಿಷ್ಠೆಯಿಂ, ಲಿಂಗ ಕಾಮಿಯಾದಲ್ಲಿ ಕಾಮಗ್ನಿಯಳಿಯಿತ್ತು. ವಿಷಯ ನಿಷ್ಠೆಯಳಿದು, ಲಿಂಗ ನಿಷ್ಠೆಯಿಂ ಲಿಂಗದಲ್ಲಿ ಕೊರಗಿ, ಲಿಂಗ ನಿಷ್ಠೆಯೆಡೆಗೊಂಡಲ್ಲಿ ಶೋಕಾಗ್ನಿಯಳಿಯಿತ್ತು. ಸರ್ವಾಂಗದಲ್ಲಿ ಲಿಂಗ ಪ್ರಭೆಯೊಳಗೆ ಲೀಯತೆಯನ್ನು ಪಡೆದು ಸಾಮರಸ್ಯ ಪಡೆದಲ್ಲಿ ವಡಬಾಗ್ನಿಯಳಿಯಿತ್ತು. ಪಂಚಲಿಂಗಗಳ ಪ್ರಭೆಯಲ್ಲಿ ಅಡಗಿರುವ ಸದ್ ಭಕ್ತರ ಸಂಗದಲ್ಲಿರಿಸಯ್ಯಾ ಶ್ರೀಮತ್ಶೂನ್ಯ ಸಿಂಹಸನಾಧೀಶ್ವರ ನಿರಂಜನ ಸಂಗಮನಾಥಾ.

ಅಂಗ ಚತುಷ್ಟಯಗಳು

ಅಂಗ, ಪ್ರತ್ಯಾಂಗ, ಸಾಂಗಾಂಗ, ಉಪಾಂಗ, ಇವು ಅಂಗಚತುಷ್ಟಯಂಗಳು.

ಇವಕ್ಕೆ ವಿವರ : ಜೀವನು ಆತ್ಮನು ಹುಟ್ಟುವಲ್ಲಿಯೂ ಬೆಳೆಯುವಲ್ಲಿಯೂ, ಆಯಾಯವಾದ ಅಂಗಂಗಳಾಗಿರುತ್ತಿಹವು. ಅಲ್ಲಿ ಶಿರಸ್ಸು, ಉರದ್ವಯ, ಭುಜದ್ವಯ, ಇಂತಿವು ಅಂಗಗಳು. ವದನ, ನಾಸಿಕ, ಕರ್ಣ, ಅಧರ, ಕಂಗಳು, ಅಂಗುಲಿಗಳು, ಇಂತಿವು ಪ್ರತ್ಯಾಂಗಗಳು. ಇವುಗಳು ಊನವಾದಲ್ಲಿ ಆತ್ಮನು ಘಟವ ಬಿಟ್ಟು ಹೋಗದೆ, ಮತ್ತೊಂದು ಅಭಿದಾನವ ತಾಳಿಗೊಂಡು ಘಟದೊಳಗೆ ಜೀವಿಸಿಕೊಂಡಿರುತ್ತಿಹನು.

ಕರಣ ಚತುಷ್ಟಯಗಳು : ಚಿತ್ತ , ಬುದ್ಧಿ , ಅಹಂಕಾರ, ಮನಕರಣಗಳು, ಸಾಂಗಾಂಗಳು. ಇವು ಆತ್ಮನೊಡನೆ ಕೂಡಿದಂಗಗಳಾಗಿರುತ್ತಿಹವು. ಆತ್ಮನೊಡನೆ ಹುಟ್ಟಿ, ಆತ್ಮನು ಘಟವ ಬಿಟ್ಟು ಹೋಗುವಾಗಲೂ, ಆತ್ಮನೊಡನೈದಿ ಹೋಗುತ್ತಿಹವು. ವಸ್ತ್ರ, ಆಭರಣ, ಅನುಲೇಪನಾದಿ ಶೃಂಗಾರವೇ ಉಪಾಂಗಗಳು. ಇಂತಿವು ಅಂಗ ಚತುಷ್ಟಯಂಗಳು. ಅಂಗ ಚತುಷ್ಟಯಂಗಗಳಿಗೆ ಲಿಂಗಸಂಬಂಧದಿಂದ ಲಿಂಗವಾಗಿ ಪರಿವರ್ತಿಸುವುದು.

ತನುತ್ರಯಂಗಳು : ಸ್ಥೂಲತನು, ಸೂಕ್ಷ್ಮತನು, ಕಾರಣತನು, ಇವು ತನುತ್ರಯಂಗಳು.

ಇವಕ್ಕೆ ವಿವರ : ಪೃಥ್ವ್ಯಾದಿ ಐದು ತತ್ವಗಳಿಂದಾದುದೇ ಸ್ಥೂಲ ತನು. ಕರ್ಮೇಂದ್ರಿಯಗಳೈದು, ಜ್ಞಾನೇಂದ್ರಿಯಗಳೈದು, ವಾಯುಗಳೈದು, ಇವು ಹದಿನೈದು. ಮನ ಬುದ್ಧಿ ಸೇರಿ ಹದಿನೇಳು ತತ್ವದಿಂದ ಕೂಡಿದ್ದು ಸೂಕ್ಷ್ಮ ಶರೀರವು. ಲಿಂಗ ತನು ಅಹಂಕಾರ, ಚಿತ್ತ ಮೂಲಾತ್ಮ ಇವು ಕಾರಣ ತನು.

ಇನ್ನೊಂದು ಪ್ರಕಾರದಿಂ ಪೇಳಲ್ಪಡುಗಂ : ಪೃಥ್ವಿ, ಅಪ್ಪುಗಳೆರಡು, ತತ್ವಗಳಿಂದ ವ್ಯಕ್ತೀಕರವಾದುದೇ, ಸ್ಥೂಲ ತನು. ಅಗ್ನಿ, ವಾಯು ತತ್ವಗಳಿಂದ ವ್ಯಕ್ತೀಕರವಾದುದೇ ಸೂಕ್ಷ್ಮ ತನು. ಆಕಾಶ, ಆತ್ಮನು ಅಹಮಿಕೆ ಎರಡು ತತ್ವಗಳಿಂದ ವ್ಯಕ್ತೀಕರವಾದುದೇ ಕಾರಣ ತನು.

ಸರ್ವಾಧಾರಮಯವಾದ ಧರಣೀ ತತ್ವವು ಸರ್ವಪಾನ್ಯ, ಪ್ರಕ್ಷಾಳನ ರೂಪಮಾದ ಉದಕ ತತ್ವಂಗಳೆರಡೂ ಕೂಡಿ, ಸ್ಥೂಲ ದೇಹವು ಕಾಯ ಸ್ವರೂಪವಾಗಿರುತ್ತಿಹವು. ದಾಹಕ ಪಾಚಕ ರೂಪವಾದ (ಧನಂಜಯ) ತತ್ವವು ಸರ್ವ ಚಾಂಚಲ್ಯಮಯವಾದ (ವಾಯು) ತತ್ವವು ಸರ್ವಾಕಾಶ ಪ್ರದಮಾದ ಅಂಬರ ತತ್ವವು ಇವು ಮೂರು ತತ್ವಂಗಳಲ್ಲಿ ಜೀವನು ಜೀವಸ್ವರೂಪನಾಗಿರುತಿಪ್ಪನು. ಆತ್ಮನು ಘಟದೊಳಗೆ ಜೀವಿಸಿರುವ ಪರ್ಯಂತರವು ಪಂಚಭೂತಂಗಳು ಕೂಡಿ ಒಂದು ದೇಹವೆಂಬಂತೆ ಕಾಣಬರುತ್ತಿಹುದು. ಆತ್ಮನು ಘಟವ ಬಿಟ್ಟು ಹೋದ ಬಳಿಕ ಪೃಥ್ವಿ ತತ್ವ ಸಂಬಂಧವಾದ ಶಲ್ಯಾದಿ ಅಪ್ಪು ತತ್ವ ಸಂಬಂಧವಾದ ಶ್ಲೇಷ್ಮಾದಿ ಐದು ತತ್ವಗಳು, ಪೃಥ್ವಿಯಲ್ಲಿಯೇ ಉಳಿಯುವವು. ಅಗ್ನಿ ತತ್ವ ಸಂಬಂಧವಾದ ಕ್ಷುಧಾದಿ ಐದು ಗುಣಗಳು ವಾಯು ತತ್ವ ಸಂಬಂಧವಾದ ಚಲನಾದಿ ಐದು ಗುಣಗಳು ಆಕಾಶ ತತ್ವ ಸಂಬಂಧವಾದ ರಾಗಾದಿ ಐದು ಗುಣಗಳು ಆತ್ಮನೊಡನೈದಿವವು. ಅವು ಕಾರಣವಾಗಿ ಎರಡು ತತ್ವಗಳು ಕಾಯ ಸ್ವರೂಪ, ಮೂರು ತತ್ವಗಳು ಜೀವ ಸ್ವರೂಪೆಂದು ತಿಳಿದುಕೊಂಬುದು ತತ್ವ ಜ್ಞಾನಿಗಳು. ಸ್ಥೂಲತನುವಿನಲ್ಲಿ ಇಷ್ಟಲಿಂಗ ಸಂಬಂಧವಾಗಿ ಸೂಕ್ಷ್ಮತನುವಿನಲ್ಲಿ ಪ್ರಾಣಲಿಂಗ ಸಂಬಂಧವಾಗಿ, ಕಾರಣ ತನುವಿನಲ್ಲಿ ಭಾವಲಿಂಗ ಸಂಬಂಧವಾಗಿ ಶಿವಶರಣರು ಆಚರಿಸುವರು.

ಕರ್ಮತ್ರಯಗಳು

1. ಆಗಾಮಿಕರ್ಮ, 2. ಸಂಚಿತ ಕರ್ಮ, 3. ಪ್ರಾರಬ್ಧ ಕರ್ಮ ಎಂಬಿವು ಮೂರು ಕರ್ಮಗಳು.

ಆಗಾಮಿಕರ್ಮ: ಮಾನವನು ಹುಟ್ಟಿದಂದಿನಿಂದ, ಶರೀರದಿಂದಲೂ ಮಾತಿನಿಂದಲೂ, ಮನಸ್ಸಿನಿಂದಲೂ ಯಾವುದಾದರೊಂದು ಕ್ರಿಯೆ ನಡೆಯುತ್ತಲೇ ಹೋಗುವುದು. ಶರೀರವೇ ನಾನೆಂದು ಕ್ರಿಯೆಗಳನ್ನು ಮಾಡುವನು. ಶರೀರವೇ ನಾನೆಂದು ಮಾತನಾಡುವನು. ಶರೀರವೇ ತಾನೆಂದು ಮನಸ್ಸಿನಲ್ಲಿ ನೆನೆಯುತ್ತಾ, ಸಕಲ ವ್ಯವಹಾರಗಳನ್ನು ಮಾಡುವನು.

ವಚನ 1 : ಮನೋ ವಾಕ್ಕಾಯದಿಂದ ಹುಟ್ಟಿದ ಕರ್ಮ ತೊಟ್ಟನೇ ತೊಳಲಿಸಿ ಬಳಲಿಸಿದಲ್ಲದೆ ಬಿಡದು. ಕರ್ಮವ ಮೀರಿ ನಡೆವ ಬಲ್ಲಿದನಾರನೂ ಕಾಣೆ. ಬೊಮ್ಮಾದಿಗಳೆಲ್ಲಾ ಕರ್ಮಕಿಕ್ಕಿಡಾದರು, ಕರ್ಮವೂ ಅಜಹರಿಗಳ ಬಾರದ ಭವದಲ್ಲಿ ಬರಿಸಿತ್ತು. ಕಾಣದ ದುಃಖವ

ಕಾಣಿಸಿತ್ತು. ಇನ್ನುಳಿದವರ ಪೇಳಲೇನುಂಟು? ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನ ಆಧೀನವಿಡಿದು ಕಾಣುವ ಕರ್ಮದ ಬಲಹ ನೋಡಾ.

ವಚನ 2 : ಶಿವಭಕ್ತಿ ತತ್ಪರನಾದ ಮಹಿಮನು, ವಿಷಯ ಭ್ರಮೆ, ಪುರುಷ ಪ್ರಯತ್ನವನ್ನು ಬಿಟ್ಟಾಗಳೇ ಆಗಾಮಿ ಕರ್ಮನಾಶವಾಗಿತ್ತು. ಸಂಚಿತ ಕರ್ಮ ವಿಷಯಾಸಕ್ತರಿಗೆ ಪ್ರಾರಬ್ಧವೆನಿಸುವುದು. ಶಿವಧ್ಯಾನೇಕ ಚಿತ್ತರಿಗೆ ಸಂಚಿತ ಕರ್ಮವಿಲ್ಲ. ಅದೇನು ಕಾರಣವೆಂದಡೆ. ಶಿವಜ್ಞಾನಾಗ್ನಿಯಿಂದ ಅದು ಬೆಂದು ಹೋಗುವುದಾಗಿ ಇಚ್ಛಾಪ್ರಾರಬ್ಧವೆಂದು, ಅನಿಚ್ಛಾಪ್ರಾರಬ್ಧವೆಂದು, ಪ್ರಾರಬ್ಧವೆರಡಾಗಿಹುದು. ಪ್ರಾರಬ್ಧ ಕರ್ಮವು ಭೋಗಾದಿಗಳಿಂದ ಕ್ಷಯ ಹೊಂದುವುದಾಗಿ ಅದು ಭೋಗಿಸಿದಲ್ಲದೇ ತೀರದು. ಅನಿಚ್ಛಾಪ್ರಾರಬ್ಧದಿಂದ ಮುಂದೆ ಸುಖವಹುದು. ಇಚ್ಛಾ ಪ್ರಾರಬ್ಧದಿಂದ ದುಃಖವಹುದಾಗಿ, ಆ ದುಃಖದಿಂದಾ ಸಂಸಾರ ವೃಕ್ಷ ಬೇರುಹರಿವುದು. ಸಂಸಾರ ವಿರಕ್ತರಿಗೆ ಹುರಿದ ಬೀಜದಂತೆ ಅಂಕುರ ನಷ್ಟವಾಗಿಹುದು. ಶಿವನೊಡನೆ ಕೂಡಿ ಭೋಗಿಸುವನಾಗಿ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನೆಂಬ ನಿಜವನೈದುವನು.

ವಚನ 3 : ನಿಜವನರಿದು ನಿರ್ಮಲ ಜ್ಞಾನಿಯಾದ ಕರ್ಮರಹಿತ ಶಿವಯೋಗಿ, ಕರ್ಮಕಾಯನಲ್ಲ ಕರ್ಮಭೋಗಿಯಲ್ಲ, ಕರ್ಮಾಧೀನನು ತಾ ಮುನ್ನವೇ ಅಲ್ಲ. ಆದೆಂತೆಂದೊಡೆ ಪರಿಪಕ್ವವಾದ ಹಣ್ಣು ರಸ ತುಂಬಿ, ತೊಟ್ಟು ಕಳೆದ ಬಳಿಕ ಮರಳಿ ವೃಕ್ಷವನಡರಿ ತೊಟ್ಟು ಹತ್ತುವುದೇ ಹೇಳಾ! ಆಗಾಮಿ ಪರಿಪಕ್ವವಾಗಿ ಸಂಚಿತವಾಯಿತ್ತು. ಸಂಚಿತ ಪರಿಪಕ್ವವಾಗಿ ಪ್ರಾರಬ್ಧವಾಯಿತ್ತು. ಇನ್ನು ಕರ್ಮ ಉಂಟೇ ಇಲ್ಲವಾಗಿ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನ ಶರಣರು ಕರ್ಮರಹಿತರು.

ಮಾನವನು ಶರೀರವೇ ತಾನೆಂದು ಮಾತನಾಡುತ್ತಾ, ಶರೀರವೇ ತಾನೆಂದು ನೆನೆಯುತ್ತಾ, ಆಚರಿಸುತ್ತಾ ಹೋದ ಹಾಗೆ, ಒಳ್ಳೆಯದು ಮಾಡಿದರೆ ಪುಣ್ಯ, ಕೆಟ್ಟದು ಮಾಡಿದರೆ ಪಾಪ. ಪುಣ್ಯದಿಂದ ಸುಖವೂ ಪಾಪದ ಫಲದಿಂದ ದುಃಖವೂ ಉಂಟಾಗುತ್ತದೆ. (ಕಷ್ಟಗಳನ್ನು ಅನುಭವಿಸುತ್ತಾನೆ)

ಬೋಳಾದ ತಲೆಯಲ್ಲಿ ರೋಮಂ, ಮೆತಿಸಿದ ಬೆರಳಲ್ಲಿ ಸುಳ್ಳುಗುರುಂ, ಸಲ್ಲೀಲೆಯೊಳು ಬೆಳೆವ ತೆರದಿಂ ಕೋಲಾಹಲಮಿಲ್ಲದೊ ದಗುತಿರ್ಕುಂ ಪುಣ್ಯಂ ಪಾಪಂ ಎಂಬಂತೆ, ನಮಗೆ ಗೊತ್ತಾಗದ ರೀತಿಯಲ್ಲಿ ಕೂದಲು ಮತ್ತು ಉಗುರು ಯಾವ ರೀತಿ ಬೆಳೆಯುವವೋ ಅದರಂತೆ ಪುಣ್ಯ ಪಾಪಗಳು ಬೆಳೆಯುತ್ತಾ ಹೋಗುತ್ತವೆ. ಪುಣ್ಯ ಪಾಪ ಕರ್ಮಗಳಿಂದ ಮಾನವನು ಎಂಭತ್ನಾಲ್ಕು ಲಕ್ಷ ಜೀವರಾಶಿಯಲ್ಲಿ ಹುಟ್ಟುತ್ತಾ, ಸಾಯುತ್ತಾ ಹೋಗುತ್ತಾನೆ. ತನುಗುಣದಿಂದಾ ಶರೀರವೇ ತಾನೆಂದು ಮಾಡುವ ಕ್ರಿಯೆಗಳಿಗೆ ಆಗಾಮಿ ಕರ್ಮವೆಂದು ಕರೆಯುತ್ತಾರೆ. ತನ್ನ ಜೀವಿತವಿರುವವರೆಗೂ ಈ ಕರ್ಮಗಳು ಬೆಳೆಯುತ್ತಾ ಹೋಗುತ್ತವೆ. ಮಾನವನು ತನ್ನ ಜೀವಿತ ಕಾಲದಲ್ಲಿ ಮಾಡಿದ ಕ್ರಿಯೆಗಳು ಮಾತಿನಿಂದ ಆಡಿದವುಗಳೂ. ಮನಸ್ಸು ನೆನೆದಂತಾವುಗಳನ್ನು ಸೂಕ್ಷ್ಮ ಶರೀರದ ಮನಸ್ಸು ಅದನ್ನು ಗ್ರಹಿಸುತ್ತದೆ. ಮನಸ್ಸಿನಿಂದ ಕಾರಣ ಶರೀರದ ಭಾವದಲ್ಲಿ ಬೀಜ ರೂಪವಾಗಿ ಅಡಗಿರುತ್ತದೆ. ನಾವು ಆ ವಿಷಯವನ್ನು ಧ್ಯಾನಕ್ಕೆ ತಂದಾಗ, ಭಾವದಿಂದ ಮನಸಿನ ದ್ವಾರಾ ತನುವಿನಲ್ಲಿ ಮಾತನಾಡುತ್ತೇವೆ. ಶರೀರದ ಅವಧಿ ಮುಗಿದ ಕೂಡಲೇ, ಶರೀರವನ್ನು ಬಿಟ್ಟು ಸೂಕ್ಷ್ಮ ಕಾರಣ ಶರೀರಗಳು, ವಾಯುವಿನಿಂದ ಬಂಧಿಸಿದ ಪ್ರಾಣವಾಯು ಹೋಗುವುದು. ಪ್ರಾಣವಾಯುವಿನಲ್ಲಿರುವ ಆತ್ಮನಲ್ಲಿ ಕೋಟ್ಯಾಂತರ ಜನ್ಮದಿಂ ಸಂಗ್ರಹಿಸಿದ ಪುಣ್ಯ

ಪಾಪದ ಫಲಗಳಿಗನುಗುಣವಾಗಿ ಆಗಾಮಿ ಕರ್ಮವೇ ಸಂಚಿತ ಕರ್ಮವೆಂಬ ಹೆಸರಿನಿಂದಾ ಇರುವದು. ಇವನು ಯಾವ ಜನ್ಮದಲ್ಲಿ ಬರಬೇಕು, ಮನುಷ್ಯರಲ್ಲಿ ಹುಟ್ಟುವುದಾದರೆ ತಾಯಿ ಯಾರು, ತಂದೆ ಯಾರು ಎಂಬುದನ್ನು ನಿರ್ಮಿಸಿಕೊಂಡು ಹುಟ್ಟಿ, ಬಣ್ಣ, ರೂಪ, ನಡೆಗೆ ಶಬ್ದ ಅವಯುವಗಳು ಎಲ್ಲವೂ ಸಂಚಿತ ಕರ್ಮವಶದಿಂದ ಹುಟ್ಟುವನು. ಅಲ್ಲಿಂದ ಮುಂದೆ ಇನ್ನು ಉಳಿದಿರುವ ಕರ್ಮಗಳೇ ಪ್ರಾರಬ್ಧವಾಗಿ ಕಾಲ ಬಂದ ಹಾಗೆ ತಟ್ಟುತ್ತಾ ಹಿಂದಿನ ಪ್ರಾರಬ್ಧ ಫಲಗಳನ್ನು ಅನುಭವಿಸುತ್ತಾ ಮುಂದೆ ಆಗಾಮಿ ಕರ್ಮವನ್ನು ಮಾಡುತ್ತಾ ನಡೆಯುತ್ತಾನೆ. ಆಗಾಮಿ ಕರ್ಮ ಪರಿಪಕ್ವವಾಗಿ ಸಂಚಿತ ಕರ್ಮದಿಂದಾ ಹುಟ್ಟುತ್ತಾನೆ. ಸಂಚಿತ ಕರ್ಮ ಪರಿಪಕ್ವವಾಗಿ ಪ್ರಾರಬ್ಧವನ್ನು ಅನುಭವಿಸುತ್ತಾ ಹೋಗುವನು.

ತನುತ್ರಯಗಳ ಕರ್ಮತ್ರಯಗಳ ನಿವಾರಣೆ

ಮಾನವನಿಗೆ ಅನೇಕ ಜನ್ಮದ ಪುಣ್ಯದಿಂದಾ ಭಕ್ತಿಯಂಕುರಿಸಿ ಶ್ರೀ ಗುರುವಂ ಮೊರೆಹೊಗಲು, ಶ್ರೀ ಗುರುವು ಅಂಗದ ಮಲಿನದ ಗುಣಗಳನ್ನು ಕಳೆದು, ಸ್ಥೂಲ ಶರೀರದಲ್ಲಿ ಲಿಂಗವಂ ಸಂಬಂಧಿಸಿ ಇಂದಿನಿಂದಾ ಲಿಂಗಯ್ಯನ ಶರೀರವೆಂದು ತಿಳಿದು, ಅಂದಿನಿಂದಾ ಸ್ಥೂಲ ಶರೀರವು ಲಿಂಗಯ್ಯನದಾಗಿ ಶುದ್ಧವಾಗುತ್ತದೆ. ಶ್ರೀ ಗುರುವು ಲಿಂಗವೇ ನೀನು, ನಿನ್ನ ನಾಮವೇ ಮಹಾಮಂತ್ರವೆಂದು ಉಪದೇಶಿಸಿದ ಮೇಲೆ, ಮಂತ್ರವು ಜಿಹ್ವೆಯಲ್ಲಿ ಅಂಕುರಿಸಿ ಲಿಂಗ ಮಂತ್ರದ ನೆನಹಿನಿಂದ ನೇತ್ರದಲ್ಲಿ ಲಿಂಗದ ಕಳೆ ಸ್ಥಾಪಿತವಾಗಿ, ಮನದಲ್ಲಿ ಲಿಂಗವು ಸ್ಥಿರವಾಗಿ ಅಳವಟ್ಟು ಸೂಕ್ಷ್ಮ ಶರೀರದ ಮನಸ್ಸು ಪ್ರಾಣಲಿಂಗವಾಗಿ, ಶುದ್ಧವಾಗಿ ಪ್ರಾಣಲಿಂಗದ ಸೂಕ್ಷ್ಮ ಶರೀರವಾಗಿರುವುದರಿಂದಾ, ಸೂಕ್ಷ್ಮ ಶರೀರದ ಮನಸ್ಸು ಪ್ರಾಣಲಿಂಗವೆಂದರಿವುದು. ಶ್ರೀ ಗುರುವು ನೀನು ಸತ್ಯನೂ ಚಿತ್ ಜ್ಯೋತಿ ಸ್ವರೂಪನು ಎಂದು ಅಭಯ ಹಸ್ತವನ್ನಿರಿಸಿ ಭಾವದ ಭ್ರಮೆಗಳನ್ನು ಕಳೆದು ಭಾವದಲ್ಲಿ ಲಿಂಗ ಭಾವನೆಯನ್ನು ನೆಲೆಗೊಳಿಸಿದ ಮೇಲೆ, ಕಾರಣ ಶರೀರ ಭಾವಲಿಂಗವಾಗುವುದು ಎಂದು ಅರಿಯುವುದು. ಸ್ಥೂಲ ತನು ಇಷ್ಟಲಿಂಗಯ್ಯನದಾಗಿ, ಸೂಕ್ಷ್ಮತನು ಪ್ರಾಣಲಿಂಗಯ್ಯನದಾಗಿ, ಕಾರಣ ತನು ಭಾವಲಿಂಗವಾಗಿ ಆಚರಿಸುವುದರಿಂದ ಕರ್ಮವು ನಿರ್ಮಲವಾಗಿ, ಲಿಂಗಯ್ಯನ ಕರ್ಮಗಳಾಗಿ, ಆಗಾಮಿ ಕರ್ಮವಿಲ್ಲವಾಗಿ ಮುಂದೆ ಸಂಚಿತ ಕರ್ಮವಿಲ್ಲ ಈಗ ಸಂಚಿತ ಕರ್ಮದಿಂ ಹಿಂದಿನಿಂದಾ ಬಂದಿರುವುದರಿಂದ ಪ್ರಾರಬ್ಧ ಕರ್ಮ ಲಿಂಗಯ್ಯನದಾಗಿ ಭೋಗಿಸುವನಾಗಿ, ಬಂದದ್ದನ್ನು ಪ್ರಸಾದದ ಸಂತೃಪ್ತಿಯಲ್ಲಿರುವನಾಗಿ ಪ್ರಾರಬ್ಧವು ಇಲ್ಲ, ಲಿಂಗದೊಡನೆ ವ್ಯವಹರಿಸುವನಾಗಿ ಆಗಾಮಿ ಸಂಚಿತ ಪ್ರಾರಬ್ಧ ಕರ್ಮಗಳು ಅಂಟದೇ ಲಿಂಗಾಂಗ ಸಾಮರಸ್ಯವನ್ನು ಪಡೆಯುವನು.

ಗುಣತ್ರಯಂಗಳು

1. ಸತ್ವ, ರಜೋ, ತಮೋಗುಣ ಇವು ಮೂರು ಗುಣತ್ರಯಂಗಳು, ಇವಕ್ಕೆ ವಿವರ: ಸತ್ವಕ್ಕೆ ಶ್ವೇತ ವರ್ಣ, ರಜಕ್ಕೆ ರಕ್ತವರ್ಣ, ತಮೋಗುಣಕ್ಕೆ ಕಪ್ಪು ವರ್ಣ,

ಶ್ಲೋಕ : ಸತ್ಯ ಜ್ಞಾನಂ ತಪೋ, ಮೌನಂ, ತೋಷಂ, ಶಾಂತಿರ್ವಿವೇಕತಾಃ ।
ಉತ್ಸಾಹೋ ನಿಶ್ಚಯೋ ಧೈರ್ಯಂ ಸಾತ್ವಿಕಸ್ಯ ಚ ಲಕ್ಷಣಂ ।

ಸತ್ಯಜ್ಞಾನ, ತಪ, ಮೌನ, ಹರುಷ, ಕ್ಷಮೆ, ಸಾಹಸ, ನಿಶ್ಚಯ, ಧೈರ್ಯ ವಿವೇಕ ಈ ಹತ್ತು ಸಾತ್ವಿಕ ಗುಣಗಳು.

2. ರಜೋಗುಣ : ಗರ್ವಂ ಕ್ರೋಧೋತ್ಸಾಹಂಕಾರೋ ಸತಿಸಂಗ ಪ್ರಳಾಪನಂ ।
ಆಕ್ರಮ್ಯಡಂಭ ಮಾತ್ಸರ್ಯೋ ರಾಜಸಸ್ಯ ಚ ಲಕ್ಷಣಂ ।

ಗರ್ವ, ಕ್ರೋಧ, ಅಹಂಕಾರ ವಿಷಯಾಪೇಕ್ಷೆ, ಅಪ್ರಿಯವಾಚಕ, ಉದ್ಯೋಗ, ಮತ್ಸರ, ರೋಷ, ಇವು ಎಂಟು ರಜೋ ಗುಣಗಳು.

3. ತಮೋಗುಣ :

ಶ್ಲೋಕ : ಅಜ್ಞಾನಂ ಮೋಹ, ನಿದ್ರಾಚ ಚಾಪಲ್ಯಂ ಬುದ್ಧಿಹೀನಂಚ ।
ಪಾಪಿಷ್ಠಂ ಹಿಂಸೆ, ಪರಬಾದತ್ವಂ ತಾಮಸ್ಯ ಲಕ್ಷಣಂ ।

ಅಜ್ಞಾನ, ಮೋಹ, ನಿದ್ರೆ, ಚಾಪಲ್ಯ, ಹೀನವೃತ್ತಿ, ಪರನಿಂದೆ, ಹಿಂಸೆ, ಪಾಪಿಷ್ಠತ್ವ, ಈ ಎಂಟು ತಾಮಸ ಗುಣಗಳು.

ಸಾತ್ವಿಕ ಗುಣಗಳು : ಸತ್ಯ, ನುಡಿದ ಮಾತಿಗೆ ತಪ್ಪದೇ ಹಿಡಿದಾಚರಣೆಯ ಬಿಡದೇ, ಯಥಾಸ್ಥಿತಿಯಾಗಿ ನಡೆಯೊಡನೆ, ಕೂಡಿ ಆಚರಿಸುವುದೇ ಸತ್ಯವು.

ಜ್ಞಾನ : ಕಾಕು ಗೋಷ್ಠಿಗಳನ್ನು ಬಿಟ್ಟು, ಸದಾ ನಿತ್ಯಾನಿತ್ಯಾ ವಿವೇಕದ ಪರಾಂಬರಿಕೆಯೊಡನೆ ಕೂಡಿರುವಂತಹದೇ ಜ್ಞಾನವು.

ತಪ : ಇಂದ್ರಿಯಗಳನ್ನು ನಿಗ್ರಹಿಸಿಕೊಂಡು ಜಿತೇಂದ್ರಿಯನಾಗಿ ಸದಾ ಶಿವಧ್ಯಾನವ ಮುಂದುಗೊಂಡಿರುವಂತಹದೇ ತಪವು.

ಮೌನ: ಕಲಹ ನಾಸ್ತಿಯಾಗಿ ವಾಕ್ ನೇಮವ ಮುಂದುಗೊಂಡು, ಮನನ ಶೀಲವಾಗಿರುವುದೇ ಮೌನವು.

ಹರ್ಷ: ಸುಖ ದುಃಖ ಬಂದು ತಟ್ಟಿದರೂ ಕಂದಿ-ಕುಂದದೇ ಚಿಂತಿಸದೇ ಅಂತರಂಗದಲ್ಲಿ ಲವಲವಿಕೆ ಮುಂದುಗೊಂಡಿರುವಂತಹ ಸಂತೋಷವೇ ಹರ್ಷವು.

ಕ್ಷಮೆ: ಅಂದಲ್ಲಿಯೂ, ಆಡಿದಲ್ಲಿಯೂ, ಕೊಂದಲ್ಲಿಯೂ, ಬಡಿದಲ್ಲಿಯೂ, ಜರಿದಲ್ಲಿಯೂ, ಹೇಯವನಿಕ್ಕಿ ನುಡಿದಲ್ಲಿಯೂ ತಾಳಿಕೊಂಡು ಹೋಗುವಂತಹ ಸರ್ವಸಮತಾ ಭಾವವೆ ಕ್ಷಮೆಯು.

ಸಾಹಸ : ಸಾವಿರ ಮುಖದಲ್ಲಿ ಬಂದ ತೊಂದರೆ, ಕಂಟಕವನ್ನಾದರೂ, ಏಕಮುಖದಲ್ಲಿ, ತೀರ್ಚಿ ಕಳೆವೆನೆಂಬಂತಹ ಸಾಮರ್ಥ್ಯವೇ ಸಾಹಸವು.

ನಿಶ್ಚಯ : ಅಂತರಂಗದಲ್ಲಿ ದೃಢಭಾವ ನಿಶ್ಚಯಗೊಂಡಿರುವುದೇ ನಿಶ್ಚಯವು.

ಧೈರ್ಯ: ಎಂಥಾ ಕಷ್ಟಗಳು ಬಂದರೂ ಹೆದರದೆ ಇರುವಂತಹ ಶ್ರೇಷ್ಠ ದಿಟ್ಟತನವೇ ಧೈರ್ಯವು.

ವಿವೇಕ : ನಡೆವಲ್ಲಿಯೂ, ನುಡಿವಲ್ಲಿಯೂ, ಕೊಡುವಲ್ಲಿಯೂ, ಕೊಂಬುವಲ್ಲಿಯೂ, ಸರ್ವಾವಸ್ಥೆಯಲ್ಲಿಯೂ ವಿಚಾರ ಪರನಾಗಿ ಆಚರಿಸುವುದೇ ವಿವೇಕವು. ಈ ಹತ್ತು ಸಾತ್ವಿಕ ಗುಣಗಳು.

ರಜೋ ಗುಣಗಳು

ಗರ್ವ: ಯಾರಾದರೂ ಜೀಯಾ ಎಂದು ವಿವೇಕವನ್ನು ಹೇಳಿದರೆ ಅಹಂಕಾರಭರಿತನಾಗಿ ಎತ್ತಿದ ಶಿರಸ್ಸುಳ್ಳವನಾಗಿ ನನಗಾರು ಸರಿಯೆಂದು ಇದಿರ ಲೆಕ್ಕಿಸದೇ ಇರುವಂತಹುದೇ ಗರ್ವವು.

ಕ್ರೋಧ : ಈ ಗರ್ವದಿಂದ ಏನು ಪ್ರಯೋಜನ ಎಂದು ಆರಾದರೂ ಸತ್ಪುರುಷರು ತಿಳುವಳಿಕೆ ಹೇಳಲು, ಅವರ ಮೇಲೆ ಕಡು ಕೋಪವ ಮುಂದುಗೊಂಡಿರುವಂತಹುದೇ ಕ್ರೋಧವು.

ಅಹಂಕಾರ : ವಿದ್ಯೆ, ಬುದ್ಧಿ, ಕುಲ, ಛಲ, ಪಂಥ ಪರಾಕ್ರಮದಲ್ಲಿ ನಾನೇ ಶ್ರೇಷ್ಠನೆಂದು ಗರ್ವಿಸುವುದೇ ಅಹಂಕಾರವು.

ವಿಷಯವಾದ : ಪರಮಾತ್ಮನ ಸಂಬಂಧವಾದ ಶಿವಶಾಸ್ತ್ರ, ಸಜ್ಜನರ ಸಹವಾಸಗಳನ್ನು ಬಿಟ್ಟು ಸದಾ ದುರ್ಜನರ ಸಹವಾಸ ಮಾಡುತ್ತಾ, ಸ್ಮರಶಾಸ್ತ್ರಾನುಗ್ರಾಹಕರೊಡನೆ (ಕಾಮಶಾಸ್ತ್ರಗಳೊಡನೆ) ಕೂಡಿರುವುದೇ ವಿಷಯವಾದವು.

ಅಪ್ರಿಯವಾಚಕ : ಯಾರಾದರೂ ಸತ್ಪುರುಷರು ಒಳ್ಳೆಯ ಮಾತುಗಳನ್ನಾಡಿದರೆ ಅದಕ್ಕೆ ವ್ಯತಿರಿಕ್ತವಾಗಿ ನಿನ್ನ ಮಾತು ಎನಗೆ ಸೊಗಸದು ಎಂದು ಸರ್ವರಿಗೂ ಹಿತವಲ್ಲದ ಮಾತುಗಳನ್ನಾಡುವುದೇ ಅಪ್ರಿಯವಾಚಕವೆನ್ನಿಸುವುದು.

ಉದ್ಯೋಗ : ಸದಾ ಒಂದು ವ್ಯವಸಾಯ ವ್ಯವಹಾರದೊಡನೆ ಕೂಡಿಕೊಂಡು ಜೀವನ ಪೋಷಣೆಯ ಕೆಲಸದಲ್ಲಿಯೇ ತೊಡಗಿ ಲಿಂಗಧ್ಯಾನ, ಲಿಂಗಪೂಜೆ, ಲಿಂಗಕ್ರಿಯೆಗಳಿಲ್ಲದೆ ಯಾವುದಾದರೊಂದು ಕೆಲಸಗಳನ್ನು ಮಾಡುತ್ತಿರುವುದೇ ಉದ್ಯೋಗವು.

ಮತ್ಸರ : ತಮ್ಮ ತಮ್ಮಗ್ಗಳಿಗೆ ಯಾವುದಾದರೊಂದು ಪ್ರಸಂಗದಲ್ಲಿ ವ್ಯತಿರಕ್ತವಾದ ನಡತೆಗಳಿಂದ ವೈರವು ಬಂದಲ್ಲಿ ದೇಹದ ಧರ್ಮಗತಿಯಿಂದಾ ಬಂದುದೆಂದು ತಿಳಿದು ನೀರ ಮೇಲಣ ಲಿಪಿಯಂತೆ ಮರೆಯದೇ ಕಾಡುಕೋಣಗಳ ಹಾಗೆ, ಕಾಳೋರಗನ ಹಾಗೆ, ಅಂತರಂಗದಲ್ಲಿ ದೀರ್ಘ ದ್ವೇಷವ ತಾಳಿಕೊಂಡಿರುವಂತಹದೇ ಮತ್ಸರವೆನಿಸುವುದು.

ರೋಷ : ಮಾತು ಮಾತಿಗೆ ತೂಪುರ ಕೊಳ್ಳಿಯೋಪಾದಿಯಲ್ಲಿ ಸಿಡಿಮಿಡಿಗೊಳ್ಳುವ ಕಟ್ಟುಗ್ರ ಕೋಪವೇ ರೋಷವು ಇವು ಎಂಟು ರಾಜಸ ಗುಣಗಳು.

ತಾಮಸ ಗುಣಗಳು

ಅಜ್ಞಾನ : ತಾನಾರೆಂದು ತನ್ನ ನಿಜವನರಿಯದೇ ಇರುವುದೇ ಅಜ್ಞಾನವು.

ಮೋಹ : ಸದಾ ಸತಿಸುತಾದಿಗಳ ಸಂಸಾರದ ಮೇಲಣ ಮಮಕಾರದಿಂದ ಮುಂದುಗೊಂಡಿರುವುದೇ ಮೋಹವು.

ನಿದ್ರೆ : ಅನ್ನೋದಕಗಳನ್ನು ಯತೇಷ್ಟವಾಗಿ ತೆಗೆದುಕೊಳ್ಳುತ್ತಾ ಹಗಲು ರಾತ್ರಿಯನ್ನದೇ ಹೊಡೆಗೆಡೆದು ಮಲಗಿರುವುದೇ ನಿದ್ರೆಯೆನಿಸುವುದು.

ಚಾಪಲ್ಯ : ಸತ್ಪುರುಷರು ಒಳ್ಳೆಯ ಪ್ರಸಂಗವನಾಡಿದರೆ ವಾಕ್ ಬಂಧನವ ಮಾಡುವುದು; ವಾಕ್ ಚಾತುರ್ಯವುಳ್ಳವನಾಗಿ ಸರ್ವ ಇಂದ್ರಿಯಗಳ ವಿವೇಕವಿಲ್ಲದೇ ಹರಿಬಿಡುವುದೇ ಚಾಪಲ್ಯವೆನಿಸುವುದು.

ಹೀನವೃತ್ತಿ : ಒಳ್ಳೆಯ ರೀತಿಯಿಂದ ನಡೆಯದೆ, ಕೆಟ್ಟ ನಡತೆಯಿಂದ ನಡೆಯುವುದೇ ಹೀನವೃತ್ತಿಯೆನಿಸುವುದು.

ಪರನಿಂದೆ : ಪಾತಕವಾವುದೆಂಬುದನು ಅರಿಯದೇ ಒಬ್ಬೊಬ್ಬರಲ್ಲಿರುವ ಒಳ್ಳೆಯ ಗುಣಗಳನ್ನು ನೋಡದೇ ಅವರ ಅವಗುಣಗಳನ್ನು ಎತ್ತಿ ದೂಷಣೆ ಮಾಡುವಂತಾಹುದೇ ಪರನಿಂದೆಯು.

ಹಿಂಸೆ : ನಿರಪರಾಧಿ ಪ್ರಾಣಿಗಳ ಮೇಲೆಯೂ, ಮನುಷ್ಯರ ಮೇಲೆಯೂ ದಯವಿಲ್ಲದೆ ಹಿಂಸೆ ಮಾಡುವುದೇ (ಕೊಲ್ಲುವುದೇ) ಹಿಂಸೆಯು.

ಪಾಪಿಷ್ಠತ್ವ : ನಿರಪರಾಧಿ ಪ್ರಾಣಿಗಳ, ಜೀವಿಗಳ ಕೊಂದರೆ ಪಾಪ ಬರುವುದೆಂದು ಯಾರಾದರೂ ಸತ್ಪುರುಷರು ಹೇಳಿದರೆ, ಕೇಳದೆ ಕೊಂದಲ್ಲದೆ ಬಿಡೆನೆಂಬ ಪಾಪ ಕೃತ್ಯವನ್ನು ಮಾಡುವುದೇ ಪಾಪಿಷ್ಠತ್ವವು. ಇವು ಎಂಟು ತಾಮಸ ಗುಣಗಳು.

ಮಾನವನು ಶರೀರವೇ ತಾನೆಂದು ಭಾವಿಸಿ, ತನುಗುಣದಿಂದ ವ್ಯವಹರಿಸುತ್ತಾ ಅದಕ್ಕನುಸಾರವಾದ ಕ್ರಿಯೆಗಳನ್ನು ಮನದಲ್ಲಿ ನೆನೆಯುತ್ತಾ, ತನುವಿನಿಂದ ಮಾಡುತ್ತಾ ಹೋಗುವನು. ಅವನು ಸತ್ವ ಗುಣಗಳನ್ನು ಒಳ್ಳೆಯವುಗಳೆಂದು ಭಾವಿಸಿ, ರಜೋ, ತಮೋ ಗುಣಗಳು ಕೆಟ್ಟವೆಂದು ಭಾವಿಸುತ್ತಾ ಸತ್ವ, ಗುಣಗಳಿಂದ ನಡೆದು ಕೆಟ್ಟ ಗುಣಗಳಾದ ರಜೋ ತಮೋ ಗುಣಗಳನ್ನು ಬಿಡಬೇಕೆನ್ನುವವರು ಸಾಮಾನ್ಯರು. ಆದರೆ ತನುಗುಣದಿಂದ ನಾವು ಯಾವ ಕೆಲಸಗಳನ್ನು ಮಾಡಿದರೂ ಒಳ್ಳೆ ನಡೆಯಿಂದ, ಸುಕೃತದಿಂದ ಪುಣ್ಯವು, ಕೆಟ್ಟ ಗುಣಗಳನ್ನು ಮಾಡುವುದರಿಂದ ದುಷ್ಕೃತ್ಯದಿಂದ ಪಾಪದ ಫಲಗಳು, ನಮಗೆ ಅಂಟುತ್ತಾ ಅವುಗಳನ್ನು ಅನುಭವಿಸುತ್ತಾ ಹೋಗುವೆವು. ಈ ಸುಕೃತದ ದುಷ್ಕೃತ್ಯದ ಫಲಗಳು ನಮಗೆ ಗೊತ್ತಾಗದ ರೀತಿಯಲ್ಲಿ ನಮಗೆ ಸೇರ್ಪಡೆಯಾಗಿ ಅವುಗಳನ್ನು ಅನುಭವಿಸುತ್ತಾ ಹೋಗುವೆವು. ಅದಕ್ಕಾಗಿಯೇ ಶ್ರೀ ಗುರುವಿನಿಂದ ಸಂಸ್ಕಾರ ಪಡೆದು ಶ್ರೀ ಗುರುವಿನ ಕೃಪಾ ದೃಷ್ಠಿಯಿಂದ ಲಿಂಗವನ್ನು ಸಂಬಂಧಿಸಿದ ಮೇಲೆ ಶ್ರೀ ಗುರುವು ಪೂರ್ವದ ತನುಗುಣಗಳನ್ನು ಕಳೆದು, ಸದಾಚಾರಗಳನ್ನು ಕಲಿಸಿ ಆಚರಿಸಲು ಹಚ್ಚುವನು. ಆಗ ಅಂಗದ ಕ್ರಿಯೆಗಳು ಲಿಂಗದ ಕ್ರಿಯೆಗಳಾಗಿ ಮಾರ್ಪಡುವವು.

ಸತ್ವ ಗುಣಗಳು ಅವುಗಳ ನಿವೃತ್ತಿ ಉಪಾಯ

ಸತ್ಯ : ನುಡಿದ ಮಾತಿಗೆ ತಪ್ಪದೇ ಯಥಾ ಸ್ಥಿತಿಯಾಗಿ ನಡೆಯೊಡನೆ ಕೂಡಿರುವುದೇ (ಆಚರಿಸುವುದೇ) ಸತ್ಯವೆನಿಸುವುದು. ಆದರೆ, ತನ್ನ ಒಂದು ವಾಕ್ಯದಿಂದ ಬೇರೆಯವರಿಗೆ ಹಿಂಸೆಯಾಗುವದಾದರೆ, ತನ್ನ ಒಂದು ಮಾತಿನಿಂದ ಬೇರೆಯವರಿಗೆ ತೊಂದರೆಯಾಗುವುದಾದರೆ; ಬೇರೆಯವರಿಗೆ ಕೊಲೆಯಾಗುವುದಾದರೆ ಅದು ಅಸತ್ಯವೆಂದು ಆಗುವುದು. ತನ್ನ ನಿಜವಾದ ಮಾತಿನಿಂದ ತನಗೆ ತೊಂದರೆಯಾಗುವುದಾದರೆ ನಿಜವನ್ನೇ ಹೇಳುವುದು. ಅದೇ ಸತ್ಯವೆಂದು

ಹೇಳುವುದು. ಜಗತ್ತಿನ ಜನರು ಸತ್ವಗುಣಗಳು ಒಳ್ಳೆಯವೆಂದು ನಂಬಿ ಅವುಗಳನ್ನೇ ಆಶ್ರಯಿಸಿ ನಡೆಯುತ್ತಾರೆ. ಆದರೆ ನಾನು ಮಾಡುವೆನು, ನಾನು ಆಚರಿಸುವೆನು ಎಂಬ ತನುಗುಣದಿಂದ ನಡೆದಲ್ಲಿ ಒಳ್ಳೆಯದನ್ನು ಮಾಡಿದರೆ ಪುಣ್ಯವೂ, ಕೆಟ್ಟದ್ದನ್ನು ಮಾಡಿದರೆ ಪಾಪಗಳು ಅಂಟುತ್ತಾ ಅದಕ್ಕನುಸಾರವಾದಂತಹ ಜನ್ಮಗಳನ್ನು ಎತ್ತುತ್ತಾ ಪುಣ್ಯ ಪಾಪಗಳ ಫಲಗಳಿಂದಾ ಸುಖ ದುಃಖಗಳನ್ನು ಅನುಭವಿಸುತ್ತಾ ಹೋಗುವನು. ಮಾನವನಿಗೆ ಅನೇಕ ಜನ್ಮದ ಪುಣ್ಯದಿಂದ ಸಹಜವಾದ ಆತ್ಮೋದ್ಧಾರದ ಭಕ್ತಿಯಂಕುರಿಸಿ ಶ್ರೀ ಗುರುವಂ ಮೊರೆಹೋಗಲು ಶ್ರೀ ಗುರುವು ದೀಕ್ಷೆಯಿಂದ ತನುಗುಣಗಳಂ ಕಳೆದು ಲಿಂಗಮಂ ಸಂಬಂಧಿಸಿ, ಪೂರ್ವದ ಗುಣಗಳನ್ನು ಬಿಡಿಸಿ, ಲಿಂಗದ ಪೂಜಾ ಆಚಾರಗಳನ್ನು ಕಲಿಸಿ, ಲಿಂಗ ಮಂತ್ರದ ನೆನಹಿನಿಂದ ಲಿಂಗ ಕಳೆ ನೇತ್ರದಲ್ಲಿ ಸಂಬಂಧಿಸಿ ಮನದಲ್ಲಿ ಪ್ರಾಣಲಿಂಗವಾಗಿ ಅಳವಟ್ಟು, ಸರ್ವ ಇಂದ್ರಿಯಗಳಲ್ಲಿ ಲಿಂಗವಾಗಿ ಆಚರಿಸಲು, ಜಿಹ್ವೆಯಲ್ಲಿ ಪ್ರಾಣಲಿಂಗವೇ ಗುರು ಲಿಂಗವಾಗಿ ಸಂಬಂಧವಾಗಿ, ಲಿಂಗದ ಮಾತುಗಳಾಗಿ, ತನುವಿನಲ್ಲಿ ಗುರುಭಕ್ತಿ, ಮನದಲ್ಲಿ ಲಿಂಗಭಕ್ತಿ, ಭಾವದಲ್ಲಿ ಜಂಗಮಭಕ್ತಿ, ಕ್ರಿಯೆಯಲ್ಲಿ ಪಾದೋದಕ ಭಕ್ತಿ, ಅರಿವಿನಲ್ಲಿ ಪ್ರಸಾದ ಭಕ್ತಿ, ಕಿಂಕುರ್ವಾಣತೆ ಅಳವಟ್ಟು, ಆ ಲಿಂಗವೇ ಜಿಹ್ವೆಯಲ್ಲಿ ನುಡಿಯುವುದು ಲಿಂಗವಾಗಿ ಆಚರಿಸುವುದು ಸತ್ಯವು.

ಜ್ಞಾನ : ಲಿಂಗ ಸ್ವರೂಪವೇ ತಾನೆಂದು ಲಿಂಗಾಂಗ ಸಾಮರಸ್ಯದಿಂದ ಸ್ವಸ್ವರೂಪವಾದ ತಿಳುವಳಿಕೆಯೊಡನೆ ಕೂಡಿರುವುದೇ ಜ್ಞಾನವು.

ತಪ : ಮಹಾಲಿಂಗ ಸ್ವರೂಪನೇ ತಾನೆಂದು ಲಿಂಗದ ಆಚಾರಗಳನ್ನು ಪಾಲಿಸುತ್ತಾ, ನಿಷ್ಠೆಯಿಂದ ನಡೆಯುವುದೇ ತಪವೆಂದು ತಿಳಿಯುವುದು.

ಮೌನ : ಕರದಲ್ಲಿರುವ ಲಿಂಗದಲ್ಲಿ ಎರಕತ್ವದಿಂದ ಮನದಲ್ಲಿ ಲಿಂಗವು ಸ್ಥಿರವಾಗಿ ನೆಲೆಗೊಂಡು, ಲಿಂಗಾನುಭಾವದಲ್ಲಿರುವುದೇ ಮೌನವು.

ಹರ್ಷ : ಲಿಂಗವು ಅಂಗಕ್ಕೆ ವೇಧಿಸಿ, ಅಂಗಾಂಗಗಳೆಲ್ಲವೂ ಲಿಂಗ ಸಂತೃಪ್ತಿಯ ಪ್ರಸನ್ನತೆಯ ಸಂತೋಷದಲ್ಲಿರುವುದೇ ಹರ್ಷವೆಂದು ತಿಳಿವುದು.

ಕ್ಷಮೆ : ಸಹಜ ಭಕ್ತಿಯುಳ್ಳ ಶರಣರ ವಚನಾನುಭವದಿಂದ ಬೈದವರು, ಬಂಧುಗಳು ನಿಂದಿಸಿದವರು, ನಮ್ಮ ತಾಯಿತಂದೆಗಳೆಂದು ಮಹಾಲಿಂಗದ ಬೆಳಗಿನಲ್ಲಿ ಸಮಾಧಾನದಿಂದಿರುವುದೇ ಕ್ಷಮೆಯೆಂದು ತಿಳಿದುಕೊಳ್ಳುವುದು.

ಸಾಹಸ : ಲಿಂಗದ ಆಚಾರಗಳನ್ನು ಪಾಲಿಸುವುದರಲ್ಲಿ ಅನೇಕ ತೊಂದರೆಗಳು ಅಡೆತಡೆಗಳು ಬಂದಲ್ಲಿ ಲಿಂಗಯ್ಯನ ಇಚ್ಛೆಯಿಂದ ಬಂದವುಗಳೆಂದು ಅವುಗಳನ್ನು ಕಳೆವನೆಂದು ಪ್ರಯತ್ನ ಶೀಲನಾಗಿರುವುದೇ ಸಾಹಸವೆಂದು ತಿಳಿವುದು.

ನಿಶ್ಚಯ : ಲಿಂಗವೇ ತಾನೆಂದು ತನ್ನ ಸ್ವರೂಪವೇ ಗುರೂಪದಿಷ್ಟಿತ ಲಿಂಗವೆಂದು ತಿಳಿದು ಲಿಂಗದ ನಿಜದಲ್ಲಿರುವುದೇ ನಿಶ್ಚಯವೆನಿಸುವುದು.

ಧೈರ್ಯ : ಲಿಂಗವು, ಅಂಗದಲ್ಲಿದ್ದಾಗ, ಲಿಂಗದ ನಿಜಸ್ವರೂಪವಾದ, ಅಮಲನಿರಾಮಯ ನಿರುಪಮ ಲಿಂಗವಿರುತಿದೆ, ಯಾತರ ಭಯವೆಮಗೆ ಎಂದು ಲಿಂಗಾಚಾರವನ್ನು ಪಾಲಿಸುವುದೇ ಧೈರ್ಯವೆಂದು ತಿಳಿವುದು.

ವಿವೇಕ : ಶ್ರೀ ಗುರುವಿನಲ್ಲಿ ಭಕ್ತಿ, ಲಿಂಗದಲ್ಲಿ ಭಕ್ತಿ, ಜಂಗಮ ದಾಸೋಹದಲ್ಲಿ ಭಕ್ತಿ, ಪಾದೋದಕ ಸೇವನೆ, ಪ್ರಸಾದಾರ್ಪಣದಲ್ಲಿ ಭಕ್ತಿ, ಸತ್‌ಶರಣರಲ್ಲಿ ಭಕ್ತಿ, ಅಷ್ಟಾವರಣದಲ್ಲಿ ನಿಷ್ಠೆ, ಪಂಚಾಚಾರ ಪಾಲನೆ ಮಾಡುವಲ್ಲಿ ಛಲ, ಷಡುಸ್ಥಲ ತತ್ವದ ಆಚರಣೆಯಿಂದ ಆಚರಿಸುವ ಶರಣರ ಭೃತ್ಯನಾಗಿ ಆಚರಿಸುವುದೇ ವಿವೇಕವೆಂದು ತಿಳಿದುಕೊಂಬುದು ತತ್ವಜ್ಞಾನಿಗಳು.

ರಜೋಗುಣಗಳ ನಿವೃತ್ತಿ

ಅನೇಕ ಜನ್ಮದ ಪುಣ್ಯದಿಂದ ಮಾನವನಿಗೆ ವಿವೇಕ ತಲೆದೋರಿ ಶ್ರೀ ಗುರುವಂ ಮೊರೆ ಹೋಗಲು, ಭವಬಂಧನಕ್ಕೆ ಹೆದರಿ ಬಂದಂತಹ ಶಿಷ್ಯನಿಗೆ, ತಲೆಯಲ್ಲಿ ಅಭಯಹಸ್ತವನ್ನಿಟ್ಟು ನೀನು ಭವಬಂಧನಕ್ಕೆ ಹೆದರಬೇಡ. ನೀನು ಪರವಸ್ತು ಸ್ವರೂಪನು. ಸತ್ಯನು, ಶುದ್ಧನು ಎಂದು ತಿಳಿಸಿ, ಶರೀರವೇ ನಾನೆಂದು ಮಾಡಬಾರದಂತಾ ಕ್ರಿಯೆಗಳನ್ನು ಮಾಡುತ್ತಾ ಹೋಗುವುದನ್ನು ಬಿಡಿಸಿ, ತನುವಿನಲ್ಲಿ ಸದಾಚಾರಗಳನ್ನು ನೆಲೆಗೊಳಿಸಿ ದೀಕ್ಷಾ ಸಂಸ್ಕಾರವನ್ನು ಮಾಡಿ, ತನುವಿನ ಮೇಲೆ ಲಿಂಗವಂ ಸಂಬಂಧಿಸಿ, ಮಹಾ ಮಂತ್ರೋಪದೇಶವನ್ನು ಮಾಡಿ ಭಕ್ತಿಯಿಂದ ನಡೆಯಲು ತಿಳಿಸುವನು.

ಗರ್ವ : ಸಂಸ್ಕಾರಿಯಾದಂದಿನಿಂದ ಶ್ರೀ ಗುರುವಿನಲ್ಲಿ ಭಕ್ತಿಯಿಂದ ಅಂಗ, ಆಪ್ತ, ಸ್ಥಾನ, ಸದ್ಭಾವವೆಂಬ ಚತುರ್ವಿಧ ಸುಶ್ರೂಷೆಯನ್ನು, ಶರಣರ ಸೇವೆಯನ್ನು ನಿರಹಂಕಾರದಿಂದ ಆಚರಿಸುವನಾಗಿ, ತನುಗುಣ ಅಳಿದು, ಶುದ್ಧ ಕಿಂಕುರ್ವಾಣತೆಯಿಂದ (ವಿನಮ್ರತೆಯಿಂದ) ಆಚರಿಸಿದಲ್ಲಿ ನಿಗರ್ವವು ನೆಲೆಗೊಂಡು ಗರ್ವವು ಅಳಿವುದು.

ಕ್ರೋಧ : ಶ್ರೀಗುರುವಿನಿಂದ ಇಷ್ಟಲಿಂಗವನ್ನು ಪಡೆದು ಇಷ್ಟಲಿಂಗದಲ್ಲಿ ಕಾಲಕ್ಕೆ ತಪ್ಪದೇ ಲಿಂಗ ಪೂಜಾ, ಲಿಂಗ ನಿರೀಕ್ಷಣ, ಮಂತ್ರ ಧ್ಯಾನಗಳೆಂಬ ಚತುರ್ವಿಧ ಭಕ್ತಿ ನಿಷ್ಠೆಯಿಂದ ಆಚರಿಸುತ್ತಾ ಸರ್ವವೂ ಲಿಂಗ ಚೈತನ್ಯ ಸ್ವರೂಪವೆಂದು, ಲಿಂಗವು ಭಕ್ತಿಯಿಂದ ನೆಲೆಗೊಂಡು ನಮ್ರತೆ ವಿನಯ ಪರನಾಗಿ ಆಚರಿಸುವನಾಗಿ ಕ್ರೋಧವಳಿವುದು.

ಅಹಂಕಾರ : ಶ್ರೀ ಗುರುವಿನಿಂದ ಪಡೆದ ಲಿಂಗದ ಚೈತನ್ಯವೇ ಜಂಗಮವೆಂದು ಆ ಚೈತನ್ಯವೇ ಜಗತ್ತಿನಲ್ಲೆಲ್ಲಾ ತುಂಬಿರುವುದೆಂದು ಆ ಚೈತನ್ಯ ಸ್ವರೂಪವೇ ಸಾಕಾರವಾಗಿ ಜಂಗಮರಾಗಿರುವುದೆಂದು ತಿಳಿದು, ತಾನು ಕಿಂಕುರ್ವಾಣತೆಯಿಂದ ನಿರಹಂಕಾರಿಯಾಗಿ ಸತ್ ಕಾಯಕದಿಂದ ಸಂಪಾದಿಸಿದ್ದನ್ನು ದಾಸೋಹ ಸೇವೆಗೆ ಸಲ್ಲಿಸಿ, ಭೃತ್ಯನಾಗಿ ಆಚರಿಸಿದಲ್ಲಿ ಅಹಂಕಾರ ನಾಶವಾಗಿ ಅಳಿಯಿತ್ತು.

ಸತಿಸಂಗ : ಅಂತರಂಗದ ಶಿವಯೋಗಾಮೃತವೇ ಶಿವಯೋಗಿ ಜಂಗಮರ ಪಶ್ಚಿಮ ಚಕ್ರದಿಂದ ಪ್ರವಹಿಸಿ ಶಿಖಾ ಚಕ್ರದಲ್ಲಿ ನಿಂದು, ಬ್ರಹ್ಮ ಚಕ್ರದಲ್ಲಿ ಪ್ರವಹಿಸಿ ನಿಂದು ಸದ್ ಭಕ್ತನ ಭಕ್ತಿ ಶಿವಯೋಗಿ ಜಂಗಮದ ಕರುಣೆಯಿಂದ ಭಕ್ತನ ಹಸ್ತದ ಬೆರಳು ಜಂಗಮದ ಪಾದದ ಬೆರಳಿನಲ್ಲಿ ಹೊರಗೆ ಪಾದೋದಕವಾಗಿ ಪ್ರಕಟವಾಗಿ, ಸದ್‌ಭಕ್ತನು ಕಿಂಕುರ್ವಾಣತೆ ಭಕ್ತಿಯಿಂದ ಸೇವಿಸಿದಲ್ಲಿ ಸದ್‌ಭಕ್ತನ ಅಂತರಂಗದಲ್ಲಿ ಪ್ರವಹಿಸಿ ನೇತ್ರದಲ್ಲಿ ಕರುಣಾಜಲವಾಗಿ, ವಾಕ್ಕಿನಲ್ಲಿ ವಿನಯ ಜಲವಾಗಿ ಮನದಲ್ಲಿ ಸಮತಾ ಜಲವಾಗಿ ನಿಂದು, ಪಾದೋದಕ ಮೋಹಿಯಾಗಿ ಅಳವಡಲು ವಿಷಯ ವಾಸನೆಯ ಸತಿಸಂಗ ಅಳಿವುದು.

ಪ್ರಳಾಪನ (ಅಪ್ರಿಯವಾಚಕ) : ಪರಮಾತ್ಮನ ಚೈತನ್ಯವೇ ಸರ್ವ ಪದಾರ್ಥಗಳಲ್ಲಿ ಆವರಿಸಿ, ಸರ್ವ ಜೀವಿಗಳಿಗೆ ಆಹಾರವಾಗಿ ಜಗತ್ತಿನ ಸರ್ವ ಜೀವಿಗಳ ಸಂರಕ್ಷಣೆ ಕಾರ್ಯವಾಗಿರುವುದೆಂದು, ಆ ಪರವಸ್ತು ಸ್ವರೂಪರಾದ ಗುರುಲಿಂಗ ಜಂಗಮ ಪಾದೋದಕ ಪ್ರಸಾದದಲ್ಲಿ ಭಕ್ತಿಯುಳ್ಳವನಾಗಿ ಆಚರಿಸುತ್ತಾ, ಗುರುಲಿಂಗಜಂಗಮ ಪ್ರಸಾದವೇ ಸದ್‌ಭಕ್ತಿಯಿಂದಾ ಸದ್‌ಭಕ್ತನ ಅಂಗದಲ್ಲಿ ಪ್ರಸಾದದ ಕಳೆವೇಧಿಸಿ, ತನುವಿನಲ್ಲಿ ಶುದ್ಧ ಪ್ರಸಾದವಾಗಿ, ಮನದಲ್ಲಿ ಸಿದ್ಧ ಪ್ರಸಾದವಾಗಿ, ಭಾವದಲ್ಲಿ ಪ್ರಸಿದ್ಧ ಪ್ರಸಾದವಾಗಿ ನೆಲೆಗೊಂಡು ಸರ್ವ ಇಂದ್ರಿಯಗಳಲ್ಲಿ ಪ್ರಸಾದದ ಕಳೆ ವೇಧಿಸಿ ಲಿಂಗ ಪ್ರಸಾದ ಸಂತೃಪ್ತಿಯಲ್ಲಿ ಓಲಾಡುತ್ತಾ, ಇರುವುದರಿಂದ ವಿಷಯ ವಾಸನೆಯಿಂದೊಡಗೂಡಿದ ಅಪ್ರಿಯವಾಚಕ ಪ್ರಳಾಪನವು ನಾಶವಾಗಿ ಲಿಂಗ ಪ್ರಳಾಪನ ಲಿಂಗದ ಮಾತುಗಳನ್ನಾಡುತ್ತಾ ಆಚರಿಸುವುದರಿಂದ ಪ್ರಳಾಪನವಳಿವುದು.

ಅಕ್ರಮ್ಯ (ಉದ್ಯೋಗ) : ಶ್ರೀ ಗುರುವು ಅಂತರಂಗದ ಚಿತ್‌ಪ್ರಕಾಶವನ್ನೇ ಚಿದ್ ಭಸ್ಮವಾಗಿ ಹೊರಗೆ ಧರಿಸಿಲಿಕ್ಕೆ ಕೊಟ್ಟು, ಚಿದ್ ಭಸ್ಮ ಸ್ವರೂಪವೇ ನೀನೆಂದು ತಿಳಿಹಿದನಾಗಿ ನಿತ್ಯವೂ ಸದ್ ಭಕ್ತಿಯಿಂದ ಲಿಂಗ, ಮಂತ್ರ, ಭಸ್ಮಧಾರಣದಿಂದ ಶರೀರದ ಅಂತರಂಗದ ದುರ್ಗುಣಗಳು ಬಹಿರಂಗದ ದುರ್ಗುಣಗಳು, ಸದಾಚಾರದ ನಡೆಯಿಂದ ಅಳಿದು, ಲಿಂಗ ಪ್ರಕಾಶದಲ್ಲಿ ಲಿಂಗ ಕ್ರಿಯೆಗಳಾಗಿ ಉಳಿದು ಆಚರಿಸುವುದರಿಂದ ಅಕ್ರಮ್ಯದ ನಡೆಗಳು ಅಳಿಯುವದೆಂದು ತಿಳಿದುಕೊಂಬುದು.

ಡಂಭ (ರೋಷ) : ಗುರುಭಕ್ತಿ ಸಂಪನ್ನನಾಗಿ ಶ್ರೀ ಗುರುವಂ ಮೊರೆಹೋಗಲು ಶ್ರೀ ಗುರುವು ಅಂತರಂಗದ ಚಿತ್ಕಾಂತಿಯನ್ನೇ ಚಿತ್ಕಾಂತಿ ಸ್ವರೂಪದ ಚಿದ್ರುದ್ರಾಕ್ಷಿಯನ್ನೇ ಬಹಿರಂಗದಲ್ಲಿ ಧರಿಸಲಿಕ್ಕೆ ಕೊಟ್ಟು, ಚಿದ್ರುದ್ರಾಕ್ಷಿ ಸ್ವರೂಪವೇ ನೀನೆಂದು ತಿಳಿಸಲು ಸದ್‌ಭಕ್ತಿಯಿಂದ ಗುರು ಜಂಗಮ ಭಕ್ತಿಯೂ, ಸದಾಚಾರವು ನೆಲೆಗೊಂಡು ಲಿಂಗವು ಮನವನ್ನಾವರಿಸಿ, ನೇತ್ರದಲ್ಲಿ ಲಿಂಗವೇ ಸ್ಥಿರಗೊಂಡು ಸರ್ವಾಂಗವೆಲ್ಲವೂ ಲಿಂಗದ ಕಣ್ಣುಗಳಾಗಿ ಜಗತ್ತಿನ ಸರ್ವವೂ ಲಿಂಗ ಚೈತನ್ಯವೆಂದು ಕಿಂಕುರ್ವಾಣತೆ, ನಮ್ರತೆ ಅಳವಡಲು ತನುವಿನಲ್ಲಿ ಡಾಂಭಿಕತೆ, ಮನದಲ್ಲಿ ರೋಷಗಳು ಅಳಿವವು.

ಮಾತ್ಸರ್ಯ : ಮಾನವನಿಗೆ ಅನೇಕ ಜನ್ಮದ ಪುಣ್ಯದಿಂದ ಭಕ್ತಿ ಅಂಕುರಿಸಿ, ಶ್ರೀ ಗುರುವಾ ಮೊರೆಹೋಗಲು ಶ್ರೀ ಗುರುವು ದೀಕ್ಷೆಯಂ ಮಾಡಿ ಲಿಂಗಮಂ ಸಂಬಂಧಿಸಿ, ಲಿಂಗದ ನಾಮವೇ ಇದು ಎಂದು ಮಹಾ ಮಂತ್ರೋಪದೇಶ ಮಾಡಲು, ಸದ್‌ಭಕ್ತಿಯಿಂದ ಶ್ರೀ ಗುರುವು ಉಪದೇಶಿಸಿದ ಮಂತ್ರವು ಜಿಹ್ವೆಯಲ್ಲಂಕುರಿಸಿ, ಮನವನ್ನಾವರಿಸಿ, ಶರೀರವೆಲ್ಲವು ಮಂತ್ರಮಯವಾಗಿ ಆ ಮಂತ್ರದಲ್ಲಿ ಲಿಂಗವು ನೆಲೆಗೊಂಡು ವಿಶ್ವವೆಲ್ಲವೂ ಲಿಂಗಸ್ವರೂಪವು, ಲಿಂಗದ ವ್ಯವಹಾರವು, ಲಿಂಗದ ಕ್ರಿಯೆಗಳೆಯೆಂಬ ಧೃಡಭಾವನೆ ಸ್ಥಿರವಾಗಿ, ಹಿಂದಿನಿಂದ ಬಂದ ಅರಿಷಡ್‌ವರ್ಗಂಗಳು, ಅಷ್ಟಮದಗಳು, ಸಪ್ತವ್ಯಸನಗಳು, ಮುಂತಾದವುಗಳೆಲ್ಲವೂ ಲಿಂಗ ಕ್ರಿಯೆಗಳಲ್ಲಿ ಅಡಗಿ ನಿರ್ಮಾತ್ಸರ್ಯವು ಸ್ಥಿರವಾಗಲು, ಮತ್ಸರವು ಅಳಿವುದು. ಇಂತೀ ರಜೋಗುಣಗಳು ಅಷ್ಟಾವರಣಾಚರಣೆಯಿಂದಳಿದು ಅಷ್ಟಾವರಣದ ಸತ್ ಕ್ರಿಯಾ ಸತ್ ಪ್ರಕಾಶದಲ್ಲಿ ಆಚರಿಸಿದ ಶರಣ ಬಸವಣ್ಣ ಬಲ್ಲನಲ್ಲದೇ ನಾನೇನ ಬಲ್ಲೆನಯ್ಯಾ. ಅಂತಹ ಸತ್ ಪ್ರಕಾಶ ಸ್ವರೂಪದಲ್ಲಿ ಆಚರಿಸತಕ್ಕ ಶರಣರ ಸಂಗದಲ್ಲಿರಿಸಿ ಎನ್ನ ರಕ್ಷಿಸಯ್ಯಾ ಶ್ರೀಮತ್ಶೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ತಮೋಗುಣಗಳ ಪರಿಹಾರ

ಅಜ್ಞಾನ : ತನ್ನ ನಿಜಸ್ವರೂಪವನ್ನು ಮರೆದು ತಂದೆ, ತಾಯಿ, ಹೆಂಡಿರು, ಮಕ್ಕಳು, ನೆಂಟರು ಹೊಲ, ಮನೆ, ಗದ್ದೆ, ಬಂಗಾರ, ವಸ್ತು ವಾಹನಗಳೇ ನನ್ನವುಗಳೆಂಬ ಪ್ರೀತಿಯಿಂದ ತನ್ನ ಸ್ವರೂಪವನ್ನು ಮರೆದಿದ್ದಾಗ ಅನೇಕ ಜನ್ಮದ ಪುಣ್ಯದಿಂದ ಮಾನವನಿಗೆ ವಿವೇಕ ತಲೆದೋರಿ ಇವೆಲ್ಲವುಗಳು ಅಸ್ಥಿರವು ನನ್ನ ಹಿಂದೆ ಬರುವುದಿಲ್ಲಾ, ನನ್ನ ಹಿಂದೆ ಬರುವುದು ಜನ್ಮ ಸಾರ್ಥಕ ಮಾಡಿಕೊಳ್ಳುವ ಸುಜ್ಞಾನವೊಂದೆ (ಸ್ವಸ್ವರೂಪಜ್ಞಾನ) ಎಂಬ ತಿಳುವಳಿಕೆ ಬಂದು ಆ ತಿಳುವಳಿಕೆಯುಳ್ಳ ಶರಣರು, ಸಜ್ಜನರ ಸಹವಾಸದಿಂದ ಪ್ರಾಪ್ತವಾಗಿ ಶ್ರೀ ಗುರುವಂ ಮೊರೆಹೋಗಲು ಶ್ರೀ ಗುರುವು ದೀಕ್ಷೆಯಂ ಮಾಡಲು ಅಂದಿನಿಂದಾ ಗುರುಭಕ್ತಿ ಸಂಪನ್ನನಾಗಿ ಗುರುಮಾರ್ಗಾಚಾರ ಸದಾಚಾರದಿಂದ ನಡೆಯುವನಾಗಿ ಅಜ್ಞಾನವಳಿದು ಸುಜ್ಞಾನವು ಅಳವಡುವುದು.

ಮೋಹ : ಅಜ್ಞಾನದಿಂದ ತಾಯಿ ತಂದೆ ಹೆಂಡಿರು ಮಕ್ಕಳು ಬಂಧು ಬಳಗ ವಸ್ತುಗಳು ಮನೆ ಇವುಗಳೇ ನನ್ನವುಗಳೆಂದು ಮೋಹ ಆವರಿಸಿದಾಗ, ಅನೇಕ ಜನ್ಮದ ಪುಣ್ಯದಿಂದ ಶರಣರ ಸಂಗದಿಂದ ಶ್ರೀಗುರುವಂ ಮೊರೆಹೋಗಲು ಶ್ರೀ ಗುರುವು ದೀಕ್ಷೆಯಂ ಮಾಡಿ ಲಿಂಗವಂ ಸಂಬಂಧಿಸಲು, ಸದಾಚಾರದಿಂದ ಶಿವಶರಣರೇ ನನ್ನವರು ಎಂಬ ಭಾವನೆಯಿಂದ ಏಕಲಿಂಗ ನಿಷ್ಠೆ ಆವರಿಸಿ, ಲಿಂಗದ ನಿಬ್ಬೆರಗಿನಿಂದ ಆಚರಿಸಲು, ಪೂರ್ವದಲ್ಲಿದ್ದ ಹೆಂಡಿರು ಮಕ್ಕಳು ನನ್ನವರು ಎಂಬ ಮೋಹವಳಿದು ಗುರು, ಲಿಂಗ, ಜಂಗಮ ಮೋಹಿಯಾಗಿ ಆಚರಿಸುವನಾಗಿ ಮೋಹವಳಿವುದು.

ನಿದ್ರೆ : ಶ್ರೀ ಗುರುವು ಸಂಸ್ಕಾರ ಮಾಡಿ ತನುವಿನ ಮೇಲೆ ಲಿಂಗಮಂ ಸಂಬಂಧಿಸಿ ಈ ಲಿಂಗ ಸ್ವರೂಪವೇ ನೀನು ನಿನ್ನ ಸ್ವರೂಪವೇ ಲಿಂಗವು. ಈ ಲಿಂಗದ ಸಾಕ್ಷಾತ್ ಚೈತನ್ಯವೇ ಜಂಗಮವು ಇದರಂತೆ ಆಚರಿಸು ಎಂದು ತಿಳಿಸಿ, ಅದರಂತೆ ಆಚರಿಸುತ್ತಾ ಎಚ್ಚರವಿದ್ದಾಗ ಸ್ಥೂಲ ಶರೀರದಲ್ಲಿ ಇಷ್ಟಲಿಂಗವೇ ವ್ಯವಹರಿಸುವುದೆಂದು ಆಚರಿಸು. ಸೂಕ್ಷ್ಮ ಶರೀರದಲ್ಲಿ ಸ್ವಪ್ನವಾದಾಗ, ಸೂಕ್ಷ್ಮ ಶರೀರದಲ್ಲಿ ಪ್ರಾಣಲಿಂಗದ ವ್ಯವಹಾರವೆಂದು ಆಚರಿಸು. ನಿದ್ದೆಯಲ್ಲಿ ಮಲಗಿದಾಗ ಕಾರಣ ಶರೀರದಲ್ಲಿ ಭಾವಲಿಂಗದ ಆಚರಣೆಯೆಂದು ಆಚರಿಸು, ನಿಂತುಕೊಂಡು ಓಡಾಡುವಾಗ ಇಷ್ಟಲಿಂಗವೇ ವ್ಯವಹರಿಸುವುದೆಂದು ತಿಳಿ. ಕುಳಿತು ಕೊಂಡಿರುವಾಗ ಪ್ರಾಣಲಿಂಗದ ವ್ಯವಹಾರವೆಂದು ತಿಳಿ, ಮಲಗಿಕೊಂಡಿರುವಾಗ ಭಾವಲಿಂಗದ ವ್ಯವಹಾರವೆಂದು ಆಚರಿಸು ಎಂದು ತಿಳಿಸಿದ ಮೇಲೆ ಅದರಂತೆ ಆಚರಿಸುತ್ತಾ ನಡೆದಲ್ಲಿ, ಅದೇ ಲಿಂಗಾಂಗ ಯೋಗವಾಗುವುದು. ನಿದ್ರೆಯ ಮರೆವೆಯಲ್ಲದೆ ಲಿಂಗಾಂಗದ ಶಿವಯೋಗವೆಂದು ತಿಳಿದುಕೊಂಬುದು.

ಚಾಪಲ್ಯ : ಅನೇಕ ಜನ್ಮದ ಪುಣ್ಯದಿಂದ ಶ್ರೀ ಗುರುವಿನಿಂದ ಸಂಸ್ಕಾರವನ್ನು ಪಡೆದು ಲಿಂಗದ ಚೈತನ್ಯವೇ ಜಂಗಮವೆಂದು ನಂಬಿ, ಸಾಕ್ಷಾತ್ ಪರಮಾತ್ಮಸ್ವರೂಪವೇ ಸಾಕಾರವಾಗಿ ಜಂಗಮವಾಗಿರುವುದೆಂದು ತಿಳಿದು, ಭಕ್ತಿಯಿಂದ ಜಂಗಮದ ಸಹಸ್ರಾರದಲ್ಲಿರುವ ಶಿವಯೋಗಾಮೃತವನ್ನೇ ನಿತ್ಯೋದಕವನ್ನೇ ಜಂಗಮನ ಕರುಣೆಯನ್ನು ಭಕ್ತನು ಭಕ್ತಿಯಿಂದ ಜಂಗಮದ ಪಾದದಲ್ಲಿರುವ ಚಿದಮೃತವನ್ನೇ ಭಕ್ತನು ಕಿಂಕಲದಿಂದಾ ಕೂಡಿ, ಜಂಗಮನ ಪಾದ, ಭಕ್ತನ ಹಸ್ತದಿಂದ ಪಡೆದುಕೊಂಡು ಸೇವಿಸುವುದು. ಪಾದೋದಕವು ಭಕ್ತನ ಶರೀರದಲ್ಲಿ ಆವರಿಸಿದಲ್ಲಿ, ಶ್ರೀ ಗುರು ಪಾದೋದಕವೇ ಸ್ಥೂಲ ಶರೀರದ ನೇತ್ರದಲ್ಲಿ ನಿಂದು ಸರ್ವ ಜೀವಿಗಳಲ್ಲಿ ಕಾರುಣ್ಯ

ದೃಷ್ಠಿ ಅಳವಟ್ಟು, ಕರುಣಾ ಜಲವಾಗಿ ಪರಿಣಮಿಸುವುದು. ಲಿಂಗ ಪಾದೋದಕವು ಮನವನ್ನವರಿಸಿ ವಾಕ್ಕಿನಲ್ಲಿ ವಿನಯ ಪರನಾಗಿ ಆಚರಿಸುವುದರಿಂದ ವಿನಯ ಜಲವಾಗಿ ಪರಿಣಮಿಸುವುದು. ಜಂಗಮ ಪಾದೋದಕವೇ ಕಾರಣ ಶರೀರದಲ್ಲಿ ನಿಂದು ಮನವನ್ನಾವರಿಸಿ ಸಮತಾ ಜಲವಾಗಿ ಪರಿಣಮಿಸುವುದು. ಈ ರೀತಿಯ ಪಾದೋದಕದಿಂದಾ ತನುವಿನ, ಮನದ, ಭಾವದ ಚಂಚಲ ಗುಣವಳಿದು ಚಾಪಲ್ಯವು ಅಳಿವುದೆಂದು ತಿಳಿದುಕೊಂಬುದು ತತ್ವ ಜ್ಞಾನಿಗಳು.

ಹೀನವೃತ್ತಿ : ಮಾನವನು ತನುಗುಣದಿಂದ ವ್ಯವಹರಿಸುತ್ತಾ ಪ್ರಕೃತಿಗೆ ವಶನಾಗಿ ಸ್ವಾರ್ಥಪರನಾಗಿ ನೀಚ ಕಾರ್ಯಗಳಲ್ಲಿ ಆಚರಿಸುತ್ತಾ ಇರುವಲ್ಲಿ ಅನೇಕ ಜನ್ಮದ ಪುಣ್ಯದಿಂದಾ ಸಜ್ಜನರ ಶರಣರ ಸಂಗದಿಂದ ಶ್ರೀ ಗುರುವು ಪ್ರಾಪ್ತನಾಗಿ ಶ್ರೀ ಗುರುವಿನಿಂದ ಸಂಸ್ಕಾರವನ್ನು ಪಡೆದು ಶ್ರೀ ಗುರುವು ಗುರುಲಿಂಗ ಜಂಗಮ ಪ್ರಸಾದದ ಆಚರಣೆಯ ಮರ್ಮವನ್ನು ತಿಳಿಸಲು ಜಂಗಮಭಕ್ತಿಯಿಂದ ಪ್ರಸಾದವನ್ನು ಪಡೆದುಕೊಂಡು ಪ್ರಸಾದದ ಇತಿಮಿತಿಯನ್ನರಿದು, ಕಾಯಾರ್ಪಣ, ಕರಣಾರ್ಪಣ, ಭಾವಾರ್ಪಣದಿಂದ ಆಚರಿಸುವನಾಗಿ. ಗುರುಪ್ರಸಾದವು ಸ್ಥೂಲ ಶರೀರದಲ್ಲಿ ಶುದ್ಧ ಪ್ರಸಾದವಾಗಿ ನೆಲೆಗೊಳ್ಳುವುದು. ಲಿಂಗ ಪ್ರಸಾದವು ಸೂಕ್ಷ್ಮ ಶರೀರದಲ್ಲಿ ಸಿದ್ಧ ಪ್ರಸಾದವಾಗಿ ನೆಲೆಗೊಳ್ಳುವುದು. ಜಂಗಮ ಪ್ರಸಾದವು ಕಾರಣ ಶರೀರದಲ್ಲಿ ಪ್ರಸಿದ್ಧ ಪ್ರಸಾದವಾಗಿ ನೆಲೆಗೊಳ್ಳುವುದು. ಪ್ರಸಾದದ ಕಳೆ ಸರ್ವಾಂಗದಲ್ಲಿ ವೇಧಿಸಿ ಪ್ರಸಾದದ ಸಂತೃಪ್ತಿಯಲ್ಲಿರುವನಾಗಿ ಹೀನ ವೃತ್ತಿಯು ಅಳಿವುದೆಂದು ತಿಳಿದುಕೊಂಬುದು ತತ್ವ ಜ್ಞಾನಿಗಳು.

ಪರನಿಂದೆ-ಪರಬಾಧತ್ವ : ಮಾನವನು ಕೋಟ್ಯಾಂತರ ಜೀವಗತಿಗಳಲ್ಲಿ ತಿರುಗುತ್ತಾ ಪುಣ್ಯವಶದಿಂದಾ ಮನುಷ್ಯ ಜನ್ಮಕ್ಕೆ ಬಂದರೂ ಹಿಂದಣ ಜನ್ಮಗಳ ವಾಸನೆಯನ್ನು ಹಿಡಿದುಕೊಂಡೇ ಸ್ವಾರ್ಥಕ್ಕಾಗಿ ಬೇರೆಯವರಿಗೆ ತೊಂದರೆಯನ್ನು ಮಾಡುತ್ತಾ ಅನೇಕ ಜೀವ ಗತಿಗಳಲ್ಲಿ ತಿರುಗುತ್ತಾ ಬರುತ್ತಿರುವನು, ಜೀವಗುಣವು ಆ ರೀತಿ ಮಾಡುವುದು. ಅನೇಕ ಜನ್ಮದ ಪುಣ್ಯದಿಂದ ಮನುಷ್ಯ ಜನ್ಮಕ್ಕೆ ಬಂದು ಸದ್ಗುರುವಿನಿಂದ ದೀಕ್ಷೆಯನ್ನು ಪಡೆದು ಶ್ರೀ ಗುರುವು ಅಷ್ಟಾವರಣಗಳನ್ನು ಕೊಡುವಾಗ ಅಂತರಂಗದ ಪರಮಾತ್ಮನ ಶಾಂತಿಯ ಚಿತ್ ಪ್ರಕಾಶವೇ ಭಸಿತವೆಂದು ಕೊಡಲು ಸದ್‌ಭಕ್ತನು ಸದ್‌ಭಕ್ತಿಯಿಂದ ಭಸ್ಮದ ಆಚರಣೆಯನ್ನು ಸ್ನಾನ, ಧೂಳನ, ಧಾರಣ ಆಚರಣೆಯಿಂದ ಆಚರಿಸುವುದರಿಂದ ಆ ಚಿದ್‌ಭಸ್ಮವು ಅಂತರಂಗಕ್ಕೆ ವೇಧಿಸಿ, ಸರ್ವಾಂಗವೆಲ್ಲವೂ ಲಿಂಗ ಪ್ರಕಾಶದಿಂದ ಭಸ್ಮ ಪ್ರಕಾಶದಲ್ಲಿ ನಿಂದು ಚಿದಂಗವಾಗಿ ಮಾರ್ಪಟ್ಟು ಅಂಗದ ದುರ್ಗುಣಗಳೆಲ್ಲವೂ ಕಳೆದು ಹೋಗಿ ವಿಶ್ವವೆಲ್ಲವೂ ಲಿಂಗ ಪ್ರಕಾಶದಲ್ಲಿರುವುದೆಂದು ಅನುಭವಕ್ಕೆ ಬಂದು, ಪ್ರಕೃತಿ ವಶವಾದ ಜೀವಿಗಳ ದುಃಕ್ರಿಯೆಗಳಾಗಿ ನಡೆವುದೆಂದು ತಿಳಿದು, ಪ್ರಕೃತಿಗೆ ಅತೀತವಾದ ಲಿಂಗ ಪ್ರಕಾಶದಲ್ಲಿ ಉಳಿದು, ವ್ಯವಹರಿಸುವನಾಗಿ ಪರನಿಂದೆ ಪರಬಾಧತ್ವದ ಗುಣಗಳು ನಷ್ಟವಾಗುವುದೆಂದು ತಿಳಿದುಕೊಂಬುದು ತತ್ವಜ್ಞಾನಿಗಳು.

ಹಿಂಸೆ : ಅನೇಕ ಜನ್ಮದ ಪುಣ್ಯದಿಂದ ಭಕ್ತಿಯಂಕುರಿಸಿ ಶ್ರೀ ಗುರುವಂ ಮೊರೆ ಹೋಗಲು ಶ್ರೀ ಗುರುವು ಪೂರ್ವದ ತನುಗುಣವಂ ಕ್ರಿಯಾ ದೀಕ್ಷೆಯಿಂದ ಭಸ್ಮೀಕೃತವ ಮಾಡಿ ಲಿಂಗವಂ ಸಂಬಂಧಿಸಿ, ಅಂತರಂಗದ ಚಿತ್‌ಕಾಂತಿಯೆ ಇದು ಎಂದು ರುದ್ರಾಕ್ಷಿಯಂ ಕೊಡಲು, ಚಿದ್ರುದ್ರಾಕ್ಷಿಯ ಭಕ್ತಿಯು ಮನವನ್ನಾವರಿಸಿ ಲಿಂಗದ ಕಾಂತಿಯಾದ ರುದ್ರಾಕ್ಷಿಯು ಶರೀರದಲ್ಲಿ ಲಿಂಗ ದೃಷ್ಠಿಯಾಗಿ ಅಳವಟ್ಟು ಸರ್ವ ಇಂದ್ರಿಯಗಳೆಲ್ಲಾ ಲಿಂಗದ ನೇತ್ರಗಳಾಗಿ ಸತ್‌ಕ್ರಿಯಾಚಾರವು ಧೃಡವಾಗಿ ವಿಶ್ವವೆಲ್ಲವೂ ಲಿಂಗದ ಚೇತನವೆಂದು, ಲಿಂಗದ ಸ್ವರೂಪವೆಂದು ಜಗತ್ತಿನ ನೋವೇ ತನ್ನ ನೋವು

ಎಂದು ಧೃಡವಾಗಲು ಹಿಂಸಾಕೃತ್ಯವಳಿದು ಅಹಿಂಸಾ ತತ್ವವು ತನ್ನಲ್ಲಿ ಧೃಡವಾಗಿ ಅಳವಡಲು ಹಿಂಸಾಗುಣಗಳು ಅಳಿವವು ಎಂದು ತಿಳಿದುಕೊಂಬುದು ತತ್ವ ಜ್ಞಾನಿಗಳು.

ಪಾಪಿಷ್ಠತ್ವ : ಮಾನವನ ಅನೇಕ ಜನ್ಮಗಳಲ್ಲಿ ಎಂಭತ್ನಾಲ್ಕು ಲಕ್ಷ ಜೀವರಾಶಿಗಳಲ್ಲಿ ಬರುತ್ತಾ ಒಂದೊಂದು ಜನ್ಮಗಳಲ್ಲಿ ಸಹಸ್ರಕೋಟಿ ಜನ್ಮ ಎತ್ತುತ್ತಾ ಮನುಜ ಜನ್ಮಗಳಲ್ಲಿ ಮಾಡಿದ ಫಲಗಳಿಗನುಸಾರವಾಗಿ ಆ ಜನ್ಮಗಳಲ್ಲಿ ತಿರುಗುತ್ತಾ ಹೋಗುವಾಗ ಅನೇಕ ಸಾರಿ ಮನುಷ್ಯ ಜನ್ಮಗಳಲ್ಲಿ ಮಾಡಿದ ಫಲಗಳಿಂದ ಪುಣ್ಯ ಫಲಗಳು ಹೆಚ್ಚಾಗಿ ಮನುಷ್ಯ ಜನ್ಮಕ್ಕೆ ಬಂದರೂ ಆ ಪುಣ್ಯದ ಫಲದಿಂದ ತಾನಾರು, ತನಗೆ ಈ ದೇಹ ಬಂದ ಪರಿಯಾವುದು ಇದಕ್ಕೆ ಪರಿಹಾರವಿದೆಯೆ? ಎಂಬ ವಿವೇಕ ತಲೆದೋರಿ ಇದಕ್ಕೆ ಪರಿಹಾರವು ಸತ್ಪುರುಷರ ಸಹವಾಸದಿಂದ ಶರಣರ ಸಂಗವು ಪ್ರಾಪ್ತವಾಗಿ, ಶರಣರ ನಡೆಯಂತೆ ನಡೆಯಲು ಇಚ್ಛಿಸಿ, ಶ್ರೀ ಗುರುವಿನಿಂದ ದೀಕ್ಷೆಯನ್ನು ಪಡೆದು ಶ್ರೀ ಗುರುವು ಕ್ರಿಯಾದೀಕ್ಷೆಯಿಂದ ತನುಗುಣವನ್ನು ಶುದ್ಧೈಸಿ ಮಂತ್ರ ದೀಕ್ಷೆಯಿಂದ ಶ್ರೋತ್ರ್ಯದಲ್ಲಿ ಮಹಾಮಂತ್ರೋಪದೇಶವನ್ನು ಮಾಡಲು ಆ ಮಹಾಮಂತ್ರೋಪದೇಶ ಮನದಲ್ಲಿ ನೆಲೆಗೊಂಡು ನೆನೆಯಲು ಮನವೆಲ್ಲಾ ಮಂತ್ರಮಯವಾಗಿ, ಲಿಂಗಮಯವಾಗಿ, ವಿಶ್ವವೆಲ್ಲವೂ ಮಹಾಲಿಂಗ ಸ್ವರೂಪವೆಂದು ಮಹಾಲಿಂಗದ ವ್ಯವಹಾರವೆಂದೂ ವಿಶ್ವದ ನೋವೆ ತನ್ನ ನೋವೆಂದು ಅನುಭವಕ್ಕೆ ಬಂದು ತನ್ನಲ್ಲಿ ಆವರಿಸಿದ್ದ ಪಾಪದ ಗುಣಗಳು ಅಳಿದು, ಲಿಂಗ ಗುಣಗಳು ಅಳವಟ್ಟು ಪಾಪಿಷ್ಠತ್ವವು ಅಳಿವುದು ಎಂದು ತಿಳಿದುಕೊಂಬುದು ತತ್ವಜ್ಞಾನಿಗಳು.

ಈ ಮೇಲೆ ತಿಳಿಸಿದ ತಮೋಗುಣಗಳು ಅಷ್ಟಾವರಣದ ದಿವ್ಯ ಪ್ರಕಾಶದ ಆಚರಣೆಯಲ್ಲಿ ಅಳಿದು, ಲಿಂಗದ ಆಚರಣೆಯ ಗುಣಗಳು ಉಳಿದ ಸತ್ಯ ಶರಣರ ಸಂಗದಲ್ಲಿರಿಸಿ ರಕ್ಷಿಸಯ್ಯಾ ಶ್ರೀ ಮತ್ತೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ಆತ್ಮತ್ರಯಗಳು

ಜೀವಾತ್ಮ, ಅಂತರಾತ್ಮ, ಪರಮಾತ್ಮ ಇವು ಆತ್ಮ ತ್ರಯಂಗಳು.

ಆತ್ಮನು ಸಂಸಾರ (ವ್ಯಾಪಿಯಾಗಿ) ಜೀವನದಲ್ಲಿ ಬೆರೆಯಲು ಜೀವಾತ್ಮನು. ಆತ್ಮನು ಸಂಸಾರವ ಹೊದ್ದಿಯೂ, ಹೊದ್ದದಿಹನಾಗಿ, ಅಂತರಾತ್ಮನು. ಸಹಜದಲ್ಲಿ ನಿಃಕಲನಾಗಿರಲು ಪರಮಾತ್ಮನು. ಇಂತಿವು ಆತ್ಮತ್ರಯಂಗಳ ಭೇದ.

ಶಿವಾಂಶಿಕನಾದಾತ್ಮನು ಪರಶಿವನಾಜ್ಞೆಯಿಂದ ಶರೀರ ಸಂಬಂಧಿಯಾದಾಗ ಆ ಆತ್ಮನು ಸಂಸಾರ ವ್ಯಾಪ್ತಿಯಾದಂತ ಸ್ಥೂಲಸೂಕ್ಷ್ಮವಾದ ಸಕಲಸಂಸ್ಕೃತಿಗಳಲ್ಲಿ ಇಚ್ಛೆಯುಳ್ಳವನಾದಂತಾ ಜೀವನ ಬೆರಸಲಾಗಿ ಜೀವಾತ್ಮನ ವರ್ತನೆಯೊಡನೆ ಕೂಡಿ ತಾನು ಚರಿಸುರನಾಗಿ ಜೀವಾತ್ಮನೆಂದು ಹೇಳಿಸಿಕೊಂಡನು. ಅಲ್ಲಿ ಆತ್ಮನಿಗೆ ಕಿಂಚಿತ್ ವಿವೇಕ ತಲೆದೋರಿದಾಗ, ಆ ವಿವೇಕಿಯಾದಾತ್ಮನು ಸಂಸಾರವ ಹೊದ್ದಿಯೂ ಒಂದು ವೇಳೆ ಅರಿವು ಜಾಗ್ರತವಾಗಿ ಮುಂದೆ ಬಂದು ಜಾಗರೂಕತೆಯಿಂದ ಸಕಲ ಸಂಸ್ಕೃತಿಗಳಲ್ಲಿ ಮನ ಬೆರಸಿದಾತನಾಗಿಯೂ, ಹೊದ್ದನಾಗಿ ಅವ ತಾನೇ ಅಂತರಾತ್ಮನೆಂದು ಹೇಳಿಸಿಕೊಂಡನು. ಅಲ್ಲಿ ಆತ್ಮರಿಗೆ ನಿಜ ಜ್ಞಾನವು ನಿರ್ಧಾರವಾದಾಗ ಇಹಲೋಕದ ಪರಲೋಕದ ಸಂಸ್ಕೃತಿಗಳನ್ನು ವಿಸರ್ಜಿಸಿ, ನಿಃಕಲನಾಗಿರಲು ನಿರಾಲಂಬ ಬ್ರಹ್ಮವೇ ತಾನಾಗಿರಲು ಅವ ತಾನೇ ಪರಮಾತ್ಮನೆನಿಸಿಕೊಂಡನು.

ಪರಿಹಾರ

ಮಾನವನಿಗೆ ಅನೇಕ ಜನ್ಮದ ಪುಣ್ಯದಿಂದ ಭಕ್ತಿ ಅಂಕುರಿಸಿ ಶ್ರೀ ಗುರುವಂ ಮೊರೆಹೋಗಲು ಶ್ರೀ ಗುರುವು ನೀನು ಭವಬಂಧಕ್ಕೆ ಹೆದರಬೇಡ. ನೀನು ಸಾಕ್ಷಾತ್ ಪರಮಾತ್ಮನು ನೀನು ಜೀವನಲ್ಲ ಎಂದು ಕರದಲ್ಲಿ ಇಷ್ಟಲಿಂಗವನ್ನು ಸ್ಥಾಪಿಸಿ, ಜೀವನೇ ನೀನೆಂಬ ಭಾವವನ್ನು ಬಿಡಿಸಿ, ಪರಮಾತ್ಮನೇ ಇಷ್ಟಬ್ರಹ್ಮ, ಇಷ್ಟ ಬ್ರಹ್ಮವೇ ನೀನು ಎಂಬ ಭಾವವನ್ನು ನೆಲೆಗೊಳಿಸಲು, ಜೀವಾತ್ಮ ಭಾವ ನಷ್ಟವಾಯಿತು. ಗುರು ತೋರಿದ ಲಿಂಗದಲ್ಲಿ ವಾಯು ಮನಸ್ಸು ದೃಷ್ಟಿ ನೆಲೆಗೊಂಡು ಮನದಲ್ಲಿ ನೇತ್ರದ ಲಿಂಗ ಕಳೆ ಸ್ಥಿರವಾಗಲು, ಪ್ರಾಣಲಿಂಗವಾಗಿ ಆಚರಿಸುವನಾದ ಕಾರಣ ಅಂತರಾತ್ಮ ಭಾವ ನಷ್ಟವಾಯಿತು. ಮನದಲ್ಲಿ ಅಂತರಾತ್ಮಭಾವ ಶ್ರೇಷ್ಠವಾಗಿ ಪ್ರಾಣಲಿಂಗವಾಗಿ ಆಚರಿಸುತ್ತಾ ಶ್ರೀ ಗುರುವಿನ ಅಭಯ ಹಸ್ತದ ಪರಿಣಾಮವಾಗಿ ಭಾವ ಭ್ರಮೆಗಳು ನಷ್ಟವಾಗಿ ಭಾವದಲ್ಲಿ ಭಾವಲಿಂಗವು ನೆಲೆಗೊಂಡು ಪರಮಾತ್ಮ ಭಾವವು ಸ್ಥಿರಗೊಳ್ಳುವುದು.

ಜೀವತ್ರಯಗಳು

ವಿಶ್ವ, ತೈಜಸ್, ಪ್ರಾಜ್ಞ, ಇವೇ ಜೀವತ್ರಯಂಗಳು. ಜೀವನು ವಿಶ್ವ ಜೀವನ ಬೆರೆಸಲು, ಆಶಾಪಾಶ, ಕ್ಲೇಶಪಾಶ, ಮೋಹಪಾಶ, ಭವಪಾಶಯೆಂಬ ಚತುಃಪಾಶಂಗಳಲ್ಲಿ ಬಿಗಿವೊಡೆದಿರುವಂತಹ ಬದ್ಧ ಜೀವನು ಬಹಿರಂಗದ ಷಟ್ ಕೃಷಿ ವ್ಯಾಪಾರಂಗಳೊಡನೆ ಚರಿಸಲು ಆತನೇ ಬದ್ದ ಜೀವನೆನಿಸಿಕೊಂಬನು.

ಜೀವನು ಬದ್ಧಜೀವನಾಗಿ ತೈಜಸ ಸಂಬಂಧದಿಂ ಸೂಕ್ಷ್ಮತನುವಿನ ಇಂದ್ರಿಯ ಸಂಬಂಧವಾದ ವಿಷಯಂಗಳೊಡನೆ ಕೂಡಿ ಚರಿಸಲು, ತೈಜಸ ಜೀವನೆಂದೇ ಹೇಳಿಸಿಕೊಂಡನು. ತೈಜಸ ಜೀವನೆಂದು, ಇಂದ್ರಿಯ ಜೀವನೆಂದೂ, ಸ್ವಪ್ನಗ್ರಾಹಕನೆಂದೂ ಒಂದೇ ನಾಮ, ಬದ್ಧ ಜೀವನು ಪ್ರಾಜ್ಞ ಜೀವನ ಬೆರೆಸಲು, ಲೇಸಾಗಿ ಅಜ್ಞಾನದ ಕತ್ತಲೆಯೊಳಗೆ ಕಾರಣ ತನುವಿನ ಮರವೆಯಲ್ಲಿರ್ದನಾಗಿ, ಮಗ್ನನಾಗಿರ್ದ ಕಾರಣ ಪ್ರಾಜ್ಞ ಜೀವನೆಂದೇ ಹೇಳಿಸಿಕೊಂಡನು.

ಜೀವನು ಸ್ಥೂಲತನುವಿನಲ್ಲಿರ್ದು ಮರೆವೆಯುಲ್ಲಿರುವುದರಿಂದ ವಿಶ್ವಜೀವ ನೆಂದೆನಿಸಿಕೊಂಡನು.

ಜೀವನು ಸೂಕ್ಷ್ಮ ತನುವಿನ ಮರವೆಯುಲ್ಲಿರ್ದು ವ್ಯವಹರಿಸಿದಾಗ ತೈಜಸ ಜೀವನೆಂದೆನಿಸಿಕೊಂಡನು.

ಜೀವನು ಕಾರಣ ತನುವಿನ ಮರೆಯುಲ್ಲಿ ವ್ಯವಹರಿಸಿದಾಗ ಪ್ರಾಜ್ಞ ಜೀವನೆಂದೆನಿಸಿಕೊಂಡನು.

ಮಾನವನಿಗೆ ಅನೇಕ ಜನ್ಮದ ಪುಣ್ಯದಿಂದ ಶ್ರೀ ಗುರುವಂ ಮೊರೆಹೋಗಲು ಶ್ರೀ ಗುರುವು ಶಿಷ್ಯನಿಗೆ ಅಭಯ ಹಸ್ತವನಿಟ್ಟು ಮಂತ್ರೋಪದೇಶವ ಮಾಡಿ ಕರದಲ್ಲಿ ಲಿಂಗ ಸ್ಥಾಪನೆ ಮಾಡಿದ ಮೇಲೆ ವಿಶ್ವಜೀವನು ಎಂಬ ಗುಣ ನಾಶವಾಗಿ, ಇಷ್ಟಲಿಂಗವಾಗಿ ಆಚರಿಸುವನು. ತೈಜಸ ಜೀವನ ಗುಣ ಕಳೆದು, ಪ್ರಾಣಲಿಂಗವಾಗಿ ವ್ಯವಹರಿಸುವನು. ಪ್ರಾಜ್ಞ ಜೀವನಗುಣವಳಿದು ಭಾವಲಿಂಗವಾಗಿ ವ್ಯವಹರಿಸುವನೆಂದು ತಿಳಿದುಕೊಂಬುದು ತತ್ವಜ್ಞಾನಿಗಳು.

ಅವಸ್ಥಾತ್ರಯಗಳು

ಜಾಗ್ರತ್, ಸ್ವಪ್ನ, ಸುಷುಪ್ತಿ : ಎಚ್ಚರದಿಂದಿರುವುದೇ ಜಾಗ್ರತ್ ಎಂದು ಹೇಳುವರು. ಕನಸುಕಾಂಬುವುದೇ ಸ್ವಪ್ನವೆಂದು ಹೇಳುವರು, ಶರೀರ ಮೈ ಮರೆತು ಮರೆಯುವುದೇ ಸುಷುಪ್ತಿಯೆಂದು ಹೇಳುವರು.

ಕರ್ಮೇಂದ್ರಿಯ ಐದು, ಜ್ಞಾನೇಂದ್ರಿಯಗಳೈದು. ವಿಷಯೇಂದ್ರಿಯಗಳೈದು, ವಾಯುಗಳೈದು, ಕರಣಗಳೈದು, ಆತ್ಮನು ಈ ಇಪ್ಪತ್ತೈದು ತತ್ವಗಳಿಂದ ಕೂಡಿಕೊಂಡು ಸ್ಥೂಲತನುವಿನ ಮರವೆಯೊಡನೆ ಕೂಡಿಕೊಂಡು ಎಚ್ಚರವುಳ್ಳವನಾಗಿ ಬಹಿರಂಗ ದೃಶ್ಯನಾಗಿ ತೋರುವ ಸಕಲೇಂದ್ರಿಯಗಳಿಂದ ವ್ಯವಹಾರದೊಡನೆ ಕೂಡಿಕೊಂಡು ಚರಿಸುವುದೆಂಬುದೀಗ ಜಾಗ್ರತಾವಸ್ಥೆ ಎನಿಸುವುದು.

ಆತ್ಮನು, ಕರ್ಮೇಂದ್ರೀಯಗಳೈದು, ಜ್ಞಾನೇಂದ್ರಿಯಗಳೈದು, ಮನ, ಬುದ್ಧಿ ಈ ಹದಿನೇಳು ತತ್ವಗಳಿಂದ ನಿಂದು, ಸ್ಥೂಲತನುವಿನ ಮರವೆಯೊಡನೆ ಕೂಡಿ, ಸೂಕ್ಷ್ಮ ತನುವಿನೊಡನೆ ಕೂಡಿಕೊಂಡು ದೃಶ್ಯಾ ದೃಶ್ಯವಾದ ಕಲ್ಪಿತ ರೂಪಿನ ಕಾಣಿಕೆಯಾಗಿಪ್ಪ ಸುಖದುಃಖ ಮೋಹರೂಪವಾದ ಸ್ವಪ್ನಂಗಳ ಕಾಣುವುದೇ ಸ್ವಪ್ನಾವಸ್ಥೆ. ಪ್ರಾಣವಾಯು, ಪ್ರಕೃತಿಯೆಂಬ ಮೂರು ಸಮಷ್ಠಿಯಾಗಿ ನಿಂದು ಸ್ಥೂಲತನುವಿನ ಮರವೇ ಸೂಕ್ಷ್ಮ ತನುವಿನ ಅರಿವು, ಏನೂ ಇಲ್ಲದೆ ಒಂದು ಚರಣಾಯುಧನು (ಕೋಳಿ) ಪರಿದು ಮೆರೆಯುತಿರ್ಪ ಮರಿಗಳೆಲ್ಲವನು ತನ್ನ ಪಕ್ಕದ ಮರೆಯಲ್ಲಿ ಅಡಗಿಸಿಕೊಂಡು ತಾನೊಂದೆಡೆಯಲ್ಲಿ ನಿದ್ದೆಗೈವ ಹಾಗೆ, ಸಕಲ ತತ್ವಂಗಳನು ತನ್ನಲ್ಲಿಯೇ ಅಡಗಿಸಿಕೊಂಡು, ತಾನು ಆ ಮಾಯಾನಂದ ಭೋಗದಲ್ಲಿ ಪರವಶವನೈದಿರುವಂತಹದೇ ಸುಷುಪ್ತಿಯೆನಿಸುವುದು. ಮಾನವನಿಗೆ ಅನೇಕ ಜನ್ಮದ ಪುಣ್ಯದಿಂದ ಸಮ್ಯಕ್ ಜ್ಞಾನ ಉದಯಿಸಲು ಪ್ರಕೃತಿಯ ನಿವಾರಣೆಗೆ ಶ್ರೀ ಗುರುವಂ ಮೊರೆಹೋಗಲು, ಶ್ರೀ ಗುರುವು ಅವಸ್ಥಾತ್ರಯಂಗಳ ನಿವಾರಣೆಗೆ ದೀಕ್ಷೆಯಂ ಮಾಡಿ ಭಾವದಲ್ಲಿ ಭಾವಲಿಂಗವಂ ಸಂಬಂಧವ ಮಾಡಿ, ಮನದಲ್ಲಿ ಮಂತ್ರೋಪದೇಶವ ಮಾಡಿ ಪ್ರಾಣಲಿಂಗವ ಸಂಬಂಧಿಸಿ, ತನುವಿನಲ್ಲಿ ಇಷ್ಟಲಿಂಗವ ಸಂಬಂಧಿಸಲು, ಅಂದಿನಿಂದ ಎಚ್ಚರವಿದ್ದಾಗ ಇಷ್ಟಲಿಂಗವಾಗಿ ವ್ಯವಹರಿಸುವನು. ಸ್ವಪ್ನದಲ್ಲಿ ಪ್ರಾಣಲಿಂಗವಾಗಿ ವ್ಯವಹರಿಸುವನು. ನಿದ್ದೆಯಲ್ಲಿ ಭಾವಲಿಂಗವಾಗಿ ವ್ಯವಹರಿಸಲು ಜಾಗ್ರ, ಸ್ವಪ್ನ, ಸುಷುಪ್ತಿಗಳಲ್ಲಿ ಲಿಂಗದ ವ್ಯವಹಾರವಾಗಿ ಲಿಂಗಾಂಗ ಸಾಮರಸ್ಯವನ್ನು ಪಡೆಯುವನು.

ಪರಮಾತ್ಮನ ಸ್ವರೂಪು

ನಾದ, ಬಿಂದು, ಕಲೆಗಳು ಮತ್ತು ಸತ್, ಚಿತ್, ಆನಂದ-ಸತ್, ಚಿತ್, ಆನಂದ, ನಿತ್ಯ ಪರಿಪೂರ್ಣ ಅಖಂಡ ತತ್ವಗಳು : ನಿಃಕಲ ಪರತತ್ವದಲ್ಲಿ ನಾದ, ಬಿಂದು, ಕಲೆಗಳುದಯಿಸಿದವು. ಮೂಲ ಪರವಸ್ತುವಿನಲ್ಲಿ ಉಲುಹು ರೂಪವಾದ ನಾದವು ಉತ್ಪತ್ತಿಯಾಗುವುದು. ಆ ಉಲುಹೇ ಘನೀಭವಿಸಿ, ಬಿಂದುವಾಯಿತ್ತು. ನಾದವು ಬಿಂದುವಿಗೆ ಚೈತನ್ಯಕೊಡುವುದು. ಇವೆರಡೂ ಪರಸ್ಪರ ಕೂಡಿಯೇಯಿರುವವು. ಇವು ಒಂದನ್ನೊಂದು ಬಿಟ್ಟು ಪ್ರಕಟವಾಗಲಾರವು. ಇವೆರಡು ಪ್ರಕಟವಾಗಿ ಅವುಗಳಲ್ಲಿ ಕಲೆಯು ಮೈದೋರುವುದು. ಕಲೆಯ ಮೂಲಕವೇ ವಸ್ತುವಿನ ಗುಣ, ನಾಮ, ರೂಪು ಮೊದಲಾದವುಗಳು ತೋರುತ್ತವೆ. ಈ ನಾದ, ಬಿಂದು, ಕಲೆಗಳು ಯಾವಾಗಲೂ ಒಟ್ಟುಗೂಡಿ ವ್ಯವಹರಿಸುತ್ತವೆ. ಇವು ಮೂಲ ಚಿತ್ತುವಿನಲ್ಲಿ ಬೆರೆತಿರುವುದು. ನಾದ, ಬಿಂದು,

ಕಲೆ ಮೂಲಚಿತ್ ಸೇರಿ ಅನಂತ ಬ್ರಹ್ಮಾಂಡಕೋಟಿಗಳ ಉದಯಾಧಾರ ವಿಶ್ರಾಂತಿಗೆ ಕಾರಣವೆನಿಸುತ್ತದೆ.

ನಿಃಕಲ ತತ್ವದಿಂದ ನಾದ, ಬಿಂದು, ಕಲೆಗಳು. ನಾದವೇ 'ಅ' ಕಾರ ಪ್ರಣವವೆನಿಸಿತ್ತು. ಬಿಂದುವೇ 'ಉ' ಕಾರ ಪ್ರಣವವೆನಿಸಿತ್ತು. ಕಲೆಯೇ 'ಮ' ಕಾರ ಪ್ರಣಮವೆನಿಸಿತ್ತು. 'ಅ' ಕಾರ ಪ್ರಣಮದಲ್ಲಿ ತಾರಕಾಕೃತಿ, ದಂಡಕಾಕೃತಿ ಪ್ರಕಟವಾದವು. 'ಉ' ಕಾರ ಪ್ರಣಮದಲ್ಲಿ ಕುಂಡಲಾಕೃತಿ, ಅರ್ಧಚಂದ್ರಾಕೃತಿಗಳು ಉದಯವಾದವು. 'ಮ' ಕಾರ ಪ್ರಣಮದಲ್ಲಿ ದರ್ಪಣಾಕೃತಿ (ಬಿಂದ್ವಾಕೃತಿ) ಜ್ಯೋತಿರಾಕೃತಿಗಳುದಯವಾದವು. ಜ್ಯೋತಿರಾಕೃತಿಯಲ್ಲಿ ಓಂಕಾರ ಪ್ರಣವ ಉದಯಿಸಿತು. ದರ್ಪಣಾಕೃತಿಯಲ್ಲಿ 'ಯ' ಕಾರ ಪ್ರಣವ ಉದಯಿಸಿತು. ಅರ್ಧಚಂದ್ರಾಕೃತಿಯಲ್ಲಿ 'ವ' ಕಾರ ಪ್ರಣವ ಉದಯಿಸಿತು. ಕುಂಡಲಾಕೃತಿಯಲ್ಲಿ 'ಶಿ' ಕಾರ ಪ್ರಣವ ಉದಯಸಿತ್ತು. ದಂಡಕಾಕೃತಿಯಲ್ಲಿ 'ಮ' ಕಾರ ಪ್ರಣವ ಉದಯಿಸಿತು. ತಾರಾಕಾಕೃತಿಯಲ್ಲಿ 'ನ' ಕಾರ ಪ್ರಣವ ಉದಯಿಸಿತು. ಈ ಪ್ರಣಮಗಳಿಂದಾ ಕಲೆಗಳುತ್ಪತ್ತಿ. ಕಲೆಗಳಿಂದಾ ಶಕ್ತಿಗಳುತ್ಪತ್ತಿ. ಶಕ್ತಿಗಳಿಂದ ಕರಣಗಳುತ್ಪತ್ತಿ. ಕರಣಗಳಿಂದ ವಿಷಯಗಳುತ್ಪತ್ತಿ. ವಿಷಯಗಳಿಂದ ಭೂತಗಳುತ್ಪತ್ತಿ. ಪಂಚಭೂತಗಳ ಉತ್ಪತ್ತಿಯೂ, ಈ ಪಂಚಭೂತಗಳು ಒಂದಕ್ಕೊಂದು ವಿಭಜಿಸಿ ಸೇರಿ, ಪಂಚವಿಂಶತಿ ತತ್ವಾತ್ಮಕವಾದ ಶರೀರವಾಯಿತ್ತು. ಈ ಶರೀರಕ್ಕೆ ಮಹಾಲಿಂಗದ ಅಂಶಿಕನಾದ ಆತ್ಮನು ಚೈತನ್ಯಾತ್ಮಕನಾಗಿ ವ್ಯವಹರಿಸುವನು. ಆತ್ಮನಿಗೆ ಪಂಚಭೂತಂಗಳ ಪ್ರಕೃತಿ ಗುಣಗಳು ಸೇರಿ ಪಂಚವಿಂಶತಿ ತತ್ವದಿಂದೊಡಗೂಡಿದ ಶರೀರದಲ್ಲಿ, ತನ್ನ ಮೂಲ ಸ್ವರೂಪವನ್ನು ಮರೆತು, ಶರೀರವೇ ನಾನೆಂದು ಆಚರಿಸುವನು. ಮೂಲಾತ್ಮ ಸ್ವರೂಪದಲ್ಲಿ ಪರಮಾತ್ಮನಂಶಿಕವಾದ ನಾದ, ಬಿಂದು, ಕಲೆಯೆ ಆತ್ಮನಲ್ಲಿ ಸತ್, ಚಿತ್, ಆನಂದವಾಗಿ ಮೈದೋರುವುದು. ಸತ್ ಎಂದರೆ ಸಮ್ಯಕ್ ಚೇತನ, ಚಿತ್‌ಯೆಂದರೆ ಸಮ್ಯಕ್‌ಸ್ಫುರಣ, ಆನಂದವೆಂದರೆ ಸಮ್ಯಕ್ ಪ್ರಕಾಶ. ಇವುಗಳು ಮೂಲವಾಗಿರುವವು.

ಮಾನವನು ತನುಗುಣದಿಂದ ತನ್ನ ಮೂಲ ಸ್ವರೂಪವನ್ನು ಮರೆತು ದೇಹವೇ (ಶರೀರವೆ) ನಾನೆಂದು ವ್ಯವಹರಿಸುತ್ತಾ ಹೋಗುವುದರಿಂದ ಸತ್‌ನಲ್ಲಿ ಕಾಮವು ಮೈದೋರುವುದು. ಚಿತ್ ನಲ್ಲಿ ಕ್ರೋಧವು ಮೈದೋರುವುದು. ಆನಂದದಲ್ಲಿ ಲೋಭವು ಜನಿಸುವುದು. ಯಾವಾಗಲೂ ಸತ್ ಶಕ್ತಿಯು ವಿಷಯಗಳನ್ನು ಬಯಸುವುದು. ಬಯಕೆಗೆ ಅಡೆತಡೆ ಬಂದಾಗ ಕ್ರೋಧದಿಂದ ವ್ಯವಹರಿಸುತ್ತಾ ಬಯಸಿದ ವಸ್ತುವು ತನಗೆ ಪ್ರಾಪ್ತವಾದಾಗ, ಎಷ್ಟು ಒದಗಿದರೂ ವಿಷಯಾನಂದದಿಂದ ನಿಜವಾದ ತೃಪ್ತಿ ಕಾಣದೆ ತನಗೆ ಬೇಕು, ಮಕ್ಕಳಿಗೆ ಬೇಕು, ಮೊಮ್ಮಕ್ಕಳಿಗೆ ಬೇಕು, ಆಡಂಬರದ ವ್ಯವಹಾರಕ್ಕೆ ಬೇಕೆಂದು ವಿಷಯಾನಂದದಿಂದ ವ್ಯವಹರಿಸುತ್ತಾ ಸತ್ತಿನಲ್ಲಿ ಲೌಕಿಕ ವಸ್ತುಗಳ ಮೋಹದಿಂದ ವ್ಯವಹರಿಸುತ್ತಾ, ಚಿತ್ತಿನಲ್ಲಿ ಆ ವಸ್ತುಗಳು ನನ್ನವುಗಳೆಂಬ ಮದದಿಂದ ವ್ಯವಹರಿಸುತ್ತಾ, ಆನಂದದಲ್ಲಿ ಬೇರೆಯವರಿಗೆ ತೊಂದರೆಯನ್ನು ಕೊಟ್ಟು ಮತ್ಸರಿಸುತ್ತಾ, ಮತ್ಸರದಲ್ಲಿ ಆನಂದಿಸುತ್ತಾ, ಕೋಟ್ಯಾಂತರ ಜನ್ಮಗಳಲ್ಲಿ ತಿರುಗುತ್ತಾ ಹೋಗುವನು. ಹೀಗಿರುವಲ್ಲಿ ಅನೇಕ ಜನ್ಮದ ಪುಣ್ಯ ಪರಿಪಾಕದಿಂದ, ವಿವೇಕವು ತಲೆದೋರಿ, ಈ ಭವಬಂಧನ ನಿವೃತ್ತಿಗೆ ಶ್ರೀ ಗುರುವಂ ಮೊರೆಹೋಗಲು, ಶ್ರೀ ಗುರುವು ಕೃಪಾದೃಷ್ಟಿಯಿಂದ ದೀಕ್ಷೆಯಂ ಮಾಡಿ, ಶರೀರಕ್ಕೆ ಲಿಂಗವಂ ಸಂಬಂಧಿಸಿ, ಅಷ್ಟಾವರಣಗಳಂ ಸಂಬಂಧಿಸಿ, ಷಡುಸ್ಥಲ ತತ್ವದಂತೆ ಆಚರಿಸುವಂತೆ ಬೋಧಿಸುವನು. ಅಂದಿನಿಂದಾ ಶ್ರೀ ಗುರು, ಶರಣರ ಸೇವಾ ಸದ್‌ಭಕ್ತಿಯಿಂದ ತನು ಸವೆದು

ಸತ್ ಸ್ವರೂಪನಾಗಿ, ಲಿಂಗ ನಿರೀಕ್ಷಣ, ಧ್ಯಾನ ಮಂತ್ರದಲ್ಲಿರುತ್ತಾನೆ. ಲಿಂಗ ಪೂಜಾ ನಿಷ್ಠೆ, ಸದ್ ಭಕ್ತಿಯಿಂದ ಮನ ಸವೆದು, ಚಿತ್ ಸ್ವರೂಪನಾಗಿ, ಸತ್ ಕಾಯಕ ಮಾಡುತ್ತಾನೆ. ಕಾಯಕದಿಂದ ಬಂದ ಧನವು ಜಂಗಮ ಮತ್ತು ಶರಣರ ದಾಸೋಹಕ್ಕೆ ವ್ಯಯಿಸುವುದರಲ್ಲಿ ಆನಂದ ಸ್ವರೂಪನಾಗುತ್ತಾನೆ. ಕಿಂಕುರ್ವಾಣ ಭಕ್ತಿಯಿಂದ ಪಾದೋದಕ ಸೇವನೆ ಮಾಡುವಲ್ಲಿ ನಿತ್ಯಸ್ವರೂಪನಾಗಿ, ಪ್ರಸಾದಾರ್ಪಣದಿಂದ ತಾನು ಮತ್ತು ಸರ್ವವೂ ಸಂತೃಪ್ತಿಯ ಪರಿಪೂರ್ಣ ಪ್ರಸಾದ ಸ್ವರೂಪನಾಗುತ್ತಾನೆ. ಕಿಂಕುರ್ವಾಣ ಭಕ್ತಿಯಿಂದ ಅಷ್ಟಾವರಣ, ಪಂಚಾಚಾರ ಸ್ವರೂಪವೇ ತಾನಾಗಿ, ಷಟ್‌ಸ್ಥಲಾತ್ಮಕವಾಗಿ ಆಚರಿಸುತ್ತಾ, ಅಖಂಡ ಸ್ವರೂಪನಾಗಿ ಸಾಕ್ಷಾತ್ ಪರವಸ್ತುವಿನ ಮೂರ್ತಿಬ್ರಹ್ಮ, ಪಿಂಡಬ್ರಹ್ಮ, ಕಲಾಬ್ರಹ್ಮ, ಆನಂದಬ್ರಹ್ಮ, ವಿಜ್ಞಾನಬ್ರಹ್ಮ, ಪರಬ್ರಹ್ಮಸ್ವರೂಪವೇ ತಾನಾಗಿ, ತನುದಾಸೋಹ, ಮನದಾಸೋಹ, ಧನದಾಸೋಹ, ಅನುಭವದಾಸೋಹ, ಜ್ಞಾನದಾಸೋಹ, ಸಂತೃಪ್ತಿ ದಾಸೋಹದಲ್ಲಿ ತಾನೆಂಬುದಳಿದು, ಲಿಂಗವೇ ತಾನೆಂಬುದುಳಿದು, ನಿರ್ಲೇಪರಾಗಿರುವ ಸತ್ಯಶರಣರ ಸಂಗದೊಳಗಿರಿಸಯ್ಯಾ ಶ್ರೀ ಮತ್ತೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ಮನತ್ರಯಂಗಳು

ಮನ, ಮನನ, ಮನನೀಯ, ಇವು ಮನತ್ರಯಂಗಳು

ಇವಕ್ಕೆ ವಿವರ: ಮನವೆಂದಲ್ಲಿ ಶರೀರವೇ ತಾನೆಂದು ತನ್ನ ವಿಚಾರವನ್ನು ಹೇಳುವುದು. ಜ್ಞಾತ ಸ್ವರೂಪರಾದ ಆತ್ಮನ ಲಕ್ಷ್ಮಣ ಒಂದನ್ನೇ ಕುರುಹಿಡಿವುದು. ಮನನವೆಂದಲ್ಲಿ ಆತ್ಮನಿಂದ ಅರಿವ ಜ್ಞಾನವನ್ನು ಹೇಳುವುದು. ಅರಿವು ಲಕ್ಷ್ಮಣ ಒಂದನ್ನೇ ಕುರುಹಿಡಿವುದು.

ಮನನೀಯವೆಂದಲ್ಲಿ ಅರಿವಿನಿಂದ ತಿಳಿದುಕೊಳ್ಳುವ ವಸ್ತು ಒಂದನ್ನೇ ಹೇಳುವುದು. ಘಟ ಪಟಾದಿಗಳ ಪದಾರ್ಥಗಳನ್ನೇ ಕುರುಹಿಡಿವುದು.

ಮನ, ಮನನ, ಮನನೀಯವೆಂದರೂ, ತತ್‌ಪದ, ತ್ವಂಪದ, ಅಸಿಪದವೆಂದರೂ ತಾನು ತನ್ನರಿವು ಶಿವತತ್ವವೆಂದರೂ, ಆತ್ಮತತ್ವ, ಶಿವತತ್ವ, ವಿದ್ಯಾತತ್ವವೆಂದರೂ ಜ್ಞಾತೃ, ಜ್ಞಾನ, ಜ್ಞೇಯವೆಂದರೂ, ಒಂದೆ ನಾಮ ಪರ್ಯಾಯವಾಗಿರುತ್ತಿಪ್ಪುವು.

ಶರಣರು ಈ ಪದಗಳಿಗೆ ತತ್‌ಪದವೇ ಇಷ್ಟಲಿಂಗವೆಂತಲೂ ತ್ವಂಪದವೇ ಪ್ರಾಣ ಲಿಂಗವೆಂತಲೂ ಅಸಿಪದವೇ ಭಾವಲಿಂಗವೆಂತಲೂ ತಿಳಿದು ಆಚಾರಿಸುವರು. ಮೇಲಿನ ಪದಗಳನ್ನು ಈ ತತ್ವಕ್ಕನುಸಾರವಾಗಿ ತಿಳಿದುಕೊಂಬುದು ತತ್ವಜ್ಞಾನಿಗಳು.

ತ್ರಿಕರಣಗಳು

ಮಾನಸ, ವಾಚಕ, ಕಾಯಕ, ಇವು ತ್ರಿಕರಣಗಳು.

ಇವಕ್ಕೆ ವಿವರ : ಮಾನಸವೆಂದರೆ ಮನದಲ್ಲಿ ನೆನೆವುದು. ನೆನೆದುದ್ದನ್ನು ನುಡಿಯುವುದು, ವಾಚಕವೆನಿಸುವುದು. ಕಾಯಕವೆಂದಡೆ ನುಡಿದದ್ದನ್ನು ಕೈಮುಟ್ಟಿ ಮಾಡುವುದು. ಇಂತಿವು ತ್ರಿಕರಣಗಳ ಭೇದ. ಮಾನಸವೆಂದಲ್ಲಿ ಮನದಲ್ಲಿ ನೆನೆಯುವುದು. ಆವುದಾನೊಂದು ಕಾರ್ಯವನ್ನು ತನ್ನ

ಅಂತರಂಗದೊಳಗೆ ಯೋಚಿಸುವುದು. ಆ ಯೋಚಿಸಿದ ಕಾರ್ಯವನ್ನು ವಾಚಕವೆಂದರೆ ತನ್ನಂತರಂಗದೊಳಗೆ ಯೋಚಿಸಿದ ವಿಷಯವನ್ನು ಪರರ ಕೂಡಾ ಹೇಳುವುದು. ಕಾಯಕವೆಂದಡೆ ನುಡಿಯನ್ನು ತನುಮುಟ್ಟಿ ಮಾಡುವುದು. ಅನ್ಯರು ಹೇಳಿದಂಥ ಕಾರ್ಯವನ್ನು ತನ್ನಂಗವ ಬಳಲಿಸಿ, ಆಯಾಸಂ ಬಟ್ಟು, ಅನುಗೈಯ್ಯುವುದು.

ಈ ತ್ರಿಕರಣಗಳು ಮಹಾಲಿಂಗದಿಂದುಂಟಾದ ಇಚ್ಛಾ, ಜ್ಞಾನ, ಕ್ರಿಯಾ ಶಕ್ತಿಗಳೇ ಮಾನಸ, ವಾಚಕ, ಕಾಯಕವೆಂಬ ತ್ರಿಕರಣಗಳಾಗಿರ್ಪವು.

ಮಾನವರು ತನುಗುಣದಿಂದ ಈ ಕಾರ್ಯ ಶರೀರವೇ ತಾನೆಂದು ಯಾವಾಗಲೂ ಯಾವುದಾದರೊಂದು ಕ್ರಿಯೆಗಳನ್ನು ಮಾಡುತ್ತಾ, ಆ ಕಾರ್ಯದಿಂದ ಮಾಡಿದ ಕೆಲಸಗಳ ವಿಷಯವಾಗಿ ಮಾತನಾಡುತ್ತಾ, ಆ ವಿಷಯಗಳನ್ನು ಮನಸ್ಸಿನಲ್ಲಿ ಗ್ರಹಿಸುತ್ತಾ, ತನ್ನ ಜೀವನ ಪರ್ಯಂತರವೂ ನಡೆಯುತ್ತಾ ಹೋಗುವನು. ಮನಸ್ಸಿನಿಂದ ಗ್ರಹಿಸಿದ್ದ ವಿಷಯಗಳ ವ್ಯವಹಾರಗಳು, ಭಾವದಲ್ಲಿ ಅಡಗಿರುವವು. ಕೊನೆಗೆ ಸ್ಥೂಲ ಶರೀರಬಿಟ್ಟು, ಸೂಕ್ಷ್ಮ ಕಾರಣ ಶರೀರಗಳು ಆತ್ಮನೊಡನೈದುವುವು. ಸ್ಥೂಲ ಶರೀರವನ್ನು ಆತ್ಮನು ಬಿಟ್ಟ ಕೂಡಲೇ (ಮಾತನಾಡಿದಂತೆ) ವಾಚಕದಿಂದ ಬಂದಂತಾ ಒಳ್ಳೆಯ ಕೆಟ್ಟ ವಿಷಯಗಳು ಆತ್ಮನಿಗೆ ಸಂಬಂಧಿಸಿ, ಮನಸ್ಸಿಗೆ ವೇಧಿಸಿ ಆ ಕರ್ಮ ಫಲಗಳಿಗನುಸಾರವಾಗಿ ಎಂಭತ್ತೂರು ಲಕ್ಷದ ಒಂಬೈನೂರಾ ತೊಂಬತ್ತೊಂಬತ್ತು ಜನ್ಮಗಳಲ್ಲಿ ತಿರುಗುತ್ತಾ, ಅದಕ್ಕನುಸಾರವಾಗಿ ಎಷ್ಟೋ ಸಾರಿ ತಿರುಗುತ್ತಾ, ಆ ಕರ್ಮ ಫಲಗಳನ್ನುಣ್ಣುತ್ತಾ, ತನ್ನ ಸ್ವರೂಪವನ್ನು ಮರೆತು, ಆ ಜೀವಕ್ಕನುಗುಣವಾಗಿ ಸುತ್ತುತ್ತಾ ಕೋಟ್ಯಾಂತರ ಜನ್ಮಗಳಲ್ಲಿ ಬರುತ್ತಾ ಹೋಗುವನು. ಹೀಗೆ ತಿರುಗುತ್ತಿರ್ಪಲ್ಲಿ ಅನೇಕ ಜನ್ಮದ ಪುಣ್ಯದಿಂದ ಮನುಷ್ಯ ಜನ್ಮಕ್ಕೆ ಬಂದರೂ ಕೂಡಾ ಅರಿವಿಲ್ಲದೆ, ಹುಟ್ಟುತ್ತಾ ಸಾಯುತ್ತಾ ಹೋಗುವನು. ಅನೇಕ ಜನ್ಮದ ಪುಣ್ಯದಿಂದ ಅರಿವು ಮೂಡಿ, ತಾನಾರು ತನ್ನ ನಿಜ ಸ್ವರೂಪವೇನೆಂದು ಭವಬಂಧದ ಅರಿವಾಗಿ, ಇದರ ವಿಮೋಚನೆಗೆ ಶ್ರೀ ಗುರುವಂ ಮೊರೆ ಹೋಗಲು ಶ್ರೀ ಗುರುವು ನಿನಗೆ ಭವಬಂಧನವಿಲ್ಲಾ, ನೀನು ಸಾಕ್ಷಾತ್ ಪರಬ್ರಹ್ಮ (ಮಹಾಲಿಂಗ) ಸ್ವರೂಪನು ಎಂದು ತಲೆಯ ಮೇಲೆ ಅಭಯ ಹಸ್ತ ಇಟ್ಟು ಭಾವಲಿಂಗವಂ ಸ್ಥಾಪನೆ ಮಾಡಿ, ಭಾವದಲ್ಲಿ ಪ್ರಕಟವಾದ ನಿರಾಕಾರ ವಸ್ತುವನ್ನೇ ನಾದ ಸ್ವರೂಪವನ್ನೇ ಶಬ್ದಕ್ಕೆ ತಂದು, ಕಿವಿಯಲ್ಲಿ ಮಹಾ ಮಂತ್ರೋಪದೇಶವಂ ಮಾಡಿ, ಮನದಲ್ಲಿ ಪ್ರಾಣಲಿಂಗವಂ ನೆಲೆಗೊಳಿಸಿ, ಪ್ರಾಣದಲ್ಲಿ ನೆಲೆಗೊಂಡ ಪರವಸ್ತುವನ್ನೇ ನೇತ್ರದಲ್ಲಿ ಲಿಂಗಕಳೆಯನ್ನು ಸ್ಥಾಪಿಸಿ, ಆ ಲಿಂಗ ಕಳೆಯನ್ನೇ ಒಂದುಗೂಡಿಸಿ, ನೇತ್ರದಲ್ಲಿದ್ದ ಲಿಂಗ ಕಳೆಯನ್ನೇ ಕರದಲ್ಲಿ ಇಷ್ಟಲಿಂಗವನ್ನು ಸ್ಥಾಪನೆ ಮಾಡಿ, ಇಂದಿನಿಂದ ನೀನು ಲಿಂಗ ಸ್ವರೂಪನು ಎಂದು, ಆ ಕೃಪೆಗೈಯಲು ಅಂದಿನಿಂದ ಲಿಂಗ ಮುಂತಾಗಿ ಆಚರಿಸಲು, ಕ್ರಿಯಾ ಶಕ್ತಿಯು ಶುದ್ಧವಾಗಿ, ಕಾಯವು ಇಷ್ಟಲಿಂಗವಾಗಿ ಆಚರಿಸುತ್ತಾನೆ. ಲಿಂಗ ತಾನಾಗಿ ಲಿಂಗದ ಮಾತುಗಳು, ಮನದಲ್ಲಿ ಮಂತ್ರವು ನೆಲೆಗೊಂಡು ಜಿಹ್ವೆಯಲ್ಲಿ ಗುರುಲಿಂಗವು ಸ್ಥಿರವಾಗಲು ಮಾತು ಗುರುವಾಗಿ, ಮಾತನಾಡುತ್ತಾನೆ. ಜ್ಞಾನ ಶಕ್ತಿಯು ಶುದ್ಧವಾಗಿ ಮನದಲ್ಲಿ ಪ್ರಾಣಲಿಂಗವು ನೆಲೆಗೊಳ್ಳುವುದು. ಭಾವದಲ್ಲಿ ಇಚ್ಛಾಶಕ್ತಿಯು ಶುದ್ಧವಾಗಿ ಭಾವಲಿಂಗವಾಗಿರುವುದರಿಂದ, ಕಾಯದಲ್ಲಿ ಇಷ್ಟಲಿಂಗವು ಲಿಂಗದ ಶರೀರವಾಗಿ ಕಾಯಕವಾಗಿ ವ್ಯವಹರಿಸುವುದು. ಪ್ರಾಣಲಿಂಗದ ಮಾತುಗಳಾಗಿ (ವಾಚಕವು) ಪ್ರಾಣಲಿಂಗವಾಗಿ ವ್ಯವಹರಿಸುವುದು. ಭಾವದಲ್ಲಿ ಭಾವಲಿಂಗವಾಗಿ ವ್ಯವಹರಿಸುವುದು. ಈ ಕ್ರಿಯಾ ಶಕ್ತಿ, ಜ್ಞಾನ ಶಕ್ತಿ, ಇಚ್ಛಾಶಕ್ತಿಗಳು, ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗವಾಗಿ, ಮಹಾಲಿಂಗದಲ್ಲಿ

ಸಮರಸವನ್ನೈದಿ ಶೂನ್ಯ ತತ್ವದಲ್ಲಿ ಬಯಲಾಗುವುದೆಂದು ತಿಳಿದುಕೊಂಬುದು ತತ್ವಜ್ಞಾನಿಗಳು.

ಅಹಂಕಾರತ್ರಯಗಳು

ಸಾತ್ವಿಕಾಹಂಕಾರ, ರಾಜಸಅಹಂಕಾರ, ತಾಮಸಾಹಂಕಾರ.

ಸ್ವಾತಿಕಾಹಂಕಾರದಿಂದಾ ಸೂರ್ಯಾದಿಗಳು ಹುಟ್ಟಿದವು. ರಾಜಸ ಅಹಂಕಾರದಿಂದ ಪಂಚ ವಿಷಯಗಳು ಹುಟ್ಟಿದವು. ತಾಮಸಹಂಕಾರದಿಂ ಪೃಥ್ವ್ಯಾದಿ ಪಂಚಭೂತಗಳುಟ್ಟಿದವು.

ನಿರಾಕಾರ ಪರವಸ್ತುವಿನಿಂದಾ ಶಾಂತಿ ಶಕ್ತಿ, ಆ ಶಾಂತಿ ಶಕ್ತಿಯಿಂದಾ ಪರಬ್ರಹ್ಮವು, ಆ ಪರಬ್ರಹ್ಮದಿಂದಾ ಚಿತ್ತು, ಆ ಚಿತ್ತುವಿನಿಂದಾ ಅಮೃತಮಯವಪ್ಪ ಕಲೆ, ಕಲೆಯಿಂದಾ ಪ್ರಕೃತಿ, ಆ ಪ್ರಕೃತಿಯಿಂದಾ ಮಹತ್ತು, ಆ ಮಹತ್ತಿನಿಂದಾ ಮೂಲ ಅಹಂಕಾರವು ಹುಟ್ಟಿತ್ತು. ಅಂತಪ್ಪ ಮೂಲಾಹಂಕಾರವೇ ಸತ್ವಗುಣವ ನೆಮ್ಮಿದಲ್ಲಿ, ಸಾತ್ವಿಕಾಹಂಕಾರವೆಂದೂ, ರಜೋಗುಣವ ನೆಮ್ಮಿದಲ್ಲಿ ರಾಜಸ ಅಹಂಕಾರವೆಂದೂ, ತಮೋಗುಣವ ನೆಮ್ಮಿದಲ್ಲಿ ತಾಮಸಾಹಂಕಾರವೆಂದು ಹೇಳಲ್ಪಡುವವು.

ಸ್ವಾತಿಕಾಹಂಕಾರ ತಲೆದೋರಿದಲ್ಲಿ, ಅಹಂಕಾರವೇ ಭಕ್ತಿ ರೂಪವಾಗಿ, ವರ್ತಿಸುವನು. ರಾಜಸಾಹಂಕಾರ ತಲೆದೋರಿದಲ್ಲಿ, ಶಬ್ಧ ವಿಷಯವೇ ಮೊದಲಾದ ಪಂಚ ವಿಷಯಂಗಳು, ಐದು ತನ್ಮಾತ್ರೆಗಳು ಹುಟ್ಟಿದವು. ತಾಮಸಾಹಂಕಾರದಿಂದ ಪೃಥ್ವಿಯೇ ಮೊದಲಾದ ಪಂಚಭೂತಂಗಳು ಹುಟ್ಟಿದವು. ಪೃಥ್ವಿ ಆದಿ ಪಂಚಭೂತಂಗಳೇ ಜಡ, ಆ ಜಡದಿಂದಲೇ ಅಜ್ಞಾನಹಂಕಾರ ಹುಟ್ಟಿತು. ಸ್ವಾತಿಕಾಹಂಕಾರದಿಂದ ಸೂರ್ಯರೇ ಮೊದಲಾದುವುಗಳು, ನಕ್ಷತ್ರಾದಿ ತಾರಾಮಂಡಲ ಇಪ್ಪತ್ತೈದು ಅಧಿಷ್ಠಾನ ಕರ್ತೃಗಳು ಹುಟ್ಟಿದರು. ರಾಜಸಾಹಂಕಾರದಿಂದ ಶಬ್ಧ ವಿಷಯವೇ ಮೊದಲಾದ ಪಂಚವಿಷಯಗಳು, ತನ್ಮಾತ್ರೆಗಳು ಹುಟ್ಟಿದವು. ತಾಮಸಾಹಂಕಾರದಿಂದಾ ಪಂಚಭೂತಗಳು ಹುಟ್ಟಿದವು, ಎಂಬಲ್ಲಿ ಬ್ರಹ್ಮಾಂಡವಳಯ ಚತುರ್ದಶ ಭುವನ ಸಚರಾಚರ ಪ್ರಾಣಿಗಳ ಸಮೂಹಂಗಳೆಲ್ಲವೂ ಹುಟ್ಟಿದವು.

ಈ ರೀತಿಯಲ್ಲಿ ಅನಂತ ಬ್ರಹ್ಮಾಂಡಕೋಟಿಗಳಲ್ಲಿ ಪ್ರಕೃತಿಗೆ ವಶವಾಗಿ ಅಹಂಕಾರತ್ರಯಂಗಳು ಸಕಲ ಜೀವರಾಶಿಗಳಲ್ಲಿಯೂ ಸೇರಿ ಮನುಷ್ಯರಲ್ಲಿ ಭಾವದಲ್ಲಿ ದುರ್ಭಾವವಾಗಿ, ಮನದಲ್ಲಿ ಅಜ್ಞಾನವಾಗಿ, ತನುವಿನಲ್ಲಿ ಅನಾಚಾರವಾಗಿ, ಕೋಟ್ಯಾಂತರ ಜನ್ಮಕ್ಕೆ ಕಾರಣವಾಗಿರ್ಪವು.

ಸಾತ್ವಿಕಾಹಂಕಾರವು ಯತಿಗಳೆನಿಸಿಕೊಂಬುವರಲ್ಲಿಯೂ, ವ್ರತಿಗಳೆನಿಸಿಕೊಂಬುವರಲ್ಲಿಯೂ, ಸ್ವಾಮಿಗಳೆನಿಸಿಕೊಂಬುವರಲ್ಲಿಯೂ, ಸದ್ಭಕ್ತರೆನಿಸಿಕೊಂಬುವರಲ್ಲಿಯೂ, ಶರಣರೆನಿಸಿ ಕೊಂಬುವರಲ್ಲಿಯೂ, ಗೊತ್ತಾಗದ ರೀತಿಯಲ್ಲಿ ಆತ್ಮನ ಅಹಮಿಕೆಯಿಂದೊಡಗೂಡಿ ನಾನು ಶ್ರೇಷ್ಠನೆಂದು, ನಾನು ಹೇಳಿದ್ದೇ ಸತ್ಯವೆಂದು ವಿವೇಕಿಗಳು ಎಷ್ಟು ಹೇಳಿದರು ಬಿಡದ ಹಾಗೆ ಬಲಿದಿರುತ್ತದೆ.

ರಾಜಸಾಹಂಕಾರವು ಮಾನವರಲ್ಲಿ ಅಧಿಕಾರ, ದರ್ಪ, ವೈಭವ, ಡಾಂಭಿಕತ್ವ, ಕೀರ್ತಿವಾರ್ತೆಗಳಿಗೆ, ಆಡಂಬರಗಳಿಗೆ ಮೋಹಿಸುತ್ತಾ ಗೊತ್ತಾಗದ ರೀತಿಯಲ್ಲಿ ಸೇರಿಕೊಂಡು ನಾನು ಹೇಳಿದ್ದೇ ಸತ್ಯವೆಂದು, ನಾನು ಮಾಡಿದ್ದೇ ಒಳ್ಳೆಯದೆಂಬ ಗರ್ವದ ಭಾವದಿಂದ ನಡೆಸುತ್ತದೆ.

ತಾಮಸಾಹಂಕಾರವು, ಅಜ್ಞಾನ ವಶವಾಗಿ, ಕೆಟ್ಟ ಕಾರ್ಯಗಳಲ್ಲಿ ಮನಸ್ಸು ಯಾವಾಗಲೂ ಮೂಡಿಸುತ್ತಾ ವಿಶೇಷವಾಗಿ ಭೋಗಗಳನ್ನು ಭೋಗಿಸುತ್ತಾ, ತೃಪ್ತನಾಗದೆ ಪ್ರತಿಯೊಬ್ಬರಲ್ಲಿ ಕೇಡನ್ನು ಬಯಸುತ್ತಾ, ಹಿಂಸಾ ಕೃತಿಗಳಿಗೆ ಹೇಸದೇ, ತಿನ್ನಬಾರದ್ದನ್ನು ತಿನ್ನುತ್ತಾ, ಕುಡಿಯಬಾರದ್ದನ್ನು ಕುಡಿದು, ಯಾವಾಗಲೂ ಜನರಲ್ಲಿ ಕೇಡ ಮಾಡಿಸುತ್ತಾ, ಅದರಲ್ಲಿಯೇ ತೃಪ್ತಿ ಪಡುತ್ತಾ ಇರುತ್ತದೆ. ಅನೇಕ ಜನ್ಮಗಳನ್ನು ಎತ್ತುತ್ತಾ ತಿರುಗುತ್ತಾ ಹೋಗುವುದು.

ಅನೇಕ ಜನ್ಮದ ಪುಣ್ಯದಿಂದಾ ಶ್ರೀ ಗುರುವಂ ಮೊರೆ ಹೋಗಲು ಶ್ರೀ ಗುರುವು ದೀಕ್ಷೆಯಂ ಮಾಡಿ ಅಷ್ಟಾವರಣಗಳಂ ಸಂಬಂಧಿಸಿ, ಪಂಚಾಚಾರಗಳನ್ನು, ಷಡ್‌ಚಾರಗಳನ್ನು ಪಾಲಿಸುವುದನ್ನು ತಿಳಿಸಿ, ಷಟ್‌ಸ್ಥಲ ತತ್ವದಂತೆ ಕಿಂಕುರ್ವಾಣ ಭಕ್ತಿಯಿಂದ ನಡೆಯಲು ತಿಳಿಸುವನು. ಆಗ ಅವನಲ್ಲಿ ಕಿಂಕುರ್ವಾಣ ಭಕ್ತಿಯಿಂದಾ ಅಷ್ಟಾವರಣ ತತ್ವದಂತೆ ಷಡಾಚಾರಗಳನ್ನು ಪಾಲಿಸುತ್ತಾ, ಷಟ್‌ಸ್ಥಲ ತತ್ವಗಳ ಮರ್ಮವನರಿದು ಆಚರಿಸಲು, ಅವನ ತನುವಿನಲ್ಲಿ ಸದಾಚಾರವು ನೆಲೆಗೊಂಡು, ಜ್ಞಾನದಲ್ಲಿ ಸುಜ್ಞಾನವು ನೆಲೆಗೊಂಡು, ಭಾವದಲ್ಲಿ ಸದ್ಭಾವ ನೆಲಸಿ, ನಿರಹಂಕಾರ ಭಕ್ತಿ ಅಳವಡಲು, ಅಹಂಕಾರತ್ರಯಂಗಳು ನಾಶವಾಗಿ ನಿತ್ಯಸುಖವನ್ನು ಪಡೆವನು. ಅಹಂಕಾರತ್ರಯಂಗಳಳಿದು ಲಿಂಗವಾಗಿ ಉಳಿದಿರುವಂತಹ ಶರಣರ ಸಂಗದೊಳಗಿರಿಸಯ್ಯಾ ಶ್ರೀ ಮತ್ತೂನ್ನ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ದುರ್ಭಾವತ್ರಯಗಳು

ಜ್ಞಾನ ವಿಕೃತಿ ಭಾವ, ವರ್ತನ ವಿಕೃತಿಭಾವ, ಮೋಹ ವಿಕೃತಿ ಭಾವ, ಇವು ದುರ್ಭಾವತ್ರಯಗಳು,

ಇವಕ್ಕೆ ವಿವರ : ಉತ್ತಮ ಜಾತಿಯಲ್ಲಿ ಹುಟ್ಟಿ, ತನ್ನ ಸ್ವಸ್ವರೂಪವನ್ನರಿಯದೇ, ಅರಿವು ಇದ್ದರೂ ತನ್ನ ಮರೆದು ಅಹಂ ಎಂಬ ಜಡಭಾವದಿಂದಾ ಅಹಂಕಾರವನ್ನೈದಿಹನಾಗಿ, ಜ್ಞಾನ ವಿಕೃತಿ ಭಾವವೆಂದು ಹೇಳುವರು.

ಮನುಷ್ಯ ಜನ್ಮಕ್ಕೆ ಬಂದು ಮಾನವ ಜನ್ಮ ಸಾರ್ಥಕ ಮಾಡಿಕೊಳ್ಳದೇ ಜಡಾಜಡ ಮಿಶ್ರದಿಂದ ಕೆಟ್ಟ ವ್ಯವಹಾರಗಳನ್ನು ಮಾಡುತ್ತಾ, ದುಷ್ಟ ಕೃತಿಗಳನ್ನಾಚರಿಸುತ್ತಾ ಇರುವನಾಗಿ ವರ್ತನ ವಿಕೃತಿ ಭಾವವೆಂದು ಹೇಳುವರು.

ಮಾನವ ಜನ್ಮದಲ್ಲಿ ತನ್ನ ಸ್ವರೂಪವ ಮರೆದು, ಜಡಭಾವದಿಂದ ಅಹಂಕಾರದಿಂದ, ವಿಷಯಗಳಲ್ಲಿ ಮೋಹಿಸುತ್ತಾ, ಅವುಗಳಲ್ಲೇ ಮುಳುಗಿಪ್ಪನಾಗಿ, ಮೋಹನ ವಿಕೃತಿ ಭಾವವೆಂದು ಹೇಳುವರು.

ಸದ್ಭಾವತ್ರಯಗಳು

ಪ್ರಕಾಶನ, ಪ್ರವರ್ತನ, ಮೋಹನ : ಇವು ಸದ್ಭಾವತ್ರಯಗಳು

ಇವಕ್ಕೆ ವಿವರ : ಜ್ಞಾನ ವಿಕೃತಿಭಾವ ಅಂದರೆ ಪರಮಾತ್ಮ ಜ್ಞಾನಕ್ಕೆ ವಿಕಾರಿಸುವಂತಹ, ವಿಕಾರ ಭಾವವೆಲ್ಲವೂ ನಾಶವಾಗಿ, ಮಹಾಲಿಂಗವೇ ತಾನೆಂಬ ಅರಿವು ದೃಢಗೊಂಡು, ಜ್ಞಾನವಿಕೃತಿ

ಭಾವ ಅಳಿದು, ಆ ಮಹಾಲಿಂಗದ ಬೆಳಗಿನ ದಿವ್ಯ ಪ್ರಕಾಶದಲ್ಲಿರುವುದೇ ಪ್ರಕಾಶನವೆಂಬ ಭಾವವು.

ವರ್ತನ ವಿಕೃತ ಭಾವವು, ಪ್ರಕೃತಿ ಗುಣಗಳು, ಪೂರ್ಣವಾಗಿ ನಾಶವಾಗಿ, ಸರ್ವಾಚಾರ ಸಂಪನ್ನನಾಗಿ, ಸನ್ಮಾರ್ಗ, ಸದ್ವರ್ತನೆವಿಡಿದು, ಮಹಾಲಿಂಗವೇ ತಾನಾಗಿ, ಲಿಂಗದ ನಡೆ, ಲಿಂಗದ ನುಡಿ, ಲಿಂಗದ ಕ್ರಿಯೆಗಳಾಗಿ ಆಚರಿಸುವುದೇ ಪ್ರವರ್ತನವೆಂಬ ಭಾವವು.

ಫಲಾಭಿಲಾಶೆಯನ್ನು ಸಂಪೂರ್ಣಬಿಟ್ಟು ಮೋಹನ ವಿಕೃತಿ ಭಾವದ ವಿಕಾರ ಭಾವವು ಪೂರ್ಣವಾಗಿ ಅಳಿದು, ಪರಮಾತ್ಮನಲ್ಲಿ ಸಂಪೂರ್ಣವಾದ ಪ್ರೀತಿಯನ್ನಿಟ್ಟು, ಮಹಾಲಿಂಗದಲ್ಲಿ ಮೋಹವುಳ್ಳಾತನಾಗಿರುವುದೇ ಮೋಹನವೆಂಬ ಭಾವವು.

ಈ ಗುಣಗಳು ಪುರುಷರಲ್ಲಿರಲಿ, ಸ್ತ್ರೀಯರಲ್ಲಿರಲಿ, ಮಕ್ಕಳಲ್ಲಿರಲಿ, ಒಳ್ಳಿತಾದ ಭಾವಂಗಳಾಗಿರುತಿಹವು.

ಇಹಲೋಕದ ತಾಪತ್ರಯಗಳು

ಆಧ್ಯಾತ್ಮಿಕ, ಅಧಿಭೌತಿಕ, ಅಧಿದೈವಿಕ. ಇವುಗಳಿಗೆ ಇಹಲೋಕದ ತಾಪತ್ರಯಗಳೆಂದು ಹೇಳುವರು.

ಇವಕ್ಕೆ ವಿವರ : ಆಧ್ಯಾತ್ಮಿಕದಲ್ಲಿ ಶಾರೀರಿಕವೆಂದೂ ಮಾನಸಿಕವೆಂದೂ ಎರಡು ಪ್ರಕಾರವು.

ಜ್ವರ, ಗುಲ್ಮ, ರೋಗ, ಪಾರ್ಶ್ವ, ಕ್ಷಯ, ಕುಷ್ಠ, ಶೂಲಿ, ನವಗ್ರಹಗಳಿಂದಾಗುವ ತೊಂದರೆ, ಪಶು ಪಕ್ಷಿ, ರಾಜ(ಸರ್ಕಾರ) ರಿಂದಾಗುವ ತೊಂದರೆ ಪ್ರಯಾಣಗಳ ವ್ಯತ್ಯಾಸಗಳಿಂದ ಶರೀರಕ್ಕಾಗುವ ಬಾಧೆ ದುಃಖವೂ, ಶರೀರಕ್ಕೆ ತಟ್ಟುವಂತಹ ತೊಂದರೆಯೂ ಶಾರೀರಕವೆಂದು ಕರೆಯುವರು.

ಮನಸ್ಸಿನ ವ್ಯಾಕುಲದಿಂದ ಅನೇಕ ವಿಷಯಗಳ ವ್ಯವಹಾರದಿಂದ ಆಗುವ ಮನಸ್ಸಿನ ಬಾಧೆ. ಹಸಿವು, ಮದ, ಮತ್ಸರ, ಚಿಂತೆ, ಇವುಗಳು, ವಸ್ತುಗಳು ತನ್ನವು ಅಗಲಿದೆ ಇನ್ನು ಮುಂತಾದ ದುಃಖವು ಮನಸ್ಸಿಗೆ ಬಂದು ತಟ್ಟುವುದೇ ಮಾನಸಿಕವೆಂದು ಹೇಳುವರು.

ಶೀತ, ಉಷ್ಣ, ವಾಯು, ಮಳೆ, ಗುಡುಗು, ಸಿಡಿಲುಗಳಿಂದಾದ ದುಃಖವು ಅಧಿ ಭೌತಿಕವೆಂದು ಹೇಳುವರು. ತನ್ನ ಅಂಗಕ್ಕೆ ಪಂಚಭೂತಂಗಳಿಂದ ತಟ್ಟುವ ದುಃಖವೂ ಅಧಿ ಭೌತಿಕವೆಂದು ತಿಳಿದುಕೊಂಬುದು ತತ್ವಜ್ಞಾನಿಗಳು.

ಜನನ, ಮರಣ, ನೆರೆ, ತೆರೆ, ಹಸಿವು, ತೃಷೆ ಇವುಗಳಿಂದ ಹುಟ್ಟಿದ ನೋವನ್ನು ಅಧಿ ದೈವಿಕವೆಂದು ಹೇಳುವರು. ಪರಮಾತ್ಮನ ಇಚ್ಛೆಯಂತೆ ಕಾಲಕ್ಕನುಗುಣವಾಗಿ ಬಂದು ತಟ್ಟುವಂತಹುಗಳು.

ಶರಣರು ಈ ಆಧ್ಯಾತ್ಮಿಕ, ಅಧಿಭೌತಿಕ, ಅಧಿದೈವಿಕ, ಈ ತಾಪತ್ರಯಗಳು ಶರೀರಕ್ಕೆ ತಟ್ಟುವಂತಹುಗಳನ್ನು ಮನಸ್ಸಿಗೆ ತಟ್ಟುವಂತಹುಗಳನ್ನು ಭಾವಕ್ಕೆ ತಗಲುವಂತಹುಗಳನ್ನು ಶ್ರೀ ಗುರು ಕೃಪೆಯಿಂದ ಲಿಂಗ ಸಂಬಂಧ ಮಾಡಿಕೊಂಡು, ಲಿಂಗಾರ್ಪಿತ ಮಾಡಿ, ಲಿಂಗ ಪ್ರಸಾದ ಮುಂತಾಗಿ ಭೋಗಿಸಿ, ಪ್ರಸಾದ ಕಾಯರಾಗಿ ಆಚರಿಸುವರೆಂದು ತಿಳಿದುಕೊಂಬುದು ತತ್ವ ಜ್ಞಾನಿಗಳು.

ವಾಸನಾತ್ರಯ : ದೇಹವಾಸನೆ, ಶಾಸ್ತ್ರವಾಸನೆ, ಲೋಕವಾಸನೆ

ದೇಹವಾಸನೆ : ಶರೀರವೇ ನಾನೆಂದು, ನನ್ನ ಸ್ವರೂಪವೇ ಶರೀರದ ರೂಪೆಂದು ಭ್ರಮಿಸುವುದು.

ಶಾಸ್ತ್ರವಾಸನೆ: ನಾನು ಪಂಡಿತನು ಬಲ್ಲವನು, ನಾನು ಹೇಳುವುದೇ ಸತ್ಯವು ಯಾರು ನನ್ನ ಪಾಂಡಿತ್ಯಕ್ಕೆ ಸರಿ ಬರಲಾರರು ಎಂದು ತನುಗುಣದಿಂದ ಕೂಡಿರುವುದೇ ಶಾಸ್ತ್ರ ವಾಸನೆಯೆನಿಸುವುದು.

ಲೋಕವಾಸನೆ: ಅಹಮಿಕೆಯಿಂದ ಕೂಡಿಕೊಂಡು ಗಳಿಕೆಗಾಗಿ ಕೀರ್ತಿಗಾಗಿ, ವಾರ್ತೆಗಾಗಿ ನನ್ನ ಹೆಸರು ಲೋಕಕ್ಕೆ ಗೊತ್ತಾಗಬೇಕು. ನಾನು ಜಗತ್ತಿನಲ್ಲಿ ಮೆರೆಯಬೇಕು ಎಂದು ಹೋರಾಡುವುದು.

ಇವುಗಳ ಪರಿಹಾರ : **ದೇಹವಾಸನೆ** ನಿವೃತ್ತಿ - ಅನೇಕ ಜನ್ಮದ ಪುಣ್ಯದಿಂದಾ ಭಕ್ತಿಯಂಕುರಿಸಿ ಶ್ರೀ ಗುರುವನ್ನು ನಂಬಿ, ಶ್ರೀ ಗುರುವಂ ಮೊರೆಹೋಗಲು ಶ್ರೀ ಗುರುವು ಮೊರೆ ಹೊಕ್ಕಿರುವ ಶಿಷ್ಯನಿಗೆ ನೀನು ಪರಮಾತ್ಮನ ಸ್ವರೂಪನು ಆ ಪರವಸ್ತುವೇ ಇದು ಎಂದು ಲಿಂಗಮಂ ಸಂಬಂಧಿಸಿ ಶರೀರ ಲಿಂಗಯ್ಯನದು ಎಂದು ಬೋಧಿಸಿ ಲಿಂಗ ಸ್ವರೂಪವೇ ತಾನಾಗಿ ಧೃಡ ಭಾವನೆ ಆಳವಡಲು ದೇಹವಾಸನೆ ಅಳಿವುದು.

ಶಾಸ್ತ್ರ ವಾಸನೆಯ ನಿವೃತ್ತಿ : ಶ್ರೀ ಗುರುವು ಭಕ್ತಿಯಿಂದ ಬಂದಿರುವ ಶಿಷ್ಯನಿಗೆ ಪರಮಾತ್ಮನು ಶಾಸ್ತ್ರಕ್ಕಾಗಲಿ, ಪಾಂಡಿತ್ಯಕ್ಕಾಗಲಿ ಪ್ರಾಪ್ತನಾಗುವನಲ್ಲ ವಾಚ್ಯಕ್ಕಾಗಲಿ, ಮಾತಿಗಾಗಲಿ ಪ್ರಾಪ್ತನಾಗುವುದಿಲ್ಲ. ಅವನು ಪರಮಾತ್ಮನು ಭಕ್ತಿಪ್ರಿಯನು.

ವಚನ : ನಾದಪ್ರಿಯ ಶಿವನೆಂಬರು ನಾದಪ್ರಿಯನಲ್ಲ ವೇದಪ್ರಿಯ ಶಿವನೆಂಬರು ವೇದ ಪ್ರಿಯನಲ್ಲ. ಭಕ್ತಿ ಪ್ರಿಯ ನಮ್ಮ ಕೂಡಲ ಸಂಗಮದೇವಾ ಎಂದಿದ್ದಾರೆ ಬಸವಣ್ಣನವರು. ಕ್ರಿಯಾ ಜ್ಞಾನದಿಂದೊಡಗೂಡಿದ ಸಹಜ ಭಕ್ತಿಗೆ ಪ್ರಾಪ್ತವಾಗುವನೆಂದು ತಿಳಿದು ಆಚರಿಸಿದರೆ ಶಾಸ್ತ್ರ ವಾಸನೆ ಅಳಿವುದು.

ಲೋಕವಾಸನೆಯ ನಿವೃತ್ತಿ : ಮಾನವನಾಗಿರುವವನು ಅನೇಕ ಜನ್ಮದ ಪುಣ್ಯದಿಂದ ಭಕ್ತಿಯಂಕುರಿಸಿ, ಶ್ರೀ ಗುರುವಿನಿಂದ ಲಿಂಗವನ್ನು ಪಡೆದು ಲಿಂಗ ಪೂಜೆ, ಜಂಗಮ ದಾಸೋಹ ಕಾಯಕ-ದಾಸೋಹ ಮಾಡುವವನಾಗಿ ಶಿವಶರಣರೇ ಹಿರಿಯರು ಪರಮಾತ್ಮನು ಶಿವಶರಣರಲ್ಲಿರುವನು. ಶಿವಶರಣರ ಸೇವಕ ನಾನು, ಶ್ರೀ ಗುರುಲಿಂಗ ಜಂಗಮ ಶರಣರ ಸೇವಕನೆಂಬ ಭಾವದಿಂದ ಭೃತ್ಯತ್ವನಾಗಿ ಕಿಂಕುರ್ವಾಣ ಭಕ್ತಿಯಳವಡಲು ಲೋಕವಾಸನೆ ಅಳಿವುದು.

ದ್ವಾದಶಮಲಗಳು : ಹೊನ್ನು, ಹೆಣ್ಣು, ಮಣ್ಣು, ಅನ್ನ, ನೀರು, ವಸ್ತ್ರ, ಆಭರಣ, ವಾಹನ, ಪುತ್ರ, ಮಿತ್ರ, ಕಳತ್ರ, ಅನಾಚಾರ.

ಹೊನ್ನು : ಪ್ರಕೃತಿ ಸಂಬಂಧದಿಂದ ಆಚರಿಸುವ ಮಾನವನಿಗೆ ಬಯಕೆಯ ದಾಸರಾಗಿ ತನು ಗುಣದಿಂ ಎಷ್ಟು ಒದಗಿದರೂ ಆಸೆಯ ಬಯಕೆಯಿಂದ ತೃಪ್ತನಾಗದೆ ದುಡ್ಡಿಗೆ ದುಡ್ಡು ಕೂಡಿಡುತ್ತಾ ಯಾವುದಾದರೂ ಸತ್ಕಾರ್ಯಗಳಿಗೆ ವ್ಯಯಿಸದೆ, ಲೋಭದಿಂದ ದುಡ್ಡಿಗೆ ದುಡ್ಡು ಲೆಕ್ಕಾ ಹಾಕುತ್ತಾ ಹೋಗುವನು.

ಹೆಣ್ಣು : ತನ್ನ ಸ್ವಸ್ತ್ರೀಯರಲ್ಲಿ ಪ್ರೀತಿಯನ್ನು ಇಟ್ಟು ಕೊಳ್ಳುವುದು ಬಿಟ್ಟು ಪರಸ್ತ್ರೀಯರಲ್ಲಿ ಪ್ರೀತಿಯನ್ನು ಇಟ್ಟು ನಡೆಯುತ್ತಾ, ಇಂದ್ರಿಯ ವಿಷಯ ತೃಷೆಗೆ ಒಳಗಾಗಿ ನಡೆಯುವುದು.

ಮಣ್ಣು : (ಭೂಮಿ) ತನ್ನ ಕಾಯಕದಿಂದ ಭೂಮಿಯನ್ನು ಸಂಪಾದಿಸಿ, ಅವುಗಳು ಸಾಲವೆಂದು ಪ್ರಕೃತಿಗೆ ವಶವಾಗಿ, ಪರಸೊತ್ತಿನ ಮೇಲೆ ಆಸೆ ಇಟ್ಟು ಅವುಗಳಿಂದ ತೃಪ್ತನಾಗದೆ, ದಾಹದಿಂದ ಅತೃಪ್ತಿಯಿಂದ ಆಚರಿಸುವುದು.

ಅನ್ನ : ಶರೀರಕ್ಕೆ ಅನ್ನಬೇಕು. ಅನ್ನವು ಶರೀರ ಪೋಷಣೆಗೆ ಅಗತ್ಯವಾದುದು. ಅನ್ನವಿಲ್ಲದೆ ಶರೀರ ಇರುವುದಿಲ್ಲ, ಶರೀರದ ಪೋಷಣೆಗೆ ಅನ್ನದ ಅವಶ್ಯಕತೆ ಎಂಬುದನ್ನರಿತು ನಡೆಯದೆ ನಾಲಿಗೆ ರುಚಿಗಾಗಿ ಅನ್ನವನ್ನು ತಿನ್ನುತ್ತಾ, ಪ್ರಕೃತಿಗೆ ತುತ್ತಾಗಿ ನಡೆಯುವುದು.

ನೀರು : ದಿನ ನಿತ್ಯವೂ ನೀರಿನ ಅವಶ್ಯಕತೆ ಮನುಷ್ಯನಾದವನಿಗೆ ಬೇಕೇ ಬೇಕು. ಶರೀರ ತೊಳೆಯುವುದಕ್ಕೆ, ಶರೀರಕ್ಕೆ ಕುಡಿಯುವುದಕ್ಕೆ ಅಗತ್ಯವಾದಷ್ಟು ಉಪಯೋಗಿಸುವುದು ಬಿಟ್ಟು ಬಾಯಿ ರುಚಿಗೆ ಪಾನೀಯಗಳನ್ನು, ಕುಡಿಯಬಾರದ್ದನ್ನು ಕುಡಿಯುತ್ತಾ, ತಿನ್ನಬಾರದ್ದನ್ನು ತಿನ್ನುತ್ತಾ ಹೋಗುವುದು.

ವಸ್ತ್ರ : ಶರೀರ ಮುಚ್ಚುವುದಕ್ಕೆ ಬಟ್ಟೆ ಬೇಕು. ಅಗತ್ಯವಿದ್ದಷ್ಟು ಬಟ್ಟೆಯನ್ನು ತೊಡುವುದು. ಶರೀರವೇ ನಾನೆಂದು ಬಗೆದು ಅಂದ ಚಂದಕ್ಕೆಂದು ತೊಡುತ್ತಾ ಹೋಗುವುದು.

ಆಭರಣ : ಪ್ರಕೃತಿಗೆ ವಶವಾದ ಜೀವಿಯು ಅಂದಕ್ಕೆ ಚೆಂದಕ್ಕೆ ಆಭರಣಗಳನ್ನು ಹಾಕಿಕೊಂಡು ಮೆರೆಯುವುದು.

ವಾಹನ: ದೂರ ಪ್ರಯಾಣಗಳಿಗೆ ವಾಹನಬೇಕು. ತನಗೆ ಅಗತ್ಯವಾದಷ್ಟು ವಾಹನವನ್ನು ಉಪಯೋಗಿಸದೇ ಕೀರ್ತಿ ವಾರ್ತೆ ಮೋಜಿಗಾಗಿ ನಡೆಯುವುದು.

ಪುತ್ರ: ತನ್ನ ವಂಶಾಭಿವೃದ್ಧಿಗೆ ಮಕ್ಕಳನ್ನು ಪಡೆದು ಅವರುಗಳಲ್ಲಿ ಪ್ರೀತಿಯಿಂದ ನಡೆಯುವುದು.

ಮಿತ್ರ : ಸ್ನೇಹಿತರು ಇವರೇ ನನ್ನ ಹಿತೈಷಿಗಳು ಎಂದು ವಿಶ್ವಾಸವಿಟ್ಟು ನಡೆಯುವುದು.

ಕಳತ್ರ : ನನ್ನ ಹೆಂಡಿರು ಎಂದು ಅವರುಗಳಲ್ಲಿ ಅತಿ ಮೋಹದಿಂದ ಆಚರಿಸುವುದು.

ಅನಾಚಾರ : ಮಾನವನು ಪ್ರಕೃತಿಗೆ ವಶನಾಗಿ ತನ್ನ ನಿಜ ಸ್ವರೂಪವನ್ನು ಮರೆತು ನೀತಿಗೆ ರಹಿತನಾಗಿ ಸದಾ ಕೆಟ್ಟು ನಡೆಯುವಲ್ಲಿ ಶರಣರು ಮಲವೆಂದು ಕರೆಯುವರು.

ಇವುಗಳ ವಿವರಗಳು ಈ ಹಿಂದೆ ವಿಶದವಾಗಿ ಬಂದಿರುವುದರಿಂದಾ ಇಲ್ಲಿ ಸಂಕ್ಷಿಪ್ತವಾಗಿ ತಿಳಿಸಲಾಗಿದೆ. ಮಾನವನು ಅನೇಕ ಕೋಟಿ ಜನ್ಮ ಗತಿಗಳಲ್ಲಿ ತಿರುಗುತ್ತಾ, ಆ ಜನ್ಮಕ್ಕನುಗುಣವಾಗಿ ಫಲಗಳನ್ನುಣ್ಣುತ್ತಾ ವ್ಯಾಮೋಹದಿಂದಾ ಅನಾಚಾರದಿಂದ ನಡೆಯುತ್ತಾ ಬರುವನು. ಮೇಲೆ ಕಾಣಿಸಿದ ಹನ್ನೊಂದು ಗುಣಗಳು ಮನುಷ್ಯನಿಗೆ ಅನಾಚಾರವಾಗಿ ಅಂಟಿಕೊಂಡಿರುತ್ತವೆ. ಅನೇಕ ಜನ್ಮದ ಪುಣ್ಯದಿಂದ ಮನುಷ್ಯ ಜನ್ಮ ಬಂದರೂ, ಭವಬಂಧದ ಅರಿವಿಲ್ಲದೆ, ಇದೇ ಶಾಶ್ವತವೆಂದು ತನುಗುಣದಿಂದ ವ್ಯವಹರಿಸುತ್ತಾ, ಅನೇಕ ಜನ್ಮದ ಪುಣ್ಯದಿಂದಾ ವಿವೇಕ ಉದಿಸಿ ಶ್ರೀ ಗುರುವಿನಿಂದ ಸಂಸ್ಕಾರವನ್ನು ಪಡೆದು ಲಿಂಗವನ್ನು ಸಂಬಂಧಿಸಿದ ಮೇಲೆ, ಶರೀರವು ಲಿಂಗಯ್ಯನದು, ವಿಶ್ವವೆಲ್ಲವೂ

ಲಿಂಗ ಸ್ವರೂಪವೇ, ಅವನು ಕೊಟ್ಟ ದ್ರವ್ಯವನ್ನು ಲಿಂಗಯ್ಯನಿಗೆ ಸವೆಯಬೇಕು, ಎಂದು ಶ್ರೀ ಗುರು-ಜಂಗಮ-ಭಕ್ತರು ಲಿಂಗ ಸ್ವರೂಪರೆಂದು, ಅವನು ಕೊಟ್ಟ ಧನವನ್ನು ಸವೆಸಿದನಾಗಿ ಹೊನ್ನಿನ ಮೋಹವಳಿವುದು.

ಹೆಣ್ಣು : ಗುರು ಸಂಸ್ಕಾರಿಯಾಗಿ, ವಿಷಯದಲ್ಲಿ ಪ್ರೀತಿಯು ಅಳಿದು ಲಿಂಗದಲ್ಲಿ ಪ್ರೀತಿಯಾಗಿ ಅಳವಟ್ಟು ಲಿಂಗಕ್ಕೆ ಮನಕೊಟ್ಟು ವಧುವಾದನಾಗಿ ಶರಣಸತಿ - ಲಿಂಗಪತಿ ಭಾವದಿಂದ ಆಚರಿಸಲು, ಹೆಣ್ಣಳಿವುದು.

ಮಣ್ಣು : ಲಿಂಗ ಸಂಸ್ಕಾರಿಯಾಗಿ ಪರಮಾತ್ಮನು ಕೊಟ್ಟಂತಹ ವಸ್ತುವು ಪರಮಾತ್ಮನದು ತನುವಿನಲ್ಲಿ ಸದಾಚಾರವಳವಡಲು ಸದಾಚಾರದ ಕ್ರಿಯೆಗಳಿಗೆ ಮಣ್ಣಳಿವುದು.

ಅನ್ನ-ನೀರೂ : ಶರಣರು ಶ್ರೀ ಗುರುವಿನಿಂದ ಸಂಸ್ಕಾರವನ್ನು ಪಡೆದ ಮೇಲೆ, ಶ್ರೀ ಗುರುವು ಶರೀರವು ಭವಬಂಧಕ್ಕೆ ಹೋಗುವ ಶರೀರವಲ್ಲ, ಪ್ರಕೃತಿ ಗುಣಗಳಳಿದಂಥಾ ಲಿಂಗ ಶರೀರವು, ಲಿಂಗದ ಕ್ರಿಯೆಗಳನ್ನು ಆಚರಿಸುವ ಶರೀರವು. ತನುಗುಣದಿಂದ, ಅನ್ನ ನೀರನ್ನು ಉಪಯೋಗಿಸುವುದನ್ನು ಬಿಡಿಸಿ, ಅನ್ನವನ್ನು ಸಂಸ್ಕಾರ ಮಾಡಿ ಪ್ರಸಾದವಾಗಿ ಸೇವಿಸುವುದು. ನೀರನ್ನು ಶುದ್ಧೈಸಿ ಪಾದೋದಕವಾಗಿ ಸೇವಿಸಿ ಎಂದು ತಿಳಿಸಲು, ಅದರಂತೆ ಪಾದೋದಕ ಪ್ರಸಾದ ಜೀವಿಯಾಗಿ ಆಚರಿಸಲು ಅವುಗಳ ಗುಣಗಳು ಕೆಡುವವು.

ವಸ್ತ್ರ - ಆಭರಣ: ಶ್ರೀ ಗುರುವು ಶರೀರವನ್ನು ಶುದ್ಧೈಸಿದ ಮೇಲೆ ಶರೀರವು ಲಿಂಗಯ್ಯನದು ಎಂದು ಅಂಗ ಶೃಂಗಾರವಳಿದು, ಲಿಂಗಯ್ಯನದಾಗಿ ವಸ್ತ್ರವನ್ನು ಉಪಯೋಗಿಸುವನಾಗಿ ವಸ್ತ್ರ ವ್ಯಾಮೋಹ ಕೆಡುವುದು. ಶ್ರೀ ಗುರುವು ಸಂಸ್ಕಾರವನ್ನು ಮಾಡಿ ಶ್ರೀ ವಿಭೂತಿ ರುದ್ರಾಕ್ಷಿಯೇ ನಿನ್ನ ಆಭರಣವೆಂದು ತಿಳಿಸಿ, ಅದರಂತೆ ಆಚರಿಸಿದನಾಗಿ, ಈ ರುದ್ರಾಕ್ಷಿಯೇ ಆಭರಣವಾಗಿ ಆಚರಿಸಲು ಆಭರಣ ಮೋಹವಳಿವುದು.

ವಾಹನ : ಶ್ರೀ ಗುರುವು ಶರೀರವು ಲಿಂಗಯ್ಯನದು ಲಿಂಗವಿರಿಸಿದಂತೆ ನಾವಿರುವೆವು ಲಿಂಗಯ್ಯ ನಡೆಸಿದಂತೆ ನಾವು ನಡೆಯುವೆವು, ಲಿಂಗಯ್ಯನು ಕಳಿಸಿದಲ್ಲಿ ನಾವು ಹೋಗುವೆವು ಎಂದರಿತು ಆಚರಿಸಿದಲ್ಲಿ ವಾಹನ ಮೋಹವಳಿವುದು.

ಪುತ್ರ, ಮಿತ್ರ, ಕಳತ್ರ : ಶ್ರೀ ಗುರು ಸಂಸ್ಕಾರಿಯಾಗಿ, ಲಿಂಗಯ್ಯನ ಶರೀರವಿದು. ಹೆಂಡಿರು ಮಕ್ಕಳು ಲಿಂಗಯ್ಯನವರವು ಶಿವಶರಣರೆ ನನ್ನ ಬಂಧುಗಳು ಎಂದು ಅರಿತು, ಆಚರಿಸಿದಲ್ಲಿ ಪುತ್ರ, ಮಿತ್ರ, ಕಳತ್ರ ಮೋಹವಳಿವುದು. ಮೇಲೆ ಕಾಣಿಸಿದ ಹೆಣ್ಣು, ಹೊನ್ನು, ಮಣ್ಣು, ಅನ್ನ, ನೀರು, ವಸ್ತ್ರ-ಆಭರಣ, ವಾಹನ, ಪುತ್ರ, ಮಿತ್ರ, ಕಳತ್ರ ಇವು ನನ್ನವುಗಳೆಂದು ತಿಳಿದು, ಅವುಗಳ ಭೋಗಗಳೇ ಶಾಶ್ವತವೆಂದು, ಅನಾಚಾರದಿಂದ ನಡೆದು, ಕೋಟ್ಯಾಂತರ ಜನ್ಮಕ್ಕೆ ಹೋಗುವುದನ್ನು ತಪ್ಪಿಸಿ, ಅವು ಜೀವನೋಪಾಯಕ್ಕೆ ವಿಶ್ವಕ್ಕೆಲ್ಲಾ ಆಧಾರಭೂತವೆಂದು, ಅವುಗಳನ್ನು ಲಿಂಗ ಸಂಬಂಧದಿಂದಾ ಪ್ರಸಾದೀಕರಿಸಿ ಆಚರಿಸಲು ತಿಳಿಸಿ, ನಿತ್ಯ ಸುಖದ ಮಾರ್ಗವನ್ನು ಅರಿತು ಆಚರಿಸಲು ಶರಣರು ತಿಳಿಸಿರುವರು.

ಸ್ವರ್ಗಲೋಕದ ತಾಪತ್ರಯಗಳು

1. ಕ್ಷಯ 2. ಅತಿಶಯ, 3. ಸಾಹಸ ಪತನ, ಇವು ಸ್ವರ್ಗಲೋಕದ ತಾಪತ್ರಯಂಗಳು

1. ಕ್ಷಯವೆಂದರೆ, ಆತ್ಮನು ಶರೀರದಿಂದೊಡಗೂಡಿ, ಪುಣ್ಯವನ್ನು ಮಾಡಿ, ಆ ಪುಣ್ಯದ ಫಲದಿಂದಾ ಸ್ವರ್ಗಲೋಕದಲ್ಲಿ ಹುಟ್ಟಿ, ಆ ಸುಖವನ್ನುಣ್ಣುತ್ತಾ, ಆ ಸುಖವು ತೀರುವುದಲ್ಲಾ ಎಂಬ ಚಿಂತೆಯೇ ಕ್ಷಯವೆಂದು ಹೇಳುವರು.

2. ಅತಿಶಯವೆಂದರೆ, ಭೂಲೋಕದಲ್ಲಿ ಮಾಡಿದ ಪುಣ್ಯವನ್ನು ಅನುಭವಿಸುತ್ತಿರುವಾಗ ತನಗೆ ಒದಗಿದ್ದುದರಲ್ಲಿ ತೃಪ್ತನಾಗದೇ, ತನಗಿಂತಲೂ ಅತಿಶಯವಾಗಿ ಬಹಳ ಪುಣ್ಯ ಮಾಡಿದವರು ಇರುವರು, ನನಗೆ ಅವರಂತಹ ಪುಣ್ಯದ ಫಲವಿಲ್ಲವಲ್ಲಾ ಎಂಬ ಚಿಂತೆಯೇ ಅತಿಶಯವೆಂದು ಹೇಳುವರು.

3. ಸಾಹಸಪತನ : ಪುಣ್ಯ ತೀರಿದ ಮೇಲೆ ಸ್ವರ್ಗಲೋಕದಿಂದ ಭೂಲೋಕದಲ್ಲಿ, ಎಂಭತ್ನಾಲ್ಕು ಲಕ್ಷ ಜೀವರಾಶಿಯಲ್ಲಿ ಹುಟ್ಟಿ ಹುಟ್ಟಿ ಬರುವೆನಲ್ಲಾ ಎನಿಸುವುದೇ, ಸಾಹಸಪತನವೆನಿಸುವುದು.

ಶರಣರು ದೇವಲೋಕ, ಮರ್ತ್ಯಲೋಕವೆಂಬವು ಬೇರಿಲ್ಲ ಕಾಣಿರೋ ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ, ಆಚಾರವೇ ಸ್ವರ್ಗ ಅನಾಚಾರವೇ ನರಕವೆಂದು ತಿಳಿಸುವರು. ದೇವಲೋಕವೆಂಬುದು ಬೇರೆ ಇದೆ. ಅಲ್ಲಿರುವವರೆಲ್ಲರೂ ದೇವತೆಗಳು, ಪುಣ್ಯ ಮಾಡಿದವರು, ದೇವಲೋಕದಲ್ಲಿ ದೇವತೆಗಳಾಗಿ ಹುಟ್ಟುವರು. ಪಾಪ ಮಾಡಿದವರು ನರಕ ಲೋಕದಲ್ಲಿ ಹುಟ್ಟಿ, ಕಷ್ಟವನ್ನನುಭವಿಸುವರು ಎಂದು ಪುರಾಣಕಾರರು, ಬೇರೆಯವರು, ಪ್ರಕೃತಿ ಜೀವಿಗಳು, ಸುಳ್ಳು ಪುರಾಣಗಳನ್ನು, ಶಾಸ್ತ್ರಗಳನ್ನು ಬರೆದು ಜನರಲ್ಲಿ ಮೂಢನಂಬಿಕೆಗಳನ್ನು ಹುಟ್ಟಿಸಿರುವರು. ಅವುಗಳನ್ನು ನಂಬದೇ ಪುಣ್ಯ ಮಾಡಿದವರು, ಪಾಪಮಾಡಿದವರು ಎಂದು ತಿಳಿಯದೇ, ಹಿಂದಿನ ಜನ್ಮದಲ್ಲಿ ಪುಣ್ಯ ಮಾಡಿದವರು. ಈ ಲೋಕದಲ್ಲಿ ಸುಖಗಳು, ವೈಭವಗಳು, ಸಂಪತ್ತು, ಅಧಿಕಾರ, ಕೀರ್ತಿವಾರ್ತೆಗಳನ್ನು ಅನುಭವಿಸಿ ಮರೆಯುವರು. ಹಿಂದಿನ ಪಾಪ ದುಷ್ಕೃತ್ಯ ಮಾಡಿದ ಫಲಗಳು, ಕಷ್ಟ, ದಾರಿದ್ರ್ಯ, ರೋಗಗಳು, ಬಾಧೆಗಳು, ತೊಂದರೆಗಳು, ಸಂಕಟಗಳನ್ನು, ಅನುಭವಿಸುವರು. ಅತಿಶಯವಾದ ದುಷ್ಕೃತ್ಯಗಳಿಂದಾ, ಕ್ರಿಮಿ, ಕೀಟಕ, ಪಶು, ಮೃಗ, ಜನ್ಮಗಳನ್ನು ಪಡೆದು ಅದಕ್ಕನುಗುಣವಾದ ಪಾಪ ಪುಣ್ಯಗಳನ್ನು ಅನುಭವಿಸುವರು.

ಅನೇಕ ಜನ್ಮದ ಪುಣ್ಯದಿಂದಾ ಮನುಷ್ಯ ಜನ್ಮ ಬಂದು ಜ್ಞಾನೋದಯವಾಗಲು, ಶ್ರೀ ಗುರುವಿನಿಂದ ಸಂಸ್ಕಾರವನ್ನು ಪಡೆದು ಗುರು ಮಾರ್ಗದಲ್ಲಿ ಆಚರಿಸಿ, ಅಷ್ಟಾವರಣ ಸಂಪನ್ನನಾಗಿ, ಪಂಚಾಚಾರ (ಷಡಾಚಾರ) ಗಳನ್ನು ಪಾಲಿಸುತ್ತಾ ಷಟುಸ್ಥಲ ತತ್ವದಲ್ಲಿ ಆಚರಿಸಿ ಸ್ವಾನುಭಾವದಿಂದ, ಸತ್ಕಾಯಕ ಮಾಡುತ್ತಾ, ದಾಸೋಹದಿಂದ ಜಂಗಮ ಸೇವೆಗೈದು, ಸಂತೃಪ್ತಿ ಜೀವನದಿಂದ ನಡೆವವರಿಗೆ ಸ್ವರ್ಗಲೋಕದ ತಾಪತ್ರಯಗಳು ಇಲ್ಲವೆಂದು ತಿಳಿದುಕೊಂಬುದು ತತ್ವಜ್ಞಾನಿಗಳು.

ತ್ರಿದೋಷಗಳು

ಇನ್ನು 1. ವಾತ, 2. ಪಿತ್ತ, 3. ಶ್ಲೇಷ್ಮ ಇಂತಿವು, ತ್ರಿದೋಷಗಳು. ಮುನ್ನೂರ ಅರವತ್ತು ವ್ಯಾಧಿ ರೂಪಮಾದ, ತ್ರಿದೋಷಂಗಳು ಕೂಡಿ, ಒಂದು ಶರೀರಾಕೃತಿಯಾಗಿಹುದು. ಈ ತ್ರಿದೋಷಗಳು, ಕಾಲತ್ರಯಂಗಳಲ್ಲಿಯೂ ಪೀಡಿಸುತಿಹವು. ಇವು ಕ್ರೋಧ, ಮೂಢ, ಶಾಂತತ್ವದಿಂದ ಒಪ್ಪುತ್ತಿಹವು.

ವಾತರೋಗಿಯಾದ ಪುರುಷನು, ಮೂಢನಾಗಿರುತಿಹನು. ಪಿತ್ತ ರೋಗಿಯಾಗಿಹ ಪುರುಷನು ಕೋಪಿಯಾಗಿರುತಿಹನು. ಶ್ಲೇಷ್ಮರೋಗಿಯಾದ ಪುರುಷನು ಶಾಂತನಾಗಿರುತಿಹನು.

ಬಾಲಕನಾಗಿದ್ದ ಕಾಲದಲ್ಲಿ ವಾತರೋಗ ಪೀಡಿಸುತಿಹುದು. ಯೌವ್ವನದ ಕಾಲದಲ್ಲಿ ಪಿತ್ತ ರೋಗ ಪೀಡಿಸುತ್ತಿಹುದು. ವೃದ್ಧನಾಗಿದ್ದ ಕಾಲದಲ್ಲಿ ಶ್ಲೇಷ್ಮರೋಗ ಪೀಡಿಸುತ್ತಿಹುದು. ಇವು ತಾವೇ ತ್ರಿದೋಷಂಗಳ ಭೇದವ ತಿಳಿವುದು.

ಮಾನವನ ಶರೀರಕ್ಕೆ ವಾತರೋಗ ಬಂದರೆ, ಅದರ ಬಿಡುಗಡೆಗೆ ಮೆಣಸಿನಕಾಳಿನ ಕಷಾಯವ ತೆಗೆದುಕೊಳ್ಳುವುದು. ಶ್ಲೇಷ್ಮ ರೋಗ ಬಂದರೆ ಸಣ್ಣ ಹಿಪ್ಪಲಿಯ ಕಷಾಯದಿಂದಾ ಪರಿಹರಿಸಿಕೊಳ್ಳುವುದು. ಈ ಹಿಪ್ಪಲಿ ಕಾಳುಗಳನ್ನು ಬೆಚ್ಚಗೆ ಮಾಡಿ ಪುಡಿ ಮಾಡಿ, ಜೇನು ತುಪ್ಪದಲ್ಲಿ ತೆಗೆದುಕೊಳ್ಳುವುದು. ಪಿತ್ತ ರೋಗ ಬಂದರೆ ಶುಂಠಿಯ ಕಷಾಯವನ್ನು ತೆಗೆದು ಕೊಳ್ಳವುದು, ಶರಣರು. ರೋಗ ಪರಿಹಾರಕ್ಕೆ ವೈದ್ಯ ಸಂಗಣ್ಣನ ವಚನ :

ತ್ರಿದೋಷದ ಗುಣದಿಂದಾ ನಾನಾ ಬಹು ತಾಪತ್ರಯ ವ್ಯಾಧಿಯ ಚಿಕಿತ್ಸೆಯ ವ್ಯಾಧಿಯನಾರು ಅರಿಯರಲ್ಲಾ, ತನುವಿಂಗೆ ವಾತ, ಪಿತ್ತ, ಶ್ಲೇಷ್ಮ ಆತ್ಮಂಗೆ ಆಣವಮಲ, ಮಾಯಾಮಲ, ಕಾರ್ಮಿಕಮಲ, ಇಂತೀ ಮಲತ್ರಯ ರೋಗ ರುಜೆಯಡಸಿ, ಬಂಧನದಲ್ಲಿ ಸಾವುತ್ತಿದೆ ಅಂಗ. ಈ ರೋಗ ನಿರೋಧವಹುದಕ್ಕೆ ನಾಮೂರ ಬೇರ ತಂದೆ. ಒಂದು ಲಿಂಗದಲ್ಲಿ, ಮರ್ಧಿಸಿ, ಒಂದು ಆತ್ಮನಲ್ಲಿ ಮಥನಿಸಿ, ಒಂದು ಅರಿವಿನಲ್ಲಿ ಪಾಕವ ಮಾಡಿ ಈ ರೋಗವ ಹರಿವುದು. ಇದಕ್ಕನುಪಾನ ಇದಿರೆಡೆಯಿಲ್ಲ ಮರುಳು ಶಂಕರ ಪ್ರಿಯ ಸಿದ್ದರಾಮೇಶ್ವರ ಲಿಂಗಸಂಗಿ. ಭಾವದಲ್ಲಿ ಲಿಂಗವೇ ತಾನಾಗಿ, ಪ್ರಾಣದಲ್ಲಿ ಲಿಂಗದ ಶ್ವಾಸೋಚ್ಛಾಸವಾಗಿ, ಮನದಲ್ಲಿ ಪ್ರಾಣಲಿಂಗವಾಗಿ, ತನುವಿನಲ್ಲಿ ಇಷ್ಟಲಿಂಗವಿಡಿದು, ಸತ್‌ಕ್ರಿಯೆಯಿಂದಾ ಕಾಯಕ ದಾಸೋಹ ಮಾಡಿದರೆ, ವಾತ, ಪಿತ್ತ, ಶ್ಲೇಷ್ಮ ರೋಗಗಳು ಶರೀರಕ್ಕೆ ಅಂಟದೆ, ಆಣವ, ಮಾಯಾ, ಕಾರ್ಮಿಕಮಲಗಳು (ಆತ್ಮನಲ್ಲಿ ಅಂಟದೆ) ದೂರವಾಗುವವೆಂದು ತಿಳಿಸುವರು.

ವಚನ : ನಾನಾ ರೋಗಂಗಳು ಬಂದು ದೇಹವ ಹಿಡಿದಲ್ಲಿ ಶಿವಾರ್ಚನೆಯ ಬೇರು ಕೊಳ್ಳಿ, ಸಕಲ ಪುಷ್ಪಂಗಳಿಂದ ಪೂಜೆಯ ಮಾಡಿಕೊಳ್ಳಿ. ಪಂಚಾಕ್ಷರಿ ಪ್ರಣವ ತಪ್ಪದೇ ತ್ರಿಸಂದಿಯಲ್ಲಿ ನೆನಹುಗೊಳ್ಳಿ, ಇದರಿಂದ ರುಜೆಯ ದರ್ಪಂ ಕೆಡುಗುಂ, ಮರುಳ ಶಂಕರ ಪ್ರಿಯಸಿದ್ದರಾಮೇಶ್ವರ ಲಿಂಗ ಸಾಕ್ಷಿಯಾಗಿ.

ಸಹಜ ಭಕ್ತಿಯಿಂದಾ ನಾನಾ ವಿಧ ಪುಷ್ಪಗಳಿಂದ ಪೂಜೆಯ ಮಾಡುತ್ತಾ, ಮಹಾಮಂತ್ರ ಜಪದಿಂದ ಇರುವವರಿಗೆ ರೋಗಗಳು ಕಡಿಮೆಯಾಗುವವೆಂದು ತಿಳಿಸುವರು, ಶರಣರು. ಪ್ರಸಾದ ತತ್ವವನ್ನು ತಿಳಿದು, ಪ್ರಸಾದದ ಅನುಗ್ರಹ ದೀಕ್ಷೆಯನ್ನು ಶ್ರೀ ಗುರುವಿನಿಂದ ಪಡೆದು, ಪ್ರಸಾದ

ಮಂತ್ರ ಬಲದಿಂದ ಕಾಯರ್ಪಣ, ಕರಣಾರ್ಪಣ, ಭಾವರ್ಪಣದಿಂದ ಆಚರಣೆಯನ್ನು ಅಳವಡಿಸಿಕೊಂಡರೆ, ರೋಗಗಳು ಕಡಿಮೆಯಾಗಿ ನಿರೋಗಿಗಳಾಗಿರುವರೆಂದು ತಿಳಿದುಕೊಂಬುದು ತತ್ವಜ್ಞಾನಿಗಳು.

ವಚನ : ತನು ಬಯಲು ನಿರವಯದೊಳಡಗಿತ್ತು, ಮನಬಯಲು ನಿರವಯದೊಳಡಗಿತ್ತು, ಭಾವ ಬಯಲು ನಿರವಯದೊಳಡಗಿತ್ತು. ಇಂದ್ರಿಯ ಬಯಲು ನಿರವಯದೊಳಡಗಿತ್ತು. ವಿಷಯ ಬಯಲು ನಿರ್ವಿಷಯಿಯಾಗಿ ನಿರವಯದೊಳಡಗಿತ್ತು. ವಾಯು ಬಯಲು ನಿರವಯದೊಳಡಗಿತ್ತು. ಕರಣಗಳು ಬಯಲು, ನಿರವಯದೊಳಡಗಿತ್ತು. ಬಯಲು ಬಯಲೇಕವಾಗಿ, ಉರಿಯುಂಡ ಕರ್ಪೂರದಂತೆ ಕರ್ಪೂರವು ಉರಿಯ ಸೋಂಕಿ ಬಯಲ ಬೆರಸಿದಂತೆ, ಬಯಲು ಚಿದ್ ಬಯಲಿನಲ್ಲಿ ನಿಂದ ಸಹಜದ ಶರಣರ ಇರವ ಎನ್ನ ತಂದೆ ಬಸವಣ್ಣ ಬಲ್ಲನಲ್ಲದೆ ನಾನೇನ ಬಲ್ಲೆನಯ್ಯಾ, ನಿಮ್ಮವರಿಗಲ್ಲದೆ ಮತ್ತಾರಿಗೂ ಅರಿಯಬಾರದಯ್ಯಾ ಶ್ರೀ ಮತ್ ಶೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ -

ಸಂಕ್ಷಿಪ್ತ ಟಿಪ್ಪಣಿ : ಶರಣನ ತನುವಿನ ದುರ್ಗುಣಗಳು ಅಳಿದು ಸದಾಚಾರದಲ್ಲಿ ನಿಂದು ತನುವಿಗೆ ಶ್ರೀ ಗುರುವಿನಿಂದ ಪಡೆದ ಚಿಜ್ಜ್ಯೋತಿ ಸ್ವರೂಪವಾದ ಇಷ್ಟಲಿಂಗದ ಸತ್ ಕ್ರಿಯಾ ಪ್ರಕಾಶದಲ್ಲಿ ತನುವೆಂಬ ಕರ್ಪೂರವು ತನುಗುಣವಳಿದು, ಬಯಲಾಗಿ, ಚಿದ್ ಬಯಲಿನಲ್ಲಿ ಅಡಗಿತ್ತೆಂಬುದೀಗ ತನುಬಯಲು ನಿರವಯದೊಳಡಗಿತ್ತೆಂಬ ಶಬ್ಧಕ್ಕರ್ಥ.

ಶರಣನ ಮನವು ಮನೋವಿಕಾರಗಳಳಿದು, ಗುರೂಪದಿಷ್ಠಿತ ಲಿಂಗಮಂತ್ರದ ನೆನಹು ಪ್ರಾಣಕ್ಕೆ ವೇಧಿಸಿ, ಲಿಂಗ ಕಳೆ ಮನದಲ್ಲಿ ಸ್ಥಾಪನೆಯಾಗಿ, ಮನವೆಂಬ ಕರ್ಪೂರವು ಚಿಜ್ಜ್ಯೋತಿ ಸ್ವರೂಪವಾದ ಪ್ರಾಣಲಿಂಗ ಪ್ರಕಾಶದ ಚಿದ್ ಬಯಲಿನಲ್ಲಿ ಅಡಗಿ, ಬಯಲಾಗಿತ್ತೆಂಬುದೀಗ ಮನಬಯಲು ನಿರವಯದೊಳಡಗಿತ್ತೆಂಬ ಶಬ್ದಕ್ಕರ್ಥ.

ಶ್ರೀ ಗುರುವು, ತಲೆಯಲ್ಲಿ ಅಭಯಹಸ್ತವನ್ನಿರಿಸಿ, ಭಾವದಲ್ಲಿ ಭಾವಲಿಂಗ ಸಂಬಂಧವಾಗಿಸಿ, ಭಾವದ ಭ್ರಮೆಗಳು ಅಳಿದು, ಭಾವಲಿಂಗದ ಪ್ರಕಾಶದಲ್ಲಿ ಭಾವವು ಅಡಗಿ, ಚಿದ್ ಬಯಲಿನಲ್ಲಿ ಅಡಗಿತ್ತೆಂಬುದೀಗ ಭಾವ ಬಯಲು ನಿರವಯದೊಳಡಗಿತ್ತೆಂಬ ಶಬ್ಧಕ್ಕರ್ಥ.

ಶ್ರೀ ಗುರುವು, ಇಂದ್ರಿಯಂಗಳ ವಿಕಾರದಿಂದಾಗುವ ದುಃಖವನ್ನು ಬಿಡಿಸಿ, ಲಿಂಗವನ್ನು ಸಂಬಂಧಿಸಲು ಇಂದ್ರಿಯ ವಿಕಾರಗಳಳಿದು, ಲಿಂಗದ ಇಂದ್ರಿಯಗಳಾಗಿ ಅಳವಟ್ಟು, ಲಿಂಗ ಪ್ರಕಾಶದಲ್ಲಡಗಿ ಚಿದ್ ಬಯಲ ಬೆರಸಿತ್ತೆಂಬುದೀಗ ಇಂದ್ರಿಯ ಬಯಲು ನಿರವಯದೊಳಡಗಿತ್ತೆಂಬ ಶಬ್ದಕ್ಕರ್ಥ.

ಶರಣನಿಗೆ, ಶ್ರೀ ಗುರುವು ಸಂಸ್ಕಾರದಿಂದಾ ತನುಗುಣವನು, ಭಸ್ಮೀಕೃತವ ಮಾಡಿ, ಇಂದ್ರಿಯಗಳ ಶುದ್ಧೈಸಿ, ಇಂದ್ರಿಯ ವಿಷಯಗಳಾಗಿರುವ: ಶಬ್ದ, ಸ್ಪರ್ಶ, ರೂಪು, ರಸ, ಗಂಧ ವಿಷಯಗಳನ್ನು ಲಿಂಗಭಾವದಿಂದಾ, ಲಿಂಗಕ್ಕೆ ಸಂಬಂಧಿಸಿ ಪ್ರಸಾದವಾಗಿ ಆಚರಿಸುವನಾದ ಕಾರಣ, (ಪರಮಾತ್ಮನೇ ಲಿಂಗದ) ಪ್ರಸನ್ನತೆಯಿಂದೊಡಗೂಡಿ ಆಚರಿಸುವನಾದ ಕಾರಣ ವಿಷಯಗಳು ಪ್ರಸಾದವಾಗಿ, ಲಿಂಗ ಪ್ರಕಾಶದಲ್ಲಡಗಿ ಚಿದ್ ಬಯಲ ಬೆರಸಿತ್ತು ಎಂಬುದೀಗ ವಿಷಯ ಬಯಲು ನಿರ್ವಿಷಯಿಯಾಗಿ ನಿರವಯದೊಳಡಗಿತ್ತುಯೆಂಬ ಶಬ್ದಕ್ಕರ್ಥ.

ಶ್ರೀ ಗುರುವು, ವಾಯು ಪ್ರಾಣಿಯಾಗಿದ್ದುದ ಕಳೆದು ಮಂತ್ರ ಪ್ರಾಣಿಯನ್ನಾಗಿ ಮಾಡಿ ಕರಸ್ಥಲದ ಲಿಂಗವು ನೇತ್ರದ್ವಾರ ಪ್ರವೇಶಿಸಿ, ಮನದಲ್ಲಿ ಲಿಂಗಕಳೆ ಸ್ಥಿರವಾಗಿ ಲಿಂಗ ಪ್ರಾಣನಾಗಿ ಆಚರಿಸುವನಾದ ಕಾರಣ, ಶರಣನಿಗೆ ವಾಯುವಿಕಾರವೆಲ್ಲವೂ ಅಳಿದು, ಲಿಂಗದ ಶ್ವಾಸೋಚ್ಛ್ವಾಸವಾಗಿ ಅಳವಟ್ಟು ಚಿದ್‌ಬಯಲೊಳಡಗಿತುಯೆಂಬುದೀಗ ವಾಯು ಬಯಲು ನಿರವಯದೊಳಡಗಿತ್ತುಯೆಂಬ ಶಬ್ದಕ್ಕರ್ಥ.

ಶರಣನ ಕರಣಗಳು ಲಿಂಗ ಸಂಬಂಧವಾಗಿ, ಲಿಂಗದ ಕರಣಗಳಾಗಿ ಆಚರಿಸುವನಾದ ಕಾರಣ, ಲಿಂಗ ಪ್ರಕಾಶದಲ್ಲಿ ಕರಣಗಳಳಿದು ಚಿದ್ ಬಯಲೊಳಡಗಿತು ಎಂಬುದೀಗ ಕರಣಗಳು ಬಯಲು ನಿರವಯದೊಳಡಗಿತ್ತು ಎಂಬ ಶಬ್ದಕ್ಕರ್ಥ.

ಚಿನ್ಮಯ ಕಾಯ ಸ್ವರೂಪನಾದ ಶರಣನ ತನು, ಮನ, ಭಾವ, ಇಂದ್ರಿಯ, ವಿಷಯಗಳು, ವಾಯುಗಳು, ಕರಣಗಳು, ಸರ್ವವೂ ಚಿತ್ ಕಾಯ (ಸ್ವರೂಪ) ಕರ್ಪೂರ ಸ್ವರೂಪವಾಗಿ, ಚಿತ್ ಪ್ರಕಾಶ ಸ್ವರೂಪವಾದ (ಚಿದಗ್ನಿ ಸ್ವರೂಪ) ಚಿಲ್ಲಿಂಗ ಸೋಂಕಿ, ಕರ್ಪೂರಕ್ಕೆ ಅಗ್ನಿ ಸೋಂಕಿ ಬಯಲಿನಲ್ಲಿ ಬಯಲಾದಂತೆ ಮಹಾಲಿಂಗವೆಂಬ ಬಯಲು ಶೂನ್ಯದಲ್ಲಡಗಿ, ಬಯಲೊಳಗೆ ಬಯಲಡಗಿದಂತೆ ಕಾಯಕ-ದಾಸೋಹದಲ್ಲಿ ನಿಂತು ತನ್ನಿರುವ ಮರೆತ ಸಹಜದ ನಿಲವ ಎನ್ನತಂದೆ ಬಸವೇಶ್ವರರು ಬಲ್ಲರು. ಎನಗೆ ಅರಿಯಬಾರದು (ಬಯಲು ಬಯಲೇಕವಾಗಿ ಉರಿಯುಂಡ ಕರ್ಪೂರದಂತೆ ಉರಿಯೂ ಕರ್ಪೂರವ ಸೋಂಕಿ ಬಯಲ ಬೆರಸಿದಂತೆ ಬಯಲು ಚಿನ್ಮಯ ಚಿದ್ ಬಯಲಿನಲ್ಲಿ ನಿಂದ ಸಹಜದ ಶರಣರ ಇರವ ಎನ್ನ ತಂದೆ ಬಸವಣ್ಣ ಬಲ್ಲನಲ್ಲದೆ, ನಾನೇನ ಬಲ್ಲೆನಯ್ಯಾ। ನಿಮ್ಮವರಿಗಲ್ಲದೇ ಮತ್ತಾರಿಗೂ ಅರಿಯ ಬಾರದಯ್ಯಾ ಶ್ರೀ ಮತ್ ಶೂನ್ಯ ಸಿಂಹಸನಾಧೀಶ್ವರ ನಿರಂಜನ ಸಂಗಮನಾಥಾ.

ವಚನ : ಏನೂ ಇಲ್ಲದ, ಅನಿರ್ವಾಚ್ಯಕ್ಕೆ ತೋರದ, ಸಹಜ ವಸ್ತುವಿನಿಂದ ಸರ್ವಶೂನ್ಯ ನಿರಾಲಂಬ ನಿಶ್ಶೂನ್ಯವು. ಶ್ಶೂನ್ಯತತ್ವದಿಂದಾ ನಿಃಕಲ ತತ್ವವು ನಿಃಕಲ ತತ್ವದಿಂದಾ ನಾದ, ಬಿಂದು, ಕಲೆ, ಉದಯವಾಗಿ, ನಾದ, ಬಿಂದು, ಕಲೆ, ಮೂಲ ಚಿತ್ ಸೇರಿ ಅನಂತ ಬ್ರಹ್ಮಾಂಡ ಕೋಟಿಗಳ ವಿಶ್ರಾಂತಿಗೆ ಕಾರಣವಾದ ಮಹಾಲಿಂಗವಾಯಿತು. ಮಹಾಲಿಂಗದಿಂದ ವಿಶ್ವೋತ್ಪತ್ತಿ. ಮಹಾಲಿಂಗದಿಂದ ಮಹಾಸಾದಾಖ್ಯವೂ, ಸಾದಾಖ್ಯಗಳಿಂ ಕಲೆಗಳುದಯಿಸಿ,ಕಲೆಗಳಿಂದ ಶಕ್ತಿಗಳುದಯಿಸಿದವು, ಶಕ್ತಿಗಳಿಂದ ಪ್ರಕೃತಿಗಳುದಯಿಸಿ, ಪ್ರಕೃತಿಯಿಂದಾ ಅನಂತ ಬ್ರಹ್ಮಾಂಡ ಕೋಟಿಗಳನ್ನೊಳಕೊಂಡ ವಿಶ್ವದ ರಚನೆಯಾಯಿತು. ವಿಶ್ವದಲ್ಲಿ ಅನಂತ ಕೋಟಿ ಸೂರ್ಯರು, ಚಂದ್ರರು, ನಕ್ಷತ್ರಾದಿಗಳು ಬ್ರಹ್ಮಾಂಡ ಕೋಟಿಗಳೆಲ್ಲವೂ, ಅಗಾಧವಾದ ಶೂನ್ಯ ವಸ್ತುವಿನ ಲೀಲೆಗೆ ಒಳಪಟ್ಟು ತಿರುಗುತ್ತಾ ಹೋಗುವವು. ವಿಶ್ವದ ಸಮಸ್ತ ಜೀವಿಗಳ ಉತ್ಪತ್ತಿಗೂ ಆಧಾರವಾಗಿ, ಸಮಸ್ತ ಜೀವಿಗಳ ಚರಾಚರ ಸೃಷ್ಟಿಗೂ ಕಾರಣವಾಗಿ, ಜೀವಿಗಳ ಪೋಷಕ ಶಕ್ತಿಯೂ ತಾನೇ ಆಗಿ, ಲಯ ಸ್ವರೂಪವೂ ತಾನೇ ಆಗಿ, ವಿಶ್ವ ಆಧಾರ ಸ್ವರೂಪನೂ, ವಿಶ್ವಕ್ಕೆ ಚೈತನ್ಯ ಸ್ವರೂಪನೂ, ವಿಶ್ವಕ್ಕೆ ಲಯ ಸ್ವರೂಪನೂ ತಾನೇ ಆಗಿ, ವಿಶ್ವಕ್ಕೆ ರಾಶಿವಾಳ ಸ್ವರೂಪನು ತಾನೆ ಆಗಿ, ವಿಶ್ವದಲ್ಲಿ ಸಕಲ ಜೀವಕೋಟಿಗಳನ್ನು ಸೃಷ್ಟಿಸಿ ಅವುಗಳ ಜೊತೆಗೆ ಕ್ರಿಯೆಯನ್ನು ಸಂಬಂಧಿಸಿ ಕೋಟ್ಯಾಂತರ ಜನ್ಮಗಳಲ್ಲಿ ತಿರುಗುತ್ತಾಯಿರುವವು. ಅನೇಕ ಜನ್ಮದ ಪುಣ್ಯದಿಂದ ಮನುಷ್ಯ ಜನ್ಮಕ್ಕೆ ಬರಲು, ಮನುಷ್ಯ ಜನ್ಮದಲ್ಲಿ ಸಹಸ್ರಸಲ ಬಂದರೂ, ಅರಿವಿಲ್ಲದೇ ಭವಬಂಧದ ಸ್ಮರಣೆಯ ನೆನಪಿಲ್ಲದೆ ತಿರುಗುತ್ತಾ, ಹುಟ್ಟುತ್ತಾ, ಸಾಯುತ್ತಾ, ಹೋಗುತ್ತಾ ಇರುವವರು. ಅನೇಕ ಜನ್ಮದ ಪುಣ್ಯದಿಂದಾ

ಅರಿವು ತಲೆದೋರಿ, ತಾನಾರು, ತಾನೆಲ್ಲಿಂದ ಬಂದೆ? ಎನಗೀ ದೇಹ ಬಂದ ಪರಿ ಯಾವುದು? ನಮ್ಮ ಕಣ್ಣೆದುರಿನಲ್ಲೇ ಕಣ್ಮರೆಯಾಗಿ ನಾಶವಾಗುತ್ತಾರಲ್ಲ, ಇದಕ್ಕೇನಾದರೂ ಪರಿಹಾರವಿದೆಯೇಯೆಂಬ ಆಲೋಚನೆ ಹುಟ್ಟಿ, ಬಲ್ಲಂತ ಅನುಭವಿಗಳನ್ನು ಕೇಳಿ ತಿಳಿದು, ಇದಕ್ಕೆ ಪರಿಹಾರವು ತನ್ನ ಸಹಜ ಭಕ್ತಿಯ ಅಂತರಂಗದ ಭಕ್ತಿಯೇ, ಅಂತರಂಗ ಸ್ವರೂಪವೇ ಬಹಿರಂಗದಲ್ಲಿ ಗುರುವಾಗಿ ಬರುವನೆಂದು ತಿಳಿದುಕೊಂಡು, ಶ್ರೀ ಗುರುವನ್ನು ಮೊರೆಹೋಗಬೇಕು ಎಂದು ತಿಳಿಸಲು, ಶ್ರೀ ಗುರುವೇ ನೀನೇ ಕರ್ತನೆಂದು ಮೊರೆ ಹೋಗಲು ಶ್ರೀ ಗುರುವು ಕೃಪಾದೃಷ್ಟಿಯಿಂದ ಶಿಷ್ಯನ ಪ್ರಕೃತಿ ಗುಣಗಳನ್ನು ಕಳೆದು. ದೀಕ್ಷೆಯಂ ಮಾಡಿ, ಅಂತರಂಗದಲ್ಲಿ ವ್ಯಾಪ್ತವಾಗಿರುವ ಚಿದ್ ವಸ್ತುವನ್ನೇ ಶ್ರೀ ಗುರುವು ಹಸ್ತ ಮಸ್ತಕ ಸಂಯೋಗದಿಂದಾ ಭಾವದಲ್ಲಿ ಭಾವಲಿಂಗವನ್ನು ಸಂಬಂಧಿಸಿ, ಮಹಾಮಂತ್ರೋಪದೇಶದಿಂದಾ ಮನದ ಪೂರ್ವಾಶ್ರಯಂಗಳನ್ನು ಬಿಡಿಸಿ, ಭಾವದಲ್ಲಿರುವ ವಸ್ತುವನ್ನೇ ಮನದಲ್ಲಿ ಪ್ರಾಣಲಿಂಗ ಸಂಬಂಧವ ಮಾಡಿ, ಮನದಲ್ಲಿರುವ ಪ್ರಾಣ ಲಿಂಗವನ್ನೇ ನೇತ್ರದಲ್ಲಿ ಲಿಂಗ ಕಳೆ ಸ್ಥಾಪಿಸಿ, ಆ ಮಹಾ ವಸ್ತುವನ್ನೇ ಆಕರ್ಷಿಸಿ ನೇತ್ರದಿಂದಾ, ನಿನ್ನ ಪ್ರಾಣ ಸ್ವರೂಪವೇ ಇದುಯೆಂದು ಕರಸ್ಥಲದಲ್ಲಿ ಇಷ್ಟಲಿಂಗವನ್ನು ಸ್ಥಾಪಿಸಿ ಸ್ಥಿರಗೊಳಿಸಿದರು. ಲಿಂಗದ ಮುಖವೇ ಜಂಗಮವೆಂದು, ಆ ಜಂಗಮ ಚೈತನ್ಯವೇ (ಲಿಂಗವು) ಸರ್ವ ವ್ಯಾಪಿಸಿರುವುದನ್ನು ತಿಳಿಸಿ, ಅರಿವೇ ಗುರುವೆಂದು ಸುಜ್ಞಾನವೇ ಲಿಂಗವೆಂದೂ ಅನುಭವ ಆನಂದವೇ ಜಂಗಮವೆಂದೂ, ಚಿತ್ ಪ್ರಕಾಶವೇ ಭಸ್ಮವಾಗಿರ್ಪುದೆಂದೂ, ಚಿತ್ ಕಾಂತಿಯೇ ರುದ್ರಾಕ್ಷಿಯೆಂದೂ, ಚಿದಾನಂದವೇ ಮಂತ್ರವೆಂದೂ, ಚಿದ್ ರಸವೇ (ಶಿವಯೋಗಾಮೃತವೆ) ಪಾದೋದಕವೆಂದೂ ಪರಮಾತ್ಮನ ಪ್ರಸನ್ನತೆಯೇ ಪ್ರಸಾದವೆಂದೂ (ಕೃಪಾ ಪ್ರಸಾದವೆಂದೂ) ಬೋಧಿಸಿದರು. ಸದ್ ಭಕ್ತನ ಸಹಜ ಭಕ್ತಿಯಿಂದಾ ಜಂಗಮನ ಕೃಪೆಯಿಂದಾ ಪಾದೋದಕವನ್ನು, ಪ್ರಸಾದವನ್ನು ಪಡೆದು, ಸಹಜ ಸಂಬಂಧದಾಚರಣೆಯಿಂದಾ ಪಾದೋದಕ ಪ್ರಸಾದ ಕ್ರಿಯೆಯನ್ನಾಚರಿಸಲು ತಿಳುಹಿದರು. ಪ್ರಸಾದದ ಆಚರಣೆಯಾದ, ಕಾಯಾರ್ಪಣ, ಕರಣಾರ್ಪಣ, ಭಾವಾರ್ಪಣದಿಂದ ಆಚರಿಸಲು, ಅಂತರಂಗಕ್ಕೆ ಪಾದೋದಕ ಪ್ರಸಾದವೇಧಿಸಿ, ಶರೀರವನ್ನಾವರಿಸಿ ಅರಿವೇ ಸ್ಥೂಲ ಶರೀರದ ಸದಾಚಾರಣೆಯಿಂದಾ ಗುರುವಿನಲ್ಲಿ ಮಾಡುವ ಅಂಗ ಆಪ್ತ, ಸ್ಥಾನ, ಸದ್ಭಾವ ಸೇವೆಯಿಂದಾ, ಸ್ಥೂಲ ಶರೀರದಲ್ಲಿ ಗುರುವು ನೆಲೆಗೊಂಡು ಪೂಜಾ ನಿರಿಕ್ಷಣಾ ಧ್ಯಾನ ಜಪಗಳಿಂದಾ ಸೂಕ್ಷ್ಮ ಶರೀರದಲ್ಲಿ ಲಿಂಗವು ಸ್ಥಾಪಿತವಾಗಿ, ಧನ, ಧಾನ್ಯ, ವಸ್ತು, ತನ್ನದೆಂಬ ಅಭಿಮಾನವನ್ನು ತ್ಯಜಿಸಿ, ಜಂಗಮಕ್ಕೆ ಸಮರ್ಪಿಸಲು ಕಾರಣ ಶರೀರದಲ್ಲಿ ಜಂಗಮವು ನೆಲೆಗೊಳ್ಳುವುದು. ಅರ್ಪಣ ಕ್ರಿಯೆಯಿಂದಾ ನಾಸಿಕವು ಪ್ರಸಾದಕಾಯವಾಗಿ ನಿಲ್ಲುವದು. ನಿತ್ಯವೂ ಸಹಜ ಸಂಬಂಧದ ಪಾದೋದಕದ ಆಚರಣೆಯಿಂದಾ, ಜಿಹ್ವೆಯಲ್ಲಿ ಪಾದೋದಕವಾಗಿ ಸ್ಥಾಪಿತವಾಗಿ, ಗುರು ಪಾದೋದಕವೇ ನೇತ್ರದಲ್ಲಿ ಕರುಣಾಜಲವಾಗಿ ನಿಂದು, ಲಿಂಗ ಪಾದೋದಕವೇ ವಾಕ್ಕಿನಲ್ಲಿ ವಿನಯಜಲವಾಗಿ ನೆಲೆಸಿ, ಜಂಗಮ ಪಾದೋದಕವೇ ಮನದಲ್ಲಿ ಸಮತಾಜಲವಾಗಿ ಪರಿಣಮಿಸುವುದು. ಶ್ರೀ ಗುರುವು ಕೊಟ್ಟ ಭಸ್ಮದಾ ಸ್ನಾನ, ಧೂಳ, ಧಾರಣ, ನಿತ್ಯ ಆಚರಿಸುವದರಿಂದಾ ಚಿತ್ ಪ್ರಕಾಶವೇ ಭಸ್ಮವಾಗಿ ತ್ವಕ್ಕಿನಲ್ಲಿ ಸ್ಥಾಪಿತವಾಗುವುದು. ಶ್ರೀ ಗುರು ಕರುಣಿಸಿದ ರುದ್ರಾಕ್ಷಿಯ ಚಿತ್ ಕಾಂತಿಯೇ ರುದ್ರಾಕ್ಷಿಯಾಗಿ ನೇತ್ರದಲ್ಲಿ ಸಂಬಂಧವಾಗುವುದು. ಶ್ರೀ ಗುರು ಉಪದೇಶಿಸಿದ ಮಂತ್ರವೇ ಅಂತರಂಗದಲ್ಲಿ ಚಿದಾನಂದವು ಮಂತ್ರವಾಗಿ ರೂಪ ತಳೆಯುವದು. ಮಂತ್ರದ ನೆನಹಿನಿಂದ ಶ್ರೋತ್ರದಲ್ಲಿ ಮಂತ್ರ ಸ್ಥಿರಗೊಳ್ಳುವುದು. ಅಷ್ಟಾವರಣ ಕಾಯನಾಗಿ ಹೀಗೆ ಆಚರಣೆಯಿಂದ ಸಹಜ ಭಕ್ತಿಯು ಅಳವಟ್ಟು, ಕರ್ಮೇಂದ್ರಿಯಗಳು ಇಷ್ಟಲಿಂಗದ ಕಾಲುಗಳಾಗಿ, ಜ್ಞಾನೇಂದ್ರಿಯುಗಳು ಪ್ರಾಣಲಿಂಗದ ಮುಖಗಳಾಗಿ,

ವಿಷಯೇಂದ್ರಿಯಗಳು ಪ್ರಸಾದವೆಂದುವಾಗಿ (ಆಚರಿಸುವನಾಗಿ) ಪಂಚವಾಯುಗಳು ಲಿಂಗಪ್ರಾಣವಾಗಿ ಆಚರಿಸುವದರಿಂದ ಪಂಚಕರಣಗಳು ಭಾವಲಿಂಗದ ಹಸ್ತಗಳಾಗಿ ಪರಿವರ್ತನೆಯಾಗಿ ಅಷ್ಟತನುಗಳು, ಅಷ್ಟಮೂರ್ತಿಮದಗಳು ಬಹಿರಂಗದಷ್ಟಮದಗಳು ಅಂತರಂಗದಷ್ಟ ಮದಗಳು ಸಪ್ತ ವ್ಯಸನಗಳು, ಮೊದಲಾದ ಪ್ರಕೃತಿ ಗುಣಗಳು ನಷ್ಟವಾಗಿ ಲಿಂಗದ ಗುಣಗಳಾಗಿ ಅಳವಡುವವು. ಷಟ್‌ತತ್ವಂಗಳಾದ ಪೃಥ್ವಿತತ್ವ, ಅಪ್ಪುತತ್ವ, ವಾಯುತತ್ವ, ಆಕಾಶತತ್ವ, ಆತ್ಮತತ್ವದ ವಿಕಾರಗಳಾದ ಪೃಥ್ವಿ ತತ್ವದ ಕಠಿಣ ಗುಣಗಳನ್ನು, ಕರ್ಮೇಂದ್ರಿಯಗಳಲ್ಲಿ ತಿಳಿದು, ಜಲತತ್ವದ ದ್ರವಗುಣಗಳನ್ನು ಜ್ಞಾನೇಂದ್ರಿಯಗಳಲ್ಲಿ ತಿಳಿದು, ಅಗ್ನಿತತ್ವದ ಉಷ್ಣಗುಣವನ್ನು ವಿಷಯೇಂದ್ರಿಯಗಳಲ್ಲಿ ಮನಗಂಡು, ವಾಯು ತತ್ವದ ಚಂಚಲ ಗುಣವನ್ನು ಮನಃ ಪ್ರಾಣದ ಪಂಚವಾಯುಗಳಲ್ಲಿ ತಿಳಿದು, ಆಕಾಶ ತತ್ವದ ತೆರವು ಕೊಡುವ ಗುಣವನ್ನು, ಪಂಚಕರಣಗಳಲ್ಲಿ ತಿಳಿದು, ಆತ್ಮ ತತ್ವದ ಮರಹು ಗುಣವನ್ನು, ಆತ್ಮದ ಅಹಮಿಕೆಯಲ್ಲಿ ತಿಳಿದು, ಷಡ್‌ವಿಧ ಭಕ್ತಿಯಾದ ಶ್ರದ್ಧಾ ಭಕ್ತಿ, ನಿಷ್ಠಾ ಭಕ್ತಿ, ಸಾವಧಾನ ಭಕ್ತಿ, ಅನುಭಾವ ಭಕ್ತಿ, ಆನಂದ ಭಕ್ತಿ, ಸಮರಸ ಭಕ್ತಿಯೆಡೆಗೊಂಡು, ಷಡ್‌ವಿಧ ಶೀಲದಾಚರಣೆಯೆಂತೆಂದೊಡೆ ಅಕ್ರೋಧ, ಸತ್ ಪಾತ್ರ ದ್ರವ್ಯಾರ್ಪಣ, ಭವಿಭಕ್ತಿ ಭೇದ, ಕ್ಷಮೆ, ಅನುಗ್ರಹ. ಸತ್ ಪಾತ್ರ ದ್ರವ್ಯಾರ್ಪಣೆಯೆಂಬ ಷಡ್‌ವಿಧ ಶೀಲಂಗಳನೇ ಅಂಗದ ಆಚಾರದಲ್ಲಿ ನೆಲೆಗೊಳಿಸಿ, ಷಡ್‌ವಿಧ ವ್ರತಂಗಳಾದ ಗೌರವಬುದ್ಧಿ, ಲಿಂಗಪ್ರೇಮ, ಜಂಗಮಾನುಭಾವ, ಏಕಾದಶ ಪ್ರಸಾದ ಪರಿಜ್ಞಾನ, ದಶವಿಧ ಪಾದೋದಕ ನಿರ್ಣಯ, ಸ್ವ ಸ್ವರೂಪ ಸದ್ಭಕ್ತಿ ಎಂಬ ಆರು ವ್ರತಂಗಳ ಸಹಜ ಕ್ರಿಯೆಂಗಳ ಅಂತರಂಗದಲ್ಲಿ ಅಳವಡಿಸಿಕೊಂಡು ಪ್ರಣವ ಮಂತ್ರಾನುಸಂಧಾನದಿಂದ ಅವಿರಳ ಜ್ಞಾನ ಕ್ರಿಯೆವಿಡಿದಾಚರಿಸುವಂತಹ ಶರಣರುಗಳಿಗೆ ಶರೀರವೆಲ್ಲವೂ ಮಂತ್ರಮಯವಾಗಿ, ಸರ್ವೇಂದ್ರಿಯಗಳೆಲ್ಲವೂ ಮಂತ್ರದಲ್ಲಿ ಲಿಂಗವು ನೆಲೆಗೊಂಡು ಲಿಂಗ ಪ್ರಭೆಯಲ್ಲಿ ಗುರು, ಲಿಂಗ, ಜಂಗಮ ದಾಸೋಹ ಭಾವನೆಯಿಂದ ಆಚರಿಸುವನಾಗಿ ಭಕ್ತ ಸ್ಥಲವೆಂತಲೂ; ಪಂಚ ಮಹಾಪಾತಕಗಳೆಲ್ಲವೂ ಲಿಂಗದ ಕ್ರಿಯೆಗಳಲ್ಲಿ ಬಿಟ್ಟು ಹೋಗಿ ಏಕಲಿಂಗ ನಿಷ್ಠೆಯಿಂದಾಚರಿಸುವಲ್ಲಿ ಮಹೇಶ್ವರ ಸ್ಥಲವೆಂತಲೂ, ಲಿಂಗಾರ್ಪಣ ಮುಖದಲ್ಲಿ ಆಚರಿಸುವಲ್ಲಿ ಪ್ರಸಾದಿಸ್ಥಲವೆಂತಲೂ ಲಿಂಗವು ಪ್ರಾಣಕ್ಕೆ ವೇಧಿಸಿ ಲಿಂಗ ಪ್ರಾಣಿಯಾಗಿ ವಾಯು ವಿಕಾರವೆಲ್ಲವೂ ಅಳಿದು ಆಚರಿಸುವನಾಗಿ, ಪ್ರಾಣಲಿಂಗಿ ಸ್ಥಲವೆಂತಲೂ, ಇಂದ್ರಿಯಗಳೇ ಸತಿ, ಲಿಂಗವೇ ಪತಿಯಾಗಿ ಆಚರಿಸಲು ಶರಣ ಸ್ಥಲವೆಂತಲೂ, ಲಿಂಗದೊಳಗೆ ತಾನು, ತನ್ನೊಳಗೆ ಲಿಂಗವು, ಭಿನ್ನವಿಲ್ಲದೆ, ಆಚರಿಸಲು ಐಕ್ಯನಾಗಿ, ಭಕ್ತಿಯಿಂದ ಯಾವ ಸ್ಥಲವಾದರೂ ಸಾಮರಸ್ಯದಿಂದಿರುವನಾಗಿ, ಭಿನ್ನವಿಲ್ಲದೆ ಲಿಂಗವಲ್ಲದೇ ಅನ್ಯವನರಿಯನಾಗಿ, ಇದು ಕಾರಣ, ಲಿಂಗಾಚಾರ ಪಾಲಿಸುವನು. ಸತ್ ಕಾಯಕ ದಾಸೋಹದಲ್ಲಿ ನಿರತನಾಗಿ ಸದಾಚಾರವನ್ನು ಪಾಲಿಸುವನು, ಸರ್ವರೂ ಲಿಂಗ ಸ್ವರೂಪರೆಂದು ಆಚರಿಸುವಲ್ಲಿ ಶಿವಾಚಾರವನ್ನು ಪಾಲಿಸುವನು. ಶಿವಶರಣರುಗಳ ತತ್ವಕ್ಕೆ ದ್ರೋಹ ಬಂದಲ್ಲಿ ಅದನ್ನು ಪರಿಹರಿಸುವನಾಗಿ ಗಣಾಚಾರವನ್ನು ಪಾಲಿಸುವನು. ಶಿವಭಕ್ತರು, ಸ್ವಸ್ವರೂಪ ಲಿಂಗ ಭಕ್ತರೇ ಶ್ರೇಷ್ಠರು ನಾನು ಅವರ ಸೇವಕನೆಂಬ ಭಾವನೆಯಿಂದಾ ಭೃತ್ಯಾಚಾರ ಪಾಲಿಸುವನು. ತತ್ವಪ್ರೇಮ ಭಕ್ತಿಯಿಂದ ಸರ್ವಾಚಾರವನ್ನು ಆಚರಿಸುವನಾಗಿ ಧರ್ಮಾಚಾರಿಯಾಗಿ ಸರ್ವಾಚಾರ ಸಂಪತ್ತಿನಲ್ಲಿ ಆಚರಿಸುವನು. ಶರಣರುಗಳಿಗೆ ಪರಿಣಾಮವಾಗಿ ಸದ್ಭಾವ, ಸುಜ್ಞಾನ, ಸುಮನ, ನಿರಹಂಕಾರ, ಸುಬುದ್ಧಿ, ಸುಚಿತ್ತಗಳೇ ಹಸ್ತವಾಗಿ ಅಳವಟ್ಟು- ಆರುಹು ತಲೆದೋರಿದ ಕುಳಂಗಳೇ ಲಿಂಗವಾಗಿ, ಇಂತೀಸ್ಥಲ ಕುಳಂಗಳೇ ಅಂಗ ಲಿಂಗವಾಗಿ ಅಂಗದಲ್ಲಿ ಆರು ಸ್ಥಲ ಸಂಬಂಧವಾದ ಪರಿಯೆಂತೆಂದೊಡೆ ಪಾದಾದಿ ಗಂಧ

ಪರಿಯಂತರ ಪೃಥ್ವಿತತ್ವ, ಆ ತತ್ವದ ಕಠಿಣ ಗುಣವಳಿದು, ಕರ್ಮಸಾದಾಖ್ಯದಿಂ ಶ್ರದ್ಧೆಯ ಭೃತ್ಯತ್ವವೇ ಭಕ್ತಸ್ಥಲ. ಗುದಾದಿ ಗುಹ್ಯ ಪರ್ಯಾಂತರ ಅಪ್ಪುತತ್ವ. ಆ ತತ್ವದ ದ್ರವಗುಣವಳಿದು, ಕರ್ತೃಸಾದಾಖ್ಯದಿಂ ಗುರುಲಿಂಗ-ಜಂಗಮ ನಿಷ್ಠತ್ವವೇ ಮಹೇಶ್ವರಸ್ಥಲ, ಗುಹ್ಯಾದಿ ನಾಭಿ ಪರ್ಯಾಂತರ ಅಗ್ನಿ ತತ್ವ, ಆ ತತ್ವದ ದಹನಗುಣವಳಿದು, ಮೂರ್ತಿ ಸಾದಾಖ್ಯದಿಂ ಅರ್ಪಣಭಾವದ ಸಾವಧಾನದ ಆಚರಣೆಯೇ ಪ್ರಸಾದಿ ಸ್ಥಲ. ನಾಭಿಯಾದಿ ಹೃದಯ ಪರ್ಯಂತರ ವಾಯುತತ್ವ, ಆ ತತ್ವದ ಸ್ಪರ್ಶನ ಗುಣವಳಿದು, ಸಂಚಲ ಗುಣವಳಿದು, ಅಮೂರ್ತಿ ಸಾದಾಖ್ಯದ ಅನುಭವವೇ ಪ್ರಾಣಲಿಂಗಿಸ್ಥಲ. ಹೃದಯಾದಿ ಕಂಠ ಪರ್ಯಂತರ ಆಕಾಶ ತತ್ವ. ಆ ತತ್ವದ ತೆರಹು ಕೊಡುವ ಒಳಕೊಳ್ಳುವ ಗುಣವಳಿದು ಶಿವ ಸಾದಾಖ್ಯದಿಂ ಆನಂದವೇ ಶರಣಸ್ಥಲ. ಕಂಠಾದಿ ಭ್ರೂಮಧ್ಯ ಪರ್ಯಂತರ ಆತ್ಮತತ್ವ. ಆ ತತ್ವದ ಮರಹು ಗುಣವಳಿದು ಮಹಾಸಾದಾಖ್ಯದ ಸಮರಸವೇ ಐಕ್ಯಸ್ಥಲ. ಭ್ರೂಮಧ್ಯದ ಮೇಲ್ಭಾಗವೇ ಶೂನ್ಯ ಸ್ಥಲ. ಇನ್ನೂ ಶರಣನ ಪಾದಾದಿ ನಲವತ್ತೆಂಟು ಅಂಗುಲ ಪ್ರಮಾಣದಿಂ ಊರ್ಧ್ವ ಭಕ್ತಸ್ಥಲ. ಆ ಭಕ್ತ ಸ್ಥಲದಿಂ ನಾಲ್ಕಂಗುಲ ಪ್ರಮಾಣದಿಂ ಊರ್ಧ್ವಮಾಹೇಶ್ವರ ಸ್ಥಲ. ಮಹೇಶ್ವರಸ್ಥಲದಿಂ ಆರಂಗುಲ ಪ್ರಮಾಣದಿಂದ ಊರ್ಧ್ವಪ್ರಸಾದಿಸ್ಥಲ. ಆ ಪ್ರಸಾದಿ ಸ್ಥಲದಿಂ ಎಂಟಂಗುಲ ಪ್ರಮಾಣದಿಂ ಊರ್ಧ್ವ ಪ್ರಾಣಲಿಂಗಿಸ್ಥಲ. ಆ ಪ್ರಾಣ ಲಿಂಗಿಸ್ಥಲದಿಂದಾ ದ್ವಾದಶಾಂಗುಲ ಪ್ರಮಾಣದಿಂದ ಊರ್ಧ್ವ ಶರಣಸ್ಥಲ. ಶರಣ ಸ್ಥಲದಿಂದ ಷೋಡಶಾಂಗುಲ ಪ್ರಮಾಣದಿಂದ ಊರ್ಧ್ವಐಕ್ಯಸ್ಥಲ. ಆ ಐಕ್ಯಸ್ಥಲದಿಂ ದ್ವಿ ಅಂಗುಲ ಪ್ರಮಾಣದಿಂ ಪ್ರಣವ (ನಿರವಯಸ್ಥಲ). ಇಂತೀ ತೊಂಬತ್ತಾರಂಗುಲವೇ ಅಂಗವಾಗಿ, ಆ ಅಂಗಮುಖದಿಂ ಲಿಂಗ ಕುಳವನು ಅಡಗಿದ ಪರಿಯೆಂತೆಂದೊಡೆ, ಇಂತೀ ತೊಂಭತ್ತಾರಂಗುಲ ಗರ್ಭಿಕರಿಸಿಕೊಂಡಿರ್ಪುದೇ ಓಂಕಾರ ಪ್ರಣವ. ಆ ಪ್ರಣವವೇ ನಾದ ಆ ನಾದದಲ್ಲಿ ಬಿಂದು ನಿಂದು, ಷಟ್, ಆಕೃತಿಗಳಾದ ತಾರಾಕಾ ಕೃತಿ, ದಂಡಕಾಕೃತಿ, ಕುಂಡಲಾಕೃತಿ, ಅರ್ಧಚಂದ್ರಾಕೃತಿ, ಬಿಂದ್ವಾಕೃತಿ (ದರ್ಪಣಾ ಕೃತಿ) ಜ್ಯೋತಿರಾಕೃತಿ ಎಲ್ಲವೂ ಪ್ರಾಣವಾಗಿ ಗರ್ಭಿಕರಿಸಿಕೊಂಡಿರ್ಪ ಷಡ್‌ಕೃತಿಗಳು ಷಡಾಕೃತಿಗಳೇ ಷಡ್‌ಲಿಂಗವಾಗಿ, ಷಡ್ ಲಿಂಗಗಳಿಗೆ ಷಡಕ್ಷರಂಗಳೇ ಪ್ರಾಣವಾಗಿ, ಓಂಕಾರವೇ ನಾದಮಯ ಅಂಗವಾಗಿ, ಪಂಚಾಕ್ಷರಂಗಳೇ ಪಂಚಾಕೃತಿ ಬಿಂದುಮಯ ಪ್ರಾಣವಾಗಿ, ಮಂತ್ರಾಂಗವಾಗಿ, ನಾದ, ಬಿಂದುಕಳಾಕ್ಷರಗಳಲ್ಲಿ ಪ್ರಣವ ಮಂತ್ರವಡಗಲು; ಆ ಕಳೆಯೆ ಬಿಂದುವಾಗಿ, ಬಿಂದುವೇ ನಾದವಾಗಿ, ನಾದವೇ ಬಸವಾಕ್ಷರತ್ರಯಂಗಳಲ್ಲಡಗಿ ನಿಃಶ್ಯಬ್ದವಾಗಿ; ನಿಃಶ್ಯಬ್ದವೇ ಪರಬ್ರಹ್ಮವಾಗಿ, ಪರಬ್ರಹ್ಮವೇ ನಿಜವಾಗಿ, ನಿಜವೇ ಸಹಜಾನಂದ ವಸ್ತುವಾಗಿ; ಅಷ್ಟಾವರಣವೇ ಮೂರ್ತಿವೆತ್ತು, ಷಡಾಚಾರವೇ ಪ್ರಾಣವಾಗಿ, ಷಟ್ ಸ್ಥಲ ತತ್ವದಲ್ಲಿ ನಿಂದು; ನಿತ್ಯ ಜೀವನದಲ್ಲಿ, ಸಹಜ ಸಂಬಂಧದಾಚರಣೆಯಿಂದಾ ಪಾದೋದಕದ ಆಚರಣೆಯನ್ನು ಪಾಲಿಸುತ್ತಾ, ಕಾಯಾರ್ಪಣ, ಕರಣಾರ್ಪಣ, ಭಾವಾರ್ಪಣದ ಆಚರಣೆಯನ್ನು ಆಚರಿಸುತ್ತಾ, ಸಂತೃಪ್ತಿ ಜೀವನದಲ್ಲಿ ನಿಂದು; ಘನಲಿಂಗದ ಬೆಳಗಿನಲ್ಲಿ ಸತ್ ಕಾಯಕ ದಾಸೋಹದ ತನು ದಾಸೋಹ, ಮನದಾಸೋಹ, ಧನದಾಸೋಹ, ಅನುಭಾವ ದಾಸೋಹ, ಜ್ಞಾನ ದಾಸೋಹ, ಸಂತೃಪ್ತಿ ದಾಸೋಹದಲ್ಲಿ ಸರ್ವಾಂಗಲಿಂಗಿಯಾಗಿ ಆಚರಿಸುವ ಶರಣ ನಿಲವ ಬಸವಪ್ರಿಯ ಸಂಗಮನಾಥ ಬಲ್ಲನಲ್ಲದೇ ನಾನೇನು ಅರಿಯನಯ್ಯಾ; ಮಿಕ್ಕಿನ ಅಂಗಸಂಗಿಗಳೆತ್ತ ಬಲ್ಲರಯ್ಯಾ ಶ್ರೀ ಮತ್ಶೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ-

ವಚನ : ಸಹಜ ವಸ್ತುವಿನಿಂದ ಸರ್ವ ಶೂನ್ಯ ನಿರಾಲಂಬ, ನಿರಾಲಂಬದಿಂದ, ನಿರಂಜನ, ನಿರಂಜನ ವಸ್ತುವಿನಿಂದ ನಿಶ್ಶೂನ್ಯ, ನಿಷ್ಕಲ ತತ್ವ. ನಿಃಕಲ ತತ್ವದಿಂದಾ, ನಾದ, ಬಿಂದು, ಕಲೆ.

ನಾದ, ಬಿಂದು, ಕಲೆ, ಮೂಲಚಿತ್ ಸೇರಿ ಅನಂತ ಬ್ರಹ್ಮಾಂಡ ಕೋಟಿಗಳ ಉದಯಾಧಾರ ವಿಶ್ರಾಂತಿಗೆ ಕಾರಣವಾದ ಮಹಾಲಿಂಗದಿಂದ ವಿಶ್ವದ ರಚನೆಯಾಯಿತು. ವಿಶ್ವದಿಂದ ಅನಂತ ಬ್ರಹ್ಮಾಂಡ ಕೋಟಿಗಳುದಯಿಸಿ, ಚರಾಚರ ಸೃಷ್ಠಿಯಾಗಿ, ಎಂಭತ್ನಾಲ್ಕು ಲಕ್ಷ ಜೀವ ಕೋಟಿಗಳೊಳ್ ಸಹಸ್ರ, ಸಹಸ್ರ ಜನ್ಮಗಳಲ್ಲಿ ಹುಟ್ಟುತ್ತಾ, ಸಾಯುತ್ತಾ ಅನೇಕ ಜನ್ಮಗಳಲ್ಲಿ ತೊಳಲಿ, ಬಳಲಿ, ಮನುಷ್ಯ ಜನ್ಮಕ್ಕೆ ಬಂದರೂ, ತನ್ನ ಅರಿವಿಲ್ಲದೆ ತಿರುಗುತ್ತಾ ಇರುವಲ್ಲಿ, ಅನೇಕ ಜನ್ಮದ ಪುಣ್ಯದ ಫಲದಿಂದ ಮನುಷ್ಯ ಜನ್ಮದಲ್ಲಿ, ವಿವೇಕ ಉದಯಿಸಿ, ತಾನಾರು ತಾನೆಲ್ಲಿಂದ ಬಂದೆ, ಎನಗೀ ದೇಹ ಬಂದ ಪರಿಯಾವುದು? ನಮ್ಮ ಕಣ್ಣೆದುರಿನಲ್ಲಿ ಸರ್ವರೂ ಹುಟ್ಟುವುದು ವ್ಯವಹರಿಸುವುದು, ಅಳಿವುದು ತಿಳಿದು, ಸಜ್ಜನರ ಸಹಾವಾಸದಿಂದ ಅರಿವು ತಲೆದೋರಿ, ನಮಗೂ ಒಂದು ದಿನ ಕಣ್ಮರೆಯಾಗುವ ಕಾಲವಿದೆಯಲ್ಲ ಇದರ ಬಿಡುಗಡೆಗೆ ಉಪಾಯವೇನು? ಎಂದು ಚಿಂತಿಸುವಲ್ಲಿ, ಭವಬಂಧನ ಬಿಡುಗಡೆಗೆ ತನ್ನ ಸ್ವಸ್ವರೂಪದ ಅರಿವೇ ಬಹಿರಂಗದಲ್ಲಿ ಶ್ರೀ ಗುರುವಾಗಿ ಬರಲು, ಆಗ ಮಾನವನಿಗೆ ಶ್ರೀ ಗುರುವಿನಲ್ಲಿ ಭಕ್ತಿ ಉದಯಿಸಿ, ಮೊರೆಹೋಗಲು, ಶ್ರೀ ಗುರುವು ಕೃಪಾದೃಷ್ಠಿಯಿಂದ ಅನನ್ಯ ಭಕ್ತಿಯಿಂದ ಮೊರೆಹೊಕ್ಕಿರುವ ಶಿಷ್ಯನಿಗೆ, ಹೇ, ವತ್ಸ ನೀನು ಭವಬಂಧಕ್ಕೆ ಹೆದರಬೇಡಾ, ನೀನು ಸಾಕ್ಷಾತ್ ಪರಮಾತ್ಮನ ಸ್ವರೂಪನು, ಸತ್ಯ ಸ್ವರೂಪನು, ನಿತ್ಯ ಸ್ವರೂಪನು, ನಿನಗೆ ಭವಬಂಧವಿಲ್ಲ, ಎಂದು ತಲೆಯ ಮೇಲೆ ಅಭಯ ಹಸ್ತವನ್ನಿಟ್ಟು ಅವನ ತಲೆಯಲ್ಲಿ ನಿರಾಕಾರವಾದ ಭಾವಲಿಂಗವನ್ನು ಸ್ಥಾಪಿಸಿ; ಆ ನಿರಾಕಾರ ವಸ್ತುವನ್ನೇ ನಿರಾಕಾರ ಸಾಕಾರಕ್ಕೆ ತಂದು, ಶ್ರೋತ್ರದಲ್ಲಿ ಮಹಾ ಮಂತ್ರೋಪದೇಶವನ್ನು ಮಾಡಿ, ಮನದಲ್ಲಿ ಪ್ರಾಣಲಿಂಗವನ್ನು ಸ್ಥಾಪನೆ ಮಾಡಿ; ಮನದಲ್ಲಿರುವ ನಿರಾಕಾರ ಸಾಕಾರವಾದ ಪ್ರಾಣಲಿಂಗದ ಚಿತ್ ಪ್ರಕಾಶವನ್ನೇ ನೇತ್ರದಲ್ಲಿ ಸಂಬಂಧಿಸಿ, ನೇತ್ರದಲ್ಲಿರುವ ಚಿತ್ ಪ್ರಕಾಶವನ್ನೇ ಸಾಕಾರ ಮಾಡಿ, ಕರಸ್ಥಲದಲ್ಲಿ ಮೂರ್ತಿಗೊಳಿಸಿದ ಪರವಸ್ತುವೇ (ಲಿಂಗವೇ) ನಿನ್ನ ಸರ್ವಾಂಗದಲ್ಲಿ ನೆಲಸಿರುವದೆಂದು ತಿಳಿಸಿ ನಿನ್ನ ಜ್ಞಾನ ಸ್ವರೂಪವಾದ ಲಿಂಗದ ಅಂತರಂಗದ ಶಾಂತಮಯವಾದ ಚಿತ್ ಪ್ರಕಾಶವೇ ಭಸಿತವೆಂದು ಬಹಿರಂಗದಲ್ಲಿ ಭಸ್ಮವನ್ನು ಕೊಟ್ಟು, ಈ ಭಸ್ಮದಾರಣೆಯಿಂದಾ ಚಿತ್ ಭಸ್ಮಸ್ವರೂಪ ನೀನೆಂದು ತಿಳಿಸಿ, ನಿನ್ನ ಅಂತರಂಗದ ಚಿತ್ಕಾಂತಿಯೇ ರುದ್ರಾಕ್ಷಿಯೆಂದು ಬಹಿರಂಗದಲ್ಲಿ ರುದ್ರಾಕ್ಷಿಧಾರಣೆಗೆ ಕೊಟ್ಟು, ಈ ರುದ್ರಾಕ್ಷಿ ಧಾರಣೆ ಅಂತರಂಗದಲ್ಲಿ ಲಿಂಗ ದೃಷ್ಠಿಯಳವಡುವುದೆಂದು ತಿಳಿಸಿ; ನಿನ್ನ ಅಂತರಂಗದಲ್ಲಿ ಚಿದಾನಂದವೇ ಲಿಂಗದ ನಾಮವೆಂದು, ಲಿಂಗಸ್ವರೂಪವೇ ನೀನು ನಿನ್ನ ನಾಮವೇ ಮಹಾ ಮಂತ್ರವೆಂದು ತಿಳಿಸಿ; ಕರಸ್ಥಲದಲ್ಲಿರುವ ಲಿಂಗವು ಶ್ರೋತ್ರದಲ್ಲಿ ಉಪದೇಶಿಸಿದ ಮಂತ್ರ ನೆನಹಿನಿಂದಾ ನೇತ್ರದಲ್ಲಿ ಲಿಂಗಕಳೆ ಸ್ಥಿರವಾಗಿ ನೆಲೆಗೊಂಡು; ಸರ್ವಾಂಗದಲ್ಲಿಯೂ ಪ್ರಾಣಲಿಂಗವಾಗಿ ಸ್ಥಾಪಿತವಾಗಿ, ವಿಶ್ವದಲ್ಲೆಲ್ಲಾ ತುಂಬಿರುವ ಲಿಂಗ ನಿರಾಕಾರವಾದ ಚೈತನ್ಯವೇ ಈ ಮಹಾಲಿಂಗದ ಕಳೆಯ ಜಂಗಮವೆಂದು ತಿಳಿಸಿ; ಈ ಜಂಗಮ ಭಕ್ತಿಯಿಂದ ಆಚರಿಸಬೇಕೆಂದು ಅರುಹಿ; ಜಂಗಮ ಪಾದೋದಕವೇ ಲಿಂಗದ ಕಳೆ ಎಂದು ಶರೀರದಲ್ಲಿ ಅಷ್ಟಾವರಣಗಳು ಅಳವಡಲು ನಿನ್ನ ಕಿಂಕುರ್ವಾಣ ಭಕ್ತಿಯಿಂದ ಜಂಗಮನ ಸಹಜ ವಸ್ತುವಿನಲ್ಲಿರುವ ಚಿದ್ ರಸವನ್ನೇ ಜಂಗಮನ ಪಾದದಲ್ಲೇ ಪಡೆದುಕೊಂಡು ಸೇವಿಸಲು ಆಚರಿಸಬೇಕೆಂದು ಅರುಹಿ; ಪರಮಾತ್ಮನ ಪ್ರಸನ್ನತೆಯೇ ಪ್ರಸಾದವೆಂದು ಶಿವಯೋಗಿ ಜಂಗಮನ ಕೃಪೆಯಿಂದಾ ಪಡೆದುಕೊಂಡು (ಆಚರಿಸಲು) ಸಹಜ ಭಕ್ತಿಯ ಆಚರಣೆಯಿಂದ ಪಾದೋದಕ, ಪ್ರಸಾದಗಳು ಶರೀರವನ್ನವರಿಸಿ, ಭಕ್ತನು ಮಾಡುವ ಸತ್‌ಕ್ರಿಯೆ ಸದಾಚರಣೆಯಿಂದಾ ಸ್ಥೂಲ ಶರೀರದಲ್ಲಿ ಶ್ರೀ ಗುರುವು ನೆಲೆಗೊಂಡು, ಇಷ್ಟಲಿಂಗದ ಪೂಜಾ ನಿರೀಕ್ಷಣೆಯಿಂದ, ಸೂಕ್ಷ್ಮ ಶರೀರದಲ್ಲಿ

ಪ್ರಾಣಲಿಂಗವಾಗಿ ಸ್ಥಾಪಿತವಾಗಿ, ಪ್ರಾಣ. ವಿಕಾರವೆಲ್ಲವು ಅಳಿದು, ಕಿಂಕುರ್ವಾಣದಿಂದ ತನ್ನದೆಲ್ಲವೂ ಅರ್ಪಿತವಾಗಿ, ಆತ್ಮನ ಅಹಮಿಕೆಯೂ ನಾಶವಾಗಿ, ಕಾರಣ ಶರೀರದ (ಭಾವದಲ್ಲಿ) ಭಾವಲಿಂಗ ಸ್ಥಾಪಿತವಾಗಿ, ಜಂಗಮವು ನೆಲೆಗೊಂಡು ಕಿಂಕುರ್ವಾಣ ಭಕ್ತಿಯಿಂದ ಜಂಗಮ ಪಾದೋದಕದ ಸಹಜ ಸಂಬಂಧಾಚರಣೆಯ ಸೇವನೆಯಿಂದ ಜಿಹ್ವೆಯಲ್ಲಿ ಪಾದೋದಕವು ನೆಲೆಗೊಂಡು, ಗುರು ಪಾದೋದಕವೇ ಕರುಣಾ ಜಲವಾಗಿ, ಲಿಂಗ ಪಾದೋದಕವೇ ವಿನಯ ಜಲವಾಗಿ, ಜಂಗಮ ಪಾದೋದಕವೇ ಸಮತಾ ಜಲವಾಗಿ, ಪರಿಣಾಮಿಸುವುದು. ಜಂಗಮನಿಂದಾ ಪಡೆದ ಪ್ರಸಾದವು ನಿತ್ಯಾಚರಣೆಯಲ್ಲಿಯ ಅರ್ಪಣ ಕ್ರಿಯೆಯಾದ ಕಾಯಾರ್ಪಣ, ಕರಣಾರ್ಪಣ, ಭಾವಾರ್ಪಣದಿಂದಾ ಸರ್ವಾಂಗವೆಲ್ಲವೂ ಲಿಂಗ ಕಳೆವೇಧಿಸಿ, ನಾಸಿಕದಲ್ಲಿ ಪ್ರಸಾದವಾಗಿ ನೆಲಸಿ ನಿತ್ಯವೂ ಭಸ್ಮಸ್ನಾನ, ಭಸ್ಮ ಉದ್ಧೂಳನ, ಭಸ್ಮಧಾರಣದಿಂದ ತ್ವಕ್ಕಿನಲ್ಲಿ ಚಿದ್ ಭಸ್ಮವೂ ನೆಲೆಗೊಂಡು ಗುರೂಪದಿಷ್ಟಿತ ರುದ್ರಾಕ್ಷಿಯ ಧಾರಣದಿಂದಾ ನೇತ್ರದಲ್ಲಿ ಲಿಂಗ ಕಳೆವೇಧಿಸಿ, ಚಿತ್ಕಾಂತಿ ಸ್ವರೂಪವಾದ ಲಿಂಗದೃಷ್ಟಿ ಅಳವಟ್ಟು, ಲಿಂಗದ ನಾಮವಾದ ಗುರೂಪವಿಷ್ಠ ಮಂತ್ರದ ನೆನಹಿನಲ್ಲಿ ಸರ್ವಾಂಗವೆಲ್ಲವೂ ಮಂತ್ರಮಯವಾಗಿ ಶ್ರೋತ್ರದಲ್ಲಿ ಚಿದಾನಂದ ಸ್ವರೂಪವಾದ ಮಂತ್ರವಳವಡುವದು. ತನುವೆಲ್ಲವೂ ಅಷ್ಟಾವರಣ ಸ್ವರೂಪವಾಗಲು, ಪೂರ್ವದ ಅಷ್ಟತತ್ವದ ಅಂತರಂಗದ ಅಷ್ಟಮದಗಳು, ಬಹಿರಂಗದಷ್ಟಮದಗಳು, ಆವರಿಸಿದ ಅಷ್ಟತನುಗಳು, ಅಷ್ಟಮೂರ್ತಿಮದಗಳು, ಸಪ್ತ ವ್ಯಸನಂಗಳು, ಅರಿಷಡ್ ವರ್ಗಗಳು, ಮೊದಲಾದ ತನು ಗುಣಗಳೆಲ್ಲಾ ಮಹಾಲಿಂಗ ಕ್ರಿಯೆಯೊಳಗೆ ಪ್ರಕೃತಿ ಗುಣಗಳೆಲ್ಲವೂ ಅಡಗಿ, ಪಂಚವಿಂಶತಿ ತತ್ವಗಳಾದ ಕರ್ಮೇಂದ್ರಿಯಗಳು ಜ್ಞಾನೇಂದ್ರಿಯಗಳು ವಿಷಯೇಂದ್ರಿಯಗಳು, ಪವನೇಂದ್ರಿಯಗಳು, ಕರಣೇಂದ್ರಿಯಗಳೆಲ್ಲವೂ ಮಹಾಲಿಂಗ ಪ್ರಕಾಶದಲ್ಲಿ ಬೆಳಗುವವು. ಕರ್ಮೇಂದ್ರಿಯಗಳೆಲ್ಲವೂ ಇಷ್ಟಲಿಂಗದ ಕಾಲುಗಳಾಗಿ ಕ್ರಿಯೆಗಳಾಚರಿಸುತ್ತಾ, ಜ್ಞಾನೇಂದ್ರಿಯಗಳೆಲ್ಲವೂ ಪ್ರಾಣಲಿಂಗದ ಮುಖಗಳಾಗಿ ವ್ಯವಹರಿಸಿ, ವಿಷಯೇಂದ್ರಿಯಗಳೆಲ್ಲವೂ ಅರ್ಪಣದ ಮುಖವಾಗಿ ಕಾಯಾರ್ಪಣ ಕರಣಾರ್ಪಣ ಭಾವಾರ್ಪಣದಿಂದ ಪ್ರಸಾದವಾಗಿ ಅಳವಟ್ಟು, ವಾಯುವಿಕಾರವೆಲ್ಲವೂ ಅಳಿದು ಲಿಂಗ ಪ್ರಾಣಗಳಾಗಿ ಆಚರಿಸಿ, ಕರಣಗಳೆಲ್ಲವು ಭಾವಲಿಂಗದ ಹಸ್ತಗಳಾಗಿ ಲಿಂಗಕಿರಣಗಳಾಗಿ (ಆಚರಿಸುತ್ತಾ) ಸಹಜ ಭಕ್ತಿ ವಿಡಿದು ಭಕ್ತ, ಮಹೇಶ, ಪ್ರಸಾದಿ ಸ್ಥಲದ ಮಾರ್ಗ ಕ್ರಿಯೆಯಿಂದಾ ಸರ್ವವೂಯಿದ್ದು, ಲಿಂಗಪ್ರಭೆಯೊಳಗೆ ಸರ್ವವೂ ಇಲ್ಲದೆ ಆಚರಿಸುವುದು ಮೀರಿದ ಕ್ರಿಯಾಚರಣೆಯ ಪ್ರಾಣಲಿಂಗಿ, ಶರಣ, ಐಕ್ಯಸ್ಥಲದಲ್ಲಿ ನಿಂದು, ಮಲತ್ರಯ ವಿದೂರನಾಗಿ, ಸಹಜ ಭಕ್ತಿ, ಜ್ಞಾನ, ವೈರಾಗ್ಯ, ಸಂಪನ್ನರಾಗಿ ಎಲ್ಲಾ ದೇಶ, ಗ್ರಾಮ, ನಿಲಯ, ಬಂಧನಂಗಳಿಲ್ಲದೇ ಎಲ್ಲಾ ದೇಶ ಗ್ರಾಮಗಳನ್ನು ಸಮಾನಗಂಡು, ತಟ್ಟಿದವರು, ಮುಟ್ಟಿದವರು, ಕಂಡವರು, ಕೇಳಿದವರನ್ನು, ಪರಮಾತ್ಮ ತತ್ವದಿಂದಾ ತೃಪ್ತರನ್ನು ಮಾಡುತ್ತಾ, ಜಗತ್ ಪಾವನ ಮೂರ್ತಿಯಾಗಿ ಸಂಚರಿಸುವನು. ಶರಣನು ಸತ್ ಕಾಯಕ ಮಾಡುತ್ತಾ ತನು ದಾಸೋಹ, ಮನ ದಾಸೋಹ, ಧನ ದಾಸೋಹ, ಅನುಭವ ದಾಸೋಹ, ಸಮ್ಯಕ್ ಜ್ಞಾನ ದಾಸೋಹದಲ್ಲಿ ನಿಂದು, ಮಹಾ ಸಂತೃಪ್ತಿ ಜೀವನಲ್ಲಿ ಲಿಂಗದ ಪ್ರಭೆಯೊಳಗೆ ಅಡಗಿ, ಅಂಗದ ಗುಣಗಳೆಲ್ಲವೂ ಲಿಂಗ ಪ್ರಕಾಶದಲ್ಲಿ ಲಿಂಗ ಕ್ರಿಯೆಗಳಾಗಿ ಉಳಿದು, ನಿಂದ ಶರಣರ ನಿಲವ ನಾನೆತ್ತ ಬಲ್ಲೆನಯ್ಯಾ ಬಸವಣ್ಣ ಬಲ್ಲನಲ್ಲದೆ ಅಂಗ ಜೀವಿಗಳಿಗೆ ಅರಿಯಬಾರದು, ಕಾಣಾ ಶ್ರೀ ಮತ್ಸೂನ್ಯ ಸಿಂಹಾಸನಾಧೀಶ್ವರ ನಿರಂಜನ ಸಂಗಮನಾಥಾ.

ಪಾದೋದಕ ವಿಷಯ

ಪಾದೋದಕವೆಂಬುದು ಪರಮಾತ್ಮನ ಚಿದ್ರೂಪು, ಪಾದೋದಕವೆಂಬುದು ಮೋಕ್ಷ ಮಾರ್ಗನೋಡಾ; ಪಾದೋದಕವೆಂಬುದು ಪಾಪದ ಕೇಡು ನೋಡಾ; ಪಾದೋದಕವೆಂಬುದು ಪ್ರಮಥರ ಇರವು ನೋಡಾ. ಪಾದೋದಕವೆಂಬುದು ಕಪಿಲ ಸಿದ್ಧ ಮಲ್ಲಿಕಾರ್ಜುನನ ಇರವು ನೋಡಾ.

ಪಾಕಾರಂ ಪಾವನಂ ಜ್ಞಾನಂ, ದೋಕಾರಂ ದೋಷನಾಶನಂ, ದಕಾರಂ ದಯಾಕಾರಂ, ಕಕಾರಂ ಕರ್ಮನಾಶಮಂ ಯೆಂಬುದು ಪುಸಿಯೇನಯ್ಯಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

ಊರ್ಧ್ವ ರೇತು ಪಾದದಲ್ಲಿ ಪಾದೋದಕವಿರುವುದು. ಪಶ್ಚಿಮ ಚಕ್ರದ ಹಿಂಭಾಗದ ಸಹಜ ಸ್ಥಲದಿಂದ ಪ್ರವಹಿಸಿ, ಪಾದದಲ್ಲಿ ಭಕ್ತಿಯಿಂದ ಪಡೆದುಕೊಳ್ಳುವುದು.

ಲಿಂಗವು ಭಕ್ತನ ಭಕ್ತಿ; ಶ್ರೀ ಗುರುವಿನ ಕೃಪೆಯಿಂದಾ ಭಕ್ತನ ಮಸ್ತಕ ಗುರುವಿನ ಹಸ್ತದಿಂದಾ ಲಿಂಗವು ಉತ್ಪತ್ತಿಯಾಗುವುದು. ಪಾದೋದಕವು ಜಂಗಮದ ಕರುಣೆ, ಭಕ್ತನ ಭಕ್ತಿ ಜಂಗಮದ ಪಾದ ಭಕ್ತನ ಹಸ್ತದಿಂದ ಪಡೆದು ಕೊಳ್ಳುವುದು.

ವಚನ : ಗುರುವಾದಡೆಯೂ ತನ್ನ ಶಿಷ್ಯನ ಕೈಯಲ್ಲಿ ಜಂಗಮಕ್ಕೆ ಮಾಡಿಸದೆ, ತಾ ಮಾಡಿಸಿ ಕೊಂಡಡೆ ಶ್ವಾನ ಒಡಲ ಹೊರೆದಂತೆ, ತನ್ನ ಲಿಂಗವನು ಶಿಷ್ಯರಿಗೆ ಕೊಟ್ಟು, ತಾ ವ್ರತ ಗೇಡಿಯಾಗಿ ಹೋದಲ್ಲಿ, ಆ ಜಂಗಮವೇ ಸಾಕ್ಷಿಯಾಗಿರ್ದು ವಿಭೂತಿ ವಿಳ್ಯಯವ ತಕ್ಕೊಂಡು, ಗುರು ಶಿಷ್ಯರಿಬ್ಬರು ತಮ್ಮ ಪೂರ್ವಾಶ್ರಯವ ಕಳೆದವರಾಗಿ ಆ ಜಂಗಮಕ್ಕೆ ಮಾಡಿಸುವುದು. ಗುರುವಾದಡಾಗಲಿ, ಲಿಂಗವಾದಡಾಗಲಿ, ಜಂಗಮವಾದಡಾಗಲಿ, ಜಂಗಮ ಪಾದೋದಕ ಪ್ರಸಾದವ ಕೊಳ್ಳದಿರ್ದಡೆ ಅವರು ಬರುಕಾಯರೆಂಬೆ, ಬರು ಮುಖರೆಂಬೆ, ಅಂಗಹೀನರೆಂಬೆ, ಲಿಂಗಹೀನರೆಂಬೆ ಜಂಗಮಕ್ಕೆ ಮಾಡಿ ನೀಡಿ ಪಾದೋದಕ ಪ್ರಸಾದವ ಕೊಂಬ ಶರಣನೇ ಬಸವಣ್ಣನೆಂಬೆ ಕಾಣಾ ಕೂಡಲ ಚೆನ್ನ ಸಂಗಮದೇವಾ.

ಪದ್ಯ : ಸೃಷ್ಟಿಯೊಳ್ ವೀರ ಮಹೇಶ್ವರರ ಸದ್ ಹೃದಯದಷ್ಟದಳದಾಕಾಶಗಂಗೆ ಪಾದೋದಕದ ವೃಷ್ಠಿ ಗರೆಯಲು, ಭಕ್ತನಂಗ ಚಿದ್ ಭೂಮಿಯೊಳ್ ಅಷ್ಟಾವರಣ ವೃಕ್ಷವು ॥

ಸ್ಪಷ್ಟವಾಗಿಷ್ಟಾರ್ಥ ಫಲವು ಕೈ ಸಾರ್ದುಸಂ ।
ತೃಷ್ಠಿ ಪಡೆದುಂಡುವುಪವಾಸಿಯಾದುದ ಕಂಡು ॥
ಶ್ರೇಷ್ಠವಹ ಪಾದೋದಕವೇ ಪರಬ್ರಹ್ಮವೆಂಬಾಗಮ ಶಿವನೋಗಿದಂ ।

ವಚನ : ಗುರುಸ್ಥಲ ಘನವೆಂಬೆನೇ, ಗುರುಸ್ಥಲ ಲಿಂಗದೊಳಗಿತ್ತು, ಲಿಂಗಸ್ಥಲ ಘನವೆಂಬೆನೇ? ಲಿಂಗಸ್ಥಲ ಜಂಗಮದೊಳಗಿತ್ತು. ಜಂಗಮ ಎಲ್ಲಿಯಿದ್ದಡೆ, ಅಲ್ಲಿ ಗುರು-ಲಿಂಗ-ಜಂಗಮ, ಪಾದೋದಕ-ಪ್ರಸಾದ, ಭಕ್ತಿ ಅನುಭಾವ ಸನ್ನಿಹಿತನಾಗಿಪ್ಪನು ನೋಡಾ, ಕೂಡಲಸಂಗಮದೇವಾ.

ವಚನ : ಕೇಳು ಕೇಳಯ್ಯ ಎನ್ನ ಪ್ರಾಣನಾಥಾ, ಬಸವಣ್ಣ ಲಿಂಗತಂದೆ, ಜಿತೇಂದ್ರಿಯಗಳಲ್ಲಿ

ತೀರ್ಥ ಪ್ರಸಾದವಿಪ್ಪುದಲ್ಲದೆ, ಕೃತಕೇಂದ್ರಿಯಗಳಲ್ಲಿ ತೀರ್ಥ ಪ್ರಸಾದ ವಿಪ್ಪುದೇನಯ್ಯಾ, ಶಿವ ಜ್ಞಾನೋದಯವಾಗಿ ಶ್ರೀ ಗುರು ಕಾರುಣ್ಯವ ಪಡೆದು, ಲಿಂಗಾಂಗ ಸಂಬಂಧಿಗಳಾದ ಶಿವಶರಣರಲ್ಲಿ ಪರಶಿವ ಲಿಂಗವಪ್ಪುದಲ್ಲದೆ, ಭಿನ್ನ ಜ್ಞಾನಿಗಳಾದ ಅಜ್ಞಾನಿ ನರಕ ಜೀವಿಗಳಾದ ಮತಿ ಭ್ರಷ್ಠ ಮನುಜರಲ್ಲಿ ಪರಶಿವ ಲಿಂಗವಿಪ್ಪುದೇನಯ್ಯಾ? ಊರ್ಧ್ವ ಕುಂಡಲಿಯಲ್ಲಿ ಅಮೃತ ಕುಂಭವಿಪ್ಪುದಲ್ಲದೇ, ಅಧೋ ಕುಂಡಲಿಯಲ್ಲಿ ಅಮೃತ ಕುಂಭವಿಪ್ಪುದೇನಯ್ಯಾ, ಚಿತ್ತ ಸ್ವಸ್ಥಿರವಾದ ಸದ್ಭಕ್ತ ಮಹೇಶ್ವರರ ಹಸ್ತದಲ್ಲಿ ಚಿದ್ಘನ ಲಿಂಗವಿಪ್ಪುದಲ್ಲದೆ ಕುಚಿತ್ತ, ಕುಬುದ್ಧಿ, ದುರ್ಭಾವಿಗಳ ಹಸ್ತದಲ್ಲಿ ಚಿದ್ಘನ ಲಿಂಗವಿಪ್ಪುದೇನಯ್ಯಾ ಉದಯದಲ್ಲಿ ಸೂರ್ಯ ಹೊರಡುವನಲ್ಲದೇನಯ್ಯಾ, ಆಕಾಶದೊಳಗೆ ಮಿಂಚು ಮಿಂಚುವುದಲ್ಲದೆ ಭೂಮಿಯೊಳಗೆ ಮಿಂಚು ಮಿಂಚುವುದೇನಯ್ಯಾ, ಇಂತೀ ದೃಷ್ಟದಂತೆ ತನ್ನ ತಾನರಿದಂತಹ ಗುರು ಹಿರಿಯರಲ್ಲಿ ತೀರ್ಥ ಪ್ರಸಾದವಿಪ್ಪುದಲ್ಲದೇ ತನ್ನ ನಿಜವ ಮರೆದು ಮಲತ್ರಯಯುಕ್ತವಾದ ದೇಹೋಹಂ ಎಂದು ಸಟೆಯ ಸಂಸಾರದಲ್ಲಿ ಮನ ಮಗ್ನನಾಗಿ ಜಡ ಸಂಸಾರ ಮಾಡುವ ಜಗ ಬಂಡ ಹೊಲೆ ಮಾದಿಗರಲ್ಲಿ ಲಿಂಗವಿಲ್ಲ, ಲಿಂಗವಿಲ್ಲದಲ್ಲಿ ತೀರ್ಥ ಪ್ರಸಾದವಿಲ್ಲ ಇಂಥಾ ಜಡ ಜೀವಿಗಳ ವಿಸರ್ಜಿಸಿ, ಸುಜ್ಞಾನೋದಯವಾಗಿ ಶ್ರೀ ಗುರು ಕಾರುಣ್ಯವ ಪಡೆದು, ಲಿಂಗಾಂಗ ಸಮರಸವುಳ್ಳ, ಗುರು-ಲಿಂಗ-ಜಂಗಮದ ತೀರ್ಥ-ಪ್ರಸಾದವ ಪಡೆದು ಕೊಂಡಡೆ ನರಕ ತಪ್ಪುವುದು. ಮೋಕ್ಷವೆಂಬುದು ಕರತಲಾಮಲಕವಾಗಿ ತೋರುವುದು ಕಾಣಾ ಕಾಡಿನೊಳಗಾದ ಶಂಕರಪ್ರಿಯ ಚೆನ್ನ ಕದಂಬ ಲಿಂಗ ನಿರ್ಮಾಯ ಪ್ರಭುವೇ.

ವಚನ : ಗುರು ತೋರಿದ ಲಿಂಗವ ಜಂಗಮ ಪಾದೋದಕ ಪ್ರಸಾದವ ಕೊಳ ಹೇಳಿದನಲ್ಲದೆ ಇವತೊರೆಯ ಹೇಳಿದನೇ? ಅಹಂ ಎಂದು ಪ್ರಸಾದಿ ದ್ರೋಹಿಗಳಾಗಿ, ನಾನೆಯೆಂದು ಲಿಂಗ ದ್ರೋಹಿಗಳಾಗಿ, ವಿಭೂತಿ ರುದ್ರಾಕ್ಷಿ ಸಾಕ್ಷಾತ್ ಶಿವನೆಂದರಿಯದೇ ಅವರಾಚರಣೆಯ ನೋಡಿ ನಿಂದಿಸಿ, ಜಂಗಮ ದ್ರೋಹಿಗಳಾಗ ಹೇಳಿದನೇ? ಜಂಗಮದಲ್ಲಿ ಜಾತಿಯ, ಪ್ರಸಾದದಲ್ಲಿ ರುಚಿಯ, ಲಿಂಗದಲ್ಲಿ ಮೃದುವನರಸುವ ಸಮಯದಲ್ಲಿ ವಿಶ್ವಾಸವಿಲ್ಲದ, ಮಿಟ್ಟಿಯ ಭಂಡರ ತೋರದಿರಯ್ಯಾ ಯೆನಗೆ ಕಪಿಲಸಿದ್ಧ ಮಲ್ಲಿಕಾರ್ಜುನ.

ವಚನ : ಗುರು ಪಾದೋದಕವಿಲ್ಲದಲ್ಲಿ ಪ್ರಣವೋದಕದಿಂದಾ ಸ್ನಾನ ಮಾಳ್ಪುದಯ್ಯಾ, ಪ್ರಣವೋದಕದಿಂದ ಲಿಂಗ ಸ್ನಾನ ಲಿಂಗಾಭಿಷೇಕ ಮಾಳ್ಪುದಯ್ಯಾ, ಗುರುವಿನಲ್ಲಿ ಗುರು ಪಾದೋದಕವುಂಟು, ಲಿಂಗದಲ್ಲಿ ಗುರುಪಾದೋದಕವಿಲ್ಲ. ಲಿಂಗಪಾದೋದಕದಲ್ಲಿ ಜಂಗಮಪಾದೋದಕವಿಲ್ಲ, ಲಿಂಗದಲ್ಲಿ ಜಂಗಮ ಪಾದೋದಕವಿಲ್ಲದ ನಿಮಿತ್ಯ ಜಂಗಮವ ಬರಿಸಿ ಕೊಂಡು ಕ್ರಿಯೆಯಂ ಮಾಳ್ಪ ಭಕ್ತರಿಗೆ ನಮೊ ನಮೋಯೆಂಬೆ ಕಾಣಾ ಕಪಿಲಸಿದ್ದ ಮಲ್ಲಿಕಾರ್ಜುನಾ.

ವಚನ : ಸಹಜಾಚರಣೆ ಸಂಬಂಧಾಚರಣೆ

ಜಂಗಮದ ಪಾದ ತೀರ್ಥ ಪ್ರಸಾದವಕೊಳ್ಳಂತಹ ಗುರುವಿನ ಕೈಯಲ್ಲಿ ದೀಕ್ಷೆಯ ಮಾಡಿಸಿಕೊಳ್ಳಲಾಗದು ಆತನ ಪಾದ ತೀರ್ಥ ಪ್ರಸಾದವ ಕೊಳ್ಳಲಾಗದು ಅಥವಾ ಪ್ರಮಾದವಶದಿ ಲಿಂಗಧಾರಣೆಯ ಮಾಡಿಸಿಕೊಂಡಡೆಯೂ ಮಾಡಲಿ. ಆ ಗುರುವನೇ ಜಂಗಮದ ಪಾದ ತೀರ್ಥ ಪ್ರಸಾದವ ಕೊಂಬ ಹಾಗೆ ಸದಾಚಾರಿಯ ಮಾಡುವುದು ಶಿಷ್ಯನು. ಆ ಗುರು, ಗುರು ಲಿಂಗ ಜಂಗಮದ ಪಾದ ತೀರ್ಥವ ಕೊಳ್ಳದಿರ್ದಡೆ ಮಾಣಲಿ, ನೀ ನಿನ್ನ ಲಿಂಗವ ಮರಳಿ, ಜಂಗಮ ಪಾದ ತೀರ್ಥ ಪ್ರಸಾದವ ಕೊಂಬ ಜಂಗಮದ ಕೈಯಲ್ಲಿ ಕೊಟ್ಟು ಕೊಳ್ಳಬೇಕು. ಜಂಗಮ ಪಾದ

ತೀರ್ಥ ಪ್ರಸಾದ ಕೊಳ್ಳದಂತಹ ಜಂಗಮದ ಕೈಯಲ್ಲಿ ತೀರ್ಥ ಪ್ರಸಾದವ ಕೊಳ್ಳಲಾಗದು. ಜಂಗಮವು ಭಕ್ತನ ಮಠಕ್ಕೆ ಬಂದರೆ, ಭಕ್ತನು ತೀರ್ಥ ಪ್ರಸಾದಕೊಳ್ಳದಂತಹ ಜಂಗಮವಾದಡೂ ಅವರ ತೀರ್ಥ ಪ್ರಸಾದವ ಕೊಳ್ಳಲಾಗದು. ಅದೇನು ಕಾರಣವೆಂದಡೆ. ಜಂಗಮವಾದ ತೀರ್ಥ ಪ್ರಸಾದ ಕೊಳ್ಳದಂತಹ ಗುರುವಿಂಗೆಯು ಲಿಂಗಕ್ಕೆಯೂ, ಜಂಗಮಕ್ಕೆಯೂ, ಮುಕ್ತಿಯಿಲ್ಲ ಕಾಣಿರೊ ರೇಕಣ್ಣ ಪ್ರಿಯ ನಾಗಿನಾಥ.

ವಚನ : ಸಹಜ ಸಂಬಂಧಾಚಾರದ ನಿರ್ಣಯವನಿಲ್ಲಿ ಹೇಳಿಹೆ ಕೇಳಿರಯ್ಯಾ ಪ್ರತ್ಯಕ್ಷವಾಗಿ ಜಂಗಮವೇ ಭಕ್ತನ ಮಠಕ್ಕೆ ಬಿಜಯಂಗೈಯೆ, ನೂರು ಮಂದಿಯಲ್ಲಿ ಮೂರು ಮಂದಿ ಇರ್ಪರೆಂಬಂತೆ ಆ ಜಂಗಮದಲ್ಲಿ ಗುರುಲಿಂಗ ಜಂಗಮಗಳಿರುತೆಂದು ತಿಳಿದು, ತ್ರಿವಿಧ ಪಾದೋದಕವನಲ್ಲಿ ಪಡೆವುದು. ಇದೇ ಸದಾಚಾರವು. ಆ ಜಂಗಮವಿಲ್ಲದೆ, ಗುರು ಓರ್ವನೇ ಬಿಜಯಂಗೈಯ್ಯೆ ಆ ಗುರುವಿನಲ್ಲಿ ವಿಧಿಗನುಗುಣವಾಗಿ ಜಂಗಮವನನುಸಂಧಾನಿಸಿ, ಆ ಗುರುವಿನಲ್ಲಿ ಲಿಂಗವು ಸಹಜವಾಗಿರ್ಪುದರಿಂದ ಅಲ್ಲಿ ತ್ರಿವಿಧೋದಕವ ಪಡೆವದು. ಇದೊಂದು ಸಹಜ ಸಂಬಂಧವು ಆ ಗುರು ಜಂಗಮರೀರ್ವರೂ ಸಮಯಕ್ಕೊದಗದಿರ್ದಲ್ಲಿ ಆ ಗುರು ಜಂಗಮವು ತನ್ನ ಇಷ್ಟಲಿಂಗದಲ್ಲಿ ಕ್ರಮವರಿತು ಅನುಸಂಧಾನಿಸಿ, ಅಲ್ಲಿ ತ್ರಿವಿಧೋದಕವ ಪಡೆವುದು. ಇದೊಂದು ಕೇವಲ ಸಂಬಂಧವು. ಇಂತೀ ಸಹಜ ಸಂಬಂಧದ ಭೇದವನರಿದು, ಅರಿದಂತಾಚರಿಸಿ ನಮ್ಮ ಶರಣರು ಕೂಡಲ ಚೆನ್ನ ಸಂಗಯ್ಯನಲ್ಲಿ ಅಚ್ಚ ಸುಖಿಗಳಾದರು.

ವಚನ : ಗುರುಮುನಿದರೆ ಒಂದು ದಿನ ತಾಳುವೆ ಲಿಂಗ ಮುನಿದರೆ ಅರೆ ದಿನ ತಾಳುವೆ ಜಂಗಮ ಮುನಿದರೆ ಎನ್ನ ಪ್ರಾಣವೇ ಹೋಯಿತು. ಗುರುವಿನ ಗುರು ಜಂಗಮವಿಂತೆಂದುದು ಕೂಡಲ ಸಂಗಮನ ವಚನ.

ಪದ್ಯ : ಆದಿ ಸದ್ಗುರು ಪಾದವಾರಿಲಿಂಗೋದಕವ ।
ನಾದಿ ಜಂಗಮದ ಚರಣದ ತೀರ್ಥ ಸುಸ್ಪರ್ಶ ॥

ನೋದಕವಾಧಾರ ಜಲವಾಪ್ಯಾಯನೋದಕವು ಹಸ್ತಪುಷ್ಕರವು ಪರಿಣಾ ॥

ವೋದಕವು, ನಿರ್ನಾಮ ಸಲಿಲ ಸತ್ಯೋದಕವು । ಈ ದಶವಿಧೋದಕದ ಸಂಬಂಧದಾಚರಣೆ । ಭೇದವರಿದಾಚಾರಿಸುತಿರ್ಪ ಸದ್ ಭಕ್ತರತ್ಯಧಿಕರ್ರೈ ಮೂಜಗದೊಳು.

ಪದ್ಯ : ಗುರುಲಿಂಗ ಜಂಗಮದೊಳಗೆದು ಶೋಭಿಸು ।
ವ ಸುಸ್ಥಿರ ಶುದ್ಧ ಸಿದ್ಧ ಪ್ರಸಿದ್ಧ ವ್ಯಾಪ್ಯಾಯನವು ।
ವರಸಮಯ ಪಂಚೇಂದ್ರಿಯ ರಹಿತಾಂತಃಕರಣಚಾತುಷ್ಟಯವು ವಿರಹಿತ ।
ಚಿರಶೇಷ ಸದ್ ಭಾವ ಸಮತೇ ಸಮ್ಯಕ್ ಜ್ಞಾನ ।
ಪರಮಾಮೃತೈಕ್ಯ ದಶ ಸುಪ್ರಸಾದವೇ ಕಾಯ ।
ಕರಣ ಭಾವಾರ್ಪಣಗಳರಿದು ಮೆರೆದಿರ್ಪ ಸದ್ ಭಕ್ತರಿಗೆ ಚಿತ್ ಕಾಯವು ॥

ಪದ್ಯ : ಮಂತ್ರಮಯ ಚರಲಿಂಗದಡಿಗೆ ಭಕ್ತನು ಕರವಾ
ಸಂತಸದೊಳಿಟ್ಟು ಪತಿ ಭಕ್ತಿಯಿಂದುಪಚರಿಸಿ ।
ಮುಂತೆ ಪರಬ್ರಹ್ಮರಂಧ್ರದೊಳಿರ್ದ ಸತ್ಯೋದಕವ ಚರಣದಿಂದೆ ಪಡೆದು ।

ಇಂತೊಗೆದ ಸುಜ್ಞಾನ ತೀರ್ಥ ಪುತ್ರನ ಶರಣ ।
ಸಂತತಿಗಳಾಲಿಂಗಿಸುತಲೆತ್ತಿ ಮುದ್ದಾಡಿ ।
ಸಂತೈಸುತಾ ಪಾದ ತೀರ್ಥದಾಚರಣೆಯೊಳಗಿರ್ಪ ಸದ್ ಭಕ್ತನಧಿಕಂ ।

ವಚನ : ಕರುಣಾಜಲ ವಿನಯಜಲ ಸಮತಾಜಲ, ಕರುಣಾ ಜಲವೇ ಗುರು ಪಾದೋದಕ, ವಿನಯಜಲವೇ ಲಿಂಗ ಪಾದೋದಕ, ಸಮತಾಜಲವೇ ಜಂಗಮ ಪಾದೋದಕ. ಗುರು ಪಾದೋದಕದಿಂದಾ ಸಂಚಿತ ಕರ್ಮನಾಸ್ತಿ. ಲಿಂಗ ಪಾದೋದಕದಿಂದಾ ಪ್ರಾರಬ್ಧ ಕರ್ಮನಾಸ್ತಿ. ಜಂಗಮ ಪಾದೋದಕದಿಂದ ಆಗಾಮಿ ಕರ್ಮನಾಸ್ತಿ. ಇಂತೀ ತ್ರಿವಿಧ ಪಾದೋದಕದಿಂದ ತ್ರಿವಿಧ ಕರ್ಮ ನಾಸ್ತಿ. ಇದು ಕಾರಣ ತ್ರಿವಿಧೋದಕವ ಕೂಡಲ ಚೆನ್ನ ಸಂಗ ನಿಮ್ಮ ಶರಣ ಬಲ್ಲ. ಗುರು ಪಾದೋದಕದಿಂದಾ ಸ್ಥೂಲ ದೇಹ ಶುದ್ಧಿ, ಕ್ರಿಯಾ ಪಾದೋದಕದಿಂದ ಸೂಕ್ಷ್ಮ ದೇಹ ಶುದ್ಧಿ. ಜ್ಞಾನ ಪಾದೋದಕದಿಂದ ಕಾರಣ ದೇಹ ಶುದ್ಧಿ. ಗುರು ಪಾದೋದಕದಲ್ಲಿ ಇಷ್ಟಲಿಂಗ ಸಂಬಂಧ. ಕ್ರಿಯಾ ಪಾದೋದಕದಲ್ಲಿ ಪ್ರಾಣಲಿಂಗ ಸಂಬಂಧ, ಜ್ಞಾನ ಪಾದೋದಕದಿಂದಾ ಭಾವಲಿಂಗ ಸಂಬಂಧ ಇದು ಕಾರಣ ಪಾದೋದಕವೇ ಪ್ರತ್ಯಕ್ಷ ಕಪಿಲ ಮಲ್ಲಿಕಾರ್ಜುನ.

ಲಿಂಗ ವಿಚಾರ, ಜಂಗಮ ವಿಚಾರ, ಪಾದೋದಕ ವಿಚಾರ, ಬಹುಸೂಕ್ಷ್ಮ ಕೇಳಯ್ಯಾ. ಮೊದಲನೆ ಪಾದೋದಕ ಗುರು ಸಂಬಂಧ, ಎರಡನೆ ಪಾದೋದಕ ಲಿಂಗ ಸಂಬಂಧ, ಮೂರನೆ ಪಾದೋದಕ ಜಂಗಮ ಸಂಬಂಧ, ಈ ತ್ರಿವಿಧ ಪಾದೋದಕ ಭಕ್ತನಲ್ಲಿ ಸಂಬಂಧ, ಈ ತ್ರಿವಿಧ ಪಾದೋದಕ ಗುರುಲಿಂಗ ಜಂಗಮದಲ್ಲಿ ಸಂಬಂಧ, ಅದು ಕಾರಣ ಭಕ್ತ ಮಹೇಶ ಪಾದೋದಕ ಪ್ರಸಾದದಲ್ಲಿ ಭೇದವ ಮಾಡಿಹನೆಂದರೆ ಅಘೋರ ನರಕದಲ್ಲಿಕ್ಕುವ ಕಪಿಲ ಸಿದ್ಧ ಮಲ್ಲಿಕಾರ್ಜುನ.

ವಚನ : ಗುರು ಪಾದೋದಕ ಸಕಲ ಕ್ರಿಯೆಗಳಿಗೆ ಬರುವುದು. ಕ್ರಿಯಾ ಪಾದೋದಕ ಭಸ್ಮ ಶುದ್ಧತೆಗೆ ಬರುವುದು. ಜ್ಞಾನ ಪಾದೋದಕ ಅರ್ಪಣಂ ಗೈಯುವುದಕ್ಕೆ ಬರುವುದು ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನ. ಕಿಂಕುರ್ವಾಣ ಭಕ್ತಿಯಿಂದ ಸಹಜ ಸಂಬಂಧದಾಚರಣೆವಿಡಿದು ಪಾದೋದಕ ಪ್ರಸಾದ ಸೇವನೆ ಮಾಡುತ್ತಾ, ಕಾಯಾರ್ಪಣ ಕರಣಾರ್ಪಣ ಭಾವಾರ್ಪಣವರಿದು ಆಚರಿಸುವ ಸದ್ಭಕ್ತರು ಚಿತ್ಕಾಯರಾಗಿ ನಿತ್ಯಾನಂದದಲ್ಲಿರುವರು.

✤ ✤ ✤ ✤ ✤





೯
ತ್ರಿವಿದ ವಿವೇಕಲಿಂಗ
ತ್ರಿದಳ ನಿಷ್ಕೂನ್ಯಲಿಂಗ
ಕ್ಷ ಕಾರ ಪ್ರಣಮ
ನಿಷ್ಕೂನ್ಯ ಅಂಗ ನಿರಾಳ ಸ್ಥಲ
(ಪ್ರಾಣ ಲಿಂಗ)ನಿಷ್ಕೂನ್ಯ ಅಂಗ
ಶಿಖಾಚಕ್ರ
೭
ನಿರವಯಸ್ಥಲ
ಸಹಸ್ರ ಶಿವಕಳಾಲಿಂಗ
ಬ. ಕಾರ ಪ್ರಣಮ
ನಿಷ್ಕಲ ಲಿಂಗ (ಇಷ್ಟಲಿಂಗ) ನಿಷ್ಕಲಬ್ರಹ್ಮ
ಸಹಸ್ರಾರ
ಬ್ರಹ್ಮ ಚಕ್ರ
ಏಕದಳಪದ್ಮವಿಕಸಿತ ನಿರಂಜನಲಿಂಗ
ನಿರಂಜನ ಬ್ರಹ್ಮಲಿಂಗ
ಏಕದಳ, ಭಾವಲಿಂಗ
೯
ಹ ಕಾರ ಪ್ರಣಮ
ನಿರಂಜನಲಿಂಗ (ಭಾವಲಿಂಗ)
ಪಶ್ಚಿಮ ಚಕ್ರ
ನಿರಾಲಂಬಸ್ಥಲ
ಎರಡು ದಳ
ಆಜ್ಞೇಯ ಚಕ್ರ
೬
ಮಹಾಲಿಂಗ
ಪರಬ್ರಹ್ಮ
ದ್ವಿವಿಧ ವಿದ್ಯಾಲಿಂಗ
ಆದಿ ಸ್ಥಲ
ಓಂಕಾರ ಪ್ರಣಮ
ಹ್ ಹಂ ಕ್ಷಂ
೧೦
ಅಣುಚಕ್ರ
ಅಣುಲಿಂಗ
ಸಹಜಸ್ಥಲ
ಓಂ
ದ್ವಿವಿಧ ವಿದ್ಯಾಲಿಂಗ
೫
ಯ ಕಾರಪ್ರಣಮ
೧೬ ಪ್ರಣವಗಳು
ಯ
ಪ್ರಸಾದ ಲಿಂಗ
೫
ವಿಶುದ್ಧಿಚಕ್ರ
ಹದಿನಾರುದಳ
ವಿಜ್ಞಾನ ಬ್ರಹ್ಮ
ಸುಷುಮ್ನನಾಡಿ
ಷೋಡಶ ಕಲಾಲಿಂಗ
೪
ವ ಕಾರ ಪ್ರಣಮ
ಗುರುಲಿಂಗ
೪
ಹನೆರಡು ದಳ
ಅನಾಹತ ಚಕ್ರ
ಆನಂದ ಬ್ರಹ್ಮ
೧೨ ಪ್ರಣಮ
ದ್ವಾದಶ ವಿಕೃತಿಲಿಂಗ
೩
ಶಿ ಕಾರ ಪ್ರಣಮ
ಶಿವಲಿಂಗ
೩
ಮಣಿಪೂರಕ ಚಕ್ರ
ಹತ್ತು ದಳ
ಕಲಾಬ್ರಹ್ಮ
೧೦ ಪ್ರಣಮ
ದಶವಿಧ ಕ್ಷೇತ್ರಲಿಂಗ
೨
ಮ ಕಾರ ಪ್ರಣಮ
ಗುರುಲಿಂಗ
೨
ಆರುದಳ
ಸ್ವಾದಿಷ್ಠಾನ ಚಕ್ರ
ಪಿಂಡಬ್ರಹ್ಮ
೬ ಪ್ರಣಮ ಬ ಭ ಮ ಯ ರ ಲ
ಷಡ್ವಿಧಧಾತು
ಲಿಂಗ
೧
ನ ಕಾರ ಪ್ರಣಮ
ನಾಲ್ಕುದಳ
೧
ಆಧಾರ ಚಕ್ರ
ಮೂರ್ತಿಬ್ರಹ್ಮ
ಆಚಾರಲಿಂಗ
೪ ಪ್ರಣವ ವ ಸ ಕ್ಷ ಶ
ಚತುರ್ವಿಧಬಿಂದು ಲಿಂಗ



ತಾರಕಾಕೃತಿ
'ನ' ಕಾರ ಪ್ರಣಮ
ವ, ಶ, ಷ, ಸ
ನಿವೃತ್ತಿ ಕಲೆ
ಕ್ರಿಯಾ ಶಕ್ತಿ
'ಚಿತ್ತ' ಕರಣ
ಗಂಧ ವಿಷಯ
ಭೂ ತತ್ವ
ದಂಡಕಾಕೃತಿ
'ಮ' ಕಾರ ಪ್ರಣಮ
ಬ, ಭ, ಮ, ಯ, ರ, ಲ
ಪ್ರತಿಷ್ಠಾ ಕಲೆ
ಜ್ಞಾನ ಶಕ್ತಿ
'ಬುದ್ಧಿ' ಕರಣ
ರಸ-ವಿಷಯ
ಜಲ ತತ್ವ
ಕುಂಡಲಾಕೃತಿ
'ಶಿ' ಕಾರ ಪ್ರಣಮ
ಡ, ಢ, ಣ, ತ, ಥ, ದ, ಧ, ನ, ಪ, ಫ
ವಿದ್ಯಾ ಕಲೆ, ಇಚ್ಛಾಶಕ್ತಿ
'ಅಹಂಕಾರ' ಕರಣ
ರೂಪ-ವಿಷಯ
ಅಗ್ನಿ ತತ್ವ
ಮಹಾಲಿಂಗಸ್ಥಲ
ಜ್ಯೋತಿರಾಕೃತಿ
ಮಹಾಲಿಂಗ 'ಓಂ' ಕಾರ ಪ್ರಣಮ
ತಾರಕಾಕೃತಿ
ಆಚಾರಲಿಂಗ
'ನ' ಕಾರ
ಪ್ರಣಮ
ನಿಃಕಲ ಸ್ಥಲ 'ಬ' ಕಾರ ಪ್ರಣಾಮ
ನಿಶ್ಶೂನ್ಯಸ್ಥಲ 'ಕ್ಷ' ಕಾರ ಪ್ರಣಮ
ನಿರಂಜನ ಸ್ಥಲ
ನಿರಾಲಂಬ ಸ್ಥಲ
ಸಹಜಸ್ಥಲ
ಅವಾಚ್ಯ ಬಿಂದು
ಚಿದ್ಬಿಂದು 'ಸ' ಕಾರ ಪ್ರಣಮ
ಬಿಂದು 'ಉ' ಕಾರ ಪ್ರಣಮ
ದಂಡಾಕೃತಿ
ಗುರುಲಿಂಗ
'ಮ' ಕಾರ
ಪ್ರಣಮ
ಶಿವಲಿಂಗ
'ಶಿ' ಕಾರ
ಪ್ರಣಮ
ಕುಂಡಲಾಕೃತಿ
ಜಂಗಮಲಿಂಗ
'ವ' ಕಾರ
ಪ್ರಣಮ
ಅರ್ಧಚಂದ್ರಾಕೃತಿ
ದರ್ಪಣಾಕೃತಿ
(ಬಿಂದ್ವಾಕೃತಿ)
ಪ್ರಸಾದ ಲಿಂಗ
'ಯ' ಕಾರ
ಪ್ರಣಮ
ಜ್ಯೋತಿರಾಕೃತಿ
'ಓಂ' ಕಾರ ಪ್ರಣಮ
ಹಂ, ಕ್ಷಂ, ಹಂ, ಳಂ
ಶಾಂತ್ಯಾತೀತೋತ್ತರ ಕಲೆ
ಚಿತ್ ಶಕ್ತಿ
'ಭಾವ' ಕರಣ
ತೃಪ್ತಿ-ವಿಷಯ
ಆತ್ಮ ತತ್ವ
ದರ್ಪಣಾಕೃತಿ
'ಯ' ಕಾರ ಪ್ರಣಮ
ಅ, ಆ, ಇ, ಈ, ಉ, ಊ, ಋ
ೠ, ಎ, ಏ, ಐ, ಒ, ಓ, ಔ, ಅಂ, ಅಃ
ಶಾಂತ್ಯಾತೀತ ಕಲೆ
ಪರಾಶಕ್ತಿ
ಜ್ಞಾನ ಕರಣ
ಶಬ್ದ-ವಿಷಯ
ಆಕಾಶ ತತ್ವ
ಅರ್ಧಚಂದ್ರಾಕೃತಿ
'ವ' ಕಾರ ಪ್ರಣಮ
ಕ, ಖ, ಗ, ಘ, ಙ, ಚ, ಛ
ಜ, ಝ, ಞ, ಟ, ಠ
ಶಾಂತಿ ಕಲೆ
ಆದಿ ಶಕ್ತಿ
'ಮನ' ಕರಣ
'ಸ್ಪರ್ಶನ' ವಿಷಯ
ವಾಯು ತತ್ವ.

ಕರಣ ಹಸಿಗೆ

ಪರಮ ಪೂಜ್ಯ ಚನ್ನಬಸವ ಶಿವಯೋಗಿಗಳು ನಮ್ಮ ನಾಡಿನ ಅನುಭಾವಿಗಳಲ್ಲೆಲ್ಲ ಶ್ರೇಷ್ಠರು. ಬಸವ ತತ್ವದ ಸಾಕ್ಷಾತ್ ಪ್ರತಿರೂಪವೇ ಆಗಿದ್ದಾರೆ. ಬಸವ ತತ್ವ ಹೇಗಿರುತ್ತದೆ ಎಂದರೆ ಪಾಂಡೋಮಟ್ಟಿ ಶಿವಯೋಗಿಗಳಂತೆ ಎಂದು ಧೈರ್ಯವಾಗಿ ಹೇಳಬಹುದು. ಬಸವಾದಿ ಶರಣರ ವಚನಗಳನ್ನು ನಿರರ್ಗಳವಾಗಿ ಹೇಳುತ್ತಾರೆ. ಮೈಲಾರ ಬಸವಲಿಂಗ ಶರಣರ ಸಮಗ್ರ ಕೃತಿಗಳ ಸಂಪೂರ್ಣ ಪಾಠ ಒಪ್ಪಿಸಬಲ್ಲರು. ಇದು ಅವರ ಅನುಪಮ ಜ್ಞಾಪಕಶಕ್ತಿಗೊಂದು ನಿದರ್ಶನ. ಸ್ವತಃ ಜಂಗಮ ಜ್ಯೋತಿಯಾಗಿ, ಯಾರಾದರೂ ಭಕ್ತರು ಅವರ ದರ್ಶನಕ್ಕೆ ಮಠಕ್ಕೆ ಹೋದರೆ ಅವರನ್ನು ಜಂಗಮರೆಂದೇ ಕಂಡು ಉಪಚರಿಸುತ್ತಾರೆ. ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲ ತತ್ವಗಳ ಸೂಕ್ಷ್ಮಾತಿ-ಸೂಕ್ಷ್ಮ ನೆಲೆಕಲೆಗಳನ್ನು ಅರಿತು ಭಕ್ತಿಯಿಂದ ಆಚರಿಸುತ್ತಿರುವ ಪೂಜ್ಯರ ಅನುಭಾವದ ಆಳವನ್ನು ಪ್ರಸ್ತುತ ಕೃತಿ ಕರಣ ಹಸಿಗೆಯಲ್ಲಿ ಕಾಣಬಹುದು. ನಾಡಿನ ಸಾಧಕರು ಈ ಕಿರು ಹೊತ್ತಿಗೆಯ ಉಪಯೋಗ ಪಡೆದುಕೊಳ್ಳುವಂತಾಗಲಿ.